Digitization by eGangotri and Sarayu Trust. Funding by MoE-IKS

ಮಹಾ ಪ್ರಸಾದಿ

ಡಾ|| ಸಾ.ಶಿ. ಮರುಳಯ್ಯ



033,3N31,1
M7M

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

033,3N31,1 8786
M7M
Marulaiah, S S
Mahaprasadi-bior
novel

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

8786
033,3N31,1
M7M

SHRI JAGADGURU VISHWARADHYA JNANAMANDIR
(LIBRARY)
JANGAMAWADIMATH, VARANASI

Please return this volume on or before the date last stamped.
Overdue volume will be charged 1/- per day.

ज्ञान मन्दिर ग्रन्थालय
23/7/?
स्कैन किया
जंगमवाड़ी मठ, वाराणसी

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಲಾಕುಸುಮ-೨

ಮಹಾಪ್ರಸಾದಿ

ಗೌರವ ಪ್ರತಿ
ಶ್ರೀ ನಾಗನೂರ ರುದ್ರಾಕ್ಷಿಮಠ
ಬೆಳಗಾವಿ

ಡಾ|| ಸಾ. ಶಿ. ಮರುಳಯ್ಯ

SRI JAGADGURU VISHWARADHYA
JNANA SIMHASAN JNANAMANDAL
LIBRARY
Jangamwadi Math, Varanasi
ACC No. ......1254......

ಪ್ರಕಾಶಕರು :
ನಾಗನೂರ ಶ್ರೀ ಶಿವಬಸವಸ್ವಾಮಿಗಳ ಕಲ್ಯಾಣ ಕೇಂದ್ರ
8ನೇ ಬ್ಲಾಕ್, ಜಯನಗರ
ಬೆಂಗಳೂರು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

MAHAPRASADI—Bio-Novel, written, by Dr. S.S. Marulaiah, for Naganur Sri. Shivabasava Swamigala Kalyana Kendra, Jayanagar, VIII Block, Bangalore-560 082.
Pages 168+4, Price: Rs. 15/-

ಪ್ರಥಮ ಮುದ್ರಣ 2000 ಪ್ರತಿಗಳು

033,3N31,1
M7M

1987

ಬೆಲೆ : ಹದಿನೈದು ರೂಪಾಯಿಗಳು

SRI JAGADGURU VISHWARADHYA
JNANA SIMHASAN JNANAMANDAL
LIBRARY
Jangamwadi Math, Varanasi
ACC No. 8786

ಮುದ್ರಕರು :
ಲೋಟಸ್ ಪ್ರಿಂಟರ್ಸ್
೩೨/೨೫, ೨ನೇ ಮುಖ್ಯ ರಸ್ತೆ,
ಕೈಗಾರಿಕಾನಗರ, ರಾಜಾಜಿನಗರ,
ಬೆಂಗಳೂರು-560 044.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಮ್ಮ ಮಾತು

ಈ ಯುಗವು ಕಂಡ ಅನೇಕ ಜನ ಮಹಾತ್ಮರು, ತಪಸ್ವಿಗಳು, ಸಾಧುಗಳು, ಧರ್ಮಪ್ರವರ್ತಕರು, ಸಮಾಜ ಸುಧಾರಕರು, ಕರ್ಮಯೋಗಿಗಳು, ಉದಾತ್ತ ದಾರ್ಶನಿಕರು—ಇವರ ವಿಶುದ್ಧ ಮಾಲಿಕೆಯಲ್ಲಿ ಬರುವ ದೊಡ್ಡ ಹೆಸರು ನಮ್ಮ ನಾಗನೂರ ಶ್ರೀ ಶಿವಬಸವ ಸ್ವಾಮಿಗಳವರದು. ಇವರು ಸುಳಿದಾಡುವ ಧರ್ಮ ; ನಡೆದಾಡುವ ಜ್ಯೋತಿ ; ನಿಜವಾದ ಅರ್ಥದ ಕಾಯಕಯೋಗಿ, ಕರ್ಮಯೋಗಿ, ಕರ್ಮಯೋಗದ ಮೂಲಕವೆ ಶಿವಯೋಗವನ್ನು ಸಾಧಿಸಿದ ಅಭಿನವ ಸಿದ್ಧರಾಮೇಶ್ವರರು.

ಇವರದು ತುಂಬಿದ ಕೊಡದಂತಹ ಗಾಂಭೀರ್ಯ ; ಮುತ್ತು, ರತ್ನಗಳನ್ನು ಗರ್ಭೀಕರಿಸಿ ಕೊಂಡಿರುವ ಸಮುದ್ರದಂತಹ ವ್ಯಕ್ತಿತ್ವ. ಇವರ ಸೇವೆಗೆ ಸಾವಿರ ತೋಳುಗಳು ! ಇಂತಹ ಸೇವಾ ಮೂರ್ತಿಯ ಬಣ್ಣನೆಗೆ ಆದಿಶೇಷನ ಸಾವಿರ ನಾಲಗೆಗಳು ಸಾಲವು. ಆದರೂ ಒಂದು ನಾಲಗೆಯುಳ್ಳ ಡಾ॥ ಮರುಳಯ್ಯನವರು ಹಲವು ರಾಗಗಳಲ್ಲಿ ಹಾಡಿದ್ದಾರೆ. ಅದರಲ್ಲಿ ಕಿರಿಯ ಗುರುಗಳಾದ ಶ್ರೀ ಪ್ರಭು ಮಹಾಸ್ವಾಮಿಗಳ ಗೀತವನ್ನೂ ಮೇಳೈಸಿದ್ದಾರೆ. ಇವು ಇಂಪಾಗಿವೆ ಎಂದು ನಮ್ಮ ಅನಿಸಿಕೆ. ನಿಮಗೂ ಅಂತಾದರೆ ಅವರ, ನಮ್ಮ, ಎಲ್ಲರ ಶ್ರಮ ಸಾರ್ಥಕ.

ಕಾಯಕಯೋಗಿ ಶ್ರೀ ಶಿವಬಸವಸ್ವಾಮಿಗಳು ಬೆಳಗಾವಿ, ಬೈಲಹೊಂಗಲ, ಬೆಂಗಳೂರು ಮತ್ತು ನಾಗನೂರು ಮೊದಲಾದೆಡೆಗಳಲ್ಲಿ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗಾಗಿ ಸುಮಾರು 22 ಸಂಸ್ಥೆಗಳನ್ನು ತೆರೆದು, ಸುವ್ಯವಸ್ಥೆ ಏರ್ಪಡಿಸಿದ್ದಾರೆ. ಅಂತಹ ಕಲ್ಯಾಣ ಕಾರ್ಯಗಳ ನಿರ್ವಾಹಕ ಸಂಸ್ಥೆ ಬೆಂಗಳೂರಿನ ನಾಗನೂರ ಶ್ರೀ ಶಿವಬಸವ ಸ್ವಾಮಿಗಳ ಕಲ್ಯಾಣ ಕೇಂದ್ರ, ಇದು ಅನೇಕ ಜನಹಿತ ಕಾರ್ಯಗಳನ್ನೆಸಗುತ್ತಾ ಬಂದಿದೆ; ಮುಖ್ಯವಾಗಿ ಐ.ಎ.ಎಸ್. ; ಕೆ. ಎ. ಎಸ್. ; ಕೆ.ಪಿ.ಎಸ್'. ವಿದ್ಯಾರ್ಥಿಗಳಿಗೆ ನೆರವು ನೀಡುವುದು, ಸಮಾಜ ಸಂಘಟನೆ, ಗ್ರಂಥ ಪ್ರಕಟಣೆ ಇತ್ಯಾದಿ. 'ವೀರಶೈವ ವಿಚಾರ ಸಂಕಿರಣ' ಎಂಬ ಗ್ರಂಥ ಮೊದಲ ಕುಸುಮವಾಗಿ ಬಂದಿತು. 'ಮಹಾಪ್ರಸಾದಿ' ಎರಡನೆಯದು. ಇದು ಬೆಂಗಳೂರಿನ ನಾಗನೂರು ಶ್ರೀ ಶಿವಬಸವ ಕಲ್ಯಾಣ ಕೇಂದ್ರದ ಹೆಮ್ಮೆಯ ಕಾಣಿಕೆ, ಪೂಜ್ಯ ಗುರುಗಳ 98ನೆಯ ಜನ್ಮ ದಿನೋತ್ಸವಕ್ಕೆ.

ಯುಗಪುರುಷ ಶ್ರೀ ನಾಗನೂರ ಶಿವಬಸವ ಸ್ವಾಮಿಗಳ ಸಾಧನೆ, ಸಿದ್ಧಿಗಳನ್ನು ಕುರಿತ ಒಂದು ಸಮಗ್ರ ಜೀವನ ಚರಿತ್ರೆಯನ್ನು ಬೃಹತ್ ಗ್ರಂಥವಾಗಿ ಡಾ॥ ಮರುಳಯ್ಯನವರೇ ರಚಿಸಲಿದ್ದಾರೆ. ಅದಕ್ಕೆ ಪೂರ್ವಭಾವಿಯಾಗಿ ಈ ಕಾದಂಬರಿ.

ಶ್ರೀಮಂತ ಶೈಲಿಯ ಈ ಧೀಮಂತ ಕೃತಿಗೆ ನಮ್ಮ ಹಾರ್ದಿಕ ಸ್ವಾಗತ.

ಸಿ. ಎ. ಜಮಖಂಡಿಮಠ
ಜಿ. ಎಂ. ಹಿರೇಮಠ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನನ್ನ ಮಾತು

ನಾಗನೂರ ಶ್ರೀ ಶಿವಬಸವ ಸ್ವಾಮಿಗಳು ತುಂಬಾ ಅಪರೂಪದ ವ್ಯಕ್ತಿಗಳು. ಅವರ ಸಂಕಲ್ಪ, ಸಾಧನೆ ಮತ್ತು ಸಿದ್ಧಿಗಳು ಎಂಥವರನ್ನೂ ಮೂಕವಿಸ್ಮಿತರನ್ನಾಗಿಸುತ್ತವೆ. ಅವರ ಅಸಾಧಾರಣ ವ್ಯಕ್ತಿತ್ವಕ್ಕೆ ನಾನು ಮಾರು ಹೋಗಿದ್ದೇನೆ. ಅಷ್ಟೇ ಪ್ರಮಾಣದಲ್ಲಿ ಮಣಿದಿದ್ದೇನೆ ಶ್ರೀ ಪ್ರಭುಮಹಾಸ್ವಾಮಿಗಳ ಕರ್ತೃತ್ವ ಶಕ್ತಿಗೆ. ಈ ಎರಡು ಮಹಾಚೇತನಗಳನ್ನೂ ಈ ಕಾದಂಬರಿಯಲ್ಲಿ ಕಂಡರಿಸಲು ಯತ್ನಿಸಿದ್ದೇನೆ. ಪೂರ್ಣ ಯಶಸ್ಸು ಲಭಿಸಿದೆ ಎಂಬ ಭ್ರಮೆ ನನಗಿಲ್ಲ. ಕಾರಣ ಈ ವಿಶ್ವಚೇತನಗಳ ಸೇವಾಸಲಿಲದ ಸಾಗರಗಳು. ಆ ಸಾಗರಗಳಿಂದ ನಾನು ಹತ್ತು ಕೊಡ ನೀರು ತೆಗದರಾಗಲಿ ಅಥವಾ ಹತ್ತು ಕೊಡ ತುಂಬಿದರಾಗಲಿ ಅವು ಪ್ರಮಾಣದಲ್ಲಿ ಹೆಚ್ಚುವುದೂ ಇಲ್ಲ, ಕಡಿಮೆ ಆಗುವುದೂ ಇಲ್ಲ. ಸೂರ್ಯನಿಗೆ ತುಪ್ಪದ ಹಣತೆಯನ್ನೆತ್ತಿ ಬೆಳಗಿದಂತೆ, ಅನನ್ಯ ಭಕ್ತಿಭಾವದಿಂದ ಈ ಕೃತಿ ರಚನೆ ಮಾಡಿದ್ದೇನೆ. ಆ ದಿವ್ಯ ಮಹಾಚೇತನಗಳ ಚರಣಗಳಲ್ಲಿ ಅರ್ಪಿಸಿ ಧನ್ಯನಾಗಿದ್ದೇನೆ.

ಈ ಕೃತಿ ರಚನೆಗೆ ಕಾರಣರಾದವರು ಹಿರಿಯರಾದ ಶ್ರೀ ಸಿ. ಎ. ಜಮಖಂಡಿಮಠರವರು ಮತ್ತು ಶ್ರೀ ಜಿ. ಎಂ. ಹಿರೇಮಠರವರು. ಕ್ರಮವಾಗಿ ಇವರು, ಬೆಂಗಳೂರಿನಲ್ಲಿರುವ ನಾಗನೂರು ಶ್ರೀ ಶಿವಬಸವಸ್ವಾಮಿಗಳ ಕಲ್ಯಾಣ ಕೇಂದ್ರದ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳಾಗಿದ್ದಾರೆ. ಎಲ್ಲ ವಿಧದಲ್ಲೂ ನನ್ನೊಡನೆ ಸಹಕರಿಸಿದವಳು ನನ್ನ ಮುದ್ದಿನ ಮಿನ್ನಿ. ಕರಡು ತಿದ್ದಲು ನೆರವಾದವರು ಸೋದರಿ ಎಚ್. ಜಯಮ್ಮ ಕರಿಯಣ್ಣ ಮತ್ತು ಗ. ಬ. ನಾಗಭೂಷಣ, ಮುದ್ದಾಗಿ ಮುದ್ರಿಸಿದವರು ಹೆಸರಾಂತ ಮುದ್ರಕರಾದ ಲೋಟಸ್ ಪ್ರಿಂಟರ್ಸ್‌ರವರು ; ಇವರಿಗೂ ಬೆಂಗಳೂರಿನಲ್ಲಿರುವ ನಾಗನೂರು ಶ್ರೀ ಶಿವಬಸವ ಸ್ವಾಮಿಗಳ ಕಲ್ಯಾಣ ಕೇಂದ್ರದ ಎಲ್ಲ ಪದಾಧಿಕಾರಿಗಳಿಗೂ ನನ್ನ ಕೃತಜ್ಞತೆಗಳು.

ಒಂದು ವಿಷಾದದ ಸುದ್ದಿ :

ಈ ಪುಸ್ತಕ ಪೂರ್ಣಗೊಳ್ಳುವಷ್ಟರಲ್ಲಿ ದುರದೃಷ್ಟವಶಾತ್ 9-12-87 ಬುಧವಾರ ನಮ್ಮ ನಾಗನೂರ ರುದ್ರಾಕ್ಷಿ ಮಠದ ಕಿರಿಯ ಗುರುಗಳಾದ ಶ್ರೀ ನಿ|| ಪ್ರ|| ಶ್ರೀ ಪ್ರಭು ಮಹಾಸ್ವಾಮಿಗಳು ಶಿವೈಕ್ಯರಾದರು. ಇದು ಭರಿಸಲಾರದ ನಷ್ಟ, ಸಹಿಸಲಾಗದ ದುಃಖ. ಆ ಮಹಾ ಚೇತನಕ್ಕೆ ನಮ್ಮ ಕಣ್ಣೀರಿನ ಕಾಣಿಕೆಯಾಗಿ ಈ ಪುಸ್ತಕವನ್ನು ಮೀಸಲಿರಿಸುತ್ತಿದ್ದೇನೆ. ಇದಕ್ಕಿಂತಲೂ ಮಿಗಿಲಾಗಿ ಹೇಳಲು ಮಾತು ಸೋತಾವು.

ನಮಸ್ಕಾರ.

ರಾಗಿಣಿ
೨೫-೧೨-೧೯೮೭

—ಸಾ. ಶಿ. ಮರುಳಯ್ಯ

ತಿದ್ದುಪಡಿ : ಪುಟ ೫, ಸಾಲು ೨೧ ಮೂವತ್ತು ವರ್ಷಗಳ ಹಿಂದೆ ಎಂಬುದನ್ನು ಎಪ್ಪತ್ತೈದು ವರ್ಷಗಳ ಹಿಂದೆ ಎಂದೂ, ಪುಟ ೫೦, ಸಾಲು ೧೦ರಲ್ಲಿನ 8-12-1896 ಎಂಬುದನ್ನು 8-12-1889 ಎಂದೂ ತಿದ್ದಿಕೊಳ್ಳಬೇಕಾಗಿ ವಿನಂತಿ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅರ್ಪಣೆ

ನಾಗನೂರ ಶ್ರೀ ರುದ್ರಾಕ್ಷಿ ಮಠದ ಕಿರಿಯ ಸ್ವಾಮಿಗಳೂ
ನಮ್ಮೆಲ್ಲರ ಅಭಿಮಾನ ಮೂರ್ತಿಗಳೂ
ಆದ
ಕಾಯಕಯೋಗಿ ಶ್ರೀ ನಿ|| ಪ್ರ|| ಶ್ರೀ ಪ್ರಭುಮಹಾಸ್ವಾಮಿಗಳ
ಮಹಾನ್ ವ್ಯಕ್ತಿತ್ವದ ಸ್ಮರಣೆಗಾಗಿ
ಶ್ರದ್ಧಾಂಜಲಿಯ ರೂಪದಲ್ಲಿ
ಈ ಕೃತಿ ಸಮರ್ಪಿತವಾಗಿದೆ.

—ಸಾ. ಶಿ. ಮರುಳಯ್ಯ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನನ್ನ ಮಾತು

[illegible] ಶ್ರೀ ಪ್ರಭು ಮಹಾಸ್ವಾಮಿಗಳ ಕರ್ತೃತ್ವ ಶಕ್ತಿಗೆ. ಈ ಎರಡು ಮಹಾಚೇತನಗಳನ್ನು ಈ [illegible] ಯಲ್ಲಿ ಕಂಡರಿಸಲು ಯತ್ನಿಸಿದ್ದೇನೆ. ಪೂರ್ಣ ಯಶಸ್ಸು ಲಭಿಸಿದೆ ಎಂಬ ಭ್ರಮೆ ನನಗಿಲ್ಲ. [illegible]

[illegible]

[illegible] 9-12-87 [illegible]

ನಮಸ್ಕಾರ.

[illegible]

[illegible] 8-12-1896 [illegible] 8-12-1889 [illegible]

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಾಗನೂರು ಮಠದ

ಶ್ರೀ ನಿ|| ಪ್ರ|| ಶ್ರೀ ಪ್ರಭುಮಹಾಸ್ವಾಮಿಗಳು



1929 ಅಕ್ಟೋಬರ್ 15
ಭವಜೀವಧಾರಣ

1987 ಡಿಸೆಂಬರ್ 9
ಶಿವೈಕ್ಯಾನುಸಂಧಾನ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಒಂದು

ಮಹಾಕೂಟದ ಉತ್ತುಂಗ ಶೃಂಗದ ಮೇಲೆ ನಿಂತು ವೀಕ್ಷಿಸುವ ಪ್ರೇಕ್ಷಕನಿಗೆ ನಿಸರ್ಗ ಒಂದು ನಾಟಕ ಶಾಲೆಯಂತೆ ಗೋಚರಿಸುತ್ತದೆ. ಎದುರಿನಲ್ಲಿ ಮಿಳಿರಿಸುವ ಕರಿತೆರೆಯ ಹಿರಿಬಾನು, ಕೆಳಗೆ ತೆರೆ ಏರಿ ತೆರೆ ಇಳಿವ ಸಾನು, ರುದ್ರಗಂಭೀರವಾಗಿ ಮಲಗಿರುವ ಕಾನು. ಅದರ ಮಡಿಲಲ್ಲಿ ಜುಳು ಜುಳು ನಿನಾದಗೈಯುತ್ತಾ, ಮಧುರ ಮಂಜುಳ ಗಾನಲಹರಿಯಲ್ಲಿ ಪರಿಸರವನ್ನು ತೇಲಿಸುತ್ತಾ, ಪ್ರವಹಿಸುವ ಮಲಪ್ರಭೆ! ಅತ್ತ ಅಡಿಕೆ, ಇತ್ತ ತೆಂಗು, ಕತ್ತೆತ್ತಿ ನೋಡಿದೆಡೆ ತತ್ತಿಮೋಡ. ಅದು ಶರತ್ಕಾಲದ ಪ್ರಭಾತ ಸಮಯವಾಗಿದ್ದರಂತೂ ವರ್ಣನಾತೀತ. ಮೂಡಣದ ಬಾನ ಬಾಗಿಲ ತೆರೆ ಇನ್ನೂ ಸರಿಯದಿರುವಾಗ, ನೀಲಗಗನದಲ್ಲಿ ಚಿಕ್ಕೆಗಳು ಕಿಕ್ಕಿರಿದಿರುವಾಗ, ಎಳೆಯ ಬೆಳುದಿಂಗಳಲ್ಲಿ ಅಭ್ಯಂಜನ ಸ್ನಾನ ಮಾಡಿ ಉರಿಕಣ್ಣು ಹೊಸೆಯುತ್ತಾ, ಪಡುವಣ ತಡಿಗೆ ಚಂದ್ರಮನು ಸಾಗುತ್ತಿರುವಾಗ ಆ ಸೊಬಗನ್ನು ನೋಡಬೇಕು. ಓಹ್! ಏನಂತಹ ಸೌಂದರ್ಯ ಸೂರೆಯಾಗಿರುತ್ತದೆ ಅಲ್ಲಿ! ಮೂಕವಿಸ್ಮಯದಿಂದ ನಾಟಕವನ್ನು ವೀಕ್ಷಿಸುವ ಪ್ರೇಕ್ಷಣಾಂಗಣದಂತೆ ನೆಲಮುಗಿಲು ಕಾಣಿಸುತ್ತದೆ.

ಅರುಣೋದಯದ ಸ್ವರ್ಣಚ್ಛಾಯೆ ಮೈದೋರಿದಂತೆಲ್ಲ ಪೂರ್ವ ದಿಗ್ಭಾಗದ ನಾಟ್ಯಾಂಗಣ ತನ್ನ ಮಕಮಲ್ಲಿನ ಮುಸುಕನ್ನು ಓಸರಿಸಿದಂತಾಗುತ್ತದೆ. ಮುಗಿಲೋಳಿ ಸುಳಿದಾಗ ಹಿಂಜಿದರಳೆಯಂತೆ ಕಳಲಿದಾಗ, ಉಣ್ಣೆಮೋಡ, ಬೆಣ್ಣೆಮೋಡ ತೇಲಿ ಬಂದಾಗ ನೆತ್ತರೋಕುಳಿ ಕೆಂಪು, ಹೊಂಬಣ್ಣದ ಹೊಗರುವಡೆದಾಗ ಹೊಸ ದೃಶ್ಯ ನಿರ್ಮಾಣವಾದಂತಾಗುತ್ತದೆ. ಮುಗಿಲು ಮಲೆ ಕೂಡುವೆಡೆಯಲ್ಲಿ ಉಷೆ ಹೊಸ ಸೀರೆಯ ನಿರಿಗೆಗಳನ್ನು ಸಿದ್ಧಪಡಿಸಿ ಉಲ್ಲಾಸದ ನರ್ತನಕ್ಕೆ ನಿಂತಂತೆ, ಕಟಿ ತಟ ವಿನ್ಯಸ್ತ ಹಸ್ತಗಳಾಗಿ ತುಟಿ ತೆರೆದು ಪುಟಿದಂತೆ ಭಾಸವಾಗುತ್ತದೆ. ನಯನ ಮನೋಹರವಾದ ಆ ಲಾಸ್ಯವನ್ನು ವೀಕ್ಷಿಸುತ್ತಲೇ ನಮ್ಮ ಗಮನವೇನಾದರೂ ತಿರೆಯೆಡೆಗೆ ತಿರುಗಿದರೆ, ಸನಿಹದ ಅಬ್ಬಿಯಿಂದ ನೊರೆ ತಬ್ಬಿ ಅರೆ ಮೇಲೆ ಬೀಳುವ ನೀರ್ ಬೀಳದ ತಾಂಡವ ದೃಶ್ಯ ದೃಗ್ಗೋಚರವಾಗುತ್ತದೆ. ಪೂರ್ವ ದಿಗ್ದೇಶದಲ್ಲಿ ಸೂರ್ಯೋದಯದ ಪೂರ್ವ ಸಿದ್ಧತೆ ಆಗಿ ಓಕುಳಿಯ ರಂಗೆರಚುತ್ತದೆ. ಮೊದಮೊದಲು ಕುಂಕುಮದ ಕೆಂಪು ದಾಸವಾಳದ ಕುಸುರು ಕೆಂಪಾಗಿ, ಕ್ರಮೇಣ ಬಂಗಾರದ ಹೊಂಬಣ್ಣವಾಗಿ, ಅನಂತರ ಬಿಳಿಯ ಮಲ್ಲಿನ ಬಟ್ಟೆಯಾಗಿ ಬೆಳಗುತ್ತಾ, ಹೋಗುತ್ತದೆ. ಮೂಡು ಮಲೆಯು ತನ್ನ ನೆತ್ತಿಯ ಮೇಲೆ ಹೊಂಗಳಸ ಹೊತ್ತು ನಿಂತಾಗ ತಿರೆಯ ಹಸುರೆಲ್ಲಾ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವರ್ಣರಂಜಿತವಾಗಿ ಕಮನೀಯ ಕಾಂತಿಯಾಗರವಾಗಿ ಕಾಣಸುತ್ತದೆ. ಮೇಲಿನ ನೀಲ ಪಟದ ಮಂಡಿಲಲ್ಲಿ ಸುಳಿದು ಸುತ್ತಿ ನಲಿದಾಡಿ ನಡೆವ ಕುರಿ ಹಿಂಡಿನ ದಂಡಿನಂತಹ ಬಿಳಿಯ ಮೋಡಗಳು ಹೊಂಬೊಗರಿನಿಂದಾಗಿ ರಂಗಿನ ರೇಶ್ಮೆಯಾಗಿ ಮಿರುಗುತ್ತಿರುತ್ತವೆ. ಬೆಳಕು ಹರಿದಂತೆಲ್ಲಾ ದಿಗಂತ ವಿಶ್ರಾಂತವಾದ ನಾಟ್ಯ ವೇದಿಕೆ ಮರೆಯಾಗುತ್ತದೆ. ಅರೆಮರೆಯಾಗಿದ್ದ ತಿರೆಯೆಂಬ ಪ್ರೇಕ್ಷಣಾಂಗಣ ಮಸಕು ಮಸಕಾಗಿ ಗೋಚರವಾಗುತ್ತದೆ. ತೀಡಿ ಬಂದ ತೆಂಗಾಳಿ ನಿಸರ್ಗ ನಾಟಕ ನೋಡ ಹೋದವರನ್ನು ಅಪ್ಪಿ ಮುತ್ತಿಡುತ್ತದೆ; ಮನಸ್ಸಿಗೆ ಹರ್ಷ ಆಹ್ಲಾದಗಳನ್ನು ನೀಡಿ ಮುಂದಗೊಳಿಸುತ್ತದೆ. ತಾಯಿ ತುಪ್ಪುಳದ ಮರಿಹಕ್ಕಿ ಕನಸ ಕಂಡೇಳುವಂತೆ ಮೇಲೆದ್ದು 'ಚೀಪೀ' ಎಂದು ಕನವರಿಸುತ್ತದೆ. ಪ್ರಪಾತದಲ್ಲಿ ಉರುಳಿ ಬಿದ್ದ ಬಂಡೆಯೂ ಬೆಳಕಿನುಂಡೆಯಾಗಿ ಗೋಚರಿಸುತ್ತದೆ. ಬೆಳುವಲದ ಜೋಳದ ತೆನೆ ತೆನೆಯೂ ಕೆನ್ನೆ ಮುತ್ತಿಡುವಾಗ, ಬದಿಯ ಬಣ್ಣದ ಹೂವು ಪಕಪಕನೆ ನಗುತ್ತಿರುತ್ತದೆ. ಹಚ್ಚ ಹಸುರಿನ ಪಚ್ಚೆ ಹುಚ್ಚೆದ್ದು ಕುಣಿಯುವಾಗ, ಬಾಳೆ ತೋಳಬೀಸುತ್ತದೆ, ತೆಂಗು ಚವರಿ ಹಾಕುತ್ತದೆ, ಅಡಿಕೆ ತಣ ತಣೆದು ತಲೆದೂಗುತ್ತದೆ. ಮುಳ್ಳು ಕಳ್ಳಿಗಳ ಮೇಲೆ ಮಿಂಚುಳ್ಳಿಯಂತೆ ಎರಗುವ ಬಳ್ಳಿ ಅರೆ ಮುಗುಳು ಬಿರಿ ಮುಗುಳುಗಳ ನಗೆಸೂಸಿ, ಬಾಗಿ, ಬಳುಕಿ, ನರ್ತನದ ಭಾವ ಭಂಗಿಯಲ್ಲಿ ಗೋಳಿನ ಬಾಳನ್ನು ಹಂಗಿಸುತ್ತದೆ. ಅದು ಚೆಲುವು ಚಿಮ್ಮುವ ತಾಣ, ಒಲವು ಒಸರುವ ತಾಣ; ಚಿತ್ತ ಚಿತ್ತಾರವನೆ ಬರೆವ ಚೈತ್ರನ ಪ್ರಯೋಗಶಾಲೆ. ಉದಯರಾಗದ ಒಲೆಗೆ ತನ್ನ ಅನುರಾಗದೆಳೆಯ ಲಾಳಿ ಆಡಿಸಿ, ರಾಗ ರಾಗಿಣಿಯರ ಸಹಯೋಗದಲ್ಲಿ ಹಾಡತೊಡಗುತ್ತಾನೆ ಭಾವುಕ ಬಂಧು :

ಸಸ್ಯ ಸಂಕುಲಕೆಲ್ಲ ಸಪ್ತ ವರ್ಣವನೆರಚಿ
ಚಿತ್ತ ಚಿತ್ತಾರವನೆ ಬರೆವ ಚೈತ್ರ
ಮಾವು ಬೇವಿಗು ಮಧುರ ಬಾಂಧವ್ಯವನೆ ಬೆಸೆವ
ಸಮರಸದ ಹರಿಕಾರ ಓ ಪವಿತ್ರ !

ತಂಬೆಲರ ಚುಂಬನಕೆ ತುಟಿದೆರೆದ ಹೂ ಎದೆಗೆ
ದುಂಬಿಗಳ 'ಫೂ' ಬಿಡುವ ಮೋಜುಗಾರ
ಮಧುಮಾಸದೊಸಗೆಯನು ತಾರಕದಿ ಸಾರಿಸುತೆ
ಚಿಗುರ ಕಚಗುಳಿಯಿಡುವ ಮೋಡಿಕಾರ !

ಬಾ ಬಾರ, ಬಾ ಒಲವೆ, ಬದುಕಿನಾ ಚಂದನವೆ
ಸಿಂಗರದ ನೆಲೆಯಾಗು ಶ್ರೀ ಶಿಲ್ಪವಾಗು
ಹಳತನ್ನು ಮರೆಯಿಸುವೆ ಹೊಸತನ್ನೆ ರೂಪಿಸುವೆ
ಓ ಚಿರಂತನ ಚತುರ ಚೈತ್ರಾಕ್ಷಿಯಾಗು !

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಯುಗ ಯುಗಾಂತರದೆದೆಯ ಚೆಲುವಿಕೆಯ ಚೇತನವೆ
ಬಾಳ ನಂದನದಲ್ಲಿ ಮಂದಾರವಾಗು
ಹಸಿರಾಗು ಹಸನಾಗು ಹರುಷದಾ ಹೊನಲಾಗು
ಜಗದ ಜೀವಿಗಳೆದೆಗೆ ಹೊಸ ಹರಯವಾಗು !

ಅದು ಎಂದಿನದೋ ಗಾನ ಗಂಗಾಸ್ರೋತ ! ಆದರೂ ಅನವರತ, ಅವಿಶ್ರಾಂತ ಕಲ್ಪನೆಯು ಕವಿಗಳಿಗೆ.

ಅಂದಿನದೂ ಅಂಥದೇ ಶರತ್ಕಾಲದ ಪ್ರಭಾತ ಸಮಯ. ಅದೇ ಮಹಾ ಕೂಟದ ನೆತ್ತಿ, ಅದೇ ಪುಷ್ಕರಿಣಿ, ಅದೇ ಮಹಾಕೂಟೇಶ್ವರನ ದೇಗುಲ. ಅಲ್ಲಿ ನಿಂತಿದ್ದಾರೆ ಇಬ್ಬರು ಕಾಷಾಯ ವಸ್ತ್ರಧಾರಿಗಳು. ಅವರು ನಿಂತು ಅದೇ ಹಾಡನ್ನು ತದೇಕ ಚಿತ್ತರಾಗಿ ಆಲಿಸುತ್ತಿದ್ದಾರೆ. ಅದು ರಿಂಗಣ ಕುಣಿಯುತ್ತಿದೆ ಯತಿದ್ವಯರ ಕಿವಿಯ ಗಹ್ವರದಲ್ಲಿ. ಅವರಿಬ್ಬರಿಗೂ ವಯಸ್ಸಿನಲ್ಲಿ ಬಹಳ ಅಂತರವಿದೆ; ಗಾತ್ರ ಎತ್ತರಗಳಲ್ಲೂ ಅಷ್ಟೆ. ಹಿರಿಯ ಯೋಗಿಯು ತನ್ನ ಬಾಳ ಪಯಣದಲ್ಲಿ ಅರ್ಧ ಹಾದಿ ಸವೆಸಿದ್ದಾನೆ. ಆದರೆ ಕಿರಿಯವನಿನ್ನೂ ಯೌವನದ ಹೊಸ್ತಿಲಿನಲ್ಲಿ ಕಾಲಿರಿಸಿದ್ದಾನೆ. ಅವನು ಗುರು, ಇವನು ಶಿಷ್ಯ ಎಂಬುದರಲ್ಲಿ ಸಂದೇಹವೇ ಇಲ್ಲ. ಗುರು ಕಾಷಾಯ ವಸ್ತ್ರ ಧರಿಸಿದ್ದರೆ ಶಿಷ್ಯ ಶುಭ್ರವಾದ ಬಿಳಿಯ ದಟ್ಟಿ ಕಟ್ಟಿದ್ದಾನೆ ; ಪೇಟ ಬಿಗಿದಿದ್ದಾನೆ. ಗುರುವಿನ ವೇಷಭೂಷಣ ಹೀಗಿದೆ : ತಲೆಯ ಮೇಲೆ ಭದ್ರವಾಗಿ ಬಿಗಿದು ಕಟ್ಟಿದ್ದ ಕಾವಿ ಪೇಟ, ಹೆಗಲಿಂದ ಹಿಮ್ಮಡಿಯವರೆಗೆ ಇಳಿಬಿದ್ದ ಕಾವಿ ಕಫನಿ, ಸೊಂಟದಲ್ಲಿ ಬಿಗಿದಿರುವ ಕಾವಿಯ ಬಟ್ಟೆಪಟ್ಟಿ, ಕಾಲಲ್ಲಿ ಹಾವುಗೆಗಳು, ಕೈಯಲ್ಲೊಂದು ದಂಡ. ಈ ಮಹಾಮೂರ್ತಿ ದೀರ್ಘದೇಹಿ ಇವನದು ಎತ್ತರದ ನಿಲುವು ; ಗರಿವಡೆದ ಗಾಂಭೀರ್ಯ ! ಧರಿಸಿದ್ದ ಕಾವಿಗೇ ಕಳೆಕೊಟ್ಟಂತಿರುವ ದೇಹಕಾಂತಿ ಅವನದು. ಕಣ್ಣುಗಳು ದಳದೆರೆದ ತಾವರೆಯಂಥವು. ಮುಖವೂ ಮೋಹಕವಾದುದೆ ಆಗತಾನೆ ನಿಸರ್ಗ ಗರ್ಭದಿಂದ ಮೇಲೆ ಬಂದ ಬಾಲಸೂರ್ಯನಂತೆ. ಅದೇ ತಾನೆ ಪ್ರಾತಃ ಸಮಯದ ಶಿವಪೂಜೆ ಮುಗಿಸಿ ಬಂದಿದ್ದಾನೆ ಶಿಷ್ಯನೊಡಗೂಡಿ. ಮಹಾಕೂಟದ ನೆತ್ತಿಯ ಮೇಲಿನ ಪುಷ್ಕರಿಣಿಯ ಬದಿಯಲ್ಲಿ ಮೂಡಣ ದಿಗಂತದೆಡೆ ಮುಖ ಮಾಡಿ ನಿಂತಿದ್ದಾನೆ ಮೂಡಿ ಮೇಲೆ ಬರುವ ಸೂರ್ಯದೇವನಿಗೆ ಹಾರ್ದಿಕ ಸ್ವಾಗತವನ್ನು ಬಯಸುತ್ತಾ. ಆ ಮಹಾ ಗುರು ನಾಗನೂರ ಶಿವಬಸವ ಶಿವಯೋಗಿ; ಅವರ ಶಿಷ್ಯ ರಾಜಶೇಖರನೆಂಬ ಬ್ರಹ್ಮಚಾರಿ.

ರಾಜಶೇಖರ ಚೆನ್ನಾಗಿ ಚಿಗುರಿ ನಿಂತ ಬಿಲ್ವ ವೃಕ್ಷದಂತೆ ಇದ್ದಾನೆ. ಅವನ ಕಣ್ಣುಗಳು ತುಂಬೆ ಹೂವಿನ ರಾಶಿಯಂತೆ ಮುಲು ಮುಲುಂಗುಟ್ಟುವಂತಹವು. ರಸಪೂರಿ ಮಾವಿನ ಹಣ್ಣು ಅವನ ಕೆನ್ನೆಗಳು. ಅವನು ತರುಣ ತೇಜಸ್ವಿಯಾಗಿದ್ದನು. ಅರುಣೋದಯದ ಹೊಂಬಣ್ಣದಲ್ಲಿ ಮಿಂದ ಅವನ ಮೈ ಜಂಗಮ ಜ್ವಾಲೆಯಂತೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಗೋಚರಿಸುತ್ತಿದೆ. ಕರುಣೆಯೇ ಕಾಸಾರಗೊಂಡಂತಿರುವ ಅವನ ಕಣ್ಣುಗಳು ಬೆಳಗು ತ್ತಿರುವ ನೀಲಾಂಜನಗಳಂತಿವೆ. ಸ್ನಿಗ್ಧ ಮುಗ್ಧ ನೇತ್ರಗಳಿಂದ ರಾಜಶೇಖರನು ಒಮ್ಮೆ ಗುರುವನ್ನು ನೋಡಿದ. ಗುರು ಶಿವಬಸವರು ಭಾವಮಗ್ನರಾಗಿದ್ದರು. ನಿಸರ್ಗ ದೊಡನೆ ಅನುಸಂಧಾನಗೈಯುತ್ತಾ ಭಾವಸಮಾಧಿಯಲ್ಲಿ ವಿಶ್ರಾಂತರಾಗಿದ್ದರು. ಹಸುಳೆ ಸೂರ್ಯನ ಕಿಸು ಕಿರಣ ಬೆರಳುಗಳು ಮಂಕುಟೇಶ್ವರನ ದೇಗುಲದ ಮೇಲ್ಭಾಗದ ಕಳಸವನ್ನು ಮೃದುವಾಗಿ ಸವರಿ ಕಚಗುಳಿಯಿಡುವುದನ್ನು ವೀಕ್ಷಿಸುತ್ತಾ ತಮ್ಮನ್ನೇ ತಾವು ಮರೆತು ಕಳಸದಿಂದ ಪ್ರತಿ ಫಲಿತವಾಗುತ್ತಿದ್ದ ಬೆಳಗಿನ ಕಿರಣಗಳ ವಿನ್ಯಾಸದಲ್ಲಿ ತಾವೂ ಬೆರೆತು ಮಂತ್ರಮುಗ್ಧರಾಗಿ ನಿಂತಿದ್ದ ಆ ಮಹಾಯೋಗಿಯು ಕಿರಿಯ ವಟು ವನ್ನು ಕುರಿತು :

'ರಾಜಶೇಖರ, ಶಿವನ ಸೃಷ್ಟಿ ಅದೆಷ್ಟು ವಿಚಿತ್ರ ! ಅದೆಷ್ಟು ವೈವಿಧ್ಯ ! ಅವನೊಬ್ಬ ಬಹು ದೊಡ್ಡ ಕಲಾವಿದ. ಆಕಾಶಕ್ಕೆ ನೀಲಿಯನ್ನು ಮೆತ್ತಿದ್ದಾನೆ ! ಅರಣ್ಯಕ್ಕೆ ಹಸಿರು ಬಳಿದಿದ್ದಾನೆ ! ಹೂವು ಹೂವಿಗೆ ಬಣ್ಣ ಬಂಡುಗಳನ್ನು ತುಂಬಿ ದ್ದಾನೆ. ಹಕ್ಕಿಗೆ ಹಾಡು ಕಲಿಸಿದ್ದಾನೆ ; ದುಂಬಿಯ ಬಾಯಿಂದ ಓಂಕಾರವೆಂಬ ಪ್ರಣವ ವನ್ನು ಹಾಡಿಸುತ್ತಾನೆ. ನಿಸರ್ಗ ಆ ವಿಶ್ವ ಕಲಾವಿದನ ಬೃಹತ್ ಕಲಾಶಾಲೆ ಅಲ್ಲವ ?'

'ಹೌದು ಅಪ್ಪಗಳೇ, ಅವನೊಬ್ಬ ವಿಶ್ವಕವಿ. ಅವನೊರೆದ ಅಮರ ಕಾವ್ಯದ ಆನಂದದ ಹಾಡಿಗೆ ರಾಗ ಒದಗಿಸುತ್ತಿದ್ದಾಳೆ ಈ ನದೀ ದೇವಿ.'

'ಅದೋ ಅಲ್ಲಿ ನೋಡು ರಾಜಶೇಖರ, ಆ ವಿಶ್ವ ಮಹಾ ಕಾವ್ಯವನ್ನು ಗಿಳಿಗಳು ಹೇಗೆ ಓದುತ್ತಿವೆ !'

'ಹೌದು ಗುರುಗಳೇ, ಕೋಗಿಲೆಗಳ ಕುಹೂ, ಕುಹೂ ಕೂಜನದ ಲಯಕ್ಕನು ಗುಣವಾಗಿ ಈ ನವಿಲುಗಳು ಆನಂದದ ನರ್ತನ ಆರಂಭಿಸಿಬಿಟ್ಟಿವೆ ತಮ್ಮ ಸಹಸ್ರ ನೇತ್ರಗಳ ಗರಿಗೆದರಿ. ಹಕ್ಕಿ ಗಾಯನದ ಸ್ವರ ಮೇಳದಲ್ಲಿ ಮೇದಿನಿ ರಮ್ಯ ಸಂಗೀತ ಶಾಲೆ ! ಇಡೀ ಪ್ರಕೃತಿಯೇ ಒಂದು ಪವಾಡದಂತೆ ಭಾಸವಾಗುತ್ತಿದೆ ಗುರುದೇವ.

'ಇದು ಅವನ ಲೀಲೆ ರಾಜಶೇಖರ. ಇದು ವಿಶಿಷ್ಟವೂ ಹೌದು, ವಿಚಿತ್ರವೂ ಹೌದು. ಕೇಳು —

'ಶರಧಿಯು ಮೇಲೆ ಧರೆಯು ಕರಗದಂತಿರಿಸಿದೆ. ಅಂಬರಕ್ಕೆ ಗದ್ದುಗೆ ಬೋದುಗೆ ಇಲ್ಲದಂತಿರಿಸಿದೆ.' ರಾಜಶೇಖರ, ನೀನು ಹೇಳಿದಂತೆ ಅವನ ಒಂದೊಂದು ಚಟುವಟಿಕೆಯೂ ಒಂದೊಂದು ಪವಾಡವೆ : ಎಣ್ಣೆ ಇದ್ದೂ ಎಳ್ಳು ನೆನೆಯಂದ, ಕಿಚ್ಚು ಇದ್ದೂ ಕಲ್ಲು ಸಿಡಿಯದ ಗುಟ್ಟು ಪವಾಡವಲ್ಲವೆ ? ಬೀಜದಲ್ಲಿನ ಭೂಜ ಭ್ರೂಣದ ಕನಸು ಕಾಣುವುದು ಪವಾಡವಲ್ಲವೆ ? ಸೂರ್ಯೋದಯ, ಚಂದ್ರೋದಯ ಋತುಮಾನಗಳು, ಸಮುದ್ರದ ಮರ್ಯಾದೆ, ನಿಸರ್ಗದ ನಿಗೂಢ ಗಾಂಭೀರ್ಯ,

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನೀಹಾರಿಕಾ ಅಚ್ಚರಿಗಳು—ಇವೆಲ್ಲವೂ ಪರಶಿವನ ಪವಾಡವಲ್ಲದೆ ಬೇರೆಯಲ್ಲ. ಬೃಹದಾಕಾರದ ಬಂಡೆಯೊಂದನ್ನು ಸೀಳಿ ಅದರ ಗರ್ಭದಿಂದ ಮೂಡಿ ಮೇಲೇಳುತ್ತದೆ ಅರಳಿಯ ಸಸಿ! ಅದೇ ರೀತಿ ನೀರಿನ ಮಡಿಲಲ್ಲಿ ಮರವೊಂದು ನಿರಾತಂಕವಾಗಿ ನೀರುಂಡು ಬೆಳೆಯುತ್ತದೆ, ತನ್ನ ಬೇರುಗಳನ್ನು ಆಳದಾಳದಲ್ಲಿ ಇಳಿಬಿಟ್ಟು; ನೂರು ರೆಂಬೆಗಳ ಕರ ಚಾಚಿ, ಪರಿಪರಿಯ ಫಲವಿತ್ತು ಪರಿಣಾಮಿಸುತ್ತದೆ. ಇದು ಅವನ ಅದ್ಭುತ ಲೀಲೆಯಲ್ಲವೆ? 'ಅವನು ಲೀಲೆಯಾದಡೆ ಉಮಾಪತಿ, ಲೀಲೆ ತಪ್ಪಿದಡೆ ಸ್ವಯಂಭು.' ತನ್ನ ಲೀಲೆಗಾಗಿ ಸೃಷ್ಟಿಸುತ್ತಾನೆ, ತನ್ನ ಲೀಲೆಗಾಗಿ ನಾಶಗೊಳಿಸುತ್ತಾನೆ. ಅಕ್ಕ ಹೇಳುವಂತೆ—

ತನ್ನ ವಿನೋದಕ್ಕೆ ತಾನೇ ಸೃಷ್ಟಿಸಿದ ಸಕಲ ಪ್ರಪಂಚವನು;
ತನ್ನ ವಿನೋದಕ್ಕೆ ತಾನೇ ತಿರುಗಿಸಿದ ಅನಂತ ದುಃಖಗಳಲ್ಲಿ;
ಇಂತೆನ್ನ ಚನ್ನಮಲ್ಲಿಕಾರ್ಜುನನೆಂಬ ಪರಶಿವನು
ಜಗದ್ವಿಲಾಸ ಸಾಕಾದೊಡೆ ಮತ್ತೆ ಪರಿವನಾ ಮಾಯಾ ಪಾಶವನು.

ಗುರು ಶಿಷ್ಯರಿಬ್ಬರೂ ಹೀಗೇ ಸಂಭಾಷಿಸುತ್ತಾ ವಸಂತೋತ್ಸವದ ಸಂಗೀತ ಗೋಷ್ಠಿಯಲ್ಲಿ ಪಾಲ್ಗೊಂಡರು. ಹಕ್ಕಿಗಳ ಚಿಲಿಪಿಲಿ ನಾದ ಅವರನ್ನು ಭಾವಪರವಶರನ್ನಾಗಿ ಮಾಡಿತು. ಕಿವಿ ಕೇಳುತ್ತಿದ್ದರೆ, ಅವರ ಕಾಲುಗಳು ತಾಳಹಾಕಿ ಮುಂದು ವರಿಯುತ್ತಿದ್ದವು.

'ರಾಜಶೇಖರ, ಈ ಪವಿತ್ರ ಪರಿಸರವನ್ನು ನೆನೆದಾಗಲೆಲ್ಲ ನನ್ನ ಮನಸ್ಸು ಮೂರು ದಶಕಗಳ ಹಿಂದೆ ಹೋಗಿ ನೋಡುತ್ತದೆ, ನುಡಿಯುತ್ತದೆ ಆ ದಿನದ ಶುಭ ಸಂದರ್ಭವನ್ನು...'

'ಯಾವ ದಿನ? ಯಾವ ಸಂದರ್ಭ? ಅಪ್ಪಣೆಯಾಗಲಿ ಅಪ್ಪಗಳೆ'

'ಅದೇ ಮೂವತ್ತು ವರ್ಷಗಳ ಹಿಂದೆ ಎಂದು ಹೇಳಿದೆನಲ್ಲ—

ಅಂದು ನಾನಿನ್ನೂ 10-15 ವರ್ಷಗಳ ಬಾಲಕನಿದ್ದೆ. ಅಂದು ನನ್ನ ಪರಮಾರಾಧ್ಯ ದೈವ ಪ್ರಾತಃಸ್ಮರಣೀಯ ಮಹಾನ್ ವಿಭೂತಿ ಹಾನಗಲ್ಲ ಶ್ರೀ ಕುಮಾರ ಶಿವಯೋಗಿಗಳು—ನಿನ್ನನ್ನು ನಾನಿಂದು ಕರೆತಂದಂತೆ—ಇದೇ ಸ್ಥಳಕ್ಕೆ, ಇದೇ ಮಹಾಕೂಟದ ಮುಸ್ತಕದೆಡೆಗೆ ನನ್ನನ್ನು ಕರೆತಂದಿದ್ದರು, ಅಂದೂ ಇಂದಿನಂಥದೇ ಪ್ರಭಾತ ಸಮಯ ಮೆರೆದಾಡುತ್ತಿತ್ತು. ಈ ಮಹಾಕೂಟದ—ಅದೋ ಆ ಬಂಡೆಯ ಮೇಲೆ ಅವರು ನಿಂತಿದ್ದರು. ಸೂರ್ಯದೇವ ಆಗ ತಾನೆ ಮೂಡಿ ಮೇಲೇಳುತ್ತಿದ್ದ. ಆ ಪುಷ್ಕರಣಿಯ ತೀರದಿಂದ ನೋಡಿದೆ. ಕಾವೀವಸ್ತ್ರಧಾರಿಯಾಗಿದ್ದ ಆ ನನ್ನ ಮಹಾಗುರು ಬೆಳೆಯುವ ಸೂರ್ಯನೇ ಆಗಿ ಗೋಚರಿಸಿದರು. ಅವರು ನನ್ನನ್ನು ಹತ್ತಿರ ಕರೆದು ಮಲಾಪಹಾರಿಯ ಕಡೆಗೆ ತೋರ ಬೆರಳು ಮಾಡಿ ಹೇಳಿದರು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

"ಮರಿದೇವರೆ"—ಹಾನಗಲ್ಲ ಕುಮಾರಸ್ವಾಮಿಗಳು ನನ್ನನ್ನು 'ಮರಿದೇವರು' ಎಂದು ಅಕ್ಕರೆಯಿಂದ ಸಂಬೋಧಿಸುತ್ತಿದ್ದರು. ಅವರು, "ಈ ಮಲಾಪಹಾರಿ ಎಂತಹ ಪವಿತ್ರ ಪ್ರಭೆಯುಳ್ಳ ದೇವಗಂಗೆ! ಶತ ಶತಮಾನಗಳಿಂದಲೂ ಅದೆಷ್ಟೋ ಜೀವ ಕೋಟಿಗೆ ಬದುಕು ಕೊಟ್ಟಿದ್ದಾಳೆ; ಬೆಳಕು ನೀಡಿದ್ದಾಳೆ. ಅವಳಿಲ್ಲದಿದ್ದರೆ ಈ ನೆಲವೆಲ್ಲಾ ಬಂಜರು, ಬೆಂಗಾಡು. ಆದರೆ ಅವಳಿಂದಾಗಿ ಹರಿದೆಡೆಯೆಲ್ಲಾ ಹಚ್ಚ ಹಸುರಿನ ಪಚ್ಚೆ ಬಯಲು! ನೆಲವೆಲ್ಲಾ ಮಕಮಲ್ಲಿನ ಮೆತ್ತೆ ಹಾಸು. ಮಾವು, ಬೇವು, ತೇಗ, ಮುತ್ತುಗ ಇವೇ ಮೊದಲಾದ ಶತಸಹಸ್ರ ವೃಕ್ಷರಾಜಿ. ಅಲ್ಲಲ್ಲಿ ಅವಳ ಎರಡೂ ದಂಡೆಗಳ ಉದ್ದಕ್ಕೂ ಆ ಪರಮೇಷ್ಠಿಯ ಕಲಾ ವಿನ್ಯಾಸ! ಗೋರಂಟಿ ಯಿಂದ ಇಲ್ಲವೇ ಅಲಕ್ತಕಾ ರಸದಿಂದ ಹಿಂದೆ ಹೆಣ್ಣು ಮಕ್ಕಳು ಮಕರಿಕಾ ಪತ್ರಗಳನ್ನು ಮೈಮೇಲೆ ಬರೆಸಿಕೊಳ್ಳುತ್ತಿದ್ದರಂತೆ, ಹಚ್ಚೆ ಹೊಯ್ಸಿಕೊಳ್ಳುತ್ತಿದ್ದರಂತೆ. ಅದೇ ರೀತಿ ಪ್ರಕೃತಿ ದೇವಿಯ ಕೆನ್ನೆಯ ಮೇಲೆ, ಈ ನದೀ ದೇವಿಯ ಇಕ್ಕೆಲದ ಎರಡೂ ತೋಳುಗಳ ಮೇಲೆ ಅದೆಂತಹ ಮಕರಿಕಾ ಪತ್ರಗಳನ್ನು ಬಿಡಿಸಿದ್ದಾನೆ; ಹಚ್ಚೆ ಹೊಯ್ಸಿದ್ದಾನೆ ಆ ವಿಶ್ವ ಕಲಾವಿದ! ಆ ತೊರೆ ಪೊದರುಗಳನ್ನು ನೋಡಿ, ಬಣ್ಣ ಬಣ್ಣದ ಹೂವುಗಳು, ಅಲ್ಲಲ್ಲಿ ಎಲೆಗಳೂ ಹೂವುಗಳೇನೊ ಎಂಬ ಭ್ರಮೆ ಹುಟ್ಟಿಸುತ್ತವೆ. ತಮ್ಮ ಮೈ ತುಂಬ ಹೂ ಮುಡಿದುಕೊಂಡ ಪೊದೆಗಳು ನಳನಳಿಸುತ್ತಾ ನರ್ತನ ಗೈಯುತ್ತಿರುವಂತೆ ಕಂಡರೆ, ಹಸಿರು ತುಂಬಿ, ಹಸಿರು ಮುಕ್ಕಳಿಸುವ ಹಸಿರೆಲೆಯ ಪೊದೆಗಳು ಪ್ರಾಚೀನ ಮುನಿಗಳಂತೆ ತಪೋಮಗ್ನವಾಗಿವೆ. ಇಲ್ಲಿ ಈ ಅಮಲ ಪ್ರಭೆಯ ಪರಿಸರದಲ್ಲಿ ಚೆಲುವೂ ಇದೆ, ಒಲವೂ ಇದೆ, ದಿವ್ಯತೆಯೂ ಇದೆ; ಭವ್ಯತೆಯೂ ಇದೆ. ಅವಳು ತುಂಬಿ ಬಂದಾಗ ನೋಡಬೇಕು!. ತುಂಬು ಗರ್ಭಿಣಿಯಂತೆ ಗಂಭೀರವಾಗಿ ನಡೆಯುತ್ತಿರುತ್ತಾಳೆ!. ನೆರೆ ಬಂದಾಗ ನೊರೆ ನೆರಿಗೆಗಳನ್ನು ಚಿಮ್ಮಿ ಭೋರ್ಗರೆದು ನರ್ತನಗೈಯುತ್ತಾಳೆ!. ಇಂದಿನ ಬನಶಂಕರಿ ಅಂದು ರಣಭಯಂಕರಿಯಾಗಿ ಕಾಣಿಸುತ್ತಾಳೆ. ಆದರೂ ಆ ತಾಯಿಯನ್ನು ಕಂಡಾಗ ನನಗೆ ಎಣೆ ಇಲ್ಲದ ಆನಂದ. ಹೆತ್ತವಳಿತ್ತ ತುತ್ತುಂಡ ತೃಪ್ತಿ. ಅವಳು ಹರಿವ ಈ ದಂಡೆಯಲ್ಲಿ ಪವಡಿಸಿದರಂತೂ ತಾಯಿಯ ತೊಡೆಯ ಮೇಲೆ ಮಲಗಿದ ಹರ್ಷ! ನಾನು ವಿರಕ್ತ; ಸರ್ವ ಸಂಗ ಪರಿತ್ಯಾಗಿ. ಆದರೂ, ಈ ಅಮಲ ಪ್ರಭೆಯ ಒಲವು ನನ್ನನ್ನು ಬಂಧಿಸಿಬಿಟ್ಟಿದೆ" ಎಂದರು.

ಅವರ ಭಾವಪೂರ್ಣ ಭಾಷಾಲೋಕದಲ್ಲಿ ರಸಯಾತ್ರೆ ಕೈಗೊಂಡ ನಾನು,

'ಈ ಬಗೆಯ ಒಲವು ಇತ್ತೀಚಿನದು, ಅಲ್ಲವೆ ಅಪ್ಪಗಳೆ' ಎಂದೆ.

'ಅಲ್ಲ....ಬಹು ದಿನಗಳದು; ಬಹುಶ: ಜನ್ಮ ಜನ್ಮಾಂತರದ್ದು. ಮರಿದೇವರು ... ನೋಡಿ, ಇಲ್ಲಿ ಈ ಅಮಲ ಪ್ರಭೆಯ ತೀರದಲ್ಲಿ . . . . .

ಅಲ್ಲಿಗೇ ಅವರ ಮಾತು ನಿಂತಿತು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮುಗಿಲೆಡೆಗೆ ನೋಡುತ್ತಿದ್ದ ನಾನು ಮಾತು ನಿಲ್ಲಿಸಿದ್ದೇಕೆ ಎಂದು ಅವರತ್ತ ನೋಡಿದೆ. ಹಾಸಗಲ್ಲಪ್ಪನವರು ಭಾವಪರವಶರಾಗಿದ್ದರು! ಅವರ ಮನಸ್ಸು ಅವುದೋ ಯೋಜನೆಯನ್ನು ಹೆಣೆಯುತ್ತಿತ್ತು. ಅವರ ಭಾವಸಮಾಧಿಗೆ ಭಂಗ ತರಬಾರದೆಂದು ನಾನೂ ತೆಪ್ಪನೆ ನಿಂತುಬಟ್ಟೆ. ಒಮ್ಮೆ ಮೌನ ಮುರಿದರೂ ಅವರ ಅಂತರಂಗದ ಆಲೋಚನೆ ಏನೆಂದು ಕೇಳುವ ಕುತೂಹಲ ನನಗೆ. ಆದರೂ ಯಾವುದೋ ಒಂದು ಬಗೆಯ ಭಯ ಮಿಶ್ರಿತ ಭಕ್ತಿ ನನ್ನ ನಾಲಗೆಯನ್ನು ತಡೆ ಹಿಡಿಯಿತು.

ಕೆಲನಿಮಿಷಗಳು ಉರುಳಿದುವು.

ಮೌನವೇ ನಮ್ಮಿಬ್ಬರ ನಡುವೆ ಮಾತಾಡುತ್ತಿತ್ತು!

ಬಿಸಿಲು ಮೇಲೇರುವ ಸಮಯ!

ಅಂತಾದರೂ ನನ್ನ ಮಾತು ಆ ಮಹಾಮೌನದ ಪಾವಿತ್ರ್ಯತೆಯನ್ನು ಹಾಳು ಮಾಡಬಾರದೆಂದು ಮುದುಡಿ ಕುಳಿತಿತ್ತು. ಹಾಸಗಲ್ಲ ಶಿವಯೋಗಿಗಳು ಎರಡು ಹೆಜ್ಜೆ ಮುಂದೆ ನಡೆದರು. ಅವರು ಮೆಟ್ಟಿದ್ದ ಹಾವುಗೆಗಳು 'ಪಟ್ ಪಟ್' ಶಬ್ದ ಮಾಡುತ್ತಾ, ಅವರ ಆಲೋಚನೆಗೆ 'ಹೂಂ' ಗೊಡುತ್ತಿದ್ದವು.

ಸಮಯ ಸಾಗಿತು.

ಮೌನ ಮುರಿಯಿತು.

ಆವರು ತಮಗೆ ತಾವೇ ಅಂದುಕೊಂಡರು :

'ಅಹುದು...ಅಹುದಹುದು ಶಿವನೇ ನಿನ್ನಿಚ್ಛೆ ನೆರವೇರಲಿ ನನ್ನಪ್ಪ" ಎಂದು. ಆವರು ಭಾವಸಮಾಧಿಯಿಂದ ಎಚ್ಚೆತ್ತಿದ್ದರು.

ನಾನು ಕೇಳಿದೆ.

'ಅಪ್ಪಗಳೆ, ಅವನಿಚ್ಛೆ ಏನು ? ಅದು ನೆರವೇರುವ ಬಗೆ ಯಾವುದು ? ಅಪ್ಪಣೆ ಯಾಗಲಿ ?'

'ಮರಿದೇವರು, ಈ ತರಂಗಿಣಿಯ ತೀರದಲ್ಲಿ ಒಂದು ಋಷ್ಯಾಶ್ರಮವನ್ನು ತೆರೆಯುವ ಇಚ್ಛೆ. ಅಲ್ಲಿ ಬೃಹತ್ ಪ್ರಮಾಣದ ನಾಟ್ಯಮಂಟಪ, ಅಧ್ಯಯನ ವಿಭಾಗ, ಗ್ರಂಥಾಲಯ, ಪೂಜಾಲಯ, ಪ್ರಸಾದ ನಿಲಯ, ಪ್ರಾರ್ಥನಾ ಮಂದಿರ ಇವೇ ಮೊದಲಾದ ನೂರೆಂಟು ವಿಭಾಗಗಳನ್ನೊಳಗೊಂಡ ಒಂದು ಮಹಾ ವಿದ್ಯಾಲಯ ನಿರ್ಮಾಣವಾಗಬೇಕು. ಅದು ಬಳ್ಳಿಗಾವೆ, ಕಾಂಚಿ, ನಲಂದ, ತಕ್ಷಶಿಲಾ ಮೊದಲಾದ ನಮ್ಮ ಪ್ರಾಚೀನ ವಿಶ್ವವಿದ್ಯಾಲಯಗಳಂತೆ ಮಾದರಿಯ ಮಹಾ ಘಟಿಕಾಸ್ಥಾನವಾಗ ಬೇಕು. ಮೂಲತಃ ಅದು ಅಧ್ಯಾತ್ಮ ಕೇಂದ್ರವಾಗಬೇಕು. ಅಲ್ಲಿ ಧಾರ್ಮಿಕ, ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಕಾರ್ಯಕ್ರಮಗಳೇ ದಿನಚರಿಗಳಾಗಬೇಕು. ಸತ್ಯ, ಧರ್ಮ, ನೀತಿ, ಬ್ರಹ್ಮಚರ್ಯ, ಅಹಿಂಸೆ, ಅಸ್ತೇಯ, ಅಪರಿಗ್ರಹ ಮಾನವತೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮೊದಲಾದ ಜೀವನ ಮೌಲ್ಯಗಳನ್ನು ಬೆಳಗಿಸುವ ಶಿಕ್ಷಣ ನೀಡುತ್ತಿರಬೇಕು. ಅಂತೆಯೇ ಅದು ಮಠಾಧಿಪತಿಗಳ ತರಬೇತಿ ಕೇಂದ್ರವೂ ಆಗಬೇಕು. ವೀರಶೈವಕ್ಕೆ ಸಂಬಂಧಿಸಿದ ಆಚಾರ ವಿಚಾರಗಳು, ಧಾರ್ಮಿಕ ಪ್ರಕ್ರಿಯೆಗಳು ಷಟ್‌ಸ್ಥಲ, ಅಷ್ಟಾವರಣ, ಪಂಚಾಚಾರ ಇವೇ ಮೊದಲಾದ ವೀರಶೈವ ಅಧಿನಿಯಮ, ಸಂಹಿತೆಗಳ ಸಮಗ್ರ ಅಧ್ಯಯನ ಅಲ್ಲಿ ನಡೆಯಬೇಕು. ಅಲ್ಲಿ ವೇದೋಪನಿಷತ್ತುಗಳು, ತರ್ಕ, ಮೀಮಾಂಸೆ, ವ್ಯಾಕರಣ, ನಿರುಕ್ತ ಮೊದಲಾದವುಗಳು, ನಮ್ಮ ಕನ್ನಡವು ವಿಶ್ವಸಾಹಿತ್ಯಕ್ಕೆ ಕೊಟ್ಟ ವಿಶಿಷ್ಟ ರಚನೆ ಎನ್ನಿಸಿದ—ವಚನ ಇವುಗಳ ಅಧ್ಯಯನ ನಿರಂತರ ಸಾಗಬೇಕು. ವೀರಶೈವದ ತಿರುಳು ಶಿವಾಗಮಗಳಲ್ಲಡಗಿದೆ. ಎಲ್ಲ ಆಗಮಗಳನ್ನೂ ಭಾಷಾನುವಾದ ಮಾಡಿಸಿ, ಅವುಗಳ ಸತ್ವವನ್ನು ಜಗತ್ತಿಗೆ ತೆರೆದು ತೋರಿಸುವಂತಹ ಅಧ್ಯಯನ ಪೀಠವೊಂದು ಅಲ್ಲಿ ಸ್ಥಾಪಿತವಾಗಬೇಕು.

ಕಲೆಯ ನೆಲೆ ಅದಾಗಬೇಕು ಎಂಬ ಹಂಬಲ ಮರಿದೇವರೆ! ಅಲ್ಲಿ ಕುರುಡರು ಕುಂಟರು, ಅಶಕ್ತರು, ಅನಾಥರು ಇವರುಗಳ ವಿದ್ಯೆಗೆ ಆದ್ಯತೆ ನೀಡಬೇಕು. ಸಂಗೀತ, ನೃತ್ಯ, ಭಾಷಣ, ಹರಿಕಥೆ, ಪುರಾಣಪಠನ, ವ್ಯಾಖ್ಯಾನ ಇವೇ ಮೊದಲಾದ ಕಲೆಗಳ ಬಗ್ಗೆ ಉತ್ತಮ ಶಿಕ್ಷಣ ಮತ್ತು ತರಬೇತಿ ನೀಡುವಂತಿರಬೇಕು. ಬಡವ ಬಲ್ಲಿದ, ಮೇಲು ಕೀಳು ಎಂಬ ಭೇದವಿಲ್ಲದೆ ಎಲ್ಲ ವಿದ್ಯಾರ್ಥಿಗಳೂ ಆಶ್ರಮದಲ್ಲಿ ಸಮಾನಸ್ಕಂದರಾಗಿ ಕುಳಿತು ಪ್ರಸಾದ ಸ್ವೀಕರಿಸುವ, ಅಭ್ಯಸಿಸುವ, ವ್ಯವಸ್ಥೆ ಅದಾಗಿರಬೇಕು.

'ಲೋಕ ಪೋಷಕ ಕಲೆಗಳಂತೆ ಅಧ್ಯಾತ್ಮವರಿಯಲು ಬರುವ ಅಪರೋಕ್ಷ ಜ್ಞಾನಿಗಳಿಗೂ ಅದು ಆಡುಂಬೊಲ ಆಗಬೇಕು. ಕರ್ನಾಟಕದಲ್ಲಿ ಅನಾದಿಕಾಲದಿಂದಲೂ ಬೆಳೆದು ಬಂದ ಧರ್ಮ, ವೀರಶೈವ ಧರ್ಮ. ಅದರ ಉತ್ಥಾನ, ವೈಭವೀಕರಣಕ್ಕಾಗಿ ನಾಡಿನಾದ್ಯಂತ ನೂರಾರು ಸಾವಿರಾರು ಮಠ ಮಹಾನ್ಯಗಳು ನಿತ್ಯ ಸಾಕ್ಷಿಯಾಗಿ ನಿಂತಿವೆ. ಆ ಎಲ್ಲ ಮಠ, ಪೀಠಗಳೂ ಹಳ್ಳಿಯ ಓಚಯ್ಯಗಳ ಶಾಲೆಗಳು, ಔಷಧಾಲಯಗಳು, ಅನಾಥ ಸೇವಾಶ್ರಮಗಳು, ವಿಶೇಷವಾಗಿ ನಿತ್ಯ ದಾಸೋಹದ ಅಗ್ರ ಕೇಂದ್ರಗಳು. ಸದಾ ಲೋಕಸಂಗ್ರಹ ಕಾರ್ಯದಲ್ಲಿ ನಿರತವಾಗಿರುವ ವೀರಶೈವ ಮಠ—ಪೀಠಗಳಿಗೆ ಅಧಿಪತಿಗಳಾಗುವವರು, ಗುರು—ಜಗದ್ಗುರುಗಳೆನಿಸುವವರು ಸಾಮಾನ್ಯರಂತಿದ್ದರೆ, ಬೆಳೆದರೆ ಸಾಲದು. ಅವರಿಗೇ ಒಂದು ಪ್ರತ್ಯೇಕ ಹಾಗೂ ವಿಶಿಷ್ಟ ಶಿಕ್ಷಣ ಬೇಕಾಗುತ್ತದೆ. ಮೊದಲು ಬ್ರಹ್ಮಚರ್ಯ, ಅನಂತರದ್ದು ಚಿತ್ತೈಕಾಗ್ರತೆ ಅಥವಾ ತಪಸ್ಸು, ಏಕದೇವೋಪಾಸನೆ, ಲಿಂಗಾನುಸಂಧಾನ, ಗುರುಭಕ್ತಿ, ಜಂಗಮ ಪ್ರೇಮ, ಕಾಯಕ ನಿಷ್ಠೆ ಮತ್ತು ತ್ರಿವಿಧ ದಾಸೋಹ ಇವೇ ಮೊದಲಾದವುಗಳನ್ನು ಪ್ರಾಯೋಗಿ ಕಾರ್ಥದಲ್ಲಿ ಕಲಿತು ನಿತ್ಯಾನುಷ್ಠಾನುಗೈಯುವುದು ಮೂರನೆಯದು. ವಿಭೂತಿಯ ತಯಾರಿಕೆ, ಮಂತ್ರ ಬಲದಿಂದ ಇಷ್ಟಲಿಂಗಗಳ ವಿಶಿಷ್ಟ ನಿರ್ಮಾಣ ಇವು ನಾಲ್ಕನೆಯ ನೇಮಗಳು. ಐದನೆಯದಾಗಿ, ಸರ್ವಜ್ಞ ಹೇಳುವಂತೆ :

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಚ್ಚೆ ಕೈ ಬಾಯಿಗಳು ಇಚ್ಛೆಯಲ್ಲಿದ್ದರೆ
ಅಚ್ಯುತನ ಅಪ್ಪ, ಅಜನಪ್ಪ—ಆತ
ನಿಶ್ಚಿಂತನಪ್ಪ ಸರ್ವಜ್ಞ.

ಹಾಗೆ ಒಳಹೊರಗೆ ಶುದ್ಧನಾಗಿ, ನಡೆ–ನುಡಿಯಲ್ಲಿ ಮಡಿಯಾಗಿ ಶರಣರು ಹೇಳು ವಂತೆ 'ಸಕಲ ಜೀವಾತ್ಮರಿಗೆ ಲೇಸನೇ ಬಯಸುತ್ತಾ' ಬದುಕು ಮಾಡುವ ಮಹಾ ವಿದ್ಯೆಯನ್ನು ದಾನಮಾಡಬೇಕು. ಮಠಾಧಿಪತಿಗಳನ್ನು, ಮಹಾಚೇತನಗಳನ್ನು ಸೃಷ್ಟಿಸುವ ಕಮ್ಮಟ ಆದಾಗಬೇಕು. ಅಂತಹ ಶಿವಯೋಗ ಮಂದಿರದ ಕನಸು ಕಾಣು ತ್ತಿದ್ದೇನೆ. ಆ ಶಿವಯೋಗ ಮಂದಿರದ ನಿರ್ಮಾಣಕ್ಕೆ ಈ ಮಲಾಪಹಾರಿಯ ತೀರ ತುಂಬಾ ಸೂಕ್ತವಾಗಿದೆ ಎಂಬುದು ನನ್ನ ಅನಿಸಿಕೆ. ನಾನು ಅದನ್ನೇ ಧ್ಯೇನಿಸುತ್ತಿದ್ದೆ ಧ್ಯಾನ ಸಮಾಧಿಸ್ಥನಾಗಿದ್ದೆ ಚಣಕಾಲ, ಅಷ್ಟರಲ್ಲಿ ಸಾಕ್ಷಾತ್ ಪರಶಿವನೇ ಶಿವಯೋಗಿಗಳ ರೂಪದಲ್ಲಿ ಬಂದು ಅಭಯ ಹಸ್ತ ನೀಡಿ 'ಆಸೆ ಹಣ್ಣಾಗಲಿ...ಶುಭವಾಗಲಿ, ಜಯವಾಗಲಿ, ಮಂಗಳವು ಕೂಡಿರಲಿ' ಎಂದು ಆಶೀರ್ವದಿಸಿದಂತಾಯಿತು. ಅದಕ್ಕೆ ಉತ್ತರವಾಗಿ, ನನ್ನ ನಾಲಿಗೆ ಹಾಗೆ ನುಡಿದಿರಬೇಕು ಅಷ್ಟೆ.'

'ಶಿವಯೋಗ ಮಂದಿರದ ಕಲ್ಪನೆ ಅತ್ಯದ್ಭುತವಾದದ್ದು ಅಪ್ಪಗಳೆ. ದೊಡ್ಡ ಚೇತನಕ್ಕೆ ದೊಡ್ಡ ಚಿಂತನೆ. ಭೂಮ ಕಲ್ಪನೆ. ಛಾಂದೋಗ್ಯ ಉಪನಿಷತ್ ಹೇಳುವಂತೆ :

ಯೋ ವೈ ಭೂಮಾಃ ತತ್‌ಸುಖಂ ನಾಲ್ಪೇ ಸುಖಮಸ್ತಿ
ಭೂಮಾ ತ್ವೇವ ವಿಜಿಜ್ಞಾಸಿ ತವ್ಯ ಇತಿ ॥

ಅಂದರೆ ಯಾವುದು ಭೂಮವೂ ಅಥವಾ ದೊಡ್ಡದೊ ಅದರಲ್ಲಿ ಸುಖ ಇದೆ, ಯಾವುದು ಅಲ್ಪವೊ ಅದರಲ್ಲಿ ಸುಖ ಇಲ್ಲ ; ಭೂಮದಲ್ಲಷ್ಟೇ ಸುಖ ಎಂಬುದಿದೆ.'

'ಹೌದು ಯಾವುದು ಭೂಮವೊ ಅದು ಅಮೃತ, ಯಾವುದು ಅಲ್ಪವೊ ಅದು ಮರ್ತ್ಯ, ಆದ್ದರಿಂದ ನಾವು ಯಾವುದೇ ಯೋಜನೆ ಹಾಕಿಕೊಳ್ಳಲಿ, ಯಾವುದೇ ಕಾರ್ಯ ಮಾಡಲಿ ಅದು ದೊಡ್ಡದಾಗಿರಬೇಕು. ಅದರಿಂದ ನಮ್ಮ ಹೃದಯವೂ ದೊಡ್ಡ ದಾಗುತ್ತೆ. ಧೈರ್ಯವೂ ತುಂಬಿ ಬರುತ್ತೆ. ದೊಡ್ಡ ಚಿಂತನೆ, ದೊಡ್ಡ ಮನಸ್ಸು, ದೊಡ್ಡದಾದ ನಿಲವು ನಮ್ಮದಾಗಬೇಕು'.

'ತಮ್ಮ ಹೃದಯದಷ್ಟೇ ಭೂಮವಾದದ್ದು ತಮ್ಮ ಶಿವಯೋಗ ಮಂದಿರದ ಕಲ್ಪನೆ ಅಪ್ಪಗಳೆ'.

'ನಾನಂದ ಮಾತಿಗೆ ನನ್ನನ್ನೇ ದುರದುರನೆ ನೋಡಿದರು. ಅದು ಕೋಪದ ನೋಟವಾಗಿರಲಿಲ್ಲ. ಅವರ ಕಣ್ಣುಗಳಲ್ಲಿ ಕರುಣೆಯ ಕಡಲುಗಳು ಉರುಳುತ್ತಿದ್ದವು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅವುಗಳಲ್ಲಿ ತೃಪ್ತಿ ಇತ್ತು. ರಾಜಶೇಖರ, ಈಗ ಹೇಳು, ಅಂದು ಹಾನಗಲ್ಲ ಕುಮಾರ ಸ್ವಾಮಿಗಳು ಕಂಡ ಕನಸು ಇಂದೇನಾಯಿತು ?'

'ನನಸಾಯಿತು'

'ಹೌದು ಅಂತಾಗಬೇಕಾದರೆ ಅದು ಬಹುಕಾಲ ತೆಗೆದುಕೊಳ್ಳಲಿಲ್ಲ. ಮಹಾತ್ಮರ ಸಂಕಲ್ಪವೇ ಹಾಗೆ. ಕೇವಲ ಕೆಲವೇ ತಿಂಗಳುಗಳಲ್ಲಿ ಆಗಿ ಮುಗಿಯಿತು.'

'ತಾವೆಲ್ಲರೂ ಹೆಗಲುಕೊಟ್ಟರಿ ಅಂದಮೇಲೆ ಅದು ಪೂರ್ಣಗೊಳ್ಳದಿರುವುದೇ ?'

'ನಿನ್ನ ಮಾತಿನಲ್ಲೂ ಸತ್ಯಾಂಶ ಇದೆ ರಾಜಶೇಖರ. ಅವರು ಅಂದೆ ಈ ಅಮಲ ಪ್ರಭೆಯ ತೀರದೆಡೆಗೆ, ಇಂದು ಶಿವಯೋಗ ಮಂದಿರವಿರುವ ತಾಣಕ್ಕೆ ಕರೆತಂದರು. ಅಂದಿನವರೆಗೂ ನಾನು ಈ ಪ್ರದೇಶವನ್ನೇ ಕಂಡರಿತಿರಲಿಲ್ಲ. ಆ ಮಹಾತಪಸ್ವಿಯ ದಿವ್ಯ ದೃಷ್ಟಿಯಿಂದಾಗಿ ಅಂದಿನ ಕಾಡು ಇಂದು ನಾಡಾಗಿದೆ. ಕ್ರೂರ ಮೃಗಗಳ ಆವಾಸಸ್ಥಾನ ಇಂದು ಮಹಾವಿದ್ಯಾಲಯವಾಗಿದೆ.'

'ಹೌದು ಗುರುಗಳೇ, "ಶಿವಯೋಗ ಮಂದಿರ" ಎಂಬುದು ಬರಿಯ ಹೆಸರಲ್ಲ ; ಅದು ವೀರಶೈವರ ಉಸಿರು ; ಅವರ ಬದುಕಿನ ಮಂತ್ರ ಆಗಿ ಪರಿಣಾಮ ಪಡೆದಿದೆ.'

'ಅದು ನಾಡಿನ ಭಾಗ್ಯ ರಾಜಶೇಖರ'.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎರಡು

ಮಾತನಾಡುತ್ತಲೇ ಗುರುಶಿಷ್ಯರಿಬ್ಬರೂ ಮಹಾಕೂಟ ಶಿಖರಿಯ ನಡುನೆತ್ತಿಯ ಮೇಲಿದ್ದ ಪುಷ್ಕರಿಣಿಯ ಬಳಿ ಬಂದಿದ್ದರು. ಅದು ಚಚ್ಚೌಕವಾದ ಬಹು ದೊಡ್ಡ ಕೊಳ. ಅದು ಅಗಸ್ತ್ಯರಿಂದ ನಿರ್ಮಿತವಾದದ್ದೆಂದು ಪ್ರತೀತಿ. ಅದನ್ನು ವಿಷ್ಣು ಪುಷ್ಕರಿಣಿ, ಮಾಹೇಶ್ವರೀ ಪುಷ್ಕರಿಣಿ ಎಂದು ಬೇರೆ ಬೇರೆ ಹೆಸರುಗಳಲ್ಲಿ ಕರೆಯುತ್ತಾರೆ. ಅದರ ನೀರು ಪವಿತ್ರ ತೀರ್ಥ ! ಭೂಗರ್ಭದಿಂದ ಚಿಲಿಮೆಯಲ್ಲಿ ಪುಟಿದು ನೀರು ಗುಳು ಗುಳು ಗುಳ್ಳೆಗಳನ್ನೆಬ್ಬಿಸುತ್ತಾ ಮೇಲುಕ್ಕಿ ಬರುತ್ತದೆ. ಪುಷ್ಕರಿಣಿಯನ್ನು ಸದಾ ಸಲಿಲ ಗರ್ಭಿಣಿಯಾಗಿಸುತ್ತದೆ. ಬಹು ವಿಸ್ತಾರದ ಈ ಕೊಳವು ತ್ರಿಲೋಕೇಶ್ವರಿಯು ತನಗಾಗಿ ಮಾಡಿಸಿಕೊಂಡ ನಿಲವುಗನ್ನಡಿಯೋ ಎಂಬಂತಿದೆ. ಅದರ ದಪ್ಪನಾದ ಏರಿಯಲ್ಲಿ ಒಂದೆಡೆ ಶಿವಲಿಂಗವನ್ನು ಸ್ಥಾಪಿಸಿದ್ದಾರೆ. ಪುಷ್ಕರಿಣಿಗೆ ಇಳಿದು, ನೀರಿನಲ್ಲಿ ಮುಳುಗಿ ಏರಿಯೊಳಗೆ ತೆರೆದ ಬಾಗಿಲಂತಿರುವ ಬಂಡೆಯ ಕಿಂಡಿಯಲ್ಲಿ ನುಸುಳಿ ಮೇಲೆದ್ದರೆ ಆ ಪುಷ್ಕರಣಿಯ ಏರಿಯ ಗರ್ಭದಲ್ಲಿರುತ್ತೇವೆ. ಅಲ್ಲಿ ಅಷ್ಟು ದೂರದಲ್ಲಿ ಶಂಕರಲಿಂಗವನ್ನು ಸ್ಥಾಪಿಸಿದ್ದಾರೆ. ಕೊಳದ ತೀರ್ಥದಿಂದ ಸ್ವಾಮಿಗೆ ಸ್ನಾನ ಮಾಡಿಸಿ ಕೈಮುಗಿದು ಮತ್ತೆ ನೀರಲ್ಲಿ ಮುಳುಗಿ ಬಂಡೆ ಕಿಂಡಿಯ ಮೂಲಕ ಹೊರಬರಬೇಕು. ಇದು ಸಾಹಸದ ಕೆಲಸವಾದರೂ ಆನಂದವೀಯುವಂಥದು.

ಗುರುಶಿಷ್ಯರಿಬ್ಬರೂ ಪುಷ್ಕರಿಣಿಯನ್ನು ಸಮೀಪಿಸುತ್ತಲೇ,ಗುರುಗಳ ಆದೇಶದಂತೆ ಶಿಷ್ಯನು ನೀರಲ್ಲಿ ಮುಳುಗಿ ಶಂಕರಲಿಂಗನ ದರ್ಶನ ಮಾಡಿಕೊಂಡು ಬಂದನು. ಗುರುಗಳು ನೀರಾಟವಾಡುತ್ತಿದ್ದವರು ಚಣಕಾಲ ನಿಂತರು. ಅವರ ಭಾವಪರವಶತೆಯನ್ನು ಗುರುತಿಸಿದ ಶಿಷ್ಯ ಕೇಳಿದ :

'ಗುರುಗಳೆ, ಪುತ್ತಾವ ಮಹಾತ್ಮ ತಮ್ಮ ನೆನಪಿಗೆ ಬಂತು ? ಯಾರನ್ನು ನೆನೆದಿರಿ ? ಯಾವ ಘಟನೆ ತಮ್ಮನ್ನು ಚಿಂತನೆಗೆ ಒಳಗುಮಾಡಿತು ?'

'ರಾಜಶೇಖರ, ನಮ್ಮ ಹಾನಗಲ್ಲ ಕುಮಾರಸ್ವಾಮಿಗಳು ಒಂದು ದಿನ ಈ ಕೊಳವನ್ನು ನನಗೆ ತೋರಿಸುತ್ತಾ—

'ಪುರಿದೇವರು, ನೋಡಿ ಈ ಪ್ರಕೃತಿಯ ಪವಾಡವನ್ನು—ಈ ಬೆಟ್ಟದ ತುದಿಯಲ್ಲಿ ಯಾವ ಕಾಲವೂ ಬತ್ತದಿರುವ ನೀರಿನ ಕೊಳ. ಇದರ ಚಿಲುಮೆ ಚಿಕ್ಕದಿದ್ದರೂ ಚಿರಂತನ. ಅನೇಕ ಜನ ಮಹಾತ್ಮರ ಬದುಕೂ ಹೀಗೆಯೇ'

"ನದೀ ಮೂಲ ಗುರು ಮೂಲ ನೋಡಸಲ್ಲ" ಎನ್ನುತ್ತಾರಷ್ಟೆ. ಅದರರ್ಥ ನದಿ ಹುಟ್ಟುವೆಡೆಯಲ್ಲಿ ತುಂಬಾ ಚಿಕ್ಕ ಚಿಲುಮೆಯಾಗಿರುತ್ತದೆ. ಮೊನ್ನೆ ಶಿವಮೊಗ್ಗೆಯ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬಳಿ ಇರುವ ವರದಾಮೂಲ ನೋಡಿದೆವಷ್ಟೆ. ಅದರ ಆರಂಭದ ಪಾತ್ರ ಎಷ್ಟು ಕಿರಿದು. ಆದರೆ ಮುಂದೆ ಬನವಾಸಿಯ ಬಳಿ ಹರಿಯುವಾಗ ಅದೆಷ್ಟು ದೊಡ್ಡದು. ಹಾಗೆ ಮಹಾತ್ಮರ ಹುಟ್ಟು ತುಂಬಾ ಚಿಕ್ಕದು, ಅನಂತರದ ಅವರ ಬದುಕು ಭವ್ಯವಾದದ್ದು. ಇಲ್ಲಿ ಹರಿಯುವ ಮಲಾಪಹಾರಿ ನೋಡಿ ! ಎಷ್ಟು ಗಂಭೀರೆಯಾಗಿ ಪ್ರವಹಿಸುತ್ತಿದ್ದಾಳೆ. ಹರಿದೆಡೆಯನ್ನೆಲ್ಲಾ ಹಚ್ಚಹಸುರಾಗಿಸಿ, ಹೊಚ್ಚ ಹೊಸದಾಗಿಸುತ್ತಿದ್ದಾಳೆ. ಅವಳ ನಡಿಗೆ, ನರ್ತನ, ವಿಲಾಸ ವರ್ಣನಾತೀತ !'

'ಹಾನಗಲ್ಲ ಕುಮಾರ ಯೋಗಿಗಳ ಜೀವನವೂ ಅಂಥದೇ ಅಲ್ಲವೆ ಗುರುಗಳೆ ?'

'ಅಹುದು. ಕೇಳು ಅವರು ಹುಟ್ಟಿದ್ದು ಧಾರವಾಡ ಜಿಲ್ಲೆಯ ಜೋಯಿಸರ ಹಳ್ಳಿಯಲ್ಲಿ. ಅದೊಂದು ಚಿಕ್ಕ ಗ್ರಾಮ. ಅಲ್ಲಿ ಸಾಲೀಮಠದ ಬಸವಯ್ಯ ಮತ್ತು ನೀಲಮ್ಮ ಎಂಬ ಪುಣ್ಯ ದಂಪತಿಗಳ ಮಗನಾಗಿ 1867 ರಲ್ಲಿ ಹುಟ್ಟಿದರು. ಹುಟ್ಟಿದಂದೇಜಂಗಮ ಜ್ಯೋತಿಗಳು ಬಸವಯ್ಯನವರಮನೆಗೆ ದಯಮಾಡಿಸಿ ಮಗುವಿಗೆ 'ಸದಾಶಿವ' ಎಂದು ನಾಮಕರಣ ಮಾಡಿದರು. ಬಾಲಕ ಸದಾಶಿವನ ವಿದ್ಯಾಭ್ಯಾಸ ಅವರ ಅಜ್ಜ ಕೊಟ್ರಯ್ಯನವರ ಕೂಲಿಮಠದಲ್ಲಿ ಆರಂಭವಾಯಿತು. ಆದರೆ ಮುಂದಿನ ಶಿಕ್ಷಣಕ್ಕೆ ಅನುಕೂಲವಿರಲಿಲ್ಲ. ಕಿತ್ತು ತಿನ್ನುವ ಬಡತನ ! ಕಷ್ಟಪಟ್ಟು ಕಜ್ಜರಿ ಗ್ರಾಮಕ್ಕೆ ಹೋಗಿ ಮುಲ್ಕಿ ಪರೀಕ್ಷೆ ತೆಗೆದುಕೊಂಡು ಫೇಲಾದ ಸದಾಶಿವ, ವಿದ್ಯೆಗೆ ತಿಲಾಂಜಲಿ ಇತ್ತು, ತನ್ನ ತಾಯಿಯ ತವರೂರಾದ ಲಿಂಗದಹಳ್ಳಿಗೆ ಹೋಗಿ ಅಲ್ಲಿ ಒಂದು ಕೂಲಿ ಮಠ ತೆರೆದು ತಾನೇ ಶಿಕ್ಷಕನಾಗಿ ನಿಂತ.

ಲಿಂಗದಹಳ್ಳಿಯಲ್ಲಿ ಅಧ್ಯಾಪನದ ಜೊತೆಯಲ್ಲಿ ಅಧ್ಯಯನವೂ ನಡೆಯಿತು. ಸದಾಶಿವ ಅನೇಕ ಜನ ಹಿರಿಯರಿಂದ ಅನೇಕ ಗ್ರಂಥಗಳನ್ನು ತರಿಸಿಕೊಂಡು ಅಭ್ಯಾಸ ಮಾಡಿದ. ಹುಬ್ಬಳ್ಳಿಯ ಸಿದ್ಧಾರೂಢರಲ್ಲಿ ವೇದಾಂತವನ್ನು ಅಭ್ಯಾಸ ಮಾಡಿದ. ಅನಂತರ ಎಮ್ಮಿಗನೂರು ಜಡೇಸಿದ್ಧರ ಸಾನ್ನಿಧ್ಯದಲ್ಲಿ ಅಧ್ಯಾತ್ಮ ಶಿಕ್ಷಣ ಪಡೆದು 'ಶಿವಯೋಗಿ' ಎಂದೆನ್ನಿಸಿಕೊಂಡ. ಎಳಂದೂರು ಬಸವಲಿಂಗ ಸ್ವಾಮಿಗಳು ಸದಾಶಿವ ಶಿವಯೋಗಿಯ ದೀಕ್ಷಾಗುರುವಾದರು. ಮುಂದೆ ಶಿವಯೋಗಿಗಳು ನಿಜಗುಣರ ತಪೋಕ್ಷೇತ್ರವಾದ ಶಂಭುಲಿಂಗನ ಬೆಟ್ಟದಲ್ಲಿ ಕೆಲದಿನಗಳು ತಪವಿದ್ದು, ಅನಂತರ ಸೊರಬ ಮಾರ್ಗವಾಗಿ ಹಾನಗಲ್ಲಿಗೆ ಬಂದರು. ಹಾನಗಲ್ಲ ಮಠದ ಅಂದಿನ ಅಧಿಪತಿಗಳಾಗಿದ್ದ ಶ್ರೀ ಫಕೀರಸ್ವಾಮಿಗಳು ತಮ್ಮ ಮಠದ ಉತ್ತರಾಧಿಕಾರವನ್ನಿತ್ತು 'ಕುಮಾರ ಸ್ವಾಮಿ' ಎಂದು ನೂತನಾಭಿದಾನ ಮಾಡಿದರು.

ಹಾನಗಲ್ಲ ಕುಮಾರ ಶಿವಯೋಗಿಗಳು ನಾಡನ್ನೆಲ್ಲಾ ಕಾಲ್ಗಟ್ಟಿ ಹೋದೆಡೆಯಲ್ಲೆಲ್ಲಾ ಶಾಲೆಗಳು, ಪ್ರಸಾದ ನಿಲಯಗಳು ಇವೇ ಮೊದಲಾದ ಲೋಕ ಕಲ್ಯಾಣ ಕಾರ್ಯಗಳನ್ನು ಮಾಡುತ್ತಾ ಬಂದರು. ಕಡೆಯಲ್ಲಿ ಮಠಾಧಿಪತಿಗಳ ತರಬೇತಿ ಕೇಂದ್ರವಾಗಿ ಶಿವಯೋಗ ಮಂದಿರವನ್ನೂ ಸ್ಥಾಪಿಸಿದರು. ಆ ಮಹಾಪುರುಷನ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪುಣ್ಯ ಪ್ರಭಾವದಿಂದ ಇಂದು ಶಿವಯೋಗ ಮಂದಿರ ಜಗದ್ವಿಖ್ಯಾತವಾಗಿದೆ. ನೂರಾರು ಜನ, ಸಾವಿರಾರು ಜನ ಕವಿ, ಕಲಾವಿದರು, ಸಾಧಂಗಳು, ಸಿದ್ಧಪುರುಷರು, ಶಿವಯೋಗಿಗಳು, ಶರಣರುಗಳು, ಮಠಾಧಿಪತಿಗಳು, ಪೀಠಾಧಿಪತಿಗಳು ಶಿವಯೋಗ ಮಂದಿರವಿತ್ತ ಮಹತ್ ವಿಭೂತಿಗಳು.'

'ಶಿವಯೋಗ ಮಂದಿರದ ನಿರ್ಮಾಣ ಮತ್ತು ಅಖಿಲ ಭಾರತ ವೀರಶೈವ ಮಹಾ ಸಭೆ ಸ್ಥಾಪನೆ ಇವೆರಡೂ ಹಾನಗಲ್ಲಪ್ಪಗಳ ಅಮೋಘ ಕಾಣಿಕೆಗಳು ಅಲ್ಲವೇ ಗುರು ಗಳೇ ?'

'ಹೌದು ಆ ಮಹಾತ್ಮರು ಹತ್ತಿಸಿದ ಎರಡು ಮಹಾ ಜ್ಯೋತಿಗಳು. ಲೋಕ ವನ್ನು ಯಾವ ಕಾಲವೂ ಬೆಳಗುವ ನಂದಾ ದೀವಿಗೆಗಳು.'

ಹಾನಗಲ್ಲ ಶ್ರೀ ಕುಮಾರಸ್ವಾಮಿಗಳ ಕಾರ್ಯದಕ್ಷತೆ, ಸೇವೆ, ಶೀಲ, ಸದ್ಗುಣ ಗಳನ್ನು ಮೆಲುಕುಹಾಕುತ್ತಲೇ ನಾಗನೂರು ಶ್ರೀ ಶಿವಬಸವ ಸ್ವಾಮಿಗಳು ಅವರ ಆಪ್ತ ಶಿಷ್ಯ ಶ್ರೀ ರಾಜಶೇಖರರೂ ನಿಧಾನವಾಗಿ ಮುಕುಟೇಶ್ವರ ದೇವಾಲಯದ ಬಳಿ ಬಂದರು.

ಎತ್ತರವಾದ ನೆಲಗಟ್ಟಿನ ಮೇಲೆ ನಿರ್ಮಿಸಲಾಗಿದ್ದ ಮಕುಟೇಶ್ವರ ಅಥವಾ ಮಹಾಕೂಟೇಶ್ವರ ಮಂದಿರದ ಸುತ್ತಲೂ ಇರುವ ಪ್ರದಕ್ಷಿಣಾ ಪಥದಲ್ಲಿ ನಡೆದು, ಒಂದು ಸುತ್ತು ಬಂದರು. ದೇವಾಲಯವನ್ನು ಪ್ರವೇಶಿಸಿ, ಮುಕುಟೇಶ್ವರ ಮಹಾ ಮೂರ್ತಿಗೆ ಭವ್ಯವಾದ ಅರ್ಧನಾರೀಶ್ವರ ಮೂರ್ತಿಗೆ ಮಣಿದರು. ಒಳಾಂಗಣದ ನವರಂಗ ಮತ್ತು ಸಭಾಗೃಹಗಳನ್ನು ಕಂಡು ಶಿಲ್ಪಕಲಾ ಚಾತುರ್ಯಕ್ಕೆ ಮನದಲ್ಲೇ ಮೆಚ್ಚುಗೆ ಸೂಚಿಸಿದರು.

ದೇಗುಲದಿಂದ ಹೊರಬಂದ ಗುರುಶಿಷ್ಯರು ಮಹಾಕೂಟದ ನೆತ್ತಿಯನ್ನೇರಿ ಸುತ್ತೆಲ್ಲ ಕಣ್ಣಾಡಿಸಿದರು. ಆ ಬೆಟ್ಟದ ಮೇಲೆ ಸುಭದ್ರವಾದ ಕೋಟೆ. ಆ ಕೋಟೆ ಯಲ್ಲಿ ಅನೇಕ ದೇವಾಲಯಗಳು. ಹಿರಣ್ಯಾಕ್ಷನನ್ನು ಪಾತಾಳಕ್ಕೆ ತುಳಿದು ಭೂದೇವಿ ಯನ್ನು ಉದ್ಧರಿಸಿದ ವರಾಹಮೂರ್ತಿಯ ಮಹಾ ವಿಗ್ರಹವನ್ನು, ಅದರ ಶಿಲ್ಪ ಸೌಂದರ್ಯವನ್ನು ಮೌನದಿಂದಲೇ ಮೆಚ್ಚಿಕೊಂಡರು. ಅವುಗಳಲ್ಲಿ ಕಿರೀಟಪ್ರಾಯ ವಾದದ್ದು ಮಕುಟೇಶ್ವರನ ಗುಡಿ. ಶಿಷ್ಯನಿಗೆ ಆ ಶಿಲ್ಪ ಕಲಾ ಸೌಂದರ್ಯವನ್ನು ಕಂಡು ಕುತೂಹಲ ಕೆರಳಿತು. ಆತ ಒಮ್ಮೆ ಮಕುಟೇಶ್ವರ ದೇವಾಲಯದ ಗೋಪುರ ವನ್ನೂ ಮತ್ತೊಮ್ಮೆ ಆ ಗುಡಿಯ ದಕ್ಷಿಣ ದಿಕ್ಕಿನಲ್ಲಿದ್ದ ಮತ್ತೊಂದು ದೇವಾಲಯದ ಗೋಪುರವನ್ನೂ ನೋಡಿದ. ಕೂಡಲೇ ಉದ್ಗರಿಸಿದ 'ಓಹ್'! ಮಕುಟೇಶ್ವರನದು ದಕ್ಷಿಣ ಶೈಲಿಯ ಗೋಪುರ. ಮತ್ತೊಂದರದು ಉತ್ತರ ಶೈಲಿ. ಇವೆರಡೂ ಕೂಡಿ ಆದ ಶಿಲ್ಪ ಶೈಲಿಯನ್ನು 'ವೇಸರ ಶೈಲಿ' ಎಂದು ಕರೆಯುತ್ತಾರೆ. ಶಾಲೆ, ಕಾಲೇಜುಗಳಲ್ಲಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಲಿತ ಓದಿಗೆ ನಿದರ್ಶನ ದೊರೆಯುವುದು ಇಂತಹ ವಸ್ತು ವಿನ್ಯಾಸಗಳನ್ನು ಪ್ರತ್ಯಕ್ಷ ದರ್ಶಿಸಿದಾಗ, ಎಂದಂದುಕೊಂಡ ತನ್ನಲ್ಲೇ.

ಶಿಷ್ಯನ ಮನಸ್ಸಿನ ಗಣಿತ—ಗುಣಿತಗಳನ್ನು ಗ್ರಹಿಸಿದ ಗುರುಗಳು,

'ರಾಜಶೇಖರ, ನೀನು ಏನನ್ನು ಆಲೋಚಿಸುತ್ತಿದ್ದೀಯೆ ಎಂಬುದು ನಮಗೆ ಗೊತ್ತು ! ನೋಡು ನಿನ್ನೂಹೆಯಂತೆ ಇದು ಉತ್ತರದ ನಾಗರ ಶೈಲಿ ದಕ್ಷಿಣದ ದ್ರಾವಿಡ ಶೈಲಿ ಇವೆರಡೂ ಮೇಳವಿಸಿದ ರೂಪ ಇದನ್ನು ನಾವು ಪಟ್ಟದ ಕಲ್ಲಿನ ದೇವಾಲಯಗಳ ವಿನ್ಯಾಸದಲ್ಲಿ ಕಾಣುತ್ತೇವೆ. ಪಟ್ಟದಕಲ್ಲಿನ ಗಳಗನಾಥ, ಕಾಶಿ ವಿಶ್ವೇಶ್ವರ, ಜಂಬುಲಿಂಗ ಮತ್ತು ಕಾಡಸಿದ್ಧೇಶ್ವರ ದೇಗುಲಗಳು ಉತ್ತರ ಶೈಲಿಯವು. ವಿರೂಪಾಕ್ಷ, ಮಲ್ಲಿಕಾರ್ಜುನ ಮತ್ತು ಸಂಗಮೇಶ್ವರ ದೇಗುಲಗಳು ದಕ್ಷಿಣ ಶೈಲಿಯವು. ನಾಗರ ಶೈಲಿಯ ವಿಮಾನ ಅಥವಾ ಶಿಖರಗಳು ಬಾಗಿದ ರೇಖೆಗಳಂತೆ ಕಾಣುತ್ತವೆ. ಮೇಲ್ಭಾಗದಲ್ಲಿ ಆಮಲಕ ಅಥವಾ ನೆಲ್ಲಿಕಾಯಿ ಆಕಾರದ ಕಳಶವಿದೆ. ಮೆಟ್ಟಿಲು ಮೆಟ್ಟಿಲುಗಳಾಗಿ ಮೇಲೇರುತ್ತಾ ಹೋದಂತೆ ಕಿರಿದಾಗುವ ಶಿಖರ ವಿನ್ಯಾಸ ದ್ರಾವಿಡ ಶೈಲಿಯ ಲಕ್ಷಣ. ಉತ್ತರ ಭಾರತದ ಗುಪ್ತರ ನಾಗರ ಶೈಲಿ ಮತ್ತು ದಕ್ಷಿಣ ಭಾರತದ ಪಲ್ಲವರ ದ್ರಾವಿಡ ಶೈಲಿ ಇವೆರಡೂ ಮೇಳವಿಸಿ ಆದದ್ದೇ 'ವೇಸರ ಶೈಲಿ'. ಇದು ಚಾಲುಕ್ಯ ಚಕ್ರವರ್ತಿಗಳ ಅಮೂಲ್ಯ ಕೊಡುಗೆ ಶಿಲ್ಪ ಕಲಾಕ್ಷೇತ್ರಕ್ಕೆ. ಇದನ್ನು 'ಚಾಲುಕ್ಯ ಶೈಲಿ' ಎಂತಲೂ ಕರೆಯುತ್ತಾರೆ.'

'ಹೌದು, ಉತ್ತರ ಮತ್ತು ದಕ್ಷಿಣ ಶೈಲಿಗಳ ಸಮನ್ವಯದಿಂದ ಉದ್ಭವಿಸಿದ ಈ ವೇಸರ ಶೈಲಿ ಸುಂದರವೂ ಸೂಕ್ಷ್ಮವೂ ಆಗಿದೆ ಗುರುದೇವ.'

'ವೀರಶೈವ ದರ್ಶನದ ಹಾಗೆ !'

'ವೀರಶೈವ ದರ್ಶನದ ಹಾಗೆ! ಇದೇನು ಗುರುಗಳೆ.......ಶಿಲ್ಪಕ್ಕೂ ಅಧ್ಯಾತ್ಮಕ್ಕೂ ಲಗ್ನ ಏರ್ಪಡಿಸುತ್ತಿದ್ದೀರಿ ?'

'ಹೌದು, ಕಲೆ ಮತ್ತು ಧರ್ಮ ನಾಣ್ಯದ ಎರಡು ಮುಖಗಳಿದ್ದಂತೆ. ಒಂದು ಮತ್ತೊಂದಕ್ಕೆ ಪೂರಕ, ಪೋಷಕ ರಾಜಶೇಖರ. ಧರ್ಮದ ಪ್ರಾಚುರ್ಯಕ್ಕೆ ಕಲೆ ಒಂದು ಸಾಧನ, ಕಲೆಯ ಚಿರಂತನತೆಗೆ ಧರ್ಮ ಬೆನ್ನೆಲುಬು. ಧರ್ಮ ಜನಮನವನ್ನು ಮುಟ್ಟುವುದು ಅಥವಾ ಅದು ಮುಟ್ಟುವಂತೆ ಮಾಡುವ ಸಮರ್ಥ ಸಂವಹನ ಸಾಧನ ಎಂದರೆ ಕಲೆ. ಅದೇ ರೀತಿ ಕಲೆಗೆ ಬೆಲೆ ಬರುವುದು ಅದು ಧರ್ಮ, ದರ್ಶನ, ಸಂಸ್ಕೃತಿ ಗಳನ್ನೇ ಆಶ್ರಯಿಸಿದಾಗ ಮಾತ್ರ.'

'ಆದರೆ ಕಲೆಗೆ ಸೌಂದರ್ಯ ಮುಖ್ಯ ಅಲ್ಲವೆ ಗುರುಗಳೆ ? ಕಾವ್ಯವಾದರೆ ಕವಿಯ ಭಾವಕ್ಕೆ ಅನುಗುಣವಾದ ಸುಂದರವಾದ ಆಕರ್ಷವಾದ ನುಡಿಗಳು, ಚಿತ್ರವಾದರೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಯುಕ್ತ ವರ್ಣವಿನ್ಯಾಸ, ಸಂಗೀತವಾದರೆ ಸಾಂದರ್ಭಿಕ ರಾಗ ಸಂಯೋಜನೆ, ನೃತ್ಯವಾದರೆ ಯೋಗ್ಯ ಭಾವಭಂಗಿ, ಶಿಲ್ಪವಾದರೆ ಭಾವರೂಪಾದ ನಿಲವು —ಇವುಗಳ ಸಮರ್ಥ ಹಾಗೂ ಸಾರ್ಥಕ ಅಭಿವ್ಯಕ್ತಿಯೇ ಕಲೆಯ ಸೌಂದರ್ಯ.'

'ನಿಜ, ಸೌಂದರ್ಯವೇ ಕಲೆಯ ಮೂಲದ್ರವ್ಯ. ಅದಿಲ್ಲದೆ ಕಲೆ ಕಮನೀಯವಾಗುವುದಿಲ್ಲ. ಅಂತೆಯೇ ಕಲೆಯ ಸೌಂದರ್ಯ ಸಾರ್ಥಕವಾಗಬೇಕಾದರೆ ಅದರಲ್ಲಿ ಅಧ್ಯಾತ್ಮ ಚಿಂತನವಿರಬೇಕು. ಅದೇ 'ಶಿವ' ಅಂದರೆ 'ಮಂಗಳ' ಎಂದರೆ ಕಲೆಯಲ್ಲಿರುವುದು ಲೋಕ ಸತ್ಯ ಅಥವಾ ವಾಸ್ತವ ಸತ್ಯ ಅಲ್ಲ, ಅದು ಭಾವ ಸತ್ಯ.'

'ಅಂದರೆ'

'ಅಂದರೆ ಜಗತ್ತು ತನ್ನ ಕಣ್ಣಿಗೆ ಕಂಡದ್ದನ್ನು ಮತ್ತು ಕಿವಿಯಲ್ಲಿ ಕೇಳಿದ್ದನ್ನು ಮಾತ್ರ ಒಪ್ಪುತ್ತದೆ. ಅದನ್ನೇ ಸತ್ಯ ಎಂದು ನಂಬುತ್ತದೆ. ಅದು ಲೋಕಸತ್ಯ, ಆದರೆ ಕಣ್ಣು ಕಾಣದ್ದನ್ನು ಕಿವಿ ಕೇಳದ್ದನ್ನು ಕಾಣುವುದು, ಕೇಳುವುದು ಭಾವಸತ್ಯ. ಇದು ಹೃದಯಕ್ಕೆ ಮಾತ್ರ ವೇದ್ಯ. ಉದಾಹರಣೆಗೆ ಮನುಷ್ಯ 6 ಅಡಿ 7 ಅಡಿ ಎತ್ತರವಿರುವುದು ಸಹಜ; ಸತ್ಯ, ಇದು ನಾವು ಕಾಣುತ್ತಿರುವ ಲೋಕ ಸತ್ಯ. ಆದರೆ ಶ್ರವಣಬೆಳುಗೊಳದ 56 ಅಡಿ ಎತ್ತರದ ಗೊಮ್ಮಟ ಮೂರ್ತಿ ಭಾವಸತ್ಯ; ಲೋಕ ಸತ್ಯ ಅಲ್ಲ. ಅಷ್ಟೆತ್ತರದ ಮನುಷ್ಯ ಕಾಣಸಿಗುವುದಿಲ್ಲ ಲೋಕದಲ್ಲಿ. ಆದರೆ ಶಿಲ್ಪಿಯ ಕಲ್ಪನೆಯಲ್ಲಿ ಬಾಹುಬಲಿ ಸ್ವಾಮಿಯ ಮಹಾನುಭಾವತ್ವವನ್ನು ಜಗತ್ತಿಗೆ ತೋರಿಸಬೇಕು; ಅದನ್ನು ಕಲ್ಲಿನಲ್ಲಿ ಕಂಡರಿಸಬೇಕು. ಕಲ್ಲಿನಶಿಲ್ಪಕ್ಕೆ ಮಾತನಾಡುವ ಬಾಯಿ ಇಲ್ಲ, ಅದರ ತಳದಲ್ಲಿ ಇವನು ಇಂಥವನು, ಇವನ ವ್ಯಕ್ತಿತ್ವ ಇಂಥದು ಎಂಬ ಶಾಸನ ಇಲ್ಲ. ಬರಿಯ ಪ್ರತಿಮೆ ಆ ವ್ಯಕ್ತಿಯ ವ್ಯಕ್ತಿತ್ವವನ್ನು ಸಾರಿ ಹೇಳುವಂತಿರಬೇಕು. ಅದು ಮನುಷ್ಯನ ಹಾಗೆ 6 ಅಡಿಯೊ 7 ಅಡಿಯೊ ಇದ್ದರೆ ನೋಡುವವನ ಮನಸ್ಸಿನ ಮೇಲೆ ಏನೊಂದೂ ಪರಿಣಾಮ ಬೀರಲಾರದು. ಅದು 56 ಅಡಿ ಇದ್ದಾಗ, ಅದರ ಮುಂದೆ ನಾವು ನಿಂತಾಗ ನಾವೆಷ್ಟು ಚಿಕ್ಕವರು, ಆ ಮಹಾನುಭಾವ ಬಾಹುಬಲಿಸ್ವಾಮಿ ಅದೆಷ್ಟು ದೊಡ್ಡವನು ಎಂಬ ಭವ್ಯತಾನುಭವ ನಮ್ಮಲ್ಲಾಗುತ್ತದೆ. ಆ ಅನುಭವವನ್ನೇ ಭಾವಸತ್ಯ ಅಥವಾ ಕಲಾಸತ್ಯ ಎಂದು ಕರೆಯುವುದು. ಶಿಲ್ಪಿಯ ಅಥವಾ ಶಿಲ್ಪವನ್ನು ನಿರ್ಮಿಸಲು ಕಾರಣನಾದ ಚಾವುಂಡರಾಯನ ಅಂತರಂಗದ ಭಕ್ತಿಗೆ ಒಡ್ಡಿದ ಪ್ರತಿಮೆ. ಹೀಗೆ ಕಲೆ ಶಿವ, ಸತ್ಯ, ಸೌಂದರ್ಯಗಳ ಮಾತೃಗರ್ಭ.'

'ಸತ್ಯಂ; ಶಿವಂ; ಸುಂದರಂ'

'ಅಹುದು; ಅದೇ ಭಾರತೀಯ ಕಲೆಯ ನಿತ್ಯ ಗಾಯತ್ರಿ.'

'ಅದು ಸರಿ ಗುರುಗಳೇ, ಚಾಲುಕ್ಯರ ವೇಸರ ಶೈಲಿಯನ್ನು ವೀರಶೈವಕ್ಕೆ ಅನ್ವಯಿಸಿ ಅಪ್ಪಣೆ ಕೊಡಿಸಿದಿರಿ, ಅದು ಸ್ಪಷ್ಟವಾಗಲಿಲ್ಲ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಓಹೋ ಅದೇ ಕೇಳು. ನಾಗರ ಶೈಲಿ,ದ್ರಾವಿಡ ಶೈಲಿ ಸೇರಿ ಮೂರನೆಯದಾದ, ಆದರ ವಿಶಿಷ್ಟವಾದ ವೇಸರ ಶೈಲಿ ಆಯಿತಷ್ಟೆ. ಅದೇ ರೀತಿ ಲಿಂಗ – ಅಂಗ ಸೇರಿ ಮೂರನೆಯದಾದ ಶಿವ ಅಥವಾ ಶೂನ್ಯ ಆಗುತ್ತದೆ. ಅದೇ ವೀರಶೈವ ದರ್ಶನದ ತಿರುಳು. ಮತ್ತೂ ಸ್ಪಷ್ಟಪಡಿಸುತ್ತೇನೆ ಕೇಳು—

ಜೀವ ಮತ್ತು ದೇವ ಇವರ ದೈವಿಕ ಬಾಂಧವ್ಯಕ್ಕೆ ಮೀಸಲಾದ ಒಂದೇ ಮಾರ್ಗ ಇಲ್ಲ. ಹಲವು ದಾರಿಗಳಿವೆ. ಅವುಗಳಲ್ಲಿ ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಮತ್ತು ಶಿವಾದ್ವೈತ ಇವುಗಳನ್ನಷ್ಟೇ ಗಮನಿಸೋಣ. ನೋಡು, ಜೀವ ಬೇರೆ, ದೇವ ಬೇರೆ ಎಂದು ಹೇಳುತ್ತದೆ ದ್ವೈತ; ಜೀವ – ದೇವರು ಬೇರೆ ಬೇರೆ ಅಲ್ಲ, ಜೀವನೇ ದೇವ "ಅಹಂ ಬ್ರಹ್ಮಾಸ್ಮಿ" ತಾನೇ ದೇವ ಎನ್ನುತ್ತದೆ ಅದ್ವೈತ. ದೇವನೇ ವಿಶಿಷ್ಟನಾದವನು ಜೀವವಲ್ಲ ಎಂದು ಘೋಷಿಸುತ್ತದೆ ವಿಶಿಷ್ಟಾದ್ವೈತ. ಆದರೆ ಶಿವಾದ್ವೈತ ಅಥವಾ ಶಕ್ತಿ ವಿಶಿಷ್ಟಾದ್ವೈತ ಹಾಗಲ್ಲ. ಆರಂಭದಲ್ಲಿ ಭಿನ್ನರಾಗಿ ಕಂಡರೂ ಜೀವ – ದೇವರುಗಳು ಕಡೆಯಲ್ಲಿ ಒಂದಾಗುತ್ತಾರೆ. ಒಂದಾಗಿ ಚೆಂದಾಗಿ ಮೂರನೆಯ ರೂಪು ಧರಿಸಿ 'ಶಿವ' ಆಗುತ್ತಾರೆ. ಆಗ ಅಲ್ಲಿ ಜೀವನೂ ಇಲ್ಲ, ದೇವನೂ ಇಲ್ಲ; ಆದರೆ ಇಬ್ಬರೂ ಸೇರಿ ಆದ ಮೂರನೆಯ ಸ್ಥಿತಿ ಉಂಟು. ಅದೇ ಶಿವ ಅಥವಾ ಶೂನ್ಯ ಸ್ಥಿತಿ ಎಂಬುದನ್ನು ತೋರಿಸುತ್ತದೆ. ನೀರು ಮತ್ತು ಅಲೆ ಸೇರಿ ಆದ ಸಮುದ್ರದಂತೆ, ಕಿರಣ ಮತ್ತು ಕಾಂತಿ ಕೂಡಿ ಆದ ಸೂರ್ಯನಂತೆ, ಜೀವ ಮತ್ತು ದೇವ ಬೆರೆತು ಆದ ಶಿವ; ಭೇದದೊಳಗಣ ಅಭೇದ, ಶಬ್ದದೊಳಗಣ ಮೌನ, ನಾದ ರೂಪ ಕ್ರೀ ಕಳಾಸವಿರಾಮ ಸ್ಥಿತಿ. ಅಂಗದಾಶ್ರಯ ಅಳಿದು, ಲಿಂಗದಾಶ್ರಯವಳಿದು ಲಿಂಗದೊಳು ಮನವು ಒಡವೆರೆದ ರೀತಿ, ಅಂಗದ ಹಂಗಿಲ್ಲದ, ಲಿಂಗದ ಮೋಹವಿಲ್ಲದ, ಆದರೆ ಎರಡರಲ್ಲೂ ಒಡವೆರೆದ ಒಂದು ಬಗೆಯ ಶೂನ್ಯ ಸ್ಥಿತಿ. ಅಲ್ಲಿ ಜೀವ ಮತ್ತು ದೇವ ಇವರಿಬ್ಬರ ಸ್ಥಾನವೂ ಗೌಣ; ಆದರೆ ಅವರಿಬ್ಬರ ಸಹಯೋಗದಿಂದಾದ ಮೂರನೆಯ ವಸ್ತುವಿನ ಪಾತ್ರ ಪ್ರಧಾನ. ಕಪ್ಪು ಮತ್ತು ಕೆಂಪು ಬಣ್ಣದ ಎರಡು ಹಸುಗಳ ಹಾಲನ್ನು ಒಂದೆಡೆ ಸೇರಿಸಿದಾಗ ಆದ ಹಾಲು ಯಾವ ಹಸುವಿನದೆಂದರೆ ಯಾವುದೊಂದರದ್ದಲ್ಲ ಎನ್ನಬೇಕಾಗುತ್ತದೆ. ಅದೇ ರೀತಿ ಜೀವ – ದೇವರು ಬೆರೆದು, ಅವಿಭಾಜ್ಯ ಅಂಶರೆನಿಸಿದಾಗಿನ ಸ್ಥಿತಿಯನ್ನು ಶಿವನೆಂದರೆ ಶಿವನೂ ಅಲ್ಲ, ಜೀವವೆಂದರೆ ಜೀವನೂ ಅಲ್ಲ; ಅವೆರಡೂ ಅಲ್ಲದ, ಆದರೆ ಅವೆರಡೂ ಕೂಡಿದಾಗ ಆದ ಒಂದು ಸಮರಸ ಸ್ಥಿತಿ. ಅದೇ ಶೂನ್ಯ ರೂಪ! 'ಬಯಲ ರೂಪ ಮಾಡಬಲ್ಲಾತ ಶರಣ, ರೂಪವನ್ನು ಬಯಲು ಮಾಡಬಲ್ಲಾತ ಲಿಂಗಾನುಭಾವಿ' ಈ ಉಭಯ ಕ್ರಿಯೆಗಳನ್ನು ಏಕತ್ರ ಸಾಧಿಸಿ ತೋರಿಸುವವನೇ ಶಿವ, ಅದೇ ಶೂನ್ಯ.

'ಶೂನ್ಯ ಸ್ಥಿತಿ, ವ್ಯಷ್ಟಿ ಮತ್ತು ಸಮಷ್ಟಿಗಳೆರಡರಿಂದಲೂ ಆದ ವಿಶಿಷ್ಟ ಸ್ಥಿತಿ ಅಲ್ಲಿ ಆತ್ಮ ಪರಮಾತ್ಮರದು ಚಿನ್ನ – ಬಣ್ಣಗಳಂತೆ, ರನ್ನ – ದೀಪ್ತಿಗಳಂತೆ ಭಿನ್ನವಿಲ್ಲದೆ ಬೆರೆದಿಹ ಭಾವ; ಆರಳಿದು ಮೂರಾಗಿ, ಮೂರಳಿದು ಎರಡಾಗಿ, ಎರಡಳಿದು ಒಂದಾದ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭಾವ. ಅಲ್ಲಿ ರವಿಯ ತೇಜವೂ ಇಲ್ಲ, ಶಶಿಯ ಶೈತ್ಯವೂ ಇಲ್ಲ. ಅವೆರಡನ್ನೂ ಗರ್ಭೀಕರಿಸಿಕೊಂಡ ಪರಾತ್ಪರ ತೇಜಸ್ಸು! ಅರ್ಥವಾಯಿತೇ?'

'ಅರ್ಥವಾಯಿತು ಗುರುಗಳೆ,ಒಂದೆಡೆ ಶಿಲ್ಪ ಶೈಲಿಯೂ ತಿಳಿಯಿತು ಮತ್ತೊಂದೆಡೆ ವೀರಶೈವ ದರ್ಶನವೂ ಅರಿವಿಗೆ ಬಂತು ತಮ್ಮ ಅಮೃತೋಪದೇಶದಿಂದ'

'ಈ ದ್ಯುತಿವಡೆದ ಶಿವಾದ್ವೈತ ದರ್ಶನವನ್ನು ಬೋಧಿಸಿ, ನನ್ನರಿವಿಗೆ ಬರುವಂತೆ ಮಾಡಿದವರೂ ಅವರೇ, ಆ ನನ್ನ ಮಹಾಗುರು ಹಾನಗಲ್ಲ ಕುಮಾರ ಸ್ವಾಮಿಗಳು.'

ಆ ಭಾಗ್ಯ ತಮ್ಮದು, ನನ್ನದೂ ಸಹ!'

'ಹೇಗೆ?'

'ಹಾನಗಲ್ಲಪ್ಪಗಳ ಶಿಷ್ಯರ ಶಿಷ್ಯ ನಾನಾದದ್ದು'

'ಅದು ಉಭಯ ಯೋಗ್ಯ ಪ್ರಶಂಸೆ ರಾಜಶೇಖರ'

'ಗುರುವಚನ ಎಂದೆಂದಿಗೂ ಸತ್ಯ . . . ಅದಿರಲಿ ಗುರುದೇವ, ಹಾನಗಲ್ಲಪ್ಪಗಳು ಈ ಮಲಾಪಹಾರಿ ತೀರವನ್ನೇ ಆರಿಸಿದ್ದೇಕೆ? ಅಥವಾ ಅವರಿಗೆ ಇದು ಕಾಣಿಸಿದ್ದರೂ ಹೇಗೆ?'

"ಏನೊ ಒಂದೂ ತಿಳಿಯದು. ಆದರೆ ಅವರು ಹೇಳುತ್ತಿದ್ದರು ಈ ಭೂ ಪ್ರದೇಶ ಹಿಂದೆ ನಿಬಿಡಾರಣ್ಯವಾಗಿತ್ತು. ಇಲ್ಲಿ ಇಲ್ವಲ ವಾತಾಪಿ ಎಂಬಿಬ್ಬರು ರಾಕ್ಷಸರಿದ್ದರು......'

'ಹೌದು ಅವರಿಬ್ಬರೂ ಪ್ರಚಂಡ ರಾಕ್ಷಸರು.'

'ಪುರಾಣ ಹೇಳುವ ಆ ರಕ್ಕಸರ ಬಗ್ಗೆ ಸ್ವಲ್ಪ ಹೇಳು'

'ಅಪ್ಪಣೆ ಗುರುಗಳೆ ಇಲ್ವಲ ಮತ್ತು ವಾತಾಪಿಯರು ಹಿರಣ್ಯಕಶಿಪುವಿನ ಸೋದರಳಿಯಂದಿರು. ಇಲ್ವಲ ಅಣ್ಣ. ವಾತಾಪಿ ತಮ್ಮ. ಇವರಿಬ್ಬರೂ ತಮಗೆ ಇಂದ್ರನಂತಹ ಪ್ರಭಾವಶಾಲಿ ಪುತ್ರರು ಜನಿಸಬೇಕೆಂದು ಬ್ರಹ್ಮನನ್ನು ಕುರಿತು ತಪಸ್ಸು ಮಾಡಿದರು. ಸುಪ್ರೀತನಾದ ಬ್ರಹ್ಮ ಪ್ರತ್ಯಕ್ಷನಾಗಿ ಅವರ ಇಷ್ಟಾರ್ಥವನ್ನು ಅನುಗ್ರಹಿಸಿದನು. ಇವರು ಅಂದಿನಿಂದ ಅಹಂಭಾವದಿಂದ ಬೀಗಿದರು. ಧರೆಯ ಬ್ರಾಹ್ಮಣರನ್ನು ಪೀಡಿಸತೊಡಗಿದರು. ಇಲ್ವಲನು ವಾತಾಪಿಯನ್ನು ಮೇಕೆಯನ್ನಾಗಿಸಿ, ಕೊಂದು, ಆದರ ಮಾಂಸವನ್ನು ಬ್ರಾಹ್ಮಣರಿಗೆ ಅಡುಗೆ ಮಾಡಿ ಬಡಿಸಿ, ಅವರು ತಿಂದ ಬಳಿಕ, "ವಾತಾಪೀ ಹೊರಗೆ ಬಾ" ಎಂದು ಕೂಗಿ ಕರೆಯುತ್ತಿದ್ದನು. ವಾತಾಪಿಯು ಬ್ರಾಹ್ಮಣರ ಹೊಟ್ಟೆಗಳನ್ನು ಸೀಳಿಕೊಂಡು ಹೊರಗೆ ಬರುತ್ತಿದ್ದನು. ಹೀಗೆ ಅನೇಕರು ಸತ್ತರು. ಒಮ್ಮೆ ಅಗಸ್ತ್ಯರು ಧನಾಪೇಕ್ಷೆಯಿಂದ ಇಲ್ವಲನಲ್ಲಿಗೆ ಬಂದಾಗ, ಇಲ್ವಲ ಹಿಂದೆ ಬ್ರಾಹ್ಮಣರಿಗೆ ಮಾಡಿದಂತೆಯೇ ಮಾಡಿದ. ದಿವ್ಯಜ್ಞಾನಿ ಅಗಸ್ತ್ಯರಿಗೆ ಗುಟ್ಟು ತಿಳಿಯಿತು. ಅವರು ಭುಂಜಿಸಿದ ಕೂಡಲೇ 'ವಾತಾಪಿ ಜೀರ್ಣೋಭವ' (ವಾತಾಪಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹೊಟ್ಟೆಯಲ್ಲಿಯೇ ಜೀರ್ಣವಾಗಿಬಿಡು) ಅಂದರು ! ವಾತಾಪಿ ಅಗಸ್ತ್ಯರ ಹೊಟ್ಟೆಯಲ್ಲೇ ಜೀರ್ಣವಾದ, ಇಲ್ವಲ ಹೆದರಿ ಅಗಸ್ತ್ಯರಿಗೆ ಶರಣಾದ.'

'ಆ ವಾತಾಪಿ ಇದ್ದ ನೆಲ ವಾತಾಪಿ ಎಂದೇ ಹೆಸರಾಯಿತಂ. ಅದೇ ಕಾಲದಲ್ಲಿ ಅಥವಾ ಅದಕ್ಕಿಂತಲೂ ಹಿಂದೆ ಇಲ್ಲಿ ಅನೇಕ ಜನ ಋಷಿಮುನಿಗಳು ವಾಸಿಸುತ್ತಿದ್ದರೆಂದು ಪ್ರಾಚೀನ ಗ್ರಂಥಗಳಲ್ಲಿ ಆಧಾರವಿದೆ. ಅಂತೆಯೇ ಅಪ್ಪಗಳು ಕಂಡ ಹಾಗೆ ಮಲಾಪಹಾರಿ ತೀರ ಪ್ರದೇಶದಲ್ಲಿ ಅನೇಕ ಗುಹೆಗಳು ಕುಟೀರಗಳು ಇದ್ದುದರ ಕುರುಹು ಇತ್ತಂತೆ.'

'ಒಟ್ಟಿನಲ್ಲಿ, ಪ್ರಾಚೀನ ಕಾಲದಿಂದಲೂ ಈ ಪ್ರದೇಶ ಮುಮುಕ್ಷುಗಳಿಗೆ, ತಪಸ್ವಿಗಳಿಗೆ ಯುಕ್ತ ಕ್ಷೇತ್ರದಾಗಿತ್ತೆಂದು ಹೇಳಬಹುದು.

'ಹೌದು, ಹಾಗಿದ್ದದ್ದು ಪುರಾಣಯುಗದಲ್ಲಿ, ಇತಿಹಾಸ ಕಾಲಕ್ಕೆ ಬಂದರೆ ಇದು ಸುಪ್ರಸಿದ್ಧ ಚಾಲಕ್ಯ ಚಕ್ರವರ್ತಿಗಳ ಆಡಳಿತ ಕೇಂದ್ರುವಾಗಿತ್ತು'.

'ಅದೇ ಬಾದಾಮಿ ಚಾಲುಕ್ಯರು ?'

'ಹೌದು. ಬಾದಾಮಿ ಚಾಲುಕ್ಯರು ಈ ಪವಿತ್ರ ಕ್ಷೇತ್ರದಲ್ಲಿ ರಾಜ್ಯ ಸ್ಥಾಪನೆ ಮಾಡಿದರು. ರಣರಾಗ ಕೀರ್ತಿವರ್ಮ, ಮಂಗಳೇಶ, ಇಮ್ಮಡಿ ಪುಲಿಕೇಶಿ ಮೊದಲಾದವರು ಬಹು ಚೆನ್ನಾಗಿ ಆಳಿದರು. ಇಮ್ಮಡಿ ಪುಲಿಕೇಶಿಯ ಕಾಲದಲ್ಲಿ ಕಾಂಚಿಯ ಪಲ್ಲವರು ಚಾಲುಕ್ಯರನ್ನು ಸೋಲಿಸಿ ಬಾದಾಮಿಯಲ್ಲಿದ್ದ ಜಗತ್ಪ್ರಸಿದ್ಧವಾದ ವಾತಾಪಿ ಗಣಪತಿಯನ್ನು ಕಂಚಿಗೆ ಹೊತ್ತುಕೊಂಡು ಹೋದರು. ಅನಂತರ ಪುಲಿಕೇಶಿಯ ಮಗ ವಿಕ್ರಮಾದಿತ್ಯನ ಕಾಲದಲ್ಲಿ ಚಾಲುಕ್ಯರು ಮತ್ತೆ ತಲೆ ಎತ್ತಿದರು. ವಿನಯಾದಿತ್ಯ, ವಿಜಯಾದಿತ್ಯ, ಇಮ್ಮಡಿ ವಿಕ್ರಮಾದಿತ್ಯ ಇವರು ಅತ್ಯಂತ ವೈಭವದಿಂದ ರಾಜ್ಯಭಾರ ಮಾಡಿದರು.'

'ಹೌದು, ಗುರುಗಳೆ, ಬಾದಾಮಿ ಚಾಲುಕ್ಯರ ಪೂರ್ವಾರ್ಧದಲ್ಲಿ ಇಮ್ಮಡಿ ಪುಲಿಕೇಶಿ ತುಂಬಾ ಪ್ರಸಿದ್ಧ ಚಕ್ರವರ್ತಿ. ಅವನು ತನ್ನ ಚಿಕ್ಕಪ್ಪ ಮಂಗಳೀಶನನ್ನು ಸೋಲಿಸಿ ಪಟ್ಟಕ್ಕೆ ಬಂದವನು'.

'ಮಂಗಳೀಶ ಮಹತ್ವಾಕಾಂಕ್ಷಿ, ನಿಜ. ಆದರೆ ಒಳ್ಳೆಯ ಆಡಳಿತಗಾರ. 'ಉರುರಣ ಪ್ರರಾಕ್ರಮ' ಎಂಬ ಬಿರುದು ಹೊತ್ತವನು. ಇಲ್ಲಿ ನೋಡು ರಾಜಶೇಖರ, ಈ ಧ್ವಜಸ್ತಂಭ ಶಾಸನ. ಇದು ಮಂಗಳೀಶ ಹಾಕಿಸಿದ ಶಾಸನ. ಇದು ಅವನ ಗುಣಗಾನ ಮಾಡುತ್ತದೆ. ಈತನು ಮಹೇಂದ್ರನಂತೆ ದುರ್ದಮನೂ, ರಾಮನಂತೆ ಅಪರಾಜಿತನೂ, ಶಿಬಿಯಂತೆ ದಾತಾರನೂ, ಯುಧಿಷ್ಠಿರನಂತೆ ಸತ್ಯಸಂಧನೂ, ವಾಸುದೇವನಂತೆ ಶ್ರೀಮಂತನೂ, ಸಮುದ್ರದಂತೆ ಗಂಭೀರನೂ. ಪೃಥ್ವಿಯಂತೆ ಕ್ಷಮಾಶೀಲನೂ ಆಗಿದ್ದನಂತೆ.'

'ಮುಕುಟೇಶ್ವರನಿಗೆ ತನ್ನ ಪೂರ್ವಜರು ಕೊಟ್ಟ ದತ್ತಿ ಸಾಲದ್ದಾದ್ದರಿಂದ ತನ್ನ ಮಲತಾಯಿ ದುರ್ಲಭದೇವಿಯ ಅನುಮತಿಯ ಮೇರೆಗೆ ಕಿಸುವೊಳಲು, ಕೆಂದೂರು,

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಂದಿಗ್ರಾಮ, ವ್ರೀಹಿಮುಖ, ಶ್ರೀಯಂಬಾಟಕ ಎಂಬ ಐದು ಗ್ರಾಮಗಳನ್ನು ದೇವರಿಗೆ ದತ್ತಿನೀಡಿದನೆಂದು ಈ ಶಾಸನ ಸಾರುತ್ತಿದೆ.'

'ಆದರೂ ಮಂಗಳೀಶ ಮಹಾ ಸ್ವಾರ್ಥಿ ಗುರುಗಳೆ! ತನ್ನ ಅಣ್ಣನ ಮಗ ಇಮ್ಮಡಿ ಪುಲಿಕೇಶಿಯು ಪ್ರಾಪ್ತ ವಯಸ್ಸಿಗೆ ಬರುವವರೆಗೂ ಆಡಳಿತಾಧಿಕಾರಿಯಾಗಿದ್ದ ಮಂಗಳೀಶ ರಾಜ್ಯಲೋಭದಿಂದ ತಾನೇ ಸರ್ವಾಧಿಕಾರಿಯಾದ, ಪಾಪ! ಪುಲಿಕೇಶಿಯನ್ನು ದೇಶಭ್ರಷ್ಟನನ್ನಾಗಿ ಮಾಡಿದ.'

'ಒಟ್ಟಿನಲ್ಲಿ, ಮಾಡಬಾರದ್ದು ಮಾಡಿದ, ಆಗಬಾರದ್ದು ಆಯಿತು.'

'ಹೌದು. ಆದರೆ ಪುಲಿಕೇಶಿ ಮಹಾನುಭಾವ. ರಾಜ್ಯವನ್ನು ಸುಭಿಕ್ಷ ಸ್ಥಿತಿಯಲ್ಲಿಟ್ಟ. ಉತ್ತರದಿಂದ ದಂಡೆತ್ತಿ ಬಂದ ಶ್ರೀಹರ್ಷ ಚಕ್ರವರ್ತಿಯನ್ನು ಸೋಲಿಸಿ, ಅವನೊಡನೆ ಸ್ನೇಹ ಸೌಹಾರ್ದಗಳನ್ನು ಬೆಳೆಸಿದ. ಪುಲಿಕೇಶಿಯ ಪರಾಕ್ರಮ, ಮುತ್ಸದ್ದಿತನದ ಕೀರ್ತಿ ಪರ್ಷಿಯಾದೇಶಕ್ಕೂ ಹೋಯಿತು. ಅಲ್ಲಿದ್ದ ಖುಸ್ರು ಎಂಬುವನು ಪುಲಿಕೇಶಿಯ ನೆರವು ಪಡೆದು, ತನ್ನ ಸಾಂಸ್ಕೃತಿಕ ರಾಯಭಾರವನ್ನು ಬೆಳೆಸಿಕೊಂಡನು. ಇದಕ್ಕೆ ಅಜಂತ ಚಿತ್ರಗಳು ಸಾಕ್ಷಿಯಾಗಿವೆ.'

'ಪುಲಿಕೇಶಿಯ ಅನಂತರ ರಾಜ್ಯ ಅನ್ಯಾಕ್ರಾಂತವಾಯಿತು. ಕಾಂಚಿಯ ಪಲ್ಲವರು ಸರ್ವನಾಶಮಾಡಿದರು.'

'ಆ ಸಂದರ್ಭದಲ್ಲಿ ಉಂಟಾದ ಮಹತ್ವದ ಘಟನೆ ಒಂದಿದೆ ಗುರುಗಳೇ.'

'ಯಾವುದು ?'

'ಕಾಂಚಿಯ ಪಲ್ಲವರ ಆಸ್ಥಾನದ ದಂಡಾಧೀಶ ಸಿರಿಯಾಳ ದೇವನ ಕಥೆ !'

'ಸಿರಿಯಾಳ ?'

'ಹೌದು ಗುರುಗಳೆ ಶಿವಭಕ್ತ ಸಿರಿಯಾಳ. ಬೇಡಿ ಬಂದ ಶಿವನಿಗೆ ತನ್ನ ಶಿಶುವನ್ನೇ ಬಲಿಕೊಟ್ಟು ಉಣಬಡಿಸಿದ ಮಹಾನುಭಾವ ಸಿರಿಯಾಳ. ಅವನ ಕತೆಯನ್ನು ನಾನೊಂದು ನಾಟಕವನ್ನಾಗಿ ರೂಪಿಸಿದ್ದೇನೆ. "ವಿಜಯ ವಾತಾಪಿ" ಎಂದು ನಾಮಕರಣ ಮಾಡಿದ್ದೇನೆ. ಶಿವಯೋಗ ಮಂದಿರದ ವಟುಗಳು ಅದನ್ನು ಅಭ್ಯಾಸ ಮಾಡಿದ್ದಾರೆ. ಈ ದಿನ ಸಂಜೆ ಅದನ್ನು ತಮ್ಮ ಸಮ್ಮುಖದಲ್ಲಿ ಅಭಿನಯಿಸಿ ತೋರಿಸುತ್ತಾರೆ.'

'ಬಹಳ ಸಂತೋಷ ರಾಜಶೇಖರ! ಪಲ್ಲವರು ಮಹಾ ಕ್ರೂರಿಗಳಾದರೂ ಸಿರಿಯಾಳ ದೇವ ಅವರ ಆಸ್ಥಾನದವನು. ಕೆಸರಿನಲ್ಲಿ ಕಮಲ! ಮುಳ್ಳಿನ ಮಧ್ಯದಲ್ಲಿ ಗುಲಾಬಿ !!'

'ಗುರುದೇವ ಹಿಂದಿನವರು ಯಾರೇ ಆಗಿರಲಿ ಅವರು ರಾಜ್ಯಕ್ಕಾಗಿ ಹೋರಾಡಿದರೂ ಪ್ರಜಾಹಿತವನ್ನು ಮರೆತವರಲ್ಲ. ಪಲ್ಲವರೂ ಕಾಂಚಿಯಲ್ಲಿ ಒಳ್ಳೊಳ್ಳೆಯ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕೆಲಸ ಮಾಡಿದ್ದಾರೆ. ನಮ್ಮ ಚಾಲುಕ್ಯದೊರೆಗಳೂ ಅನೇಕ ಪುಣ್ಯ ಗಣ್ಯ ಕಾರ್ಯಗಳನ್ನು ನೆರವೇರಿಸಿದ್ದಾರೆ.'

'ಅವರು ತಮಿಳರು ಇವರು ಕನ್ನಡಿಗರು.'

'ಹೌದು, ಬಾದಾಮಿ ಚಾಲುಕ್ಯರು ಶುದ್ಧ ಕನ್ನಡಿಗರು ಅವರ ಕಾಲದಲ್ಲೇ ಕನ್ನಡ ಕಣ್ತೆರೆಯಿತು.'

ಸಾಧುಗೆ ಸಾಧು ಮಾಧುರ್ಯಂಗೆ ಮಾಧುರ್ಯ
ಬಾಧಿಪ್ಪ ಕಲಿಗೆ ಕಲಿಯುಗ ವಿಪರೀತನ್
ಮಾಧವನೀತನ್ ಪೆಜನಲ್ಲ.

ಎಂದು ತಿಳಿಗನ್ನಡ ಶೈಲಿಯಲ್ಲಿ, ಶುದ್ಧ ದ್ರಾವಿಡ ತ್ರಿಪದಿ ಛಂದಸ್ಸಿನಲ್ಲಿ ಹೊಗಳುವ ಕಪ್ಪೆ ಅರಭಟ್ಟನ ಶಾಸನ ಬಾದಾಮಿಯಲ್ಲಿದೆ.'

'ನಮ್ಮ ಪಟ್ಟದ ಕಲ್ಲನ್ನು ಹಿಂದೆ ಕಿಸುವೊಳಲ್ ಎಂದು ಕರೆಯುತ್ತಿದ್ದರಲ್ಲವೆ. ಆ ಕಿಸುಗೊಳಲು ತಿರುಳ್ಗನ್ನಡದ ನೆಲೆಯಾಗಿತ್ತು.'

'ನೀನು ನನಗಿಂತಲೂ ಹೆಚ್ಚು ಇತಿಹಾಸಬಲ್ಲವನು, ಓದಿದವನು ನೀನು ಹೇಳಬೇಕು ರಾಜಶೇಖರ. ಬಾದಾಮಿ ಚಾಲುಕ್ಯ ಚಕ್ರವರ್ತಿಗಳ ಸಾಂಸ್ಕೃತಿಕ ಕೊಡುಗೆ...'

'ಅಮೋಘ, ಅಪ್ರಮಾಣ ಗುರುಗಳೇ ! ಅವರ ರಾಜಧಾನಿಯಾದ ಬಾದಾಮಿಯಲ್ಲಿ, ಅಲ್ಲಿನ ನಾಲ್ಕೂ ಗುಹಾಂತರ ದೇವಾಲಯಗಳಲ್ಲಿ ಶಿಲ್ಪಸಿರಿಸಿಕ್ಕಿ ಮಲಗಿದೆ. ಸ್ಥಪತಿಯ ಭವ್ಯತಮ ಪ್ರತಿಭೆಯನ್ನು ಎತ್ತಿ ಹಿಡಿಯುತ್ತಿದೆ. ಶೈವ, ಜೈನ, ವೈಷ್ಣವ ದೇಗುಲಗಳು ಚಾಲುಕ್ಯ ಚಕ್ರವರ್ತಿಗಳ ಸರ್ವಧರ್ಮ ಸಮನ್ವಯವನ್ನು ಸಾರುತ್ತಿವೆ. ಅಲ್ಲಿನ ಬಂಡೆಗಲ್ಲುಗಳನ್ನು ಸೃಷ್ಟಿಸಿದ ಶಿವನೇ ಆ ದೇವಾಲಯಗಳನ್ನು ನಿರ್ಮಿಸಿದ್ದಾನೇನೊ ಎನ್ನುವಂತಿದೆ ! ಪಟ್ಟದಕಲ್ಲಿನ ಶಿಲ್ಪ ಜಗತ್ ಪ್ರಸಿದ್ಧ, ಐಹೊಳೆಯಲ್ಲಂತೂ ಸುಮಾರು 125ಕ್ಕೂ ಹೆಚ್ಚು ದೇವಾಲಯಗಳಿದ್ದುದಕ್ಕೆ ಕುರುಹುಗಳಿವೆ. ದೊರಕಿರುವ 70–80 ದೇವಾಲಯಗಳು ಭಗ್ನಾವಸ್ಥೆಯಲ್ಲಿವೆ. ಆದರೆ ಗುರುದೇವ,ಬಾದಾಮಿ ಆಕಾರದಲ್ಲಿ ನಿರ್ಮಿತವಾಗಿರುವ ದುರ್ಗಾದೇವಾಲಯ ಇಂದಿಗೂ ಸುಸ್ಥಿತಿಯಲ್ಲಿದೆ. ಕನ್ನಡಿಗರ ಕಲಾಭಿಜ್ಞತೆಗೆ ಸಾಕ್ಷಿಯಾಗಿದೆ.'

'ಇಷ್ಟೂ ದೇಗುಲಗಳನ್ನು ನಿರ್ಮಿಸಿದ ಸ್ಥಪತಿಗಳ ಬಗ್ಗೆ ಮಾಹಿತಿ ಏನಾದರೂ ದೊರಕಿದೆಯೇನು ?'

'ದೊರಕಿದೆ ಗುರುಗಳೇ, ನಾನೇ ನಡೆಸಿದ ಒಂದು ತಿಂಗಳ ಸಂಶೋಧನೆಯಿಂದಾಗಿ, ಅಲ್ಲಲ್ಲಿ ಅನೇಕ ಜನ ಶಿಲ್ಪಿಗಳ ಹೆಸರುಗಳು, ಅವರ ಶಿಲ್ಪಕಲಾ ಚಾತುರ್ಯದ ವರ್ಣನೆ ಸಿಕ್ಕಿದೆ.'

'ಉದಾಹರಣೆಗೆ...'

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

'ಉದಾಹರಣೆಗೆ, ಐಹೊಳೆಯ ಒಂದೆಡೆಯಲ್ಲಿ ಶ್ರೇಷ್ಠ ಸ್ಥಪತಿ ಅನಿವರಿತಾಚಾರಿ ಗುಣ್ಡ ಎಂಬುವನ ಪ್ರಶಂಸೆ ಇದೆ. ಈತ ಪೃಥ್ವಿಯ ಬಿನ್ನಾಣಗಳಿಂದ 'ತ್ರಿಭುವನಚಾರಿ' ಎಂಬ ಬಿರುದು ಪಡೆದಿದ್ದನಂತೆ ! ಪಟ್ಟದಕಲ್ಲಿನ ಲೋಕೇಶ್ವರ, ತ್ರೈಲೋಕೇಶ್ವರ ದೇವಾಲಯಗಳನ್ನು ಕಟ್ಟಿದವನು ಸರ್ವಸಿದ್ಧಿ ಆಚಾರ್ಯ. ಈತನನ್ನು 'ಸಕಲ ಗುಣಾಶ್ರಯಾನೇಕ ರೂಪವಾಸ್ತು ಪಿತಾಮಹನ್, ಸಕಲ ನಿಷ್ಕಲ ಸೂಕ್ಷ್ಮಾತಿಭಾಷಿತನ್, ವಾಸ್ತುಪ್ರಸಾದಯಾನಾಸನಶಯನ ಮಣಿ ಮಕುಟ ರತ್ನಚೂಡಾಮಣಿ' ಎಂದು ಶಾಸನವೊಂದು ಕೀರ್ತಿಸಿದೆ. ಈತನ ಚಟ್ಟ ಅಥವಾ ಶಿಷ್ಯ ರೇವತಿ ಓವಜ್ಜರ್ ನರಸೊಬ್ಬ ಎಂಬ ಶಿಲ್ಪಿಯ ಖ್ಯಾತಿಯನ್ನು ಐಹೊಳೆ ಶಾಸನ ಹೇಳುತ್ತದೆ. ಅವನಂತಹ ಶಿಲ್ಪಿ ಇಡೀ ಜಂಬೂದ್ವೀಪದಲ್ಲೇ ಹಿಂದಿರಲಿಲ್ಲ; ಮುಂದೆ ಬರಲಾರ ಎಂದು ಸಾರುತ್ತಿದೆ. ನೋಡಿ ಗುರುಗಳೆ, ಆ ಶಾಸನದ ಎರಡು ಸಾಲು ಬರೆದು ತಂದಿದ್ದೇನೆ.'

'ಓದು ರಾಜಶೇಖರ.'

"ಜಂಬೂದ್ವಿಪಾಂತರೇ ಕಶ್ಚಿತ್ ವಾಸ್ತು ಪ್ರಸಾದ ತದ್ಗತಃ
ನರನೊಬ್ಬ ಸಮೋವಿದ್ವಾನ್ ನಭೂತೋ ನ ಭವಿಷ್ಯತಿ"

'ಭೇಷ್ ಚೆನ್ನಾಗಿದೆ ಬಣ್ಣನೆ'

'ಇವನಂತಹ ಶಿಲ್ಪಿಗಳು ಅನೇಕರು ಅಲ್ಲಿ ಇದ್ದಿರಬಹುದು. ಬಹುಶಃ, ಐಹೊಳೆ ಶಿಲ್ಪ, ವಾಸ್ತುಶಿಲ್ಪಗಳ ತರಬೇತಿ ಕೇಂದ್ರವಾಗಿದ್ದರಬೇಕು ಗುರುಗಳೆ.'

'ಅಷ್ಟೇ ಅಲ್ಲ ರಾಜಶೇಖರ ಶಿಲ್ಪಕಲೆ ಹುಟ್ಟಿದ್ದೇ ಐಹೊಳೆಯಲ್ಲಿ. ಅದು ಬೆಳೆದದ್ದು ಬಾದಾಮಿಯಲ್ಲಿ, ಪರಿಪೂರ್ಣತೆ ಪಡೆದದ್ದು ಪಟ್ಟದಕಲ್ಲಿನಲ್ಲಿ.'

'ಹೌದು ಇಲ್ಲಿ ನೋಡಿ, ಶಿವಹಪರ್ಥ, ಶಿವ ವರ್ಧಮಾನ, ಅವನ ಮಗ ಶಿವ, ಮೊಮ್ಮಗ ಶುಭವದೇವ ಎಂಬ ಶಿಲ್ಪಿಗಳ ವಂಶಾವಳಿ ಇದೆ. ಇವರಲ್ಲದೆ ಪುಲಪ್ಪನ್, ಆರ್ಯ ಮಿಂಚಿ, ದುಗ್ಗಿ, ಎರಂಡರಗಣಚ, ಕೊಟ್ಟ ಮಂಚಿ, ಶ್ರೀ ರೋಣಸ್ವಾಮಿ ಇವರೇ ಮೊದಲಾದ ಅನೇಕ ಶಿಲ್ಪಿಗಳ ಹೆಸರುಗಳು ಐಹೊಳೆ, ಬಾದಾಮಿ, ಪಟ್ಟದಕಲ್ಲುಗಳ ದೇವಾಲಯಗಳಲ್ಲಿ ಕಾಣಸಿಗುತ್ತವೆ.'

'ಐಹೊಳೆಯ ಶಿಲ್ಪದ ಬಗ್ಗೆ ನಿನ್ನ ಅಭಿಪ್ರಾಯ ?'

'ಹೇಳ್ತೀನಿ ಗುರುಗಳೆ, ಅದು ನಿಜಕ್ಕೂ ಶಿಲ್ಪಕಲೆಯ ತೌರು. ಅದೊಂದು ಶಿಲ್ಪ ಕಲಾ ವಿಶ್ವವಿದ್ಯಾಲಯ. ಅಲ್ಲಿ ಕಲ್ಲಿನಲ್ಲಿ ಕಾವ್ಯರಚನೆ ಆಗಿದೆ. ಆದರೆ ತುಂಬಾ ದುಃಖವಾಗುತ್ತೆ ಗುರುಗಳೆ !'

'ಏಕೆ ?'

'ಅಲ್ಲಿನ ಶಿಲ್ಪಕಲೆ ಸಂಪೂರ್ಣ ನಾಶವಾದದ್ದಕ್ಕೆ. ದುರ್ಗಾದೇಗುಲ ಎಷ್ಟು ಭವ್ಯವಾದದ್ದು. ಆದರೆ ದೇವರಿಲ್ಲದ ಗುಡಿ, ಬಾದಾಮಿ ಆಕಾರದಲ್ಲಿದೆ; ನಮ್ಮ ದೆಹಲಿಯ ಪಾರ್ಲಿಮೆಂಟ್ ಭವನವಂತಿದೆ. ಅದರ ದ್ವಾರದಲ್ಲಿ ಯಮುನಾ ಮತ್ತು ಜಮುನಾ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದ್ವಾರಪಾಲಕರು,ನದೀದೇವತೆಯರು! ಅರ್ಧಮಂಟಪ,ಮುಖಮಂಟಪ,ಸಭಾಮಂಟಪ, ಗರ್ಭಗುಡಿ ಎಂಬ ನಾಲ್ಕು ಭಾಗಗಳಲ್ಲಿ ಹಮ್ಮಿಕೊಂಡಿದೆ ದೇಗುಲ. ಇಂಥವೇ ಒಂದು ನೂರು ಐವತ್ತು ದೇವಾಲಯಗಳಿದ್ದವಂತೆ. ಈಗೆಲ್ಲಾ ಭಗ್ನಾವಶೇಷಗಳು ಮಾತ್ರ ಇವೆ. ಕೆಲವೆಡೆ ಇರುವ ಮಹಿಷಾಸುರಮರ್ಧಿನಿ, ನರಸಿಂಹ, ಅರ್ಧನಾರೀಶ್ವರ, ಹನುಮಂನ ಲಂಕಾದಹನ, ಗರುಡವಾಹನ ವಿಷ್ಣು, ಹರಿ–ಹರ ವಿಗ್ರಹಗಳು ಒಂದೆಡೆ ಇರುವುದಂತೂ ಬಾದಾಮಿ ಚಾಲುಕ್ಯರ ಸರ್ವಧರ್ಮ ಸಮನ್ವಯಕ್ಕೆ ಸಾಕ್ಷಿಯಾಗಿದೆ. ಅಲ್ಲಿರುವ ನಾರಾಯಣ ದೇಗುಲದಲ್ಲಿ ಸಪ್ತಾಶ್ವಗಳು, ರಥ, ಜಯ–ವಿಜಯರು ಮಿಥುನ ದಂಪತಿಗಳು ನೋಡಲು ಎರಡು ಕಣ್ಣು ಸಾಲವು'

'ಅಂತಹ ಜಗದ್ವಿಖ್ಯಾತ ರೂವಾರಿಗಳನ್ನೂ ಶಿಲ್ಪವನ್ನೂ ಪೋಷಿಸಿಕೊಂಡು ನಿಂತಿದ್ದಾಳೆ ತಾಯಿ ಬನಶಂಕರಿ !'

'ಹೌದು ಗುರುಗಳೆ' ಆ ತಾಯಿಯ ಸಾನ್ನಿಧ್ಯಕ್ಕೂ ಮೊನ್ನೆ ಹೋಗಿ ಬಂದೆ. ಅಲ್ಲಿನ ಮುಖಮಂಟಪ, ಸಭಾಮಂಟಪ, ಗರ್ಭಗುಡಿ, ಸಿಂಹಾವಾಹನೆಯಾದ ಆ ದೇವಿ; ದೇವಾಲಯದ ಬಳಿ ಇರುವ ಹರಿಶ್ಚಂದ್ರ ತೀರ್ಥ, ಹರಿದ್ರಾತೀರ್ಥ, ತೈಲತೀರ್ಥಗಳೆಂಬ ಕಲ್ಯಾಣಗಳು, ದಕ್ಷಿಣದಲ್ಲಿರುವ ಸರಸ್ವತೀ ಹೊಳೆ.......ಓಹ್ ! ಆ ಪ್ರಶಾಂತ ಹಾಗೂ ಪವಿತ್ರ ಪರಿಸರದಲ್ಲಿ ಬಹಳ ಹೊತ್ತು ಇದ್ದು ಬಂದೆ ಗುರುವೆ.'

'ಆ ಶಕ್ತಿ ದೇವತೆ ಇಂದಿಗೂ ಜಗತ್ತಿನ ಪರಿರಕ್ಷಕಳಾಗಿದ್ದಾಳೆ'

'ಒಟ್ಟಿನಲ್ಲಿ ಮಲಪ್ರಭೆಯ ಮಡಿಲಲ್ಲಿ ತಂಪು, ಇಂಪು, ಕಂಪು ಅಷ್ಟೇ ಅಲ್ಲ, ಶಿಲ್ಪ ಕಲಾ ಸೌಂದರ್ಯದ ಸೊಂಪು ಕೂಡ ಇದೆ ಗುರುಗಳೆ.'

'ನೋಡು ರಾಜಶೇಖರ, ಈ ಮಹಾಕೂಟ ಆ ಕಾಲದ ಹೇಮಕೂಟ !'

'ಅಂದರೆ ?'

'ಅಂದರೆ, ವಿಜಯನಗರದ ಹೇಮಕೂಟವನ್ನು ಕೇಳಿದ್ದೀಯಷ್ಟೆ !'

'ನೋಡಿಯೂ ಇದ್ದೇನೆ ಗುರುಗಳೆ. ಹಂಪೆಯ ವಿರೂಪಾಕ್ಷ ದೇವಾಲಯಕ್ಕೆ ಸನಿಹದಲ್ಲೇ ಇದೆ ಹೇಮಕೂಟಾದ್ರಿ.'

"ಆ ಹೇಮಕೂಟದ ಮೇಲೆ ಅಂದು ಕನ್ನಡದ ಬಾವುಟ ಹಾರಾಡುತ್ತಿತ್ತು. ಕನ್ನಡದ ವಿಜಯಧ್ವಜವನ್ನು ಹೊತ್ತು ಮೆರೆಯುತ್ತಿತ್ತು ಅಂದು ಆ ಹೇಮಕೂಟ.

ಹೇಮಕೂಟದ ಮೇಲೆ ಕನ್ನಡದ ಬಾವುಟ
ಹಾರುತಿದೆ, ಮಣಿಯದಕೆ ನಟ್ಟಿರಲಿ ಶಾಶ್ವತ ॥

ಶ್ರೀ ವಿಜಯ, ನೃಪತುಂಗ, ಕನ್ನಡದ ಶತಶೃಂಗ,
ಶಿವಮಾರ, ದುರ್ವಿನೀತಾದಿ ಗಂಗ,
ಕಂಡು ಕಂಡರಿಸಿದೀ ನಾಡು
ಬಿತ್ತರಂಗೊಂಡಿತೋ ಕಡಲತಡಿತನಕ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜೈನ ತೀರ್ಥಂಕರರು ಶೃಂಗಗಿರಿ ಶಂಕರರು
ಕಲ್ಯಾಣದಣ್ಣಗಳು ಶರಣ ಶರಣೆಯರು
ಹರಿದಾಸರೆಲ್ಲರೂ ಉಸಿರಿತ್ತು ಪೋಷಿಸಿದ
ಹಸಿರುಡೆಯ ಬೆಳೆನಾಡು ಹಸನಾಯಿತೆಂದು

ಕೆಳದಿ, ದ್ವಾರಾವತಿಯು, ಕಿತ್ತೂರು, ಕೊಡಗು,
ಸ್ವಾದಿ, ಬಿಜ್ಜಾವರವು, ಮಾಗಡಿಯು, ಸೋದೆ,
ಮಹಿಷ, ಹಾಗಲವಾಡಿ, ಸುರಪುರವು ಮತ್ತೆ
ವಿಜಯನಗರಕೆ ಶುಭವ ಕೋರುತಿಹುವೆನುತೆ

ಕನ್ನಡಿಗನೆದೆ ಕೆಚ್ಚು ತಾನಾಗಿ ಧ್ವಜಪಟ
ಹಾಲುಕ್ಕಿ, ಜೇನಹೊಳೆ ಹರಿಸಿಹುದು ದಿಕ್ತಟ
ಹೇಮಕೂಟದ ಮೇಲೆ ಕನ್ನಡದ ಬಾವುಟ
ಹಾರುತಿದೆ, ಮಣಿಯದಕೆ ನಟ್ಟಿರಲಿ ಶಾಶ್ವತ

'ಹೌದು' ಅದೇ ರೀತಿ ಈ ಮಹಾಕೂಟವೂ ಸಹ 6–7ನೇ ಶತಮಾನಗಳಲ್ಲಿ ಬಾದಾಮಿ ಚಾಲುಕ್ಯರ ವಿಜಯ ಪತಾಕೆಯನ್ನು ನೆತ್ತಿಯ ಮೇಲಿರಿಸಿಕೊಂಡು ಮೆರೆಯುತ್ತಿತ್ತು. ಕನ್ನಡಿಗರ ವೈಜಯಂತಿಯನ್ನು ಹಾರಬಿಟ್ಟಿದ್ದ ಸ್ಥಳ ಇದು. ಅಲ್ಲದೆ ಚಾಲುಕ್ಯ ಚಕ್ರವರ್ತಿಗಳ ಪಟ್ಟಾಭಿಷೇಕ, ಕಿರೀಟಧಾರಣ ಮಹೋತ್ಸವಗಳು ನಡೆಯುತ್ತಿದ್ದುದು ಇಲ್ಲಿಯೇ ! ಅದರ ಸ್ಮರಣಾರ್ಥವಾಗಿ ಮಕುಟೇಶ್ವರನ ಗುಡಿಯು ಸ್ಥಾಪನೆ ಆಗಿದೆ. ಇದು ಮಹಾಕೂಟವೂ ಹೌದು, ಮಕುಟನಾಥನ ನೆಲೆಯೂ ಹೌದು'.

ಮಾತು ಮುಂದುವರಿಯುತ್ತಲೆ ಕಾಲುಗಳು ಶಿವಯೋಗಮಂದಿರದ ಹಾದಿಯ ಗಡಿಕಲ್ಲುಗಳನ್ನು ಎಣಿಸುತ್ತಿದ್ದುವು.

ತುಸುಕಾಲ ಮೌನ.

ಮೌನವನ್ನು ಮುರಿದು ಮಾತನ್ನಾಗಿಸಿದ ಶಿಷ್ಯ.

'ಗುರುದೇವ ಪುರಾಣ ಪ್ರಸಿದ್ಧವೂ, ಇತಿಹಾಸ ಖ್ಯಾತಿಯೂ, ನಿಸರ್ಗ ಸೌಂದರ್ಯದ ನೆಲೆವೀಡೂ ಆದ ಈ ಮಲಪ್ರಭೆಯ ಪರಿಸರವನ್ನು ಹಾನಗಲ್ಲ ಶ್ರೀ ಕುಮಾರಸ್ವಾಮಿಗಳು ಆರಿಸಿದ್ದರಲ್ಲಿ ಔಚಿತ್ಯವಿದೆಯೆಂದು ಈಗ ಅರ್ಥವಾಯಿತು'.

'ಕೇಳು, ಇಂತಹ ಪ್ರಕೃತಿಯ ಮಡಿಲಲ್ಲಿ, ಪ್ರಶಾಂತ ವಾತಾವರಣದಲ್ಲಿ, ಕೊಳೆ, ಕರುಬು, ಅಸೂಯೆ, ದ್ವೇಷ, ಸ್ವಾರ್ಥ ಮೊದಲಾದ ಯಾವ ಲೋಭ ಆಮಿಷಗಳೂ ಕಾಡದ, ಬೇಡದ ಈ ನೆಲ ಯೋಗಿಗಳ ತಪೋಭೂಮಿಯಾಗಿದೆ. ಕಾಯಕಯೋಗಿಗಳ ಕಾರ್ಖಾನೆಯಾಗಿದೆ. ಅಧ್ಯಾತ್ಮಿಗಳ ಆಡುಂಬೊಲವಾಗಿದೆ. ಹಾನಗಲ್ಲಪ್ಪಗಳು 1909 ರಂದು ಈ ಕ್ಷೇತ್ರ ಸ್ಥಾಪನೆಮಾಡಿದರು. ಆ ಸ್ಥಾಪನೆಗೆ ಮುಂಚೆಯೇ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಾವಿಬ್ಬರೂ ಈ ಮಹಾಕೂಟಕ್ಕೆ ಬಂದದ್ದು. ಈ ಶಿವಯೋಗ ಮಂದಿರದ ಸ್ಥಾಪನೆಯಲ್ಲಿ ಇಳಕಲ್ಲಿನ ಶ್ರೀ ವಿಜಯ ಮಹಾಂತಸ್ವಾಮಿಗಳು, ಹಾಲಕೆರೆಯ ಅನ್ನದಾನೇಶ್ವರರು ಇವರೇ ಮೊದಲಾದವರ ಬೆವರಿನ ಹಳ್ಳ ಹರಿದಿದೆ. ಅಂತೆಯೇ ಈ ಕ್ಷೇತ್ರದಲ್ಲಿ ಆಧ್ಯಾತ್ಮಿಕ, ಧಾರ್ಮಿಕ ತರಬೇತಿಗಳೊಂದಿಗೆ ಸಮಾಜಸೇವೆಯ ಶಿಕ್ಷಣವನ್ನೂ ಕೊಡಿಸಿದರು ಅಪ್ಪಗಳು. ಶಾಸ್ತ್ರ, ಯೋಗ, ನೈಷ್ಠಿಕಾಧ್ಯಯನಗಳು ಇಲ್ಲಿ ದೊರೆಯುತ್ತವೆ. ದಾಸೋಹಂ ಭಾವದಿಂದ ಸಮಾಜದ ಸೇವೆಗಾಗಿ ಬದ್ಧಕಂಕಣರಾದ ಶಿಷ್ಯ ಸಮುದಾಯವನ್ನು ಸೃಷ್ಟಿಸುವುದು ಕುಮಾರ ಶಿವಯೋಗಿಗಳ ಆತ್ಮ ಸಂಕಲ್ಪವಾಗಿತ್ತು. ವಿಶ್ವಧರ್ಮವೆನಿಸಿದ ವೀರಶೈವದ ಉದ್ಧಾರ, ಉತ್ಥಾನಕ್ಕಾಗಿ ಈ ಶಿವಯೋಗಮಂದಿರವನ್ನು ಸ್ಥಾಪಿಸಿದರು.'

'ಅನ್ಯಥಾ ಭಾವಿಸದಿದ್ದರೆ ನನ್ನದೊಂದು ಸಂದೇಹವನ್ನು ಸನ್ನಿಧಿಯ ಮುಂದಿಡಲು ಅಪ್ಪಣೆ ಕೋರುತ್ತೇನೆ'.

'ಸಂಕೋಚವೇಕೆ ? ಸ್ಪಷ್ಟ ಹೇಳಿಬಿಡು ರಾಜಶೇಖರ'.

'ಗುರುವರ್ಯ, ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ ಎಂದಿದೆ ನಮ್ಮ ವೀರಶೈವದ ಮನೀಷೆ. ಅಂತಾದರೂ ಸ್ಥಾವರರೂಪಿ ದೇಗುಲ, ಆಶ್ರಮಗಳು ಆ ತತ್ತ್ವಕ್ಕೆ ಅಪವಾದಗಳೇನು ?'

'ಹಾಗೇನೂ ಅಲ್ಲ ರಾಜಶೇಖರ, ಕೇಳು, ಹಾನಗಲ್ಲಪ್ಪಗಳು ಶೈವರಂತೆ ಕಲ್ಲಿನ ಗುಡಿ ಗೋಪುರಗಳನ್ನು ಕಟ್ಟಲಿಲ್ಲ, ಚಿನ್ಮಯದ ಚೇತನಗಳನ್ನು ಸೃಷ್ಟಿಸಿದರು. ಇಲ್ಲಿ ತರಬೇತಿ ಪಡೆದ ಎಲ್ಲ ಶಿಷ್ಯರೂ ಸಾಕ್ಷಾತ್ ಜಂಗಮ ಲಿಂಗಗಳು ! ವ್ಯಕ್ತಿ ವ್ಯಕ್ತಿಯೂ ಒಂದೊಂದು ನಡೆದಾಡುವ ಶಿವಯೋಗ ಮಂದಿರವಪ್ಪಾ ! ಅಂತೆಸಗಿದ ಆ ಮಹಾಯೋಗಿ ಸಾಮಾನ್ಯನೆ ? ಇಂದಿದ್ದು ನಾಳೆ ಬಿದ್ದು ಹೋಗುವ ಸ್ಥಾವರವನ್ನು ಸ್ಥಾಪಿಸಲಿಲ್ಲ. ಜಗಬೆಳಗುವ ಜಂಗಮ ಜ್ಯೋತಿಗಳನ್ನು ನಿರ್ಮಿಸಿದ್ದಾನೆ. ನಾವೆಲ್ಲರೂ ಅವನ ಕರುಣೆಯ ಕಂದಗಳು.'

'ಸತ್ಯ ಗುರುದೇವ, ತಾವು, ಗದಗಿನ ತೋಂಟದಾರ್ಯರು, ಹುಬ್ಬಳ್ಳಿಯ ಮೂರು ಸಾವಿರ ಮಠದ ಗುರುಸಿದ್ಧ ಸ್ವಾಮಿಗಳು, ಹಾರ್ನಹಳ್ಳಿಯ ಕೋಡಿಮಠದ ನೀಲಲೋಚನರು, ಬಿದಿರೆಯ ಸ್ಥಿರಪಟ್ಟಾಧ್ಯಕ್ಷರಾದ ಪ್ರಭುಸ್ವಾಮಿಗಳು, ಹಾಳಕೇರಿಯ ಅನ್ನದಾನೇಶ್ವರರು, ಇಳಕಲ್ಲ ವಿಜಯ ಮಹಾಂತೇಶ್ವರು, ಬಾಗಲಕೋಟೆಯ ಜಂಬೂರಿ ಸ್ವಾಮಿಗಳು, ಸಖರಾಯ ಪಟ್ಟಣದ ಶ್ರೀಗಳವರು, ಹಾವೇರಿಯ ಶಿವಬಸವರು, ಹಾನಗಲ್ಲ ಸದಾಶಿವರು, ಮುಂಡರಗಿ ಅನ್ನದಾನಿಗಳು, ಕನಕೇರಿಯ ಶ್ರೀಗಳು, ಮುಧೋಳದ ಮೃತ್ಯುಂಜಯರು, ಆನಂದಪುರದ ಸಚ್ಚಿದಾನಂದರು, ನವಿಲುಗುಂದ ಗವಿ ಮಠದ ಬಸವಲಿಂಗರು, ಗಾನಯೋಗಿ ಪಂಚಾಕ್ಷರಿ ಗವಾಯಿಗಳು ಇನ್ನೂ ಹಲವರು...ಒಟ್ಟು ನಲವತ್ತು ಐವತ್ತು ಜನ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಿವಯೋಗ ಮಂದಿರದ ಘಟಿಕಾಸ್ಥಾನದಿಂದ ಹೊರಬಂದ ಸ್ನಾತಕ ಶಿವಯೋಗಿಗಳ ಮೊದಲ ತಂಡದವರು ! ತಮ್ಮ ಪುಣ್ಯವೆ ಪುಣ್ಯ ! ತಮ್ಮ ಭಾಗ್ಯವೆ ಭಾಗ್ಯ ! '

'ಆ ಪುಣ್ಯದಲ್ಲಿ ನಿನಗೂ ಪಾಲಿದೆ ; ಅದು ಮೀಸಲಿದೆ ರಾಜಶೇಖರ '

'ಅರ್ಥವಾಗಲಿಲ್ಲ ಗುರುದೇವ'

'ಸಮಯ ಬರಲಿ ಅರ್ಥೈಸುತ್ತೇನೆ. ಈಗ ಬೇಡ ನಡೆ'.

ಗುರು ಮುಂದು ನಡೆದರು

ಶಿಷ್ಯ ಅವರನ್ನು ಹಿಂಬಾಲಿಸಿದ.

'ಮಹಾಕೂಟ ಪರಿಸರದ ವನಸಿರಿ ಮೂಕ ವಿಸ್ಮಯದಿಂದ ಅವರಿಬ್ಬರನ್ನೂ ವೀಕ್ಷಿಸುತ್ತಿತ್ತು.'

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮೂರು

"ಮಹಾಕೂಟದ ಮೆಟ್ಟಿಲಿಂದಿಳಿದು ಮಹಾಯೋಗಿಗಳು ಹರಿದು ಬರುವ ಧಾತು ಶಿಲಾರಸ ಪ್ರವಾಹಗಳಂತೆ, ಇಲ್ಲವೆ, ಹಿಮಾದ್ರಿಯ ಗಂಗೋತ್ರಿ ಯಮುನೋತ್ರಿಯ ರಿಂದ ಹೊಮ್ಮಿ ಹೊರಟ ಗಂಗೆಯಮುನೆಯರ ಜಲಲ ಸಲಿಲದಂತೆ ಅಥವಾ ಸಹ್ಯಾದ್ರಿಯ ಶಿಖರ ಮುಖದಿಂದ ಹೊರಬಂದ ತುಂಗಭದ್ರೆಯರಂತೆ ಕಾಣಿಸು ತ್ತಿದ್ದರು. ಒಂದೆರಡು ಮೆಟ್ಟಿಲಿಳಿದು ಬಂದ ಶಿವಬಸವ ಶಿವಯೋಗಿಗಳು ಚಣಕಾಲ ನಿಂತರು. ಮುಂದೆ ಮುಂದೆ ಹಾದಿತೋರುತ್ತ ಇಳಿಯುತ್ತಿದ್ದ ರಾಜಶೇಖರ ಸ್ವಾಮಿ ಗುರುವಿನ ಹಾವುಗೆಯ ಸಪ್ಪುಳ ನಿಂತದ್ದು ಕೇಳಿ ತಾವೂ ನಿಂತರು. ಹಿಂತಿರುಗಿ ಗುರುವಿನತ್ತ ನೋಡಿದರು. ಗುರುವಿನ ಬಿಳಿಯ ಜಟೆ ಹಿಮಾಚ್ಛಾದಿತ ಗೌರೀಶಂಕರದಂತೆ ದಿವ್ಯಧವಳವಾಗಿ ಬೆಳಗುತ್ತಿತ್ತು ! ಅದನ್ನು ಕಂಡ ಶಿಷ್ಯನಿಗೆ ಎಣೆ ಇಲ್ಲದ ಆನಂದ ! 'ನನ್ನ ಗುರು ಕಾಲಡಿಯಲ್ಲಿ ಕತ್ತಲಿದ್ದರೂ ನೆತ್ತಿಯಲ್ಲಿ ಬೆಳಕು ಹೊತ್ತವನು! ತಿರೆತುಂಬಿ ಕೆಸರಿದ್ದರೂ ಅದರಲ್ಲಿ ತಾವರೆಯಾಗಿ ಅರಳಿದವನು! ಮೃಣ್ಮಯದ ಪುತ್ಥಳಿಯಂತಿ ದ್ದರೂ ಚಿನ್ಮಯದ ಚೇತನವಾಗಿ ಪಸರಿಸಿದವನು. ನಂಜುಂಡ ಶಿವನಿಗೆ ನಾಗನೇ ಆಭರಣ ಆದಂತೆ, ನನ್ನ ಗುರುಪಿತನಿಗೆ ಹಿಂಸೆಕೊಟ್ಟ ಸಮಾಜವೇ ಸರ್ವಸ್ವವೂ ಆಗಿದೆ. ಅದನ್ನೇ ಹಾಸಿ, ಅದನ್ನೇ ಹೊದೆದಿದ್ದಾನೆ. ಎಲ್ಲ ಬಿಟ್ಟವನಿದ್ದರೂ ಕರುಣೆಯಿಂದ ಎಲ್ಲವನ್ನೂ ಕಟ್ಟಿಕೊಂಡೂ ಇದ್ದಾನೆ. ದಯೆಯನ್ನು ತುಂಬಿದ್ದಾನೆ. ಸಕಲ ಸಚರಾಚರ ಗಳಲ್ಲೂ ದೇವರನ್ನು ದರ್ಶಿಸಿದ್ದಾನೆ. ದೀನನಿಗೆ ದಯೆಯಾಗಿದ್ದಾನೆ ; ದಲಿತನಿಗೆ ತಾಯಾಗಿದ್ದಾನೆ ; ಅಣ್ಣ ಬಸವಣ್ಣನಂತೆ ರಾಷ್ಟ್ರಹಿತ ಸಾಧನೆಯ ಹೊಂಡೇರು ತಾನಾಗಿದ್ದಾನೆ. ಶುದ್ಧ ರಾಜಕಾರಣದಿಂದ ಅವನು ದೂರ ಸರಿದಿಲ್ಲ. ರಾಜಕಾರಣ ಧರ್ಮದ ಬೆನ್ನೆಲುಬು ಎನ್ನುತ್ತಾನೆ. ಬಸವಣ್ಣನ ವರ್ಚಸ್ಸಿನ ಹಿನ್ನೆಲೆಯಲ್ಲಿ ಕಲ್ಯಾಣದ ಮಹಾಮಂತ್ರಿಪದವಿ ಕೆಲಸ ಮಾಡಿದೆ ಎಂಬುದನ್ನು ಮರೆಯಬಾರದು ಎನ್ನುತ್ತಾನೆ. ಹಳೆಯದನ್ನು ಮರೆತಿಲ್ಲ, ಹೊಸದನ್ನು ತಿರಸ್ಕರಿಸಿಲ್ಲ. ಆದರೆ ಪರಂಪರೆಯ ಪಥದಲ್ಲಿ ಪ್ರಗತಿಯನ್ನು ಸಾಧಿಸುತ್ತಾ ಬಂದಿದ್ದಾನೆ. ಇವನ ವ್ಯಕ್ತಿತ್ವ ಆದರ್ಶ, ಅನುಕರಣ ಯೋಗ್ಯ !"

ಹೀಗೆಂದುಕೊಳ್ಳುವಷ್ಟರಲ್ಲಿ ಗುರು ನುಡಿದರು :

"ರಾಜಶೇಖರ, ನನ್ನನ್ನು ಸದಾ ಕಾಡುತ್ತಿದ್ದ ಪೀಡೆಗಳು ಎರಡು : ಒಂದು ಬಡತನ, ಮತ್ತೊಂದು ಅಜ್ಞಾನ. ಇವೆರಡರ ನಿವಾರಣೆಗಾಗಿ ನನ್ನ ಬದುಕನ್ನೇ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮುಡಿಪಿಟ್ಟೆ ಅನ್ನ, ಆಸರೆ ಮತ್ತು ಅರಿವು—ಈ ಮೂರು ಅಂಶಗಳ ಪೂರೈಕೆಯೇ ನನ್ನ ಮುಖ್ಯ ಗುರಿ ಆದುವು. ಬಡತನಕ್ಕೆ ಅಜ್ಞಾನವೇ ಮೂಲ. ಅಜ್ಞಾನ ಹರಿದರೆ ಬಡತನ ನಾಶವಾಗುತ್ತದೆ. ಆ ಕಾರಣ ಎಲ್ಲರನ್ನೂ ಅಥವಾ ನನ್ನ ಕೈಲಾದಷ್ಟು ಜನರನ್ನು ಜ್ಞಾನಿಗಳಾಗಿಸುವ ಸಂಕಲ್ಪ ಮಾಡಿದೆ. ವಿದ್ಯೆ ಅಜ್ಞಾನವೆಂಬ ಕತ್ತಲನ್ನು ಹರಿಸುವ ಏಕೈಕ ಜ್ಯೋತಿ. ಆ ಜ್ಯೋತಿಯನ್ನು ಎಲ್ಲರ ಕೈಗಿರಿಸಲು ಯತ್ನಿಸಿದೆ. ಆದಾಗಬೇಕಿದ್ದರೆ ಬಡ ಮಕ್ಕಳನ್ನು ಹಿಡಿದು ತಂದು ಶಾಲೆಗೆ ಸೇರಿಸ ಬೇಕು ಅಥವಾ ಶಾಲೆಗೆ ಸೇರುವ ಇಚ್ಛೆ ಇದ್ದು ಅನುಕೂಲವಿಲ್ಲದ ಮಕ್ಕಳಿಗೆ ಸಕಲ ಸೌಲಭ್ಯಗಳನ್ನು ಒದಗಿಸಬೇಕು, ಜ್ಞಾನಾರ್ಜನೆಗೆ ಯುಕ್ತ ವಾತಾವರಣವನ್ನು ನಿರ್ಮಿಸಬೇಕು. ಇದು ನನ್ನ ಆದ್ಯ ಕರ್ತವ್ಯವೆನಿಸಿತು. ಈ ಸಂಕಲ್ಪ ಸಾಧನೆಯ ಮೊದಲ ಮೆಟ್ಟಿಲು ಪ್ರಸಾದ ನಿಲಯಗಳನ್ನು ತೆರೆಯುವುದು. ಅದಕ್ಕಾಗಿ ನಾನು ಬಹಳ ಯೋಚಿಸಿದೆ. ನಾಗನೂರ ಮಠದ ನಿರಾಭಾರಿ ಪೀಠದ ಒಡೆತನವನ್ನು ವಹಿಸಿಕೊಂಡ ತರುಣದಲ್ಲೇ ಇಷ್ಟೆಲ್ಲಾ ಯೋಜಿಸಿಕೊಂಡೆ. ನಮ್ಮ ಭಾಗದಲ್ಲಿ ಸರ್ವತೋಮುಖವಾಗಿ ಬೆಳೆಯುತ್ತಿರುವ ನಗರ ಎಂದರೆ ಬೆಳಗಾವಿ. ಅದು ನನ್ನ ಕಾರ್ಯಕ್ಷೇತ್ರವಾಗಬೇಕು ; ಕಾಯಕದ ಕೇಂದ್ರವಾಗಬೇಕು ಎಂದು ನಿರ್ಧರಿಸಿದೆ. ಅಲ್ಲಿ ಪುಟ್ಟ ಪ್ರಮಾಣದಲ್ಲಿ ಒಂದು ಪ್ರಸಾದ ನಿಲಯ ತೆರೆದೆ. ಅನಂತರ ಬೇರೊಂದು ದೊಡ್ಡ ಪ್ರಸಾದ ನಿಲಯ ತೆರೆದೆ. ಶಾಲೆಗಳು, ಕಾಲೇಜುಗಳು ಸಾಕಷ್ಟು ಪ್ರಮಾಣದಲ್ಲಿ ರೂಪಗೊಂಡವು'

'ಪ್ರಸಾದ ನಿಲಯಗಳ ನಿರ್ವಹಣೆ ?'

'ನಿರಾತಂಕವಾಗಿ ಸಾಗಿತು. ನನ್ನ ಜನ ನನ್ನ ಕೈ ಬಿಡಲಿಲ್ಲ. ಮುಕ್ತಹಸ್ತದಿಂದ ದಾನಮಾಡಿದರು. ಮೂಟೆ ಮೂಟೆಯಾಗಿ ಬಂತು ದವಸ ಧಾನ್ಯ. ಹಣವೂ ಹರಿದು ಬಂತು. ನಾನು ಜೋಳಿಗೆ ಹಾಕಿದೆ ನನಗಾಗಿ ಅಲ್ಲ, ಬಡ ಜನರಿಗಾಗಿ. ಅವರ ವಿದ್ಯಾಭ್ಯುದಯಕ್ಕಾಗಿ.'

'ನಾನು ಮತ್ತೊಂದು ಸುದ್ದಿ ಕೇಳಿದ್ದೆ'

'ಏನು ?'

'ಭಾರತ ಸ್ವಾತಂತ್ರ್ಯ ಪೂರ್ವದಲ್ಲಿ ಈ ಪ್ರಸಾದ ನಿಲಯಗಳು.......'

'ಹೌದು, ಸ್ವಾತಂತ್ರ್ಯ ಹೋರಾಟಗಾರರ ಶಿಬಿರಗಳಾಗಿದ್ದುವು. ಬ್ರಿಟಿಷರಿಗೆ ನಮ್ಮ ಮೇಲೆ ಕಣ್ಣಿದ್ದೇ ಇತ್ತು. ನನ್ನನ್ನು ಸೆರೆಮನೆಗೆ ಕಳುಹಿಸಲೂ ಹವಣಿಸಿದ್ದರು. ಆದರೆ ಭಯ ಇತ್ತು. ಹತ್ತಿರ ಸುಳಿಯಲಿಲ್ಲ.'

'ಸ್ವಾತಂತ್ರ್ಯ ಹೋರಾಟಗಾರರ ಕರ್ತವ್ಯ ?'

'ತಲೆ ಮರೆಸಿಕೊಂಡಿರುವುದು. ಕರಪತ್ರಗಳನ್ನು ಹೊರಡಿಸುವುದು. ಪಿಕೆಟಿಂಗ್ ನಡೆಸಿ ಬಂದು ಇಲ್ಲಿ ಅಡಗಿಕೊಳ್ಳುವುದು.'

'ಆದರಿಂದಾಗಿ ಆಶ್ರಮಕ್ಕೆ ಅಪವಾದ ಬರಲಿಲ್ಲವೆ ಗುರುಗಳೆ ?'

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

'ಬಂತು. ಆಗಲೇ ಹೇಳಿದೆನಲ್ಲಾ ಬ್ರಿಟಿಷರ ಕ್ರೂರ ದೃಷ್ಟಿ ನಮ್ಮ ಪ್ರಸಾದ ನಿಲಯದ ಮೇಲೆ ಬಿತ್ತು. ಆದರೆ ಪ್ರತಿಭಟಿಸುವ ಸಿದ್ಧತೆಗಳನ್ನು ಸತ್ಯಾಗ್ರಹಿಗಳು ಮಾಡಿಕೊಂಡಿದ್ದರು. ನಾನು ಅದಕ್ಕೆ ಪೂರ್ಣ ಬೆಂಬಲ ಕೊಟ್ಟೆ. ಅದು ತಪ್ಪು ಎಂದು ನನಗನ್ನಿಸಲಿಲ್ಲ; ಈಗಲೂ ಅನ್ನಿಸುವುದಿಲ್ಲ. ಏಕೆಂದರೆ ಭಾರತಕ್ಕೆ ಸ್ವಾತಂತ್ರ್ಯ ತರುವುದು, ಅದಕ್ಕಾಗಿ ಹೋರಾಡುವುದು ಪ್ರತಿಯೊಬ್ಬ ಭಾರತೀಯನ ಜನ್ಮಸಿದ್ಧ ಹಕ್ಕಾಗಿದ್ದಿತು. ನಾನು ಸನ್ಯಾಸಿಯಾದರೇನಂತೆ? ಭಾರತೀಯನಲ್ಲವೆ? ಹಿಂದೆ ಕಿತ್ತೂರ ರಕ್ಷಣೆಗಾಗಿ ಕಲ್ಮಠದ ಶ್ರೀಗಳವರೂ, ಚಿತ್ರದುರ್ಗದ ಪಾಳೆಯಗಾರರ ಏಳಿಗೆಗೆ ಬೃಹನ್ಮಠದ ಶ್ರೀ ಮುರುಘರಾಜೇಂದ್ರ ಜಗದ್ಗುರುಗಳವರೂ ನೆರವಾದಂತೆ ಬೆಳಗಾವಿಯ ಸ್ವಾತಂತ್ರ್ಯ ಯೋಧರಿಗಾಗಿ ನಾವು ಕಿಂಚಿತ್ ಸೇವೆ ಸಲ್ಲಿಸಿದೆವು. ಇಲ್ಲಿ 1924ರಲ್ಲಿ ನಡೆದ 39ನೆಯ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷರಾಗಿ ಮಹಾತ್ಮಾಗಾಂಧಿಯವರು ದಯಮಾಡಿಸಿ, ನಮ್ಮ ಈ ಆಶ್ರಮದ ಆವರಣದಲ್ಲಿ ಅತ್ಯುತ್ತಮ ಭಾಷಣ ಕೊಟ್ಟರು. ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣನವರು ಮಾಡಿದ ಅದ್ಭುತವಾದ ಸಾಮಾಜಿಕ ಕ್ರಾಂತಿಯನ್ನು ಮುಕ್ತಕಂಠದಿಂದ ಕೊಂಡಾಡಿದರು.'

'ಹೌದು, ನಾನೆಲ್ಲೊ ಒಂದು ಪತ್ರಿಕೆಯಲ್ಲಿ ಓದಿದ ನೆನಪಿದೆ'

'ಕೇಳು—ಬಾಪೂ ಹೇಳಿದರು—

"ಎಂಟು ನೂರು ವರ್ಷಗಳ ಹಿಂದೆ ಬಸವೇಶ್ವರರು ಯಾವ ತತ್ವ ಆಚರಿಸಿ, ಉಪದೇಶ ಮಾಡಿದರೋ ಅಷ್ಟೆಲ್ಲವನ್ನೂ ಆಚರಿಸಲಿಕ್ಕೆ ನನಗೆ ಆಗುವುದಿಲ್ಲ. ಅದರಲ್ಲಿ ಕೆಲವು ತತ್ವಗಳನ್ನು ನಾನು ಆಚರಿಸಲಿದ್ದೇನೆ. ನಾನಿನ್ನೂ ಸಾಧಕ, ಸಿದ್ಧನಲ್ಲ. ಆದರೆ ಬಸವಣ್ಣನವರು ತಾವು ಹೇಳಿದ ತತ್ವಗಳನ್ನೆಲ್ಲಾ ಅನುಷ್ಠಾನಕ್ಕೆ ತಂದಿದ್ದರು. ಅದರಲ್ಲಿ ಅಸ್ಪೃಶ್ಯತಾ ನಿವಾರಣೆ, ಕಾಯಕತತ್ವ ಬಹು ಮುಖ್ಯವಾದವುಗಳು. ಯಾವುದೇ ಪ್ರಕಾರದ ಜಾತಿಭೇದ ಅವರಲ್ಲಿ ಕಂಡುಬರುವುದಿಲ್ಲ. ಈ ಕಾಲದಲ್ಲಿ ಅವರು ಇರುತ್ತಿದ್ದರೆ ಜಗತ್ತಿಗೆ ಪೂಜ್ಯವ್ಯಕ್ತಿಯಾಗಿ ಪರಿಣಮಿಸುತ್ತಿದ್ದರು. ಅವರ ಧರ್ಮಾನುಯಾಯಿಗಳಾದ ನೀವು ಅವರು ಉಪದೇಶಿಸಿದ ತತ್ವಗಳನ್ನು ಆಚರಣೆಯಲ್ಲಿ ತಂದರೆ ಭಾರತ ಭೂಮಿಯನ್ನಷ್ಟೇ ಏಕೆ—ಇಡೀ ಜಗತ್ತನ್ನೇ ಉದ್ಧಾರ ಮಾಡಬಲ್ಲಿರಿ."

'ಆ ಮಹಾತ್ಮನ ಅಮೃತೋಪಮ ನುಡಿಗಳು ತರುಣನಿದ್ದ ನನಗೆ ಸ್ಫೂರ್ತಿ ತುಂಬಿದವು. ರಾಷ್ಟ್ರಕ್ಕಾಗಿ ಸೇವೆ ಸಲ್ಲಿಸಬೇಕೆಂಬ ಹಂಬಲ ಹೆಚ್ಚಾಯಿತು. ಸಮಯ ಕಾಯುತ್ತಿದ್ದೆ. ಸಿಕ್ಕಿತು; ಆಚರಿಸಿದೆ. ಲಾಠಿ ಏಟು ತಿಂದವರ, ಬಾಯ್‌ನೆಟ್‌ಗೆ ಬಲಿಯಾದವರ, ಗುಂಡುಗಳನ್ನು ಎದೆಗುಂಡಿಗೆಗಳಲ್ಲಿ ಅಡಗಿಸಿಕೊಂಡವರ ಸೇವಾ ಶುಶ್ರೂಷೆಯ ಕ್ಷೇತ್ರವಾಯಿತು; ಆಸ್ಪತ್ರೆಯೇ ಆಯಿತು ನಮ್ಮ ಆಶ್ರಮ.'

'ತುಂಬಾ ಶ್ಲಾಘನೀಯವಾದದ್ದು, ಅದಕ್ಕಾಗಿ ಇಡೀ ಕರ್ನಾಟಕವೇ ತಮಗೆ ಕೃತಜ್ಞವಾಗಿದೆ'.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

'ಕೇಳು ರಾಜಶೇಖರ, ಹೆತ್ತ ತಾಯಿ, ಹೊತ್ತ ನೆಲ, ಎತ್ತಿ ಹಿಡಿದ ಧರ್ಮ— ಈ ಮೂರರ ಬಗೆಗೆ ಎಲ್ಲ ವರ್ಗದ ವ್ಯಕ್ತಿಯ ಕರ್ತವ್ಯ ಇದೆ. ಹೆತ್ತ ತಾಯಿಯ ಋಣವನ್ನು ಒಂದು ಜನ್ಮದಲ್ಲಿ ತೀರಿಸಲು ಸಾಧ್ಯವಿಲ್ಲ. ಆ ವಿಚಾರದಲ್ಲಿ ತಾಯಿ ಅತ್ಯಂತ ಪೂಜ್ಯಳು. ಸನ್ಯಾಸಿ ಇರಲಿ, ಮಹಾತ್ಮನಿರಲಿ ಯಾರೇ ಇರಲಿ ಅವನಿಗೆ ಜನ್ಮಕೊಟ್ಟವಳು ತಾಯಿ. ಅವಳಿಗೆ ಮಣಿಯಲೇ ಬೇಕು. ಎರಡನೆಯವಳು ಹೊತ್ತ ತಾಯಿ, ಅಂದರೆ ಜನ್ಮಭೂಮಿ, 'ಜನನೀ ಜನ್ಮ ಭೂಮಿಶ್ಚ ಸ್ವರ್ಗಾದಪಿ ಗರೀಯಸಿ' ಎಂದಿದ್ದಾರೆ. ಅಂದರೆ ಜನ್ಮಕೊಟ್ಟ ತಾಯಿಯಷ್ಟೇ ಪವಿತ್ರಳೂ ಪೂಜ್ಯಳೂ ಆದವಳು ಆಶ್ರಯವಿತ್ತು ಆಶೀರ್ವದಿಸುವ ರಾಷ್ಟ್ರದೇವಿ. ಅವಳಿಗೆ ಎಲ್ಲರೂ ಕೃತಜ್ಞರಾಗಿರಬೇಕು. ಮೂರನೆಯವಳು, ಧರ್ಮ ! 'ಸ್ವಧರ್ಮೇ ನಿಧನಂ ಶ್ರೇಯಃ' ಎಂದರು. ಅಂದರೆ ನಾವು ಅಥವಾ ನಮ್ಮ ಪೂರ್ವಜರು ಸ್ವೀಕರಿಸಿ, ಪರಂಪರಾಗತವಾಗಿ ಅನುಸರಿಸಿಕೊಂಡು ಬರುತ್ತಿರುವ ಧರ್ಮವೊಂದಿದೆ. ಅದು ಇಂಥದು ಅಂಥದು ಎನ್ನುವ ಭೇದ ಇಲ್ಲ. ಯಾವ ಧರ್ಮವೂ ಕೀಳಲ್ಲ, ಯಾವುದೂ ಮೇಲಲ್ಲ. ಅವನವನ ಧರ್ಮ ಅವನವನಿಗೆ ಶ್ರೇಷ್ಠ. ನನ್ನ ತಾಯಿ ಹೇಗಿದ್ದರೂ ಜನ್ಮಕೊಟ್ಟ ಪುಣ್ಯಾತ್ಮಳಲ್ಲವೆ. ಆ ಕಾರಣ ಧರ್ಮ, ದೇಶ, ಜನನಿ—ಇವು ಮೂರೂ ಪೂಜ್ಯ ವಸ್ತುಗಳು.

'ನಾನು ತಾಯ ಮಡಲಿನ ಸೌಖ್ಯವನ್ನೇ ಕಾಣದವನು. ಅವಳ ಅಕ್ಕರೆಯನ್ನು ಅಕ್ಕಗಳಿಬ್ಬರಲ್ಲಿ ಕಂಡೆ. ಅವರ ವಾತ್ಸಲ್ಯದ ವಕ್ಷದಲ್ಲಿ ಬೆಳೆದೆ. ಹಣಬರಟ್ಟಿ ಪಟ್ಟದ ಸ್ವಾಮಿಂಗಳೊಬ್ಬರು, ಅನಂತರ ಅದೃಶ್ಯಪ್ಪ ಮಾಸ್ತರರು, ಅನಂತರ ಸಮಾಜ, ತದನಂತರ ರಾಷ್ಟ್ರ, ಇಂದು ನನ್ನ ಧರ್ಮ, ನನ್ನ ದೈವ—ಇವು ನನಗೆ ತಾಯಿ ಯಾಗಿ, ಗುರುವಾಗಿ, ಮಾರ್ಗದರ್ಶಿಗಳಾಗಿ ಕೈಹಿಡಿದು ನಡೆಸಿಕೊಂಡು ಬಂದಿವೆ.'

'ಇಷ್ಟಾದರೂ ಕರ್ನಾಟಕದ ಮೋಹ ನಿಮ್ಮನ್ನು ಬಿಟ್ಟಿರಲಿಲ್ಲ ಅಲ್ಲವೇ ?'

'ಬಿಟ್ಟಿರಲಿಲ್ಲ ಅಲ್ಲ, ಬಿಡಬಾರದು ರಾಜಶೇಖರ. ನೋಡು ಕರ್ನಾಟಕ ಬಹಳ ಹಿಂದೆ ಅಂದರೆ ಮೌರ್ಯರ ಕಾಲದಲ್ಲಿ ಕುಂತಳ ಎಂಬ ವಿಶಾಲ ದೇಶವಾಗಿತ್ತು. ಅನಂತರ ರಾಷ್ಟ್ರಕೂಟರ ಕಾಲಕ್ಕೆ 'ಕಾವೇರಿಯಿಂದಮಾ' ಗೋದಾವರಿವರಂ' ಆಯ್ತು. ಇಂದು ಈ ಹಾಳು ರಾಜಕೀಯದ ಕಾರಣವಾಗಿ ಬೆಳಗಾವಿಯಿಂದ ಬೆಂಗಳೂರು ವರೆಗಾಗಿದೆ. ಇಲ್ಲಿ ನಮ್ಮ ಹೊಟ್ಟೆ ಉರಿಸುವ ಸಂಗತಿ ಅಂದರೆ ಶಿವಯೋಗಿ ಸಿದ್ಧರಾಮರ ನೆಲೆವೀಡಾದ ಸೊನ್ನಲಿಗೆ ಮಹಾರಾಷ್ಟ್ರಕ್ಕೆ ಸೇರಿಹೋದದ್ದು. ಆದವಾನಿ, ಕಾಸರಗೋಡು ಇವೆಲ್ಲಾ ನಮ್ಮವಲ್ಲವೆ. ಬ್ರಿಟಿಷರ ಕಾಲದಲ್ಲಿ ಸಿಂಹಳ ಅಥವಾ ಈಗಿನ ಶ್ರೀಲಂಕಾ ಹಾಗೂ ಬರ್ಮಾ ದೇಶಗಳು ಭಾರತದಿಂದ ಬೇರೆ ಆದವು. ಕಾಂಗ್ರೆಸ್ಸಿಗರ ಕಾಲಕ್ಕೆ ಬಾಂಗ್ಲಾ ಕೈ ಬಿಡ್ತು. ನೇಪಾಳ ಭೂತಾನ ದೂರ ಹೋದವು. ಪಾಕಿಸ್ಥಾನ ವೆಂಬ ಪಾರ್ಥೇನಿಯಂ ಹುಟ್ಟಿಕೊಂಡು ಶ್ರೇಷ್ಠ ಸಸ್ಯವರ್ಗವನ್ನೇ ಕಬಳಿಸಿ ನೀರು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕುಡಿಯುತ್ತಿದೆ. ಇದೇ ಗತಿ ಕರ್ನಾಟಕಕ್ಕೂ ಪ್ರಾಪ್ತವಾಯಿತು. ಇದು ಸಂಕಟ ಪಡುವ ವಿಷಯ ಅಲ್ಲವೇ ?'

'ಹೌದು, ನಾನು ಹಲವರ ಬಾಯಲ್ಲಿ ಕೇಳಿದ್ದೆ. ನಾಗನೂರ ಶ್ರೀ ಶಿವಬಸವ ಸ್ವಾಮಿಗಳೊಬ್ಬರು ಬೆಳಗಾವಿಯಲ್ಲಿ ಇಲ್ಲದೇ ಹೋಗಿದ್ದಿದ್ದರೆ ಬೆಳಗಾವಿ ಎಂದೋ ಮಹಾರಾಷ್ಟ್ರದ ಒಂದು ಭಾಗವಾಗುತ್ತಿತ್ತು ಎಂದು.'

'ಅದೇನೇ ಇರುವುದಿಲ್ಲದೇಕೆ. ಆದರೆ ನನ್ನ ಕಣ್ಣ ಮುಂದೆ ಅಂದಿದ್ದದ್ದು ಕನ್ನಡ ನಾಡಿನ ಏಕೀಕರಣದ ಚಿತ್ರ! ಹರಿದು ಹಂಚಾಗಿದ್ದ ಕನ್ನಡನಾಡು ಒಂದಾಗಬೇಕು, ಕನ್ನಡಿಗರೆಲ್ಲರೂ ಒಂದೆಡೆ ಸೇರಿ ಆನಂದದ ಬದುಕು ಸಾಗಿಸಬೇಕು. ನುಡಿಯ ಗುಡಿ ಕಟ್ಟಬೇಕು—ಎಂಬ ಸದ್ಭಾವನೆ ನನ್ನನ್ನು ಸದಾ ಎಚ್ಚರಿಸುತ್ತಿತ್ತು. ಅದರಿಂದಾಗಿ ಮೇಲೆದ್ದೆ. ಕನ್ನಡಿಗರಲ್ಲಿ ನವಜಾಗ್ರುತಿ ಉಂಟುಮಾಡಲು ತೊಡಗಿದೆ. ನೋಡು ರಾಜ ಶೇಖರ, ಬೆಳಗಾವಿ ಇಂದು ಕರ್ನಾಟಕದ ಶಿರಸ್ಥಾನದಲ್ಲಿದೆ. 'ಸರ್ವಸ್ಯ ಗಾತ್ರಸ್ಯ ಶಿರಃ ಪ್ರಧಾನಂ' ಎನ್ನುತ್ತಾರೆ. ಅಂದರೆ ಇಡೀ ದೇಹಕ್ಕೆ ಶಿರಸ್ಸೇ ಪ್ರಧಾನ. ಅದಿಲ್ಲದೆ ಹೋದರೆ ಶರೀರದ ಯಾವ ಭಾಗವನ್ನೂ ಮುಟ್ಟಿ ಇದು ಇಂಥವನ ದೇಹ ಎಂದು ಹೇಳಲು ಬರುವುದಿಲ್ಲ. ಅಂತಹ ಶಿರಸ್ಸಾದ ಬೆಳಗಾವಿಯನ್ನು ಕಳೆದುಕೊಂಡು ಕನ್ನಡಿಗರಾದ ನಾವು ಬದುಕುವುದಾದರೂ ಹೇಗೆ ?'

'ತಮ್ಮ ರಾಷ್ಟ್ರಪ್ರೇಮ, ನಾಡು-ನುಡಿಗಳ ಮೋಹ ಇವು ಅದ್ಭುತ, ಅನ್ಯಾದೃಶ ಗುರುದೇವ. ಅಂತೆಯೇ ಒಂದು ಮಾತು......'

'ಕೇಳು'

'ಜನಮನದಲ್ಲಿ ರಾಷ್ಟ್ರೀಯ ಭಾವನೆಯ ಕಿಚ್ಚು ಹಚ್ಚುವುದು ತಪ್ಪಲ್ಲವೇ ? '

'ಏಕೆ ?'

'ನಾನು ಕೇಳಿದ್ದೆ–ಅಲ್ಲ ಎಲ್ಲೋ ಓದಿದ್ದೆ–ಓರ್ವ ದೊಡ್ಡ ಮನುಷ್ಯನೆ, ಶುದ್ಧ ಭಾರತಿಯನೇ ಹೇಳಿದ್ದಾನೆ—'ಜನಮನದಲ್ಲಿ ರಾಷ್ಟ್ರೀಯ ಭಾವನೆಯನ್ನು ಜಾಗ್ರತ ಗೊಳಿಸುವುದು–ಸಿಡಿಮದ್ದಿನ ಕೋಠಿಗೆ ಬೆಂಕಿ ತಗಲಿಸಿದಂತೆ, ಅದರಿಂದ ರಾಷ್ಟ್ರ ನಾಶ ಆಗುತ್ತದೆ ಎಂದು ಅಭಿಪ್ರಾಯ ಪಟ್ಟಿದ್ದಾನೆ.'

'ಅದು ತಪ್ಪು ಕಲ್ಪನೆ. ಅದರಿಂದ ರಾಷ್ಟ್ರದ ನಾಶ ಅಲ್ಲ, ಪ್ರಗತಿ ಆಗುತ್ತೆ. ಕೇಳು, ಸಮಾಜ ಅಥವಾ ರಾಷ್ಟ್ರ ರಾಜರಿದ್ದ ಹಾಗೆ. ಅವರು ರಾಷ್ಟ್ರಕನೆಡೆಗೆ ಬರುತ್ತಾರೆ. ಹೇಗೆ ? ಯಾವ ರೂಪದಲ್ಲಿ ? ಭಿಕ್ಷುಕರಂತೆ ! ಒಂದು ಕತೆ ಇದೆ, ಕೇಳು.

'ಒಂದು ರಾಜ್ಯದ ರಾಜಧಾನಿ. ರಾಜಬೀದಿಯಲ್ಲಿ ಭಿಕ್ಷುಕನೊಬ್ಬ ನಿತ್ಯವೂ ಭಿಕ್ಷೆ ಬೇಡುತ್ತಿದ್ದ. ಹೋಗಿ ಬರುವ ಜನರು ಅವನ ಭಿಕ್ಷಾಪಾತ್ರೆಗೆ ಒಂದೊಂದು ಹಿಡಿ ಅಕ್ಕಿ ಹಾಕುತ್ತಿದ್ದರು. ಒಂದು ದಿನ ಆ ರಾಜ್ಯದ ರಾಜ ಕಾಂಚನರಥಾರೂಢನಾಗಿ ಆ ಮಾರ್ಗದಲ್ಲಿ ಬಂದ. ಭಿಕ್ಷುಕನ ಮುಂದೇ ನಿಂತಿತು ರಥ. ಭಿಕ್ಷುಕನಿಗೆ ಹಿಗ್ಗು!

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

'ಇಂದು ನನ್ನ ಬಡತನವೆಲ್ಲಾ ಬಯಲಾಗಿ ಬಿಡುತ್ತದೆ. ನಾಡನ್ನಾಳುವ ಪ್ರಭುವೇ ಬಂದಿದ್ದಾನೆ ನನಗೆ ಬೇಡಿದ್ದನ್ನು ನೀಡಲು ಎಂದುಕೊಂಡ. ಆದರೆ ಬಂದಿದ್ದ ರಾಜ ನೀಡುವವನಾಗಿರಲಿಲ್ಲ, ಬೇಡುವವನಾಗಿದ್ದ. 'ಅಪ್ಪಾ ನಿನ್ನ ಮನಸ್ಸಿಗೆ ತೋರಿದಷ್ಟು ಅಕ್ಕಿಯನ್ನು ದಾನಮಾಡು, ನಾನೂ ನಿನ್ನಂತೆಯೇ ಓರ್ವ ತಿರುಕ, ಆದರೆ ದೊಡ್ಡ ತಿರುಕ' ಎಂದ ರಾಜ. ತನ್ನ ಉತ್ತರೀಯವನ್ನು ಭಿಕ್ಷುಕನ ಮುಂದೆ ಹಾಸಿದ.

ಭಿಕ್ಷುಕನಿಗೆ ಒಂದೆಡೆ ಸಂತೋಷ, ಮತ್ತೊಂದೆಡೆ ಸಂಕಟ. ದೇಶದೊಡೆಯನಿಗೆ ದಾನ ನೀಡುವಷ್ಟು ಸಿರಿವಂತ ನಾನಾದೆನಲ್ಲಾ ಎಂಬ ಹಿಗ್ಗು; ಆದರೆ ಕಷ್ಟಪಟ್ಟು ದಿನವೆಲ್ಲಾ ಸಂಪಾದಿಸಿದ್ದರಲ್ಲಿ ಅವನಿಗಿಷ್ಟು ಪಾಲುಕೊಟ್ಟು ನಷ್ಟ ಮಾಡಿಕೊಳ್ಳಬೇಕಲ್ಲಾ ಎಂಬ ದುಃಖ. ಭಿಕ್ಷುಕ ಬಹಳ ಹೊತ್ತು ಯೋಚಿಸಿದ. ರಾಜ ಬೇಡುತ್ತ ನಿಂತೇ ಇದ್ದ. ಕಡೆಗೆ ಏನು ತಿಳಿಯಿತೋ ಏನೋ, ಭಿಕ್ಷುಕ ತನ್ನ ಭಿಕ್ಷಾಪಾತ್ರೆಯಿಂದ ಕಷ್ಟಪಟ್ಟು ಒಂದೇ ಒಂದು ಅಕ್ಕಿಯ ನುಚ್ಚನ್ನು ತೆಗೆದು ರಾಜನ ಮಡಲಿಗೆ ಹಾಕಿದ. ರಾಜ ಸಂತುಷ್ಟನಾಗಿ ಆ ನುಚ್ಚಕ್ಕಿಯನ್ನು ತೆಗೆದುಕೊಂಡು ಹೊರಟುಹೋದ.

ಸಂಜೆ ಆಯಿತು, ಭಿಕ್ಷುಕ ತನ್ನ ಗುಡಿಸಲಿಗೆ ಬಂದ ಅಂದಿನ ಸಂಪಾದನೆ ಎಷ್ಟು ಎಂದು ತಿಳಿಯಲು ಭಿಕ್ಷಾಪಾತ್ರೆಯ ಅಕ್ಕಿಯನ್ನು ಅಳೆಯಹೋದ. ಬಟ್ಟೆಯ ಮೇಲೆ ಸುರಿದ. ಆಗ ಇದ್ದಕ್ಕಿದ್ದಂತೆ ದೀಪದ ಬೆಳಕಿನಲ್ಲಿ ಅಕ್ಕಿಯ ರಾಶಿಯಲ್ಲಿ ಏನೋ ಮಿನ ಮಿನ ಮಿಂಗುತ್ತಿದ್ದಂತೆ ಕಂಡಿತು. ಭಿಕ್ಷುಕ ಅದೇನೆಂದು ತೆಗೆದು ನೋಡಿದ. ನೋಡಿದರೆ ಚಿನ್ನದ ಚೂರು ! ಅದು ಎಷ್ಟಿತ್ತೆಂದರೆ ರಾಜನಿಗೆ ತಾನು ದಾನ ಕೊಟ್ಟ ಅಕ್ಕಿಯ ನುಚ್ಚಿನಷ್ಟೇ ಗಾತ್ರ ಇತ್ತು.

ಭಿಕ್ಷುಕನಿಗೆ ಹೊಟ್ಟೆ ಉರಿದುಹೋಯಿತು ! ಛೆ ! ಛೆ ! ನಾನೆಂಥಾ ತಪ್ಪು ಮಾಡಿದೆ, ಬೇಡಲು ಬಂದಿದ್ದ ರಾಜನಿಗೆ ಬೊಗಸೆಯಷ್ಟು ಅಕ್ಕಿ ಹಾಕಿದ್ದಿದ್ದರೆ ಬೊಗಸೆ ಚಿನ್ನ ಬರುತ್ತಿತ್ತಲ್ಲಾ ಎಂದು ಮರಗಿದ.

ಇದು ವಿಶ್ವಕವಿ ರವೀಂದ್ರರು ಹೇಳಿದ ಕಥೆ. ಇದು ಕಥೆಯಾದರೂ ತಿಳಿದುಕೊಳ್ಳುವುದು ಬಹಳ ಇದೆ. ಒಂದು ರಾಷ್ಟ್ರದ ಪ್ರಜೆಗಳಾಗಿ, ಒಂದು ಸಮಾಜದ ಶಿಶುಗಳಾಗಿ ಹುಟ್ಟಿ, ಬಾಳುವ ನಾವೆಲ್ಲರೂ ಒಂದರ್ಥದಲ್ಲಿ ಭಿಕ್ಷುಕರೇ ! ರಾಷ್ಟ್ರ ಇಲ್ಲವೇ ಸಮಾಜ ನಮ್ಮಲ್ಲಿಗೆ ಬೇಡಲು ಬರುವ ರಾಜ. ಇಂತಹ ರಾಜನನ್ನು ಸಂತೈಸುವುದು ಭಿಕ್ಷುಕನೆನಿಸಿದ ಪ್ರತಿಯೊಬ್ಬ ರಾಷ್ಟ್ರಕನ ಕರ್ತವ್ಯ. ರಾಷ್ಟ್ರೀಯ ಭಾವನೆಯನ್ನು ಕೆಣಕುವುದು ಸಿಡಿಮದ್ದಿಗೆ ಕಿಡಿ ಹಾಯಿಸಿದಂತೆ ಎಂದು ಹಲವರು ಹೇಳುವುದುಂಟು. ಹಾಗೆ ಹೇಳುವವರು ಸಮಯಸಾಧಕರು, ಯಾವುದೋ ಆಮಿಷಕ್ಕೆ ಬಲಿಯಾಗಿ ರಾಷ್ಟ್ರ ಪ್ರಗತಿಯತ್ತ ಕಣ್ಣುಮುಚ್ಚಿ ಕುಳಿತ ಸ್ವಾರ್ಥಿಗಳು. ಅಂಥವರ ಬಗ್ಗೆ ನನ್ನ ವಿರೋಧ ಇದೆ. ರಾಷ್ಟ್ರೀಯ ಭಾವನೆಯನ್ನು ಕಾಲಕಾಲಕ್ಕೆ ಎಚ್ಚರಿಸದಿರುವುದಾಗಲಿ, ಎಚ್ಚೆತ್ತ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭಾವನೆಗೆ ತಣ್ಣೀರೆರಚುವುದಾಗಲಿ ದೇಶದ್ರೋಹವೆಂದೇ ನಾನು ಬಗೆಯುತ್ತೇನೆ. ರಾಷ್ಟ್ರ ಎತ್ತ ಸಾಗುತ್ತಿದೆ ಅದರ ಗತಿ ಗಹನತೆಗಳೇನು? ಆರ್ಥಿಕವಾಗಿ ಅಷ್ಟೇ ಅಲ್ಲ, ಸಾಂಸ್ಕೃತಿಕವಾಗಿ ಅದರ ಹಿರಿಮೆ ಏನು ? ವ್ಯಕ್ತಿಗೊಂದು ವ್ಯಷ್ಟಿಚಿತ್ ಇದ್ದಂತೆ ರಾಷ್ಟ್ರಕ್ಕೊಂದು ಸಮಷ್ಟಿಚಿತ್ ಇದೆ. ಅದು ಎಷ್ಟರ ಮಟ್ಟಿಗೆ ತನ್ನ ಮಾನವೀಯ ಮೌಲ್ಯಗಳನ್ನು ಉಳಿಸಿಕೊಂಡಿದೆ, ಬೆಳೆಸಿಕೊಂಡಿದೆ ಎಂಬುದರ ಮಾಪನದತ್ತ ಆಸ್ತೆಯುಳ್ಳವರಾಗುವುದು, ಬರಿಯ ಆಸ್ಥೆ ವಹಿಸುವುದಷ್ಟೇ ಅಲ್ಲ, ಅದನ್ನು ಅನುಷ್ಠಾನಕ್ಕೆ ತರುವಲ್ಲಿ ಸದಾ ನಿರತರಾಗಿರುವುದು; ಒಟ್ಟಿನಲ್ಲಿ ರಾಷ್ಟ್ರದ ಸರ್ವತೋಮುಖ ಪ್ರಗತಿಗಾಗಿ ದುಡಿಯುವುದು; ಇಂತಹ ನೂರಾರು ಸಾವಿರಾರು ರಾಷ್ಟ್ರೀಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು, ಆಗುವಷ್ಟು ನೆರವಾಗುವುದು ನಾವು ರಾಷ್ಟ್ರಕ್ಕೆ ನೀಡುವ ಮೊದಲ ಕಾಣಿಕೆ. ನೈಜ ರಾಷ್ಟ್ರೀಯ ಭಾವನೆ ನಮ್ಮಲ್ಲಿ ಬೆಳೆಯದಿದ್ದರೆ ಭಾರತ ಭಾರತವಾಗಿ ಬಹುಕಾಲ ಬದುಕಲಾರದು. ಬೆಂದ ಮನೆಗೆ ಇರದದ್ದೇ ಲಾಭ ಎನ್ನುವ ದೌಷ್ಟ್ಯ; ಪಕ್ಕದ ಮನೆ ಹಾಳಾದರೆ ಸಾಕು ನನ್ನ ಕತ್ತೆ ಕಟ್ಟಲಿಕ್ಕೆ ಜಾಗ ಆಯ್ತು ಎಂಬ ಸಣ್ಣತನ ಇವಿಷ್ಟೇ ಬೆಳೆಯುತ್ತಾ ಹೋದರೆ ರಾಷ್ಟ್ರದ ಬೆಳವಣಿಗೆ ಆಯಿತೆ ? ತನ್ನ ತಲೆಯ ಮೇಲೆ ಬಾಂಬ್ ಹಾಕಿಸಿಕೊಂಡ ಜಪಾನ್ ತನ್ನನ್ನು ತಾನು ಕಟ್ಟಿಕೊಂಡು, ಇಂದು ನಮ್ಮ ದೇಶಕ್ಕೆ, ಸಾಲ ಕೊಡುವಷ್ಟು ಮಟ್ಟಿಗೆ ಸಂಪದ್ಭರಿತವಾಗಿದೆ ! ಅದಕ್ಕೆ ಕಾರಣರು ಯಾರು ? ರಾಷ್ಟ್ರದ ಜನತೆ, ಮಹಾಯುದ್ಧದ ವೇಳೆಯಲ್ಲಿ ಸಕ್ಕರೆಗೆ ಅಭಾವ ಬಂದಾಗ ಇಂಗ್ಲೆಂಡಿನ ಜನ ಪರಿಸ್ಥಿತಿ ಸುಧಾರಿಸುವವರೆಗೂ ಸಕ್ಕರೆ ಬಳಸುವುದನ್ನೇ ಬಿಟ್ಟರು. ಏಕೆ ? ರಾಷ್ಟ್ರ ನನ್ನದು, ಅದಕ್ಕೆ ಬಂದ ವಿಪತ್ತು ನನಗೆ ಬಂದ ಆಪತ್ತು ಎಂಬ ಭಾವನೆ ಇದ್ದದ್ದರಿಂದ.

ಇಂಥವೆನಿತೋ ಅಂಶಗಳು ರಾಷ್ಟ್ರೀಯ ಭಾವನೆಯ ಪರಿವಾರಕ್ಕೆ ಸೇರಿದವುಗಳು. ಅವುಗಳಲ್ಲಿ ರಾಜಕಾರಣವೂ ಒಂದು. ರಾಜಕಾರಣವೇ ರಾಷ್ಟ್ರವಲ್ಲ. ಆದರೆ ಹೊಣೆ ಹೊತ್ತ ರಾಜಕಾರಣ ನಮಗಿಂದು ಬೇಕಾಗಿದೆ. ಎಚ್ಚೆತ್ತ ಜನತೆಯನ್ನು ರಾಷ್ಟ್ರ ಬಯಸುತ್ತಿದೆ. ತಲೆಯಿಲ್ಲದ ಅರವತ್ತೆಂಟು ಕೋಟಿಯಿಂದ ರಾಷ್ಟ್ರದೊಡ್ಡದಾಗದು. ದೊಡ್ಡದಾಗಬೇಕಾದರೆ ನಾವು ದೊಡ್ಡವರಾಗಬೇಕು.

ವ್ಯಕ್ತಿ ರಾಷ್ಟ್ರಕ್ಕೆ ಹೇಗೋ ಒಂದು ಸಮಾಜಕ್ಕೂ – ರಾಷ್ಟ್ರಕ್ಕೂ ಹಾಗೆ ಒಂದು ಸಾವಯವ ಸಂಬಂಧ ಇದೆ ; ಇರಬೇಕು. ರಾಜಕಾರಣಕ್ಕೆ ಸಮಾಜದ ಒಳಿತಿನ ಚಿಂತೆ ಇದ್ದರೆ, ಸಮಾಜಕ್ಕೆ ರಾಷ್ಟ್ರದ ಅಭ್ಯುದಯದ ಆಕಾಂಕ್ಷೆ ತುಂಬಿರಬೇಕು. ವ್ಯಕ್ತಿಗಂತೂ ಸಮಾಜದ ಸೇವೆ ಸಂಧಾರಣೆಗಳ ಬಗೆಗೆ ವಿಶೇಷ ಜವಾಬ್ದಾರಿ ಇರುತ್ತದೆ. ಹಿಂದೆ ಕಲ್ಲುದೇವರು ನಮ್ಮ ಪೂರ್ವಜರ ಭಗವಂತನಾಗಿದ್ದ. ಇಂದು ನಮ್ಮೆದುರಿನಲ್ಲಿ ನಿತ್ಯವೂ ಗೋಚರಿಸುವ ದೀನ, ದಲಿತ, ಕುರುಡ, ಕುಂಟ ಇವರೇ ನಮ್ಮ ದೇವತೆಗಳು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇವರ ಸೇವೆಯನ್ನೇ ಪೂಜೆ ಎಂದು ಭಾವಿಸಿ ನಡೆದುಕೊಳ್ಳಬೇಕು. ಉಳ್ಳವರಾದ ನಾವು ದೀನನಿಗೆ ದಯೆಯಾಗಿ, ದಲಿತನಿಗೆ ತಾಯಾಗಿ, ಕುರುಡನಿಗೆ ಕಣ್ಣಾಗಿ, ಹೆಳವನಿಗೆ ತೆಮರಾಗಿ, ಮೂಕನಿಗೆ ಮಾತಾಗಿ, ರಾಷ್ಟ್ರಹಿತ ಸಾಧನೆಯ ಹೊಂದೇರು ತಾನಾಗಿ ಸಾಗುವುದೇ ಆ ಭಗವದ್ ಭಕ್ತನಾಗಲು ಪಡೆದ ಅರ್ಹತೆ. ಇಂತಾದಾಗಲೇ ನಾವು ಈ ರಾಷ್ಟ್ರದ ಪ್ರಜೆಗಳಾಗಿದ್ದಕ್ಕೂ ಸಮಾಜವೊಂದರ ಶಿಶುಗಳಾಗಿದ್ದಕ್ಕೂ ಸಾರ್ಥಕ !'

'ತಮ್ಮ ನುಡಿ ಸರ್ವಮಾನ್ಯ. ತಮ್ಮ ಶ್ರೇಷ್ಠ ಆದರ್ಶ ಅನುಕರಣೀಯ, ಗುರುದೇವ'

'ಆದರೆ ಒಂದು ಮಾತು ಸತ್ಯ ರಾಜಶೇಖರ. ಇವೆಲ್ಲವುಗಳ ಹಿನ್ನೆಲೆಯಲ್ಲಿ ನನ್ನ ಪ್ರತಿಷ್ಠೆ ಅಡಗಿಲ್ಲ, ಕೀರ್ತಿಗಾಗಿ ಅಲ್ಲ, ಧನಾರ್ಜನೆಗಾಗಿ ಅಲ್ಲ, ಮತ್ತಾವುದೊ ಆಮಿಷ ದಿಂದ ಇಷ್ಟನ್ನೂ ಹಮ್ಮಿಕೊಳ್ಳಲಿಲ್ಲ ನಾನು. ನನ್ನ ಕಣ್ಣೆದುರಿಗಿದ್ದುದು ದೇಶದ ದಾರಿದ್ರ್ಯ ಮತ್ತು ಜನತೆಯ ಅಜ್ಞಾನ. ಇವುಗಳ ನಿವಾರಣೆಗಾಗಿ ನನ್ನೆಲ್ಲ ಆಶೆ-ಭಾಷೆ ಗಳನ್ನು ಮುಡಿಪಿಟ್ಟೆ.'

'ಆದರಿಂದ ಲೋಕ ಕಲ್ಯಾಣವೇ ಆಯಿತು ಗುರುಗಳೆ. ಬೆಳಗಾವಿಯಲ್ಲಿ ತಾವೊಂದು ವಟವೃಕ್ಷವಾದಿರಿ. ಅದರ ನೆರಳಲ್ಲಿ, ಆಶ್ರಯದಲ್ಲಿ ಅನೇಕ ಅನಾಥ ಪಕ್ಷಿಗಳು ಬೆಳಕು ಕಂಡವು.'

'ನಾನು ಮಾಡಿದೆನೆಂಬ ಸೊಕ್ಕು ಯಾರಿಗೂ ಬರಬಾರದು ರಾಜಶೇಖರ. ಶಿವ ಸಂಕಲ್ಪ ಹಾಗಿತ್ತು. ಅದನ್ನು ನನ್ನ ಮೂಲಕ ಈಡೇರಿತು. ಎಲ್ಲವನ್ನೂ ನಾನು ಪರಶಿವನ ಪೂಜೆ ಎಂದೇ ಭಾವಿಸಿ ಮಾಡಿಕೊಂಡು ಬಂದೆ. ಸೇವೆಗೆ ಮಿಗಿಲಾದ ಪೂಜೆ ಬೇರೆ ಯಾವುದಿದ್ದೀತು. ಅದನ್ನು ನನ್ನ ಶಕ್ತಿ ಇದ್ದಷ್ಟು ಪ್ರಮಾಣದಲ್ಲಿ ನಡೆಸಿಕೊಂಡು ಬಂದೆ. ಇನ್ನು ಮುಂದೆ ಈ ನೊಗ ಹೊರುವ ಮತ್ತೊಂದು ಚೇತನವನ್ನು ಬಹಳ ದಿನಗಳಿಂದಲೂ ಅರಸುತ್ತಿದ್ದೆ. ಇಂದಿಗೆ ಹದಿನೆಂಟು ವರ್ಷಗಳ ಹಿಂದೆ ನೀನು ಸಿಕ್ಕಿದೆ. ನಿನ್ನನ್ನು ಇಂದಿನವರೆಗೂ ಪರೀಕ್ಷಿಸಿದ್ದಾಯಿತು. ನೀನು ನನ್ನೆಲ್ಲ ಪರೀಕ್ಷೆಗಳಲ್ಲೂ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದೀಯೆ'

'ನಾನು ಧನ್ಯ! ಗುರುಪಿತನೆ ನನ್ನಲ್ಲಿ ದೋಷವೇನಾದರೂ ಇದ್ದರೆ......!'

'ಮನುಷ್ಯ ಎಂದ ಮೇಲೆ ದೋಷವಿಲ್ಲವಿರುತ್ತದೆಯೆ ? ದೋಷವಿದ್ದರೇನೇ ಮನುಷ್ಯ ಎನ್ನಿಸಿಕೊಳ್ಳುವುದು ! ಅದಿಲ್ಲದವನು ದೇವನೇ ಆಗಿಬಿಡುತ್ತಾನೆ! ಇರಲಿ ನಿನ್ನಲ್ಲಿ ನಾನು ಗುರುತಿಸಿದ್ದು ಮುಂಗೋಪ ಒಂದೇ !'

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

'ಕೆಲಸದ ಒತ್ತಡಕ್ಕೆ ಸಿಕ್ಕಾಗ ಬಿಡಿಸಿಕೊಳ್ಳಲಾಗದ ಮನಸ್ಸು ಕೋಪಕ್ಕೆ ಪ್ರವೇಶಾವಕಾಶ ನೀಡುತ್ತೆ ಗುರುವೆ !

'ಒಪ್ಪುತ್ತೇನೆ. ಆದರೆ ಕೋಪ ಅನರ್ಥಕ್ಕೆ ಸಾಧನ ಎಂಬುದನ್ನು ಮರೆಯಬೇಡ. ರಾಘವಾಂಕ ಹೇಳಿದಂತೆ ಅತಿ ಮುನಿವ ಯತಿ ಹೊಲೆಯ !'

'ತಿದ್ದಿಕೊಳ್ಳುತ್ತೇನೆ ಗುರುದೇವ: ತಮ್ಮ ಅನುಗ್ರಹ ಆಶೀರ್ವಾದಗಳಿರಲಿ !'

'ಅನ್ಯರ ಅನುಗ್ರಹ ಆಶೀರ್ವಾದಗಳೇ ವ್ಯಕ್ತಿಯಲ್ಲಿ ವ್ಯಕ್ತಿತ್ವವನ್ನು ತಂದು ತುಂಬುವುದಿಲ್ಲ. ವ್ಯಕ್ತಿ ತನ್ನ ತನವನ್ನು ತಾನೇ ಬೆಳೆಸಿಕೊಳ್ಳಬೇಕು. ಅವನ ಜೀವನದ ಶಿಲ್ಪಿ ಅವನೇ. ಬೇರಾರೂ ಅಲ್ಲ ! ರಾಜಶೇಖರ, ನಿನ್ನನ್ನು ಬೇಕೆಂದೇ ಈ ಆಶ್ರಮಕ್ಕೆ ಕರೆತಂದೆ. ಸುಮಾರು ಒಂದು ತಿಂಗಳಿಂದಲೂ ಉತ್ತರ ಕರ್ನಾಟಕದ ಹಲವು ಭಾಗಗಳನ್ನು ಸುತ್ತಿ ಬಂದ ನಿನಗೆ ಈ ಶಿವಯೋಗ ಮಂದಿರ ವಿಶ್ರಾಂತಿ ತಾಣವಾಗಲಿ ಎಂಬುದು ನಮ್ಮ ಅಪೇಕ್ಷೆ. ಅಂತೆಯೇ... ಅಂತೆಯೇ...'

'ಅಪ್ಪಣೆಯಾಗಲಿ ಗುರುದೇವ'

'ಅಂತೆಯೇ ನಿನಗೂ ಇದು ತರಬೇತಿ ಕೇಂದ್ರ. ಭವಿಷ್ಯದಲ್ಲಿ ನಾನೊಂದು ಕನಸು ಕಾಣುತ್ತಿದ್ದೇನೆ. ಅದು ನಿನ್ನಿಂದಲೇ ನೆರವೇರುತ್ತದೆಂಬ ನಂಬಿಕೆ ನನ್ನಲ್ಲಿದೆ. ಆದ್ದರಿಂದ ಲೋಕಶಿಕ್ಷಣ ನಿನಗಾಗಲಿ ಎಂದು ಸ್ನಾತಕೋತ್ತರ ಶಿಕ್ಷಣ ಪಡೆದು ಬಂದ ನಿನ್ನನ್ನು ದೇಶ ಪರ್ಯಟನೆ ಮಾಡಿಸಿದೆ. ಸನ್ಯಾಸಿಯಾದವನಲ್ಲೂ ವ್ಯವಹಾರ ಜ್ಞಾನ ಸಾಕಷ್ಟಿರಬೇಕು. ಇಲ್ಲವಾದರೆ ಅವನು ಬದುಕು ಮಾಡುವುದು ಕಷ್ಟವಾಗುತ್ತದೆ ರಾಜಶೇಖರ.'

'ವೀರ ವಿರಕ್ತನಿಗೆ ಅನುರಾಗದ ಹಂಗೇಕೆ ಗುರುದೇವ !'

'ಬದುಕಿನ ಅನಿವಾರ್ಯತೆ ಅಗತ್ಯತೆಗಳನ್ನು ಪೂರೈಸುವುದರ ಅರ್ಥ ಅನುರಾಗ ಎಂದಲ್ಲ ರಾಜಶೇಖರ. ಸಾಮಾನ್ಯ ಮಾನವ ಲೋಕ ಕಾಮನೆಯಲ್ಲಿ ಸದಾ ನಿರತನಾಗಿರುತ್ತಾನೆ. ಅವನು ಕಾಮಿ. ಆದರೆ ವಿರಕ್ತನಾದವನು ಲೋಕ ಕಲ್ಯಾಣದ ಚಿಂತನೆಯಲ್ಲಿರುತ್ತಾನೆ. ಅವನು ಯೋಗಿ. ಆದರೆ ಶಿವಯೋಗಿಯೂ ಮನುಷ್ಯನೇ ಅಲ್ಲವೆ ? ನಿನ್ನ ಅರ್ಥದಲ್ಲಿ ನೋಡಿದರೆ ಅವನು ಸೇವಿಸುವ ಉಸಿರು, ಕುಡಿಯುವ ನೀರು ಇವೂ ಅಪೇಕ್ಷೆಯ ವಸ್ತುಗಳಾಗಿ ಬಿಡುತ್ತವೆ. ಆದರೆ ವಸ್ತುಸ್ಥಿತಿ ಹಾಗಿಲ್ಲ. ಆತ್ಮನನ್ನು ಅರಸಲು ಹೊರಟ ಯೋಗಿ, ಆತ್ಮನಿಗೆ ಆವಾಸಸ್ಥಾನವಾದ ಶರೀರವನ್ನು ಸಂರಕ್ಷಿಸಿಕೊಳ್ಳಲೇ ಬೇಕಲ್ಲವೆ ? ಈ ಸಂರಕ್ಷಣೆ ಅನುರಾಗ ಅಥವಾ ಕಾಮನೆ ಅಲ್ಲ ; ಅನಿವಾರ್ಯ. ಅಲ್ಲದೆ ಶರಣರು ಎಂದಿಗೂ ಲೋಕವನ್ನು ತ್ಯಜಿಸಿದವರಲ್ಲ, ದೇಹವನ್ನು ದೂಷಿಸಿದವರಲ್ಲ. ಪರದ ಸಾಧನೆಗೆ ಇಹವೇ ಮೂಲ ಆಧಾರ ಎಂದರು. 'ಇಲ್ಲಿ ಸಲ್ಲುವವರು ಅಲ್ಲಿ ಸಲ್ಲುವರು' ಎಂಬುದರ ಅರ್ಥ ಏನು ? ಮೊದಲು ಇಲ್ಲಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಂದರೆ ಇಹದಲ್ಲಿ ಋಜುವಾದ, ಸೈತಾದ ಬದುಕು ಮಾಡಬೇಕು. ಹಾಗೆ ಮಾಡಿದರೆ ಸಾಕು ಪರದ ಗೊಡವೆ ಬೇಡವೇ ಬೇಡ. ಅಂತೆಯೇ 'ದೇಹವೇ ದೇಗುಲ' ಅಂದರು. ಅಂತಹ ದೇಗುಲದ ಶುದ್ಧಿ, ಅಸ್ತಿತ್ವ ಆದರ ಒಡೆಯನದಲ್ಲವೆ ?'

'ಆದರೂ ವಿರಕ್ತನಾದವನು ನಿರ್ಲಿಪ್ತನಾಗಿರಬೇಕಲ್ಲವೆ ಗುರುವೇ !'

'ಸತ್ಯ. ನಿರ್ಲಿಪ್ತತೆ ಬೇಕು. ಅಂಟಿಯೂ ಅಂಟದಂತಿರುವ ಸ್ಥಿತಿ ಅವನದು. ಆದರೆ ವಿರಕ್ತ ಸೋಮಾರಿ ಅಲ್ಲ. ಶಿವಯೋಗಿ ಶವಯೋಗಿ ಅಲ್ಲ. ಭಕ್ತರ ಮನೆಯಲ್ಲುಂಡು ಬಸವಣ್ಣನ ಗುಡಿಯಲ್ಲಿ ನಿದ್ದೆ ಹೋಗುವ ಉಂಡಾಡಿಯನ್ನು ನಾನು ಸ್ವಾಮಿ ಎಂದು ಗೌರವಿಸುವುದಿಲ್ಲ. ಶಿವಯೋಗಿ ಯಾವಾಗಲೂ ಕರ್ಮಯೋಗಿ. ಕರ್ಮಯೋಗದ ಮುಖಾಂತರವೇ ಅವನು ಶಿವಯೋಗವನ್ನು ಸಾಧಿಸುತ್ತಾನೆ ; ಸಿದ್ಧಿಸಿಕೊಳ್ಳುತ್ತಾನೆ. 'ಶಿವಯೋಗಿಯ ಶರೀರವಾದೊಡಂ ವೃಥಾ ಸಮೆಯಲಾಗದು ಅನುಗೊಂಬನಿತು ಕಾಯಕಂ ನಡೆಯುತಿರಬೇಕು.' ಎಂಬ ಶಿವಯೋಗಿ ಸಿದ್ಧರಾಮನ ಜಾಯಮಾನಕ್ಕೆ ಸೇರಿದವನು ನಾನು. ನನ್ನಂತೆಯೇ ನನ್ನ ಗುರು ಹಾನಗಲ್ಲ ಕುಮಾರ ಶಿವಯೋಗಿಗಳು.'

'ಹಾನಗಲ್ಲ ಕುಮಾರ ಶಿವಯೋಗಿಗಳು......?'

'ಹೌದು, ಬಾನು ಮಳೆಗರೆಯುತ್ತದೆ, ಭೂಮಿ ಬೆಳೆ ಬೆಳೆಯುತ್ತದೆ ; ನಿಜ. ಆದರೆ ಪುರುಷ ಪ್ರಯತ್ನವಿಲ್ಲದೆ ಬೆಳೆ ದೊರೆಯಲು ಸಾಧ್ಯವೆ ? ಎಂಬ ಪ್ರಶ್ನೆ ಅವರದು. ಶಿವಯೋಗಿಯೇ ಆಗಿರಲಿ, ಅವನು ಎಲ್ಲಿನವರೆಗೆ ಅನ್ನ ತಿನ್ನುವನೊ, ನೀರು ಕುಡಿವನೊ, ಗಾಳಿಸೇವಿಸುವನೊ ಅಲ್ಲಿನವರೆಗೂ ಅವನು ಅದಕ್ಕಾಗಿಯಾದರೂ ಕಾಯಕ ಮಾಡಬೇಕು ಎಂಬುದು ಅವರ ಸಿದ್ಧಾಂತ. ರಾಜಶೇಖರ, ಹಾನಗಲ್ಲಪ್ಪಗಳೇ ನನಗೆ ಸ್ಫೂರ್ತಿ, ಶಕ್ತಿ, ಸತ್ತ್ವ ಎಲ್ಲ. ಅವರು ಮೊದಮೊದಲು ಆಲಸ್ಯ ಪ್ರಿಯರೇ ಆಗಿದ್ದರು. ಆದರೆ ಒಂದು ದಿನ ಒಂದು ಘಟನೆ ನಡೆಯಿತು. ಅದು ಅವರ ಬದುಕಿಗೇ ಒಂದು ಹೊಸ ತಿರುವು ಕೊಟ್ಟಿತು.'

'ಯಾವ ಘಟನೆ ?'

'ಹಾನಗಲ್ಲ ವಿರಕ್ತ ಮಠದಲ್ಲಿ ಒಮ್ಮೆ ಒಂದು ಸಮಾರಂಭ ನಡೆದಿತ್ತು. ಅಂದು ಲೆಕ್ಕವಿಲ್ಲದಷ್ಟು ಜನ ಭಕ್ತರು ಬಂದು ಮಠದಲ್ಲಿ ತುಂಬಿದ್ದರು. ಊಟ ಮಾಡುವವರು ಮಾಡುತ್ತಿದ್ದರು ; ಆಟ ಆಡುವವರು ಆಡುತ್ತಿದ್ದರು. ಕುಮಾರಸ್ವಾಮಿಗಳು ಮಠದ ಹೊರಾಂಗಣದಲ್ಲಿ ತೂಗುಯ್ಯಾಲೆ ಹಾಕಿಸಿಕೊಂಡು ಅದರ ಮೇಲೆ ಆರಾಮವಾಗಿ ಕುಳಿತಿದ್ದರು. ಬಂದುಹೋಗುವ ಭಕ್ತರು ಸ್ವಾಮಿಗಳಿಗೆ ನಮಸ್ಕರಿಸಿ ಕಾಣಿಕೆ ಕೊಡುತ್ತಿದ್ದರು. ಬಹುಶಃ ಆ ಕಾಣಿಕೆಯ ಆಸೆಗಾಗಿಯೇ ಸ್ವಾಮಿಗಳು ಅಲ್ಲಿ ಕುಳಿತಿದ್ದಾರೇನೋ ಎನ್ನುವಂತಿದ್ದರು. ಜೊತೆಗೆ ನಮ್ಮ ಬೆಳಗಾವಿ ಜಿಲ್ಲಾದವನೊಬ್ಬ ಅರೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹುಚ್ಚ ಮನುಷ್ಯ ವೇಷ ಹಾಕಿಕೊಂಡು ಕುಣೀತಿದ್ದ. ಅವನ ಹಾಡೋ ದೇವರಿಗೇ ಪ್ರೀತಿ!

'ಮುತ್ತಲಗೇರಿ ಮಣ್ಣ
ಗೋಕಾಕದ ಹೆಣ್ಣ
ಯಾದವಾಡದ ಸುಣ್ಣ
ಕೊರ್ತಿ ಕೊಲ್ಲಾರದ ಗಿಣ್ಣ,'
ಹಿ ಹ್ಹೀ....... ಹಿ ಹ್ಹೀ.......

ಅನ್ನುತ್ತಿದ್ದ !

ಹತ್ತಿರವಿದ್ದವರು ಅವನನ್ನು ಪುಲಾಯಿಸಿಕೊಂಡು ಮತ್ತೆ ಮತ್ತೆ ಹಾಡು ಕೇಳಿ ನಲಿಯುತ್ತಿದ್ದರು. ಹತ್ತಿರಿದ್ದ ಹಾನಗಲ್ಲ ಕುಮಾರಸ್ವಾಮಿಗಳೂ ಬಹುಶಃ ಆ ಹಾಡು, ಕುಣಿತ ಕೇಳಿರಲಿಕ್ಕೆ, ನೋಡಿರಲಿಕ್ಕೆ ಸಾಕು. ಆದರೆ ಅವರೂ ಒಂದು ಮಾತು ಆಡಲಿಲ್ಲ; ಭಕ್ತರಂತೂ ಸರಿಯೇ ಸರಿ. ಇದೆಲ್ಲವನ್ನೂ ನೋಡಿದ ಓರ್ವ ಶರಣನಿಗೆ ಅದು ಸೇರಿಕೆಯಾಗಲಿಲ್ಲ. ಸ್ವಾಮಿಗಳೂ ಸಹ ತಮ್ಮ ಕರ್ತವ್ಯ ಮರೆತು ಲೋಕ ವಿನೋದದಲ್ಲಿ ಲೋಲುಪ್ತರಾಗಿರುವುದು ಅವನಿಗೆ ಸರಿ ಎನಿಸಲಿಲ್ಲ. ಅಲ್ಲದೆ ಬಂದ ಜನ ಅನ್ನಕ್ಕಾಗಿಯೇ ಬಾಯಿ ತೆರೆದು ನಿಂತಿದ್ದರು. ಬೆಳಗಿನಿಂದ ಸಂಜೆವರೆಗೂ ತಿನ್ನುವುದೇ ಅವರ ಬದುಕಾಗಿತ್ತು! ಇನ್ನು ಕೆಲವರು ಯುವಕ ಯುವತಿಯರು ಪ್ರೇಮ ಸಲ್ಲಾಪವನ್ನೂ, ಪ್ರಣಯ ಚೇಷ್ಟೆಗಳನ್ನೂ ಅಲ್ಲಿ ಇಲ್ಲಿ ನಡೆಸುತ್ತಿದ್ದರು. ಆದರೆ ಇವಾವನ್ನೂ ಗಮನಿಸಿದೆ ಸ್ವಾಮಿಗಳು ಐಷಾರಾಮವಾಗಿ ಉಯ್ಯಾಲೆ ಮಣೆಯ ಮೇಲೆ ಕುಳಿತು ಜೋಕಾಲಿ ಆಡುತ್ತಿದ್ದರು.

ಇದೆಲ್ಲವನ್ನು ನೋಡಿದ ಆ ಶರಣನಿಗೆ ಏನೇನೋ ಆಲೋಚನೆಗಳು.

'ಛೇ ನಮ್ಮ ಮಠ ಮಾನ್ಯಗಳು ಯಾವ ಸ್ಥಿತಿಗೆ ಬರುತ್ತಿವೆ. ಭೋಗಿಗಳ ಭೋಗ ಭೂಮಿಗಳಾಗುತ್ತಿವೆ. ವಿದ್ಯಾಮಂದಿರಗಳೂ, ಸಂಸ್ಕೃತಿಯ ಜನ್ಮಸ್ಥಳಗಳೂ, ಸಮಾಜ ಸೇವಾ ತರಬೇತಿ ಕೇಂದ್ರ, ಆದ, ಆಗಬೇಕಾದ ಮಠಗಳು ಸ್ವಾರ್ಥಿಗಳ, ವಿಷಯ ಲಂಪಟರ ಆಟದ ಮೈದಾನಗಳಾಗುತ್ತಿವೆ. ಸ್ವಾಮಿಗಳವರಿಗೆ ಸಮಾಜದ ಬಗ್ಗೆ, ಧರ್ಮ ಸಂಸ್ಕೃತಿಗಳ ಬಗ್ಗೆ ಕಳಕಳಿಯೇ ಇಲ್ಲವಾಗುತ್ತಿದೆ. ಸೋಮಾರಿಗಳು, ಮೈಗಳ್ಳರು, ಹಿಟ್ಟು ಬಡುಕರು ಬಂದುಸೇರುವ ಹೆಗ್ಗಣದ ಗೂಡುಗಳಾಗುತ್ತಿವೆ ನಮ್ಮ ಮಠಗಳು!' ಅದು ಸರಿ, ಈ ಮಠದ ಕುಮಾರಸ್ವಾಮಿಗಳೂ ಇಷ್ಟು ಆಲಸ್ಯ ಮನಸ್ಕರಾಗಿ, ನಿರ್ಲಿಪ್ತರಾಗಿ, ಕಂಡರೂ ಕಾಣದಂತೆ ಕೂರಬೇಕೆ ! ಇರಲಿ ಇವರನ್ನು ಇಂದು ಎಚ್ಚರಿಸಿಯೇ ಹೋಗಬೇಕು !' ಎಂದುಕೊಂಡ ತನಗೆ ತಾನೆ.

'ಸಂಜೆಯವರೆಗೂ ಸ್ವಾಮಿಗಳ ಉಯ್ಯಾಲೆಗೆ ಎದುರು ತುಸು ದೂರದಲ್ಲಿ ಕುಳಿತು ಸ್ವಾಮಿಗಳನ್ನು ಒಂದೇ ಸಮನೆ ನೋಡುತ್ತ ಕುಳಿತ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಜೆ ಆಯಿತು.

ಭಕ್ತರೆಲ್ಲರೂ ಒಬ್ಬೊಬ್ಬರಾಗಿ ಹೋದರು.

ಗಲಾಟೆ ಕಡಿಮೆ ಆಯಿತು.

ಆಗ ಸ್ವಾಮಿಗಳ ದೃಷ್ಟಿ ಆ ಶರಣನ ಕಡೆ ಹರಿಯಿತು. ಆ ಶರಣನು ಸ್ವಾಮಿಗಳೇ ಕರೆಯಲಿ, ಮಾತನಾಡಿಸಲಿ ಎಂದು ಹಟಹಿಡಿದು ಕುಳಿತವನಂತಿದ್ದ. ಸ್ವಾಮಿಗಳು ಬಂದು ಹೋಗುವ ಒಬ್ಬಿಬ್ಬ ಭಕ್ತರನ್ನು ಮಾತನಾಡಿಸಿ, ಆಶೀರ್ವದಿಸಿ ಕಳುಹಿಸಿದ ಮೇಲೆ 'ಶರಣರೆ' ನೀವು ಬಹಳ ಹೊತ್ತಿನಿಂದಲೂ ಹಾಗೇ ಕುಳಿತಿರುವಿರಲ್ಲಾ! ಪ್ರಸಾದ ಆಯಿತೇ ?

'ಪ್ರಸಾದ! ಹ್ಞು! ತುತ್ತಿನ ಚೀಲಕ್ಕೆ ಕತ್ತೆಗಳಂತೆ ಸಿಕ್ಕಿದ್ದನ್ನೆಲ್ಲಾ ತುಂಬಿ ಕೊಳ್ಳುವುದು ಪ್ರಸಾದವೆ ?'

'ಕ್ಷಮಿಸಿ, ನಾನು ಮಾತನಾಡಿಸಲಿಲ್ಲ ಎಂದು ಸಿಟ್ಟಿರಬೇಕು ನಿಮಗೆ. ಹೋಗಲಿ, ನನ್ನಿಂದ ಏನಾದರೂ ಆಗಬೇಕಿತ್ತೆ ?'

'ಹೌದು ಆಗಬೇಕಿತ್ತು'

'ಏನು ?'

'ಆ ತೂಗು ಮಂಚದಿಂದ ನೀವು ಈ ಕೆಳಗಿಳಿಯಬೇಕಿತ್ತು!'

'ಅದರಿಂದಾಗುವ ಪ್ರಯೋಜನ'

'ಲೋಕ ಕಲ್ಯಾಣ. . . .ಸ್ವಾಮಿಗಳೇ, ನೀವು ತೂಗು ಮಂಚದ ಮೇಲೆ ಲೋಲುಪ್ತರಾಗಿರಿ. ಅಲ್ಲಿ ಸಮಾಜ ಸರ್ವನಾಶವಾಗುತ್ತಿದೆ. ಅದನ್ನು ಕೇಳುವವರು ಯಾರಿದ್ದಾರೆ ? ಧರ್ಮ ಮತ್ತು ಸಮಾಜಗಳು ನಮಗೂ ನಿಮ್ಮಂತಹ ಸ್ವಾಮಿಗಳಿಗೂ ತಂದೆ ತಾಯಿ ಇದ್ದ ಹಾಗಲ್ಲವೆ. ನಾವೂ ನೀವೂ ಹೆತ್ತು ಹೊತ್ತು ಸಾಕಿ ಸಲಹಿದ ತಂದೆ ತಾಯಂದಿರನ್ನು ಮರೆತು ಅನ್ಯಾಯ ಮಾಡುತ್ತಿಲ್ಲವೆ ? ನೀವೇನೋ ವಿರಕ್ತರು. ಸ್ವಾಮಿಯಾದ ಮೇಲೆ ಪೂರ್ವಾಶ್ರಮವನ್ನು ಮರೆಯಬೇಕು ಎನ್ನುವವರು. ಆದರೆ, ಸಮಾಜಕ್ಕೆ, ರಾಷ್ಟ್ರಕ್ಕೆ ನಿಮ್ಮದಾದ ಜವಾಬ್ದಾರಿ ಇದೆ. ಅದು ತಿಳಿದಿದೆಯೋ ? ರೋಮ್‌ನಗರ ಹತ್ತಿ ಉರಿಯುತ್ತಿದ್ದಾಗ, ನೀರೋಚಕ್ರವರ್ತಿ ಪಿಟೀಲು ಬಾರಿಸುತ್ತಾ ಕುಳಿತಿದ್ದನಂತೆ. ಅದೇ ರೀತಿ ವೀರಶೈವ ಧರ್ಮದ ಮೇಲೆ ದುಷ್ಟ ಶಕ್ತಿಗಳ ದುರಾಕ್ರಮಣ ಆಗುತ್ತಿದೆ. ಅದರ ಪತನಕ್ಕಾಗಿ ಅನ್ಯ ಧರ್ಮಗಳು ಜಾತೀಯತೆಯ ಮುಖವಾಡ ಹಾಕಿಕೊಂಡು ರಣಹದ್ದಿನಂತೆ ಕಾಯುತ್ತಿವೆ. ಮತ್ತೆ ವೀರಶೈವರೇ ವೀರಶೈವದ ವಿನಾಶಕ್ಕೆ ತೊಡಗಿದ್ದಾರೆ. ಅವರಲ್ಲೇ ಗುರು, ವಿರಕ್ತ, ಮೇಲು, ಕೀಳು, ಗುರು, ಜಗದ್ಗುರು—ಹೀಗೆ ಇಬ್ಬಂದಿ ಹುಟ್ಟಿಸಿ ತಮ್ಮ ತಮ್ಮಲ್ಲೇ ಕಚ್ಚಾಡಿ, ತಮ್ಮ ಗೋರಿಯನ್ನು ತಾವೇ ತೋಡಿಕೊಳ್ಳುತ್ತಿದ್ದಾರೆ. ಅವರಲ್ಲಿ ಸಂಘಟನೆ ತರುವುದು ಸ್ವಾಮಿಗಳಾದ ನಿಮ್ಮ ಕರ್ತವ್ಯವಲ್ಲವೆ ? ಅವರಲ್ಲಿ ಕರ್ತವ್ಯ ಜಾಗೃತಿ ಉಂಟು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಾಡುವುದು ಧರ್ಮ ಸಮಾಜಗಳ ನೇತಾರರಾದ ನಿಮ್ಮ ಕರ್ತವ್ಯವಲ್ಲವೆ? ಕೇಳಿ, ಸ್ವಾಮಿಗಳೇ, ಎಷ್ಟು ದಿವಸ ನೀವು ಹೀಗೆ ಉಯ್ಯಾಲೆ ಮಣೆಯ ಮೇಲೆ ವಯ್ಯಾರದ ಬದುಕು ನಡೆಸಬಲ್ಲಿರಿ ?'

'ಕ್ಷಮಿಸಿ, ಶರಣರೆ, ನಾನಿಲ್ಲಿ ತೂಗು ಮಂಚದ ಮೇಲೆ ಮಲಗಿ ಮೋಜು ಮಾಡುತ್ತಿಲ್ಲ'

'ಇಲ್ಲ ನಿಜ. ಆದರೆ ಪ್ರಪಂಚವನ್ನು ಮರೆತಿದ್ದೀರಿ. ನಿಮ್ಮ ಕರ್ತವ್ಯವನ್ನು ನೀವು ಮರೆತಿದ್ದೀರಿ.'

'ನೀವೇ ಹೇಳಿ, ನಾನೇನು ಮಾಡಬೇಕು.'

'ಮೊದಲು ಮಂಚ ಇಳಿದು ಬನ್ನಿ. ಹೇಳುತ್ತೇನೆ.'

ಹಾನಗಲ್ಲ ಕುಮಾರಸ್ವಾಮಿಗಳು ತೂಗು ಮಂಚದಿಂದ ಇಳಿದು, ಹಾವುಗೆಗಳನ್ನು ಮೆಟ್ಟಿಗೊಂಡು ಭಕ್ತನ ಬಳಿಗೆ ಬಂದರು.

'ಹೇಳಿ, ಶರಣರೆ, ನನ್ನಿಂದೇನಾಗಬೇಕು'

'ಲೋಕಕಲ್ಯಾಣವಾಗಬೇಕು, ಮನುಕುಲದ ಉದ್ಧಾರ ಆಗಬೇಕು, ವೀರಶೈವ ಧರ್ಮ ಜಾಗೃತಿ ಆಗಬೇಕು, ಮಾನವ ಕೋಟಿಗೆ ಲೇಸು ಸಂಭವಿಸಬೇಕು.'

'ಹೇಗೆ ?'

'ಸೇವೆಯಿಂದ ಸ್ವಾಮಿಗಳೆ, ಅಧಿಕಾರ ಸ್ವೇಚ್ಛಾಚಾರದ ವೇದಿಕೆಯಲ್ಲ, ಅದು ಸೇವೆಯ ಕರ್ಮಭೂಮಿ; ಸಮಾಜ ವಂಚಿತರಾದ ನೀವು ಮೊದಲು ಸಮಾಜ ಸೇವಕರಾಗಬೇಕು. ನೀವು ಹುಟ್ಟಿನಿಂದ ಜಂಗಮರು. ಅಂದರೆ ಶಿವನ ಪ್ರತಿನಿಧಿಗಳು; ಪ್ರತ್ಯಕ್ಷ ಪರಮೇಷ್ಠಿಗಳು. ಅವನ ಸತ್ ಶಕ್ತಿಯನ್ನು ಸಂವಹಿಸುವ ಸಮರ್ಥ ಸಾಧನ ಸಂಪತ್ತಿಗಳು. ನೀವು ಕೈಕಟ್ಟಿ ಕುಳಿತರೆ ಲೋಕದ ಗತಿ ಹೇಗೆ ?'

'ನನ್ನೊಬ್ಬನಿಂದ, ಅದರಲ್ಲೂ ನನ್ನಂತಹ ಅಲ್ಪ ಜೀವಿಯಿಂದ ಆ ಮಹತ್ ಕಾರ್ಯ ಸಾಧ್ಯವೆ ಶರಣರೆ ?'

'ನೋಡಿ ಸ್ವಾಮಿಗಳೆ, ನಾನು ಅಲ್ಪ, ಸಣ್ಣವ—ಎಂಬ ಭಾವನೆಯೇ ತಪ್ಪು. ಮನುಷ್ಯನನ್ನು ಅಹಂಕಾರ ಹೇಗೆ ನಾಶಮಾಡುತ್ತದೆಯೊ, ಹಾಗೆ ಈ ಬಗೆಯ ಕೀಳರಿಮೆಯೂ ಹಾಳು ಮಾಡುತ್ತದೆ. ತಿಳಿಯಿರಿ. ನಾನು ಮೊದಲೇ ಹೇಳಿದಂತೆ ನೀವು ಜಂಗಮರು. ಜಂಗು ಕಟ್ಟಿಕೊಂಡು, ಕಾವಿ ಕಪನಿ ಉಟ್ಟುಕೊಂಡು ಭಿಕ್ಷೆ ಬೇಡುವ ಭಿಕ್ಷುಕರಲ್ಲ. ಆದರೆ ನಿಮ್ಮ ಕೈಯಲ್ಲಿನ ಜೋಳಿಗೆ ಲೋಕೋದ್ಧಾರದ ಅಕ್ಷಯ ಪಾತ್ರೆ. ವಿಶ್ವದ ಸಂಪತ್ತನ್ನೇ ತನ್ನಲ್ಲಿ ಗರ್ಭೀಕರಿಸಿಕೊಂಡಿದೆ. ಅದರಿಂದ ಸಮಾಜವೇಕೆ ಸಾಮ್ರಾಜ್ಯವನ್ನೇ ಸೃಷ್ಟಿಸಬಹುದು.'

'ಅದಕ್ಕೆ ಮುಖ್ಯವಾಗಿ ಸಂಕಲ್ಪ ಸಿದ್ಧಿ ಬೇಕು. ಅಲ್ಲವೆ ?

'ಹೌದು ದೃಢಚಿತ್ತಬೇಕು. ಸಮರ್ಪಣ ಬುದ್ಧಿ ಬೇಕು. ಸಕಲವನ್ನೂ ಪ್ರೀತಿಸುವ, ಸಮಾನ ದೃಷ್ಟಿಯಿಂದ ನೋಡುವ ಸಮನ್ವಯ ಶಕ್ತಿ ಬೇಕು.'

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

'ಅವು ನನ್ನಲ್ಲಿ......?'

'ಇವೆ. ನಿಮ್ಮ ಜನನ ಆದದ್ದೇ ಸಮಾಜೋದ್ಧಾರಕ್ಕಾಗಿ. ನಿಮ್ಮ ದೇಹ, ಮನಸ್ಸು, ಭಾವ, ಭಾವನೆ, ಸುಖ, ಸಂಪತ್ತು, ಆಶೆ, ಭಾಷೆ—ಎಲ್ಲವೂ ದೀನದಲಿತರ ಉದ್ಧಾರಕ್ಕಾಗಿ. ಇಂದಿನಿಂದ ವಿಶ್ವಪರ್ಯಟನದಲ್ಲಿ ತೊಡಗಿ. ಹನ್ನೆರಡು ವರ್ಷಗಳ ಕಾಲ ಹಾನಗಲ್ಲ ಮಠಕ್ಕೆ ಕಾಲಿಡಬೇಡಿ. ಹೊರಗಿದ್ದುಕೊಂಡು ಜಗತ್ತಿನ ಗುಣದೋಷಗಳನ್ನು ಗುರುತಿಸಿ, ಅದರ ಒಳಿತಿಗಾಗಿ ದುಡಿಯಿರಿ, ಆತ್ಮ ಕಲ್ಯಾಣವೇ ಸರ್ವಶ್ರೇಷ್ಠ ಅಲ್ಲ. ಆತ್ಮಕಲ್ಯಾಣದ ಜೊತೆಯಲ್ಲಿ ವಿಶ್ವಕಲ್ಯಾಣವೂ ಆಗಬೇಕು. ವ್ಯಷ್ಟಿಯೆಂದು ಸ್ವಾರ್ಥ, ಸುಖ; ತನ್ನ ಮಿತಿ ಉಳ್ಳದ್ದು ; ಸಮಷ್ಟಿಯೆಂದು ನಿಸ್ವಾರ್ಥ ಸೇವೆ, ಪ್ರಗತಿ.'

'ಇಷ್ಟು ಬಗೆಯಲ್ಲಿ ಬೋಧಿಸಿದ ನೀವು ಯಾರು ಎಂದು ಕೇಳಬಹುದೆ?'

'ನಾನು ನಿಮ್ಮ ಚರಣ ಸೇವಕ'

'ಅಲ್ಲ. ಸೇವಕ ಅಲ್ಲ ಸ್ವಾಮಿ......ನನ್ನ ಅಜ್ಞಾನಾಂಧಕಾರವನ್ನು ದೂರಮಾಡಲು ಬಂದ ಜ್ಯೋತಿ; ಪರಂಜ್ಯೋತಿ; ಆ ಶಿವನ ಚೈತನ್ಯ ಜ್ಯೋತಿ. ನೀವು ನನ್ನ ಭಾಗದ ಶಿವ, ಶಂಕರ, ಜಗತ್ಪಿತನಾದ ಪರಮೇಶ್ವರ,'

'ಹಾಗೆಲ್ಲ ನುಡಿದು ನನ್ನನ್ನು ಪಾಪ ಸುತ್ತಿಕೊಳ್ಳುವಂತೆ ಮಾಡಬೇಡಿ. ಕೇಳಿ, ನಾನು ನಿಮ್ಮ ಚರಣಸೇವಕ. ಬಾಗಲಕೋಟೆಯಿಂದ ಬಂದವನು. ಹೆಸರು ಮಲ್ಲಣ್ಣ ಮಾಸ್ತರ!'

'ಮಲ್ಲಣ್ಣ ಮಾಸ್ತರ! ಓಹ್! ಅಧ್ಯಾಪಕರೆ ತಾವು ಮಕ್ಕಳಿಗೆ ಮಾತ್ರ ಗುರುಗಳಲ್ಲ, ನನಗೂ ಗುರುಗಳು. ನನಗೊಂದು ಮಹಾವಿದ್ಯೆಯನ್ನು ಹೇಳಿಕೊಟ್ಟ ಮಹಾಗುರು.'

'ಹಾಗನ್ನಬಾರದು......ದಯವಿಟ್ಟು ಹಾಗನ್ನಬಾರದು. ಅದು ನನಗೆ ಶ್ರೇಯಸ್ಸಲ್ಲ.'

'ಹಾಗಲ್ಲ ಗುರುಗಳೆ, ಗುರು ಎನ್ನುವವನು ಮಾರ್ಗದರ್ಶಿ ಅಲ್ಲವೆ? ನೀವು ನನ್ನ ಮಾರ್ಗದರ್ಶಕರು. ಆ ಅರ್ಥದಲ್ಲಿ ನೀವು ನನ್ನ ಗುರು.'

'ಏನೇ ಇರಲಿ ಪೂಜ್ಯರೆ, ಇಂದೇ ನೀವು ಸತ್‌ಸಂಕಲ್ಪ ಮಾಡಿ. 'ಮನೆಗೆದ್ದು ಮಾರು ಗೆದೆ' ಎಂಬ ಗಾದೆಯಿದೆ. ಅದರಂತೆ ಮೊದಲು ವೀರಶೈವ ಸಮಾಜದ ಉದ್ಧಾರ, ಅನಂತರ ಮಾನವ ಕುಲದ ಉತ್ಥಾನ ಆಗಬಹುದೆ?'

'ಆಗಬಹುದು. ಆದರೆ ನೀವು ನನ್ನೊಡನಿರಬೇಕು'

'ಅವಶ್ಯವಾಗಿ, ನಾನು ನಿಮ್ಮ ನೆರಳು. ನೀವಿದ್ದೆಡೆಯಲ್ಲಿ ನಾನಿರುವೆ. ನಿಮ್ಮ ಸೇವೆ ಮಾಡುವೆ. ಹೂವಿನಿಂದ ನಾರು ಸ್ವರ್ಗ ಸೇರಿದಂತಾದರೆ ನಾನು ಧನ್ಯ.'

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

'ಮಲ್ಲಣ್ಣ ಮಾಸ್ತರೆ, ಶಿವನೇ ನಿಮ್ಮ ರೂಪದಲ್ಲಿ ಬಂದು ಜ್ಞಾನ ಬೋಧನೆ ಮಾಡಿದ; ನನ್ನ ಕರ್ತವ್ಯದ ಹಾದಿ ತೋರಿದ, ನಿಮ್ಮ ಅಪ್ಪಣೆ ಶಿವನ ಆಜ್ಞೆ ಎಂದೇ ಭಾವಿಸುತ್ತೇನೆ. ನನ್ನ ಧಮನಿಯಲ್ಲಿ ಹನಿ ರಕ್ತವಿರುವವರೆಗೂ ಧರ್ಮಕ್ಕಾಗಿ, ದೇಶಕ್ಕಾಗಿ, ಮನುಕುಲದ ಉದ್ಧಾರಕ್ಕಾಗಿ ದುಡಿಯುತ್ತೇನೆ. ಸಕಲ ಜೀವಾತ್ಮರಿಗೆ ಲೇಸನೇ ಬಯಸುತ್ತಾ ಎಲ್ಲರನ್ನೂ, ಎಲ್ಲವನ್ನೂ ತಮ್ಮ ವಾತ್ಸಲ್ಯದ ಕಕ್ಷೆಯಲ್ಲಿ ಅಪ್ಪಿಕೊಂಡು, ದುಃಖಿತಪ್ತರನ್ನು ಸಂತೈಸಿ, ಸಾಂತ್ವನಗೊಳಿಸಿದ ಶರಣ ಪಥದಲ್ಲಿ ನಾನೂ ಗಮಿಸುತ್ತೇನೆ. ಮನುಕುಲದ ಸೇವೆ ನನ್ನ ಬದುಕಿನ ಗುರಿ ಆಗಲಿ. ಅದಕ್ಕೆ ವಿಶ್ವಾತ್ಮನಾದ ಜಗದೀಶ್ವರನ ಅನುಗ್ರಹ ಇರಲಿ; ನಡೆಯಿರಿ ಶರಣರೆ; ಲೋಕ ಕಲ್ಯಾಣದ ಮಹಾ ಚಳವಳಿಯ ನಾಯಕರಾಗಿ ಹೊಸ ಕಹಳೆ ಊದೋಣ.'

* * * * *

'ನೋಡು ರಾಜಶೇಖರ, ಮನುಷ್ಯನ ಬದುಕಿನಲ್ಲಿ ಎಂತಹ ಅಮೃತ ಮುಹೂರ್ತ ವೊಂದು ಪ್ರಾಪ್ತವಾಗುತ್ತದೆ ಎಂಬುದಕ್ಕೆ ಹಾನಗಲ್ಲಪ್ಪಗಳ ಜೀವನದಲ್ಲಿ ಬಂದ ಮಲ್ಲಣ್ಣ ಮಾಸ್ತರ ಎಚ್ಚರಿಕೆಯ ಘಟನೆಯು ಒಂದು ಉತ್ತಮ ನಿದರ್ಶನ ಅಲ್ಲವೆ ?'

'ಹೌದು ಗುರುಗಳೆ'

'ಸಾಹಸ, ಸ್ವಪ್ರಯತ್ನ, ಸತ್‌ಸಂಕಲ್ಪ, ದೃಢನಿಶ್ಚಯ ಇವುಗಳಿಂದ ಯಾವುದೂ ಸಾಧ್ಯ. ನಾನು ನನ್ನ ಗುರು ಹಾನಗಲ್ಲ ಕುಮಾರಸ್ವಾಮಿಗಳ ಆಜ್ಞಾಧಾರಕ. ಅವರು ನಡೆದ ಹಾದಿಯಲ್ಲಿ ನಡೆಯುವವನು. ಹೊತ್ತು ಹೊತ್ತಿಗೂ ತುತ್ತಿಗಾಗಿ ಪರದಾಡುತ್ತಿದ್ದಾಗ ಬಡತನದ ನಿವಾರಣೆಯ ಕನಸು ಕಾಣುತ್ತಿದ್ದೆ; ಅಜ್ಞಾನ ನಿವಾರಣೆಯ ಹಾದಿ ಹುಡುಕುತ್ತಿದ್ದೆ. ದೀನದಲಿತರ ಸೇವೆಯ ಹಂಬಲವನ್ನು ತುಂಬಿಕೊಂಡಿರುತ್ತಿದ್ದೆ.'

'ಅದೀಗ ನನಸಾಗಿದೆ ಗುರುವರ್ಯ'

'ಅದು ಶಿವನ ಸಂಕಲ್ಪ, ನನ್ನ ಗುರು ಕುಮಾರೇಶನ ಕೃಪೆ.'

'ಅದಿರಲಿ ಗುರುದೇವ, ಹಾನಗಲ್ಲಪ್ಪಗಳು ಮಲ್ಲಣ್ಣ ಮಾಸ್ತರರು ಸೇರಿ ಮಾಡಿದ ಕರ್ತವ್ಯ ಲೋಕ ವಿಖ್ಯಾತ ಅಲ್ಲವೆ ?'

'ಹೌದು. ಮಲ್ಲಣ್ಣ ಮಾಸ್ತರರ ಪ್ರೇರಣೆಯಿಂದ ಪ್ರಚೋದಿತರಾದ ಹಾನಗಲ್ಲಪ್ಪಗಳು ಅವರನ್ನು ಜೊತೆಗಿಟ್ಟುಕೊಂಡು ನಡೆದರು. ನಾಡನ್ನೆಲ್ಲಾ ಕಾಲ್ಗಟ್ಟಿ, ಮೊದಲು ವೀರಶೈವ ಸಂಘಟನೆ ಮಾಡಿದರು. ಕ್ರಿ. ಶ. 1903 ಅಖಿಲ ಭಾರತ ವೀರಶೈವ ಮಹಾಸಭೆಯನ್ನು ಸ್ಥಾಪಿಸಿದರು. 1904 ರಲ್ಲಿ ಧಾರವಾಡದಲ್ಲಿ ಮತ್ತು 1906 ರಲ್ಲಿ ಬೆಂಗಳೂರಲ್ಲಿ ನಡೆದ ಅಧಿವೇಶನಗಳಿಗೆ ಸಿರಸಂಗಿ ಲಿಂಗರಾಜರೂ, 1907 ರಲ್ಲಿ ಸೊಲ್ಲಾಪುರದಲ್ಲಿ ನಡೆದ ಅಧಿವೇಶನಕ್ಕೆ ಸರ್ ಕೆ. ಪಿ. ಪುಟ್ಟಣ್ಣಶೆಟ್ಟರೂ,

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

1908 ರಲ್ಲಿ ಬಾಗಲಕೋಟೆಯಲ್ಲಿ ನಡೆದ ಅಧಿವೇಶನಕ್ಕೆ ವಾರದ ಮಲ್ಲಪ್ಪನವರೂ ಅಧ್ಯಕ್ಷರಾಗಿದ್ದರು. ಅದು ಮಲ್ಲಣ್ಣ ಮಾಸ್ತರರಿಗೆ ತೃಪ್ತಿ ತಂದಿತ್ತು.

'ಅನಂತರ, ನಾನು ಹಿಂದೆ ಹೇಳಿದಂತೆ ಈ ಶಿವಯೋಗ ಮಂದಿರವನ್ನು ಸ್ಥಾಪಿಸಿದರು. ಇದೊಂದು ಪ್ರಾಚೀನ ಮಾದರಿಯ ಗುರುಕುಲ. ಬಸವಾದಿ ಪ್ರಮಥರು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ತಾವೂ ನಡೆದು, ಜಗತ್ತನ್ನೂ ಅದರಲ್ಲಿ ನಡೆಯುವಂತೆ ಮಾಡಿದರು.'

'ಹಾನಗಲ್ಲಪ್ಪಗಳ ಈ ಸ್ತುತ್ಯ ಕಾರ್ಯಕ್ಕೆ ಇಡೀ ಕರ್ನಾಟಕವೇ ಬೆಂಬಲಿಸಿ ನಿಂತಿದ್ದಿರಬೇಕು ಅಲ್ಲವೇ ಗುರುದೇವ ?'

'ಹೌದು ಇಳಕಲ್ಲಿನ ಪೂಜ್ಯ ವಿಜಯ ಮಹಾಂತಸ್ವಾಮಿಗಳು ಹಾನಗಲ್ಲಪ್ಪಗಳ ಬೆನ್ನಲುಬಾಗಿ ನಿಂತಿದ್ದರು. ಅವರಿಗೆ ಜೊತೆಗೂಡಿಸಿದವರು ಸಿರಸಂಗಿ ಲಿಂಗರಾಜರು, ಒಂಟಿಮುರಿ ಲಖಮನ ಗೌಡರು, ಅರಟಾಳ ರುದ್ರಗೌಡರು, ಇಟಗಿ, ತಲ್ಲೂರು ಎಡಳ್ಳಿ ದೇಸಾಯರುಗಳು. ಆ ವೀರಶೈವ ಮಹಾಪುರುಷರುಗಳು ಸೇರಿದ್ದರಿಂದಲೇ ಪುಣ್ಯ ಕಾರ್ಯ ಬಹು ಯಶಸ್ವಿಯಾಗಿ ನೆರವೇರಿತು. ಲೋಕಕ್ಕೆ ಕಣ್ಣಾಯಿತು ಶಿವಯೋಗ ಮಂದಿರ.'

'ಇಂತಿಷ್ಟು ಕಾರ್ಯಕ್ಕೆ ಕಾರಣೀಭೂತರಾದ ಮಲ್ಲಣ್ಣ ಮಾಸ್ತರರನ್ನು ಶಿವ ಯೋಗಮಂದಿರ ಎಂದಿಗೂ ಮರೆಯದು ಗುರುದೇವ.'

'ಖಂಡಿತ' ಶಿವಯೋಗಮಂದಿರದ ಪ್ರತಿ ಇಟ್ಟಿಗೆಯೂ ಆ ಮಾಸ್ತರರ ಮತ್ತು ಹಾನಗಲ್ಲಪ್ಪಗಳ ಬೆವರುಂಡು ಆಗಿದೆ. ಅಂತೆಯೇ, ರಾಜಶೇಖರ, ಹಲವರ ಜೀವನದಲ್ಲಿ ಶಾಲಾ ಮಾಸ್ತರರ ಪಾತ್ರ ಬಹಳ ಮಹತ್ವದ್ದು ಎಂಬುದು ನನ್ನ ಭಾವನೆ.'

'ಸತ್ಯ ಗುರುದೇವ, ನಾವು ಉನ್ನತ ಶಿಕ್ಷಣವಿತ್ತವರನ್ನು ಮರೆತರೂ ಪ್ರಾಥಮಿಕ ಶಾಲೆಯಲ್ಲಿ 'ಅ ಆ ಇ ಈ' ಹೇಳಿಕೊಟ್ಟ ಈ ಮೊದಲ ಗುರುಗಳನ್ನು ಎಂದಿಗೂ ಮರೆಯುವುದಿಲ್ಲ !

'ಅವರು ತಾಯಿಯಾಗಿ ಸಲಹಿ, ಪ್ರೀತಿಸಿ, ಒಲಿಸಿ ಶಿಕ್ಷಣ ನೀಡುತ್ತಾರೆ. ಹಾನಗಲ್ಲ ಕುಮಾರಸ್ವಾಮಿಗಳಿಗೆ ಹೇಗೋ ಹಾಗೆ ನನ್ನ ಜೀವನದಲ್ಲೂ ಒಬ್ಬರು ಶಾಲಾ ಮಾಸ್ತರರೇ ತುಂಬು ಪ್ರಭಾವ ಬೀರಿದವರಿದ್ದಾರೆ.'

'ಯಾರು ಆ ಪುಣ್ಯಾತ್ಮರು ? ಅವರ ಹೆಸರೇನು ಗುರುಗಳೇ ?'

'ಅವರ ಹೆಸರು ಅದೃಶ್ಯಪ್ಪ ಮಾಸ್ತರರು ಎಂದು. ಅವರು ನನ್ನ ಮೊದಲ ವಿದ್ಯಾಗುರುಗಳು. ಅವರ ಜನ್ಮ ಸ್ಥಳ ಬೈಲಹೊಂಗಲ ತಾಲೂಕಿನ ಕಾದರವಳ್ಳಿ. ಚನ್ನಯ್ಯ ಮತ್ತು ಗಂಗಮ್ಮ ಎಂಬ ಪುಣ್ಯ ದಂಪತಿಗಳ ಮಕ್ಕಳು. ಅದೃಶ್ಯಪ್ಪನವರು ಲೋಕದಲ್ಲಿ ಇದ್ದೂ ಇಲ್ಲದಂತಿದ್ದವರು. ಅವರು ಚಿಕ್ಕೋಡಿ ತಾಲೂಕದಲ್ಲಿ ಶಿಕ್ಷಕ ರಾಗಿದ್ದಾಗ ದತ್ತವಾಡ ಬಾಬಾರವರಿಂದ ಅನುಗ್ರಹ ಪಡೆದು ಅದೃಶ್ಯಪ್ಪ ಶಿವಯೋಗಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಗಳಾಗಿದ್ದರು. ಆದರೂ ಮಹಾಸ್ತರಿಕೆ ಬಿಟ್ಟಿರಲಿಲ್ಲ. ಉಪಾಧ್ಯಾಯನಾಗುವುದು ಪೂರ್ವಜನ್ಮದ ಪುಣ್ಯ ಎಂದು ಹೇಳುತ್ತಿದ್ದರು.'

'ಅಹುದು ಸಾಕ್ರೆಟೀಸ್ ಕೂಡ ಇದೇ ಅಭಿಪ್ರಾಯ ಪಟ್ಟಿದ್ದನಂತೆ. ಆದರೆ ಅವನೇನೂ ಉಪಾಧ್ಯಾಯನಾಗಿರಲಿಲ್ಲ. ನ್ಯಾಯಶಾಲೆಯದಲ್ಲಿ ವಕೀಲನು ಜಗತ್ತಿಗೆ ಬೋಧೆ ಮಾಡುವ ನೀನು ಉಪಾಧ್ಯಾಯನೋ ಎಂದು ಪ್ರಶ್ನಿಸಿದನಂತೆ. ಅದಕ್ಕೆ ಸಾಕ್ರೆಟೀಸ್, ಇಲ್ಲ ಜ್ಞಾನದಾನ ಮಾಡುವ ಅಧ್ಯಾಪಕ ವೃತ್ತಿ ತುಂಬಾ ಪವಿತ್ರವಾದದ್ದು. ಕಲ್ಲನ್ನು ಕಲೆಯಾಗಿ ಮಾರ್ಪಡಿಸಿ ಪೂಜಾರ್ಹ ಮೂರ್ತಿಯನ್ನಾಗಿಸುವ ಮಹಾಶಿಲ್ಪಿ ಎಂದರೆ ಉಪಾಧ್ಯಾಯ. ಅಂತಹ ಪವಿತ್ರ ಕರ್ತವ್ಯವನ್ನು ನಿರ್ವಹಿಸುವ ಭಾಗ್ಯ ನನಗಿಲ್ಲ ಅಂದನಂತೆ'.

'ಸಾಕ್ರೆಟೀಸ್ ಸತ್ಯವನ್ನೇ ನುಡಿದಿದ್ದಾನೆ. ರಾಜಶೇಖರ ಅದೃಶ್ಯಪ್ಪನವರು ಪ್ರಸಾದ ಪುತ್ರರಂತೆ! ಹಲವರು ಹಿರಿಯರು ನನಗೆ ಹೇಳುತ್ತಿದ್ದರು.'

'ಪ್ರಸಾದ ಪುತ್ರರು!! ಅಂದರೆ ?'

'ಅಂದರೆ ಶ್ರೀ ಗುರುವಿನ ಅನುಗ್ರಹ ಆಶೀರ್ವಾದಗಳಿಂದ ಹುಟ್ಟಿದ ವ್ಯಕ್ತಿ. ಕೇಳು, ಕಲ್ಮಠದ ರಾಜಗುರುಗಳು ಎನ್ನಿಸಿದ ಗರಗದ ಮಡಿವಾಳ ಶಿವಯೋಗಿಗಳು ಒಮ್ಮೆ ಕಾದರವಳ್ಳಿಗೆ ದಯಮಾಡಿಸಿದ್ದರಂತೆ. ತಮ್ಮ ಪರಮಭಕ್ತ ಚನ್ನಯ್ಯನವರ ಮನೆಯಲ್ಲಿ ಅಂದು ಶಿವಯೋಗಿಗಳ ಪೂಜಾಪ್ರಸಾದ ವ್ಯವಸ್ಥೆ. ಪೂಜ್ಯರು ಎಲ್ಲ ಕಾರ್ಯಗಳನ್ನೂ ಮುಗಿಸಿ ಹೊರಡುವ ಮುನ್ನ ಕರ್ಪೂರ ಹಚ್ಚಿ ಅಡ್ಡಬಿದ್ದು ಹಣ್ಣು ಹಂಪಲನ್ನು ತಟ್ಟೆಯಲ್ಲಿಟ್ಟುಕೊಂಡು ಶ್ರೀ ಗುರುವಿನ ಆಶೀರ್ವಾದಕ್ಕಾಗಿ ನಿಂತಿದ್ದ ಚನ್ನಯ್ಯ ಗಂಗಮ್ಮರನ್ನು ಕಂಡು 'ನಿಮಗೇನು ಬೇಕು' ಎಂದರಂತೆ. ಅದಕ್ಕೆ ಆ ದಂಪತಿಗಳು 'ಗುರುವೆ, ನಿಮ್ಮ ಆಶೀರ್ವಾದದಿಂದ ನಮಗೆಲ್ಲ ಸಂಪದವೂ ಇದೆ. ಆದರೆ ಪುತ್ರ ಸಂತಾನ......'

'ಹೌದೇ... !ಆಗಲಿ....ನಿರಂತರವೂ ನಿಮ್ಮ ಸೇವೆ ನಮಗೆ ಸಂದಿದೆ. ನೀವು ನಿಜವಾದ ಅರ್ಥದಲ್ಲಿ ಶರಣರು. ಈ ಗಂಗಮ್ಮ ತಾಯಿ, ನಾವು ಅಸ್ವಸ್ಥರಾಗಿ ಒಂದು ತಿಂಗಳ ಕಾಲ ಹಾಸಿಗೆ ಹಿಡಿದಿದ್ದಾಗ, ನನ್ನ ಹೆತ್ತಪ್ಪನಂತೆ ಸಲಹಿದ್ದಾಳೆ. ಅವಳ ಋಣ ಅಪಾರ! ನನಗೂ ಸಮಯ ಸಮೀಪಿಸುತ್ತಾ ಬಂತು. ಇಂದೊ ನಾಳೆಯೊ ಅನ್ನು ವಂತಿದೆ ! ಆದರೆ ನನ್ನಿಚ್ಛೆ ಅಲ್ಲ ಅವನ ಸಂಕಲ್ಪ ಇದ್ದರೆ ನಾನೇ ನಿಮ್ಮ ಮಗನಾಗಿ ಜನಿಸುತ್ತೇನೆ.' ಅಂದರಂತೆ.

ಕೇಳಿದ ಕೂಡಲೇ ಎಲ್ಲರೂ ಘೊಹಾರಿದರು! ಚನ್ನಯ್ಯ ಮತ್ತು ಗಂಗಮ್ಮ ನವರಂತೂ ಗಳಗಳನೆ ಅತ್ತುಬಿಟ್ಟರು. ಅಪ್ಪಗಳೆ, ನಮಗೆ ಪುತ್ರ ಸಂತಾನವಿಲ್ಲದಿದ್ದರೂ ಚಿಂತೆಯಿಲ್ಲ ತಾವಿನ್ನೂ ನೂರ್ಕಾಲ ಬಾಳಬೇಕು. ನಮಗೆ ಬೆಳಕು ನೀಡಬೇಕು' ಎಂದು ಪರಿಪರಿಯಾಗಿ ಬೇಡಿಕೊಂಡರಂತೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅದಕ್ಕೆ ಗರದ ಮಂಡಿವಾಳಪ್ಪಗಳು–

'ಅಪ್ಪಾ, ಅವ್ವಾ...ಶಿವಸಂಕಲ್ಪಕ್ಕೆ ನಾವೆಲ್ಲರೂ ಬದ್ಧರು. ಅವನಿಚ್ಛೆ ಏನಿದೆಯೊ ಯಾರು ಕಂಡವರು! ಅಳಬೇಡಿ, ಶಾಂತರಾಗಿ. ಏನೋ ಮನಸ್ಸಿಗೆ ಹಾಗನ್ನಿಸಿತು ಅಂದುಬಿಟ್ಟೆ. ಅದನ್ನೆಲ್ಲಾ ಮರೆತು ನೆಮ್ಮದಿಯಿಂದ ಬದುಕು ಮಾಡಿ' ಎಂದರಂತೆ.

'ಅದಾವ ಪವಾಡವೋ ಕಾಣೆ ರಾಜಶೇಖರ, ಅಪ್ಪಗಳು ಆ ಘಟನೆ ನಡೆದ ಕೆಲವೇ ದಿನಗಳಲ್ಲಿ ಶಿವೈಕ್ಯರಾದರಂತೆ. ಅಂತಾದ ಒಂದು ವರ್ಷದಲ್ಲಿ ಅದೃಶ್ಯಪ್ಪನವರು ಹುಟ್ಟಿದರಂತೆ!'

'ಶಿವನಲೀಲೆ ಬಲು ವಿಚಿತ್ರ ಗುರುಗಳೆ.'

'ಇರಲಿ ರಾಜಶೇಖರ, ಆ ಅದೃಶ್ಯಪ್ಪ ಶಾಸ್ತ್ರರೇ ನನ್ನ ಬದುಕನ್ನು ರೂಪಿಸಿದ ಮೊದಲ ರೂವಾರಿ.'

'ಅವರು ತಮಗೆ ಪಾಠ ಹೇಳಿಕೊಟ್ಟ ಮೊದಲ ಗುರುಗಳೆಂದಿರಿ.'

'ಹೌದು. ಬರೀ ಪಾಠ ಹೇಳಿಕೊಟ್ಟದ್ದಷ್ಟೇ ಅಲ್ಲ ರಾಜಶೇಖರ, ಅವರು ನನ್ನ ಆಧ್ಯಾತ್ಮ ಗುರುಗಳೂ ಆಗಿದ್ದರು. ಅವರು ನನ್ನನ್ನು ತಾಯಿಯಾಗಿ ಸಲಹಿದರು, ತಂದೆಯಾಗಿ ಪ್ರೀತಿಸಿದರು, ಬಂಧುವಾಗಿ ಬೆಳೆಸಿದರು. ಕೇಳು, 1901–2ರ ಸುಮಾರಿನಲ್ಲಿದ್ದಿರಬಹುದು. ಅವರು ಚಿಕ್ಕೋಡಿಯಿಂದ ನಾಗನೂರಿಗೆ ಬಂದರು. ನಾನು ನಾಗನೂರಿನ ರುದ್ರಾಕ್ಷಿಮಠದ ಮರಿಯಾಗಿ ನಿಯೋಜಿತನಾಗಿದ್ದೆ. ವಿದ್ಯಾಭ್ಯಾಸಕ್ಕೆಂದು ಆ ಗುರುವಿನ ಬಳಿಗೆ ಕಳುಹಿಸಿದರು. ಚಿಕ್ಕಂದಿನಲ್ಲೇ ತಂದೆ ತಾಯಿ ಕಳೆದುಕೊಂಡು ತಬ್ಬಲಿಯಾಗಿದ್ದ ನನ್ನನ್ನು ಅದೃಶ್ಯಪ್ಪಗಳು ಅಪ್ಪಿ ಆಲಂಗಿಸಿಕೊಂಡರು. ನಿತ್ಯವೂ ನನಗೆ ಸ್ನಾನ ಮಾಡಿಸಿ, ಮಡಿಬಟ್ಟೆ ತೊಡಿಸಿ, ತುತ್ತಿಟ್ಟು ಬೆಳೆಸಿದರು. ಅಕ್ಷರಾಭ್ಯಾಸದ ಜೊತೆಯಲ್ಲಿ ವಿಭೂತಿಧಾರಣೆ, ಲಿಂಗಪೂಜೆ ಮೊದಲಾದವನ್ನು ಕಲಿಸಿದರು. ನಾನವರ ಕಣ್ಣಾಗಿದ್ದೆ, ಜೀವದ ಉಸಿರಾಗಿದ್ದೆ. ಹಡೆದ ತಾಯಿಯಂತೆ ಸಕಲವನ್ನೂ ನನ್ನ ಶ್ರೇಯಸ್ಸಿಗಾಗಿ ಅರ್ಪಿಸಿಕೊಂಡಿದ್ದರು ಆ ಮಹಾಗುರು. ನನ್ನಿಂದೇನಾದರೂ ಇಂದು ಸಮಾಜಕ್ಕೆ ಕಿಂಚಿತ್ ಸೇವೆ ಸಂದಿದ್ದರೆ ಅದಕ್ಕೆ ಮೂಲ ಕಾರಣರು ತಂದೆ, ತಾಯಿ, ಗುರು ಎಲ್ಲರೂ ಆಗಿದ್ದ ಆ ನನ್ನ ಅದೃಶ್ಯಪ್ಪ ಶಿವಯೋಗಿಗಳು.'

'ತಮ್ಮ ಪ್ರಶಂಸೆಗೆ, ಕೃತಜ್ಞತೆಗೆ, ಗುರುಭಾವನೆಗೆ ಭಾಜನರಾದ ಅದೃಶ್ಯಪ್ಪ ಶಾಸ್ತ್ರರು ನಿಜಕ್ಕೂ ಧನ್ಯರು ಗುರುಗಳೆ! ಆದರೆ ಅವರು ತಮಗೆ ಗುರುಗಳಾಗಿದ್ದರೆಂಬ ವಿಷಯವೇ ನನಗೆ ತಿಳಿದಿರಲಿಲ್ಲ.'

'ನನ್ನ ಪೂರ್ವೇತಿಹಾಸ ನನಗೇ ತಿಳಿದಿಲ್ಲ, ಅಂದ ಮೇಲೆ ನಿನಗೆ ಹೇಗೆ ತಿಳಿಯಬೇಕು ಹೇಳು.'

'ಆದರೂ...ಆದರೂ.'

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

'ಹೂಂ ಹೇಳು...ಆದರೂ...'

'ತಮ್ಮ ಪೂರ್ವಾಶ್ರಮದ ಸಮಗ್ರ ಇತಿಹಾಸ ನನಗೆ ತಿಳಿದಿದೆ ಗುರುಗಳೆ'

'ಹೌದೇ...ಹೇಗೆ ? ಯಾರು ಹೇಳಿದರು ?'

'ವಾಗ್ಗೇಯಕಾರ, ಕೀರ್ತನ ಕಲಾ ಚತುರ ಸುಕ್ಕಲಪುಟ್ಟಿ ಶಿವರುದ್ರಯ್ಯ'

'ಭೇಷ್ ! ಅದೇನು ಹೇಳಿದ್ದಾನಪ್ಪಾ ಆತ...?'

'ಅವರು ಹತ್ತಾರು ಕಡೆ ಸುತ್ತಾಡಿ, ಅನೇಕ ರೀತಿ ವಿಷಯ ಸಂಗ್ರಹಿಸಿ, ಅದಕ್ಕೊಂದು ರೂಪು ಕೊಟ್ಟಿದ್ದಾನೆ. ಇಂದು ಸಭೆಗೆ ತಮ್ಮನ್ನು ಪರಿಚಯಿಸುವ ವೇಳೆ ವಿವರಿಸುತ್ತಾನೆ'.

'ಅಂದರೆ'

'ಅಂದರೆ ಇಂದಿನಿಂದ ಆರಂಭವಾಗಲಿರುವ ಶಿವಾನುಭವ ಸಮ್ಮೇಳನದಲ್ಲಿ ಸಭಾಧ್ಯಕ್ಷರಾದ ತಮ್ಮನ್ನು ಕುರಿತ ಪರಿಚಯಾತ್ಮಕ ಭಾಷಣದಲ್ಲಿ...' .

'ಆಗತ್ಯವಾಗಿ ಆಗಲಿ...ಆದರೆ ಆತ ಎಲ್ಲಿ ಹೊಗಳಿ ಹೊನ್ನ ಶೂಲಕ್ಕೇರಿಸುತ್ತಾನೊ ಎಂಬ ಭೀತಿ.'

'ಹಾಗೇನಿಲ್ಲ ಗುರುಗಳೆ, ಸತ್ಯಾಂಶವನ್ನು ಸ್ಪಷ್ಟ ನಿರೂಪಿಸುತ್ತಾನೆ.'

'ಆಗಲಿ, ನಿನ್ನ ಸಂತೋಷಕ್ಕಾಗಿ ಒಪ್ಪಿದ್ದೇನೆ....ಅಂತೂ ನನ್ನ ಲಗ್ನಕುಂಡಲಿ, ಜಾತಕ ಎಲ್ಲ ಶಿವರುದ್ರನ ಕೈಗೆ ಸಿಕ್ಕಿಬಿಟ್ಟಿದೆ ಅನ್ನು.'

ಗುರುಗಳು ನಕ್ಕರು

ಶಿಷ್ಯನೂ ನಕ್ಕ

ಇಡೀ ಶಿವಯೋಗಮಂದಿರದ ಹಾದಿ ಆನಂದದಿಂದ ನಕ್ಕು ನಲಿದಾಡಿತು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಾಲ್ಕು

ಶಿವಯೋಗಮಂದಿರದಲ್ಲಿ ಅಂದು ಸಂಭ್ರಮವೋ ಸಂಭ್ರಮ! ಅಂದಿನಿಂದ ಮೂರು ದಿನಗಳವರೆಗೆ ಶಿವಾನುಭವ ಸಮ್ಮೇಳನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಹಾನಗಲ್ಲ ವಿರಕ್ತಮಠದ ಅಧಿಪತಿಗಳಾದ ಶ್ರೀ ನಿ. ಪ್ರ. ಶ್ರೀ ಸದಾಶಿವ ಮಹಾಸ್ವಾಮಿಗಳು ಶಿವಯೋಗಮಂದಿರದ ಸ್ಥಾಯೀ ಅಧ್ಯಕ್ಷರೂ ಆಗಿದ್ದರು. ಅವರು ಆಲೋಚಿಸಿ ಏರ್ಪಡಿಸಿದ್ದ ಆ ಸಮ್ಮೇಳನಕ್ಕೆ ನಾಗನೂರು ಶ್ರೀ ಶಿವಬಸವ ಸ್ವಾಮಿಗಳು ಅಧ್ಯಕ್ಷರು. ಆ ಮೂರು ದಿವಸಗಳು ಆಶ್ರಮದ ವಟುಗಳಿಗೆ ಅನಧ್ಯಯನ. ಆದರೆ ನಿತ್ಯವೂ ನಡೆಯುವ ಶಿವಾನುಭವದಲ್ಲಿ ಎಲ್ಲರೂ ಸಕ್ರಿಯವಾಗಿ ಭಾಗವಹಿಸಬೇಕಾಗಿತ್ತು. ಬೆಳಗಿನ ನಿತ್ಯ ಕರ್ಮಗಳು ಮುಗಿದ ಮೇಲೆ ಮಧ್ಯಾಹ್ನದಿಂದ ಗೋಷ್ಠಿ ಕಾರ್ಯಕ್ರಮಗಳು ಆರಂಭವಾಗುತ್ತಿದ್ದವು. ಸಂಜೆ ನೃತ್ಯ, ನಾಟಕ, ಸಂಗೀತ ಇಲ್ಲವೇ ಹರಿಕಥೆ ಇತ್ಯಾದಿ ಮನೋರಂಜನಾ ಕಾರ್ಯಕ್ರಮಗಳು.

ಆಶ್ರಮಕ್ಕೆ ನಾಡಿನ ಮೂಲೆ ಮೂಲೆಗಳಿಂದಲೂ ಸ್ವಾಮಿಗಳು, ಮಹಾಸ್ವಾಮಿಗಳು, ಗುರು–ಜಗದ್ಗುರುಗಳು, ಭಕ್ತಮಹಾಶಯರುಗಳು ಲಕ್ಷ ಲಕ್ಷ ಸಂಖ್ಯೆಯಲ್ಲಿ ಆಗಮಿಸಿದ್ದರು. ಶಿವಯೋಗಿ ಸಿದ್ಧರಾಮನ ಸಾನ್ನಿಧ್ಯದಿಂದ ಅಂದರೆ ಸೊನ್ನಲಿಗೆಯಿಂದ ಕಿರೀಟ ಮಠದ ಜಗದ್ಗುರು ಶ್ರೀ ಮೃತ್ಯುಂಜಯ ಮಹಾಸ್ವಾಮಿಗಳು, ಗದಗಿನಿಂದ ತೋಂಟದಾರ್ಯ ಜಗದ್ಗುರುಗಳವರೂ, ಹುಬ್ಬಳ್ಳಿಯಿಂದ ಮೂರು ಸಾವಿರ ಮಠದ ಜಗದ್ಗುರುಗಳವರೂ, ನಿಡಸೋಸಿಯಿಂದ ಜಗದ್ಗುರು ಶ್ರೀ ಶ್ರೀ ನಿಜಲಿಂಗೇಶ್ವರ ಸ್ವಾಮಿಗಳೂ, ಬೆಳಗಾವಿಯ ಕಾರಂಜಿ ಮಠದ ಶ್ರೀ ಗುರುಸಿದ್ಧದೇವರು, ಬೈಲಹೊಂಗಲದ ಶ್ರೀ ಗಂಗಾಧರಸ್ವಾಮಿಗಳು, ಮುರುಗೋಡದ ಶ್ರೀ ದುರದುಂಡೀಶ್ವರ ಸ್ವಾಮಿಗಳು, ದೇಶನೂರ ವಿರಕ್ತಮಠದ ಶಿವಲಿಂಗಸ್ವಾಮಿಗಳು, ಅಂಕಲಗಿ ಶ್ರೀ ಗುರುಸಿದ್ಧಸ್ವಾಮಿಗಳು, ಸಾವಳಗಿ ಶ್ರೀ ಶಿವಲಿಂಗಸ್ವಾಮಿಗಳು, ಯಮಕನಮರಡಿ ಶ್ರೀ ಗುರುಸಿದ್ಧಸ್ವಾಮಿಗಳು, ಘೋಡಗೇರಿ ಶ್ರೀ ಕಾಶೀನಾಥಸ್ವಾಮಿಗಳು, ಹುಕ್ಕೇರಿಯ ಶ್ರೀ ಕುಮಾರಸ್ವಾಮಿಗಳು, ಚಿಕ್ಕೋಡಿಯ ಚರಮೂರ್ತಿ ಮಠದ ಶ್ರೀ ಮಹಾಂತ ಸ್ವಾಮಿಗಳು, ಚಿಂಚಣಿಯ ಶ್ರೀ ಸಿದ್ಧಪ್ರಭುಸ್ವಾಮಿಗಳು, ಸೇಗುಣಸಿಯ ಶ್ರೀ ಶಂಕರದೇವರು, ತೆಲಸಂಗದ ಶ್ರೀ ಬಸವಲಿಂಗ ಪಟ್ಟದದೇವರು, ನಂದಗಡದ ಶ್ರೀ ಫಾಲಾಕ್ಷಸ್ವಾಮಿಗಳು, ತವಗದ ಶ್ರೀ ಬಾಳಯ್ಯಸ್ವಾಮಿಗಳು, ಅಮರಾದಿಮಠದ ಶ್ರೀ ಘರಾಳಸ್ವಾಮಿಗಳು, ಹಲ್ಯಾಳದ ಶ್ರೀಗಳು, ಅಥಣಿ ಗಚ್ಚಿನಮಠದ ಶಿವಯೋಗಿಗಳು,

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಯಡೂರು ಚರಂತಪ್ಪಗಳು, ಮುರಗೋಡ ಹಿರೇಮಠದ ಪಟ್ಟದದೇವರು, ಅರಭಾವಿಯ ಶ್ರೀ ದುರದುಂಡೀಶ್ವರಸ್ವಾಮಿಗಳು, ಕೊಣ್ಣೂರಿನ ಮರಡಿಮಠದ ಅದ್ರಿಸ್ವಾಮಿಗಳು, ಕಿತ್ತೂರುಮಠದ ಶ್ರೀ ಶ್ರೀಗಳು, ಅರಳೀಕಟ್ಟೆಮಠದ ಶ್ರೀ ಶ್ರೀಗಳು, ಸವದತ್ತಿಯ ಮಠ ಮತ್ತು ಕಲ್ಮಠದ ಶ್ರೀ ಕುಮಾರಸ್ವಾಮಿಗಳು, ಯಕ್ಕುಂಡಿಮಠದ ಶ್ರೀ ಶ್ರೀಗಳವರು, ಹೂಲಿ ಚರಂತಪ್ಪಗಳು, ಕುಪ್ಪೂರು ಗದ್ದಿಗೆ ಮಠದ ಷ. ಬ್ರ. ಶ್ರೀ ಚಂದ್ರಶೇಖರ ಶಿವಾಚಾರ್ಯಸ್ವಾಮಿಗಳು, ಹಣ್ಣೆಮಠದ ಷ. ಬ್ರ. ಶ್ರೀ ಶಿವಾನಂದ ಶಿವಾಚಾರ್ಯ ಮಹಾಸ್ವಾಮಿಗಳು, ರಾಜಾಪುರಸಂಸ್ಥಾನ ಮಠದ ಷ. ಬ್ರ. ಶ್ರೀ ರೇಣುಕಾಚಾರ್ಯಸ್ವಾಮಿಗಳು, ಮುಡುಕುತೊರೆ ತೋಪಿನ ಮಠದ ಷ. ಬ್ರ. ಶ್ರೀ ಮಹಾಲಿಂಗ ಶಿವಾಚಾರ್ಯಸ್ವಾಮಿಗಳು, ಮಳಲೆಗವಿ ಮಠದ ಶ್ರೀ ಕಾಲಾಗ್ನಿ ರುದ್ರಸ್ವಾಮಿಗಳು.

ಶಿವಯೋಗ ಮಂದಿರದ ಮುಂದೆ ಬೃಹತ್ ಪ್ರಮಾಣದ ಸಭಾಭವನ್ನೇರ್ಪಡಿಸಿ ಸಿದ್ದರು. ಅಲ್ಲಿ ಸಾವಿರಾರು ಜನರು ಕುಳಿತುಕೊಳ್ಳಲು ವ್ಯವಸ್ಥೆ ಇತ್ತು. ಮಲಪ್ರಭಾ ನದಿಯ ತಡಿಯಿಡಿದು ಶಿವಯೋಗ ಮಂದಿರದವರೆಗೆ ಎತ್ತ ನೋಡಿದರತ್ತ ಜನರೇ ಕಾಣಸಿಕೊಳ್ಳುತ್ತಿದ್ದರು. ಜನ ಜಂಗುಳಿಯ ಗಿಜಿಗಿಜಿ ಶಬ್ದವನ್ನೂ ತಳ್ಳಿ ನುಗ್ಗುತ್ತಿತ್ತು ಬಗೆಬಗೆಯ ವಾದ್ಯ ವಿಶೇಷಗಳ ನಿರ್ಘೋಷ! ಅತ್ತ ಕುಮಾರ ಶಿವಯೋಗಿಗಳ ಕರ್ತೃ ಗದ್ದುಗೆಯಲ್ಲಿ ಅತ್ಯಂತ ವಿಜೃಂಭಣೆಯಿಂದ ಪೂಜಾಕಾರ್ಯ ನಡೆಯುತ್ತಿತ್ತು. ವೇದ ಘೋಷ ನಭಕ್ಕೇರಿದರೆ, ವಚನಗಾಯನ, ಸ್ವರವಚನ ಹಾಡುಗಾರಿಕೆ ಅಲೆ ಅಲೆ ಯಾಗಿ ಆಶ್ರಮದ ಪರಿಸರದಲ್ಲೆಲ್ಲಾ ಪಸರಿಸಿತ್ತು.

ಪೂಜೆ ಮುಗಿದ ಮೇಲೆ ಪ್ರಸಾದ. ಮಲಪ್ರಭೆಯ ತಡಿಯಲ್ಲಿ ನಿರ್ಮಿಸಲಾಗಿದ್ದ ಪರ್ಣಶಾಲೆ ಆ ಮೂರು ದಿನಗಳ ಭೋಜನ ಶಾಲೆಯಾಗಿದ್ದಿತು. ಅನ್ನ ರಾಶಿ ರಾಶಿ ಯಾಗಿ ಬೆಂದು ಮಲಗಿತ್ತು. ಅದಕ್ಕೆ ಬೇಕಾದ ಮೇಲೋಗರಗಳು ಆಶ್ರಮದ ಗೋಶಾಲೆ ಯಿಂದ ಬಂದ ಕೊಳಗಗಟ್ಟಲೆ ಹಾಲು, ಬೆಳ್ದಿಂಗಳ ಹೊಳೆಯಾಗಿ ಮಡುಗಟ್ಟಿತ್ತು; ಹೆಪ್ಪುಗೊಂಡು ಒಪ್ಪವಡೆದ ಮೊಸರಾಗಿತ್ತು. ಊಟಕ್ಕೆ ಬಡಿಸುವವರೇ ಸುಮಾರು ಒಂದು ಸಾವಿರ ಜನ ಸ್ವಯಂ ಸೇವಕರಿದ್ದರು. ಎಲ್ಲರೂ ಸಹಕಾರ ಇಲ್ಲವೇ ಸೇವಾ ಮನೋಭಾವದಿಂದ ಅನನ್ಯ ಭಕ್ತಿಭಾವದಿಂದ ನಡೆದುಕೊಳ್ಳುತ್ತಿದ್ದರು.

ನಾಗನೂರ ಶ್ರೀ ಶಿವಬಸವಯೋಗಿಗಳೂ ಅವರ ಶಿಷ್ಯ ರಾಜಶೇಖರ ಸ್ವಾಮಿ ಗಳೂ ಮಹಾಕೂಟದಿಂದ ಬರುವಷ್ಟರಲ್ಲಿ ಭಕ್ತಾದಿಗಳ ಕೈಂಕರ್ಯ ಪೂರ್ಣಗೊಂಡಿತ್ತು. ಆಗಮಿಸಿದ ಈ ಗುರುದ್ವಯರು ಎಲ್ಲ ಸ್ವಾಮಿಗಳನ್ನೂ ಭೇಟಿ ಮಾಡಿದರು. ಶರಣು ಶರಣಾರ್ಥಿಗಳಾದುವು. ಸ್ವಾಮಿಗಳಿಗೆಂದೇ ವ್ಯವಸ್ಥೆ ಮಾಡಿದ್ದ ಸ್ಥಳದಲ್ಲಿ ಸ್ನಾನ, ಪೂಜೆಗಳಾದುವು. ಜಗದ್ಗುರುಗಳವರ ಪಾದಪೂಜೆ ನಿಂತು ನೋಡುವಂತಿತ್ತು. ಸಹಸ್ರ ಬಿಲ್ವಾರ್ಚನೆಯ ಸಂದರ್ಭದಲ್ಲಿ ಗದ್ದುಗೆಯ ಮೇಲೆ ಶಿವಪೂಜಾ ನಿರತರಾಗಿದ್ದ ಜಗದ್ಗುರುಗಳು ಬಿಲ್ವದಲದಲ್ಲಿ ಮುಚ್ಚಿ ಹೋಗಿದ್ದರು. ಮಹಾಮಂಗಳಾರತಿ ಆದ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮೇಲೆ ಜಗದ್ಗುರುಗಳವರಿಂದ ಎಲ್ಲ ಸ್ವಾಮಿಗಳೂ 'ಕ್ರೀ' ಸ್ವೀಕರಿಸಿದರು. ಅನಂತರ ಪ್ರಸಾದ ವ್ಯವಸ್ಥೆ ಆಯಿತು. ಜಗದ್ಗುರುಗಳಿಂದ ಕರಣ ಪ್ರಸಾದವಾದ ಮೇಲೆ ಸರ್ವರೂ ಶಿವಪ್ರಸಾದವನ್ನು ಸ್ವೀಕರಿಸಿದರು.

ಪ್ರಸಾದ ಮುಗಿದ ಮೇಲೆ ಸಭಾಂಗಣದಲ್ಲಿ ಕಾರ್ಯಕ್ರಮದ ವ್ಯವಸ್ಥೆ ಮಾಡಲಾಗಿತ್ತು. ಅಂದಿನದು ಶಿವಾನುಭವ ಸಮ್ಮೇಳನದ ಉದ್ಘಾಟನಾ ಸಮಾರಂಭ. ಸಮಾರಂಭದ ಗೌರವಾನ್ವಿತ ಅಧ್ಯಕ್ಷರನ್ನು ಮಲಪ್ರಭೆಯ ತೀರದ ವಟುಗಳ ಆಶ್ರಮದಿಂದ ಶಿವಯೋಗಮಂದಿರದ ನಡುವಿನ ಸಭಾಂಗಣದವರೆಗೆ ಅಡ್ಡಪಲ್ಲಕ್ಕಿಯಲ್ಲಿ ಕರೆತರುವ ಏರ್ಪಾಟಾಗಿತ್ತು. ಕಾವೀಧಾರಿಗಳಾದ ನೂರಾರು ಜನ ಜಂಗಮ ಜ್ಯೋತಿಗಳು ಸಿದ್ಧರಾದರು. ಸಮ್ಮೇಳನಾಧ್ಯಕ್ಷರನ್ನು ಪಲ್ಲಕ್ಕಿಯಲ್ಲಿ ಕೂರಿಸಲಾಯಿತು. ಅದನ್ನು ಬೇರಾವ ಭಕ್ತರೂ ಹೊರಬಾರದು, ಕೇವಲ ನಿರಾಭಾರಿ ಸ್ವಾಮಿಗಳೇ ಹೆಗಲು ಕೊಡಬೇಕು ಎಂದು ತೀರ್ಮಾನಿಸಲಾಗಿತ್ತು. ಅದರಂತೆ ಗದಗಿನ ಜಗದ್ಗುರುಗಳು ಮೂರುಸಾವಿರ ಮಠದ ಜಗದ್ಗುರುಗಳು, ಮುಂಡರಗಿಯ ಜಗದ್ಗುರುಗಳು, ಆನಂದಪುರ ಮಠದ ಜಗದ್ಗುರುಗಳು ಮೊದಲು ತಮ್ಮ ಹೆಗಲು ಕೊಟ್ಟರು. ನಿರಾಭಾರಿ ಸ್ವಾಮಿಗಳಲ್ಲಿ ಗುರು—ಜಗದ್ಗುರು ಭೇದವಿಲ್ಲ, ಮೇಲು—ಕೀಳೆಂಬ ತಾರತಮ್ಯವನ್ನು ಅವರೆಣಿಸುವುದಿಲ್ಲ. ಎಲ್ಲಿ ವಿಭೂತಿತ್ವವಿರುವುದೊ ಅಲ್ಲಿ ಅವರು ಶಿರಬಾಗಿ ವಂದಿಸುತ್ತಾರೆ. ಭಕ್ತಿ ಜ್ಞಾನ ವೈರಾಗ್ಯಗಳಿಗೂ ಅವರು ಮಣಿಯುತ್ತಾರೆ. ಅಧಿಕಾರ, ಅಂತಸ್ತುಗಳ ಎಣಿಕೆಯಾಗಲಿ ಪ್ರದರ್ಶನವಾಗಲಿ ಅವರಿಗೆ ತಿಳಿದೇ ಇಲ್ಲ—ಈ ಬಗೆಯ ಆಚರಣೆಯನ್ನು ಕಂಡು ಎಲ್ಲರಿಗೂ ಆಶ್ಚರ್ಯವಾಯಿತು.

ಪಲ್ಲಕ್ಕಿ ಮೇಲೇರಿತು!

'ಶ್ರೀ ಶ್ರೀ ಶ್ರೀ ಶಿವಬಸವ ಶಿವಯೋಗಿಗಳಿಗೆ......'

'ಜಯವಾಗಲಿ'!...'ಜಯವಾಗಲಿ'!!...'ಜಯವಾಗಲಿ'!!!

ಎಂಬ ಜಯಘೋಷ ನಭಕ್ಕೇರಿತು. ವಾದ್ಯಗಳು ಮೊಳಗಿದವು. ಮುಂದೆ ನಮ್ಮ ಕಣ್ಣು ಹರಿಯುವವರೆಗೂ ಬೃಹತ್ ಪ್ರಮಾಣದ ಜಾನಪದ ಮೇಳ ತನ್ನ ನರ್ತನದಲ್ಲಿ ಮಗ್ನವಾಗಿತ್ತು. ಹತ್ತು ಇಪ್ಪತ್ತು ನಂದಿ ಧ್ವಜ ಮತ್ತು ವೀರಗಾಸೆ ಕುಣಿತಗಳು, ಗುಳೇದ ಗುಡ್ಡದ ಕುರುಬಭಕ್ತರಿಂದ ಡೊಳ್ಳುಕುಣಿತ, ಹಟ್ಟಿಯವರಿಂದ ಕೋಲಾಟ, ಮೇಲೂರಿನವರಿಂದ ಕರಡಿ ಮೇಳ—ಒಂದೇ ಎರಡೆ ನೂರಾರು ಬಗೆಯ ಮೇಳ ಮಣಿಹಗಳು.

ಮೆರವಣಿಗೆ ನಿಧಾನವಾಗಿ ಸಾಗಿಬಂತು. ಸಭಾಂಗಣವನ್ನು ಸಮೀಪಿಸಿದ ಕೂಡಲೇ ಉತ್ಸವಮೂರ್ತಿ ಶ್ರೀ ಶಿವಬಸವ ಶಿವಯೋಗಿಗಳನ್ನು ಕೆಳಗಿಳಿಸಿಕೊಳ್ಳಲಾಯಿತು. ಅನನ್ಯ ಭಕ್ತಿಯಿಂದ ನಡೆಮುಡಿಹಾಸಿ ವೇದಿಕೆಗೆ ಆಹ್ವಾನಿಸಲಾಯಿತು. ಗುರುಗಳು ಅಧ್ಯಕ್ಷ ಪೀಠವನ್ನಲಂಕರಿಸಿದ ಮೇಲೆ ಎಲ್ಲರೂ ಕುಳಿತರು. ಉದ್ಘಾಟನಾ ಕಾರ್ಯಕ್ರಮ ಆರಂಭವಾಯಿತು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ರೇವಣಸಿದ್ಧಶಾಸ್ತ್ರಿಯ ನಿರ್ವಹಣೆಯಲ್ಲಿ ಕಾರ್ಯಕ್ರಮಗಳು ನಡೆಯ ತೊಡಗಿದವು. ಪಂಚಾಕ್ಷರಿ ಗವಾಯಿಗಳಿಂದ ವಚನ ಗಾಯನದ ಮೂಲಕ ಪ್ರಾರ್ಥನಾ ಕಾರ್ಯವು ನೆರವೇರಿದ ಮೇಲೆ, ಸ್ವಾಗತಾಧ್ಯಕ್ಷರಾದ ಶ್ರೀ ಹಾನಗಲ್ಲ ಸದಾಶಿವ ಸ್ವಾಮಿಗಳು ಸರ್ವರಿಗೂ ಸ್ವಾಗತ ಬಯಸಿದರು.

'ಇಂದಿನ ಶಿವಾನುಭವ ಸಮ್ಮೇಳನದ ಅಧ್ಯಕ್ಷರಿಗೂ ಉಪಸ್ಥಿತರಿರುವ ಹರಗುರು ಚರಮೂರ್ತಿಗಳಿಗೂ ಶಿರಸಾಷ್ಟಾಂಗ ಪ್ರಣಾಮ ಪೂರ್ವಕವಾಗಿ ಶಿವಯೋಗಮಂದಿರದ ಪರವಾಗಿ ಹಾರ್ದಿಕ ಸ್ವಾಗತ ಬಯಸುತ್ತೇನೆ.'

ಅಂತೆಯೇ,

ನಮ್ಮೆಲ್ಲರ ನಡುವೆ ಸುಳಿದಾಡುವ ಸುಜ್ಞಾನ, ಆದರ್ಶ ಚೇತನ, ಮಹಾ ಮೂರ್ತಿ ಶ್ರೀ ಮನ್ನಿರಂಜನ ಪ್ರಣವಸ್ವರೂಪಿ ನಾಗನೂರ ಶ್ರೀ ಶ್ರೀ ಶ್ರೀ ಶಿವಬಸವ ಮಹಾಸ್ವಾಮಿಗಳನ್ನು ಈ ಬೃಹತ್ ಸಭೆಗೆ ಸ್ವಾಗತಿಸುವ ಭಾಗ್ಯ ನನಗೆ ಲಭಿಸಿದೆ ಸುದೀರ್ಘವೆನಿಸಿದರೂ ಸಂಗ್ರಹ ಯೋಗ್ಯ, ಅನುಷ್ಠಾನ ಯೋಗ್ಯ ಎನಿಸಿದ ಈ ಮಹಾಚೇತನದ ಬದುಕು ನಮ್ಮೆಲ್ಲರಿಗೂ ಆದರ್ಶ ಪ್ರಾಯವೆನಿಸಿದ್ದು ಎಂಬುದು ನನ್ನ ಭಾವನೆ. ಆದ್ದರಿಂದ ಸಭೆ ಹರ್ಷದಿಂದ ಸ್ವಾಗತಿಸಬೇಕಾಗಿ ವಿನಂತಿ.

ಎರಡನೆಯದಾಗಿ, ಮಹಾಮೇಧಾವಿಗಳೂ, ವಿಚಾರವಂತರೂ ದೇಶ, ಧರ್ಮಗಳ ಬಗ್ಗೆ ವಿಶೇಷ ಕಳಕಳಿ ಉಳ್ಳವರೂ ಆದ ನಿಡಸೋಸಿ ಜಗದ್ಗುರುಗಳು ಹಾಗೂ ಶ್ರೀಮತ್ ಕುಪ್ಪೂರು ಗದ್ದಿಗೆ ಚರಮೂರ್ತಿಗಳು ಇವರನ್ನೂ ಇನ್ನಿತರ ಎಲ್ಲ ಜಗದ್ಗುರು ಗಳನ್ನೂ, ಗುರುಗಳನ್ನೂ ಶಿವಯೋಗಿಗಳನ್ನೂ ಭಕ್ತಿ ಪೂರ್ವಕವಾಗಿ ಸ್ವಾಗತಿಸುತ್ತೇನೆ. ಆಗಮಿಸಿರುವ ಎಲ್ಲ ಭಕ್ತ ಮಹಾಶಯರುಗಳಿಗೂ ಸ್ವಾಗತ'....ಎಂದು ಹೇಳಿ ಕುಳಿತರು.

ಅನಂತರ ಸುಕ್ಕಲಪುಟ್ಟಿ ಶಿವರುದ್ರಯ್ಯನಿಂದ ಸಮ್ಮೇಳನಾಧ್ಯಕ್ಷರ ಪರಿಚಯ ಭಾಷಣ :

"ಹಿಮಾಲಯದ ಉತ್ತುಂಗ ಶೃಂಗದಲ್ಲಿ ಗಂಗೋತ್ರಿ, ಯಮುನೋತ್ರಿಯರು ಕಣ್ತೆರೆದು, ಬೆಟ್ಟಬಿಟ್ಟು ಬಯಲಿಗಿಳಿದಾಗ ಪ್ರಚಂಡ ಪ್ರವಾಹವೇ ಆಗಿ ಪರಿಣಮಿ ಸುತ್ತಾರೆ. ಅವರು ಹರಿದೆಡೆಯಲ್ಲೆಲ್ಲಾ ಹಚ್ಚ ಹಸಿರು, ಹೊಚ್ಚ ಉಸಿರು ! ಹೂವು ಹಾವುಗಳನ್ನಿತ್ತು ಜೀವಕೋಟಿಗೆ ಜೀವದಾನ ಮಾಡುತ್ತಿದ್ದಾರೆ. ಜಗತ್ತಿನ ಕೊಳೆಯನ್ನೆಲ್ಲಾ ತೊಳೆದು, ತಮ್ಮ ಮಡಿಲಲ್ಲಿರಿಸಿಕೊಂಡು, ಸಕಲವನ್ನೂ ಪಾವನಗೈ ಯುತ್ತಾ ಪ್ರವಹಿಸುತ್ತಿರುತ್ತಾರೆ. ಅವುಗಳಲ್ಲಿನ ನೀರು ತೀರ್ಥವಾಗುತ್ತದೆ. ಅವು ಹರಿವ ಪಾತ್ರ ಪುಣ್ಯಕ್ಷೇತ್ರವಾಗುತ್ತದೆ. ಅದೇ ರೀತಿಯ ಒಂದು ಮಹಾವಾಹಿನಿ ನಮ್ಮ ಶ್ರೀ ನಾಗನೂರಜ್ಜಯ್ಯನವರ ಬದುಕು.

ಇವರು ಮೆಟ್ಟಿದ ಧರೆ ಪಾವನವಾಯಿತು, ಮುಟ್ಟಿದ ನೆಲ ಕ್ಷೇತ್ರವಾಯಿತು. ಆಡಿದ ಮಾತುಗಳು ಜ್ಯೋತಿರ್ಲಿಂಗಗಳಾದುವು, ನಡೆದ ನೆಲದಲ್ಲೆಲ್ಲಾ ಬೆಳಕಿನ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹೆಜ್ಜೆಗಳು ಮೂಡಿದವು. ಇವರ ನುಡಿ ಪಾವನ, ನಡೆ ಪಾವನ, ಮನಸ್ಸು ಪರಮ ಪ್ರಾಂಜಲ. ಇವರದು ಮಾತೃಹೃದಯ, ವಾತ್ಸಲ್ಯದ ವಕ್ಷ, ಅನುರಾಗದ ಕಕ್ಷೆ, ಆನಂದದ ರಕ್ಷೆ.

ಇಂತಹ ಮಹಾಮೂರ್ತಿಯ ಜನನ ಬಾಲ್ಯಗಳಲ್ಲಿ ಒಂದು ಇತಿಹಾಸವೇ ಅಡಗಿದೆ. ಇಲ್ಲಿ ಉಪಸ್ಥಿತರಿರುವ ಯಾವ ಸ್ವಾಮಿಗಳೂ ಚಿನ್ನದ ಚಮಚವನ್ನು ಬಾಯಲ್ಲಿ ಕಚ್ಚಿಕೊಂಡು ಹುಟ್ಟಿದವರಲ್ಲ! ಯಾರೂ ಕೈಲಾಸದಿಂದ ನೇರವಾಗಿ ಇಲ್ಲಿಗೆ ಧುಮ್ಮಿಕ್ಕಿದವರೂ ಅಲ್ಲ. ಮಾನವರಾಗಿ ಹುಟ್ಟಿ ಸೇವೆಯಿಂದ, ಸತ್‌ಶೀಲ ಸದಾಚಾರಗಳಿಂದ ಶ್ರೇಷ್ಠತೆಯನ್ನು ಪಡೆಯಲು ಯತ್ನಿಸಿದ ಸಾಧಕರು. ಕೆಲವರು ಸಿದ್ಧರಿರಬಹುದು. ಆದರೆ ಅವರೂ ಎಲ್ಲರಂತೆ ಹಂತ ಹಂತವಾಗಿ, ಮಜಲು ಮಜಲಾಗಿ, ಮೆಟ್ಟಿಲು ಮೆಟ್ಟಿಲಾಗಿ ಮೇಲೇರಿದವರು. ತಮ್ಮ ಜ್ಞಾನ ಹಾಗೂ ಸಾಧನೆಗಳಿಂದ ವ್ಯಕ್ತಿತ್ವವನ್ನು ಬೆಳೆಸಿಕೊಂಡು ದೇವತ್ವಕ್ಕೇರಿದವರು. ಇವರಂತೆಯೇ ಮಹಾತ್ಮರಾದವರು ನಮ್ಮ ನಾಗನೂರ ಶಿವಬಸವ ಸ್ವಾಮಿಗಳು.

ಈ ಚರಿತ್ರಯೋಗಿಯ ಪೂರ್ವಜರು ಬೈಲಹೊಂಗಲ ತಾಲೂಕಿನ ನಾಗನೂರಿನವರು; ನಾಗನೂರಿನ ಶೀಲಯ್ಯನವರ ಮಠಕ್ಕೆ ಸೇರಿದವರು. ಇವರ ತಾತನವರ ಹೆಸರು ಇವರ ಹೆಸರೇ! ಅಂದರೆ ಶಿವಬಸವ ಸ್ವಾಮಿಗಳು ಎಂದು. ಸದಾಚಾರ ಸಂಪನ್ನರಾದ ಶಿವಬಸವ ಸ್ವಾಮಿಗಳಿಗೆ ಶೀಲ ಸಂಪನ್ನೆ ಬಸಮ್ಮ ಧರ್ಮಪತ್ನಿ. ಬಸಮ್ಮ ರಾಮದುರ್ಗ ತಾಲೂಕಿನ ಹಿರೇಕೊಪ್ಪ ಗ್ರಾಮದ ಹಿರೇಮಠದ ಬಾಳಯ್ಯನವರ ಮಗಳು. ಇವರದು ಆದರ್ಶ ದಾಂಪತ್ಯ. ಆದರೆ ಅನ್ನಕ್ಕೆ ಅಭಾವ. ಬಡತನವನ್ನು ಮಡಿಲಲ್ಲಿ ಕಟ್ಟಿಕೊಂಡು ಹುಟ್ಟಿದವರು. ಆದರೂ ನಿಷ್ಠೆಯ ನೀತಿಯುತ ಬದುಕು ಇವರದು; ಶಿವ ಮೆಚ್ಚುವ ಬಾಳ್ಮೆ.

ಇವರ ಸರಳ ಜೀವನದಲ್ಲಿ ತುಸು ಬದಲಾವಣೆ ಆಯಿತು. ಬಸಮ್ಮನವರ ತವರೂರಾದ ಹಿರೇಕೊಪ್ಪದಲ್ಲಿ ಸಂಗನ ಬಸವಪ್ಪ ಕರ್ಕಿ ಎಂಬ ಪ್ರಾಸಾದಿಕ ಶರಣರೊಬ್ಬರಿದ್ದರು. ಅವರು ನಿತ್ಯವೂ ತಮ್ಮೂರಿಗೆ ಅತಿ ಸಮೀಪದಲ್ಲಿರುವ ಚಿಕ್ಕೊಪ್ಪದ ಗುರುಮಠದ ಶ್ರೀ ಪಟ್ಟದದೇವರಿಂದ ಕರಣಪ್ರಸಾದವನ್ನು ಸ್ವೀಕರಿಸಿ, ಅನಂತರ ಊಟ ಮಾಡುತ್ತಿದ್ದರು.

ಕಾಲ ಉರುಳಿತು.

ಚಿಕ್ಕೊಪ್ಪದ ಪಟ್ಟದ ಶ್ರೀ ಶ್ರೀಗಳವರು ಲಿಂಗದೊಳಗಾದರು. ಆದರಿಂದಾಗಿ ಸಂಗನ ಬಸವಪ್ಪನವರ ಕರಣಪ್ರಸಾದದ ನಿತ್ಯ ನೇಮಕ್ಕೆ ಅಡ್ಡಿಯುಂಟಾಯಿತು. ಅದರ ನಿವಾರಣೆಗಾಗಿ, ಪಟ್ಟದದೇವರಂತಹ ಕ್ರಿಯಾಮೂರ್ತಿಯನ್ನೇ ಕರೆತರಲು ಸಂಕಲ್ಪಿಸಿ, ನಾಗನೂರಿನ ಶೀಲಯ್ಯನವರ ಮಠದ ಶ್ರೀ ಶಿವಬಸವ ಸ್ವಾಮಿಗಳನ್ನು ಪ್ರಾರ್ಥಿಸಿಕೊಂಡು ಅವರನ್ನು ಪತ್ನೀ ಸಮೇತರಾಗಿ ಹಿರೇಕೊಪ್ಪಕ್ಕೆ ಕರೆದೊಯ್ದು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಲ್ಪಸ್ವಲ್ಪ ಭೂಮಿ-ಕಾಣಿ ವ್ಯವಸ್ಥೆಮಾಡಿದರು. ಹೀಗೆ ಶಿವಬಸವ ಸ್ವಾಮಿಗಳ ಬಾಳನೌಕೆ ನಾಗನೂರಿಂದ ಹಿರೇಕೊಪ್ಪದ ಬಂದರಿಗೆ ಬಂದು ನಿಂತಿತು. ಅವರ ದಾಂಪತ್ಯದ ಪುಣ್ಯ ಫಲವೊ ಎನ್ನುವಂತೆ ಅಡವಯ್ಯ, ಚನ್ನಯ್ಯ, ಬಸವಯ್ಯ ಎಂಬ ಮೂರು ಗಂಡು ಮಕ್ಕಳು, ಬಸವಲಿಂಗಮ್ಮ, ಸಂಗಮ್ಮ ಎಂಬ ಎರಡು ಹೆಣ್ಣು ಮಕ್ಕಳು ಜನಿಸಿದರು. ಹಿರಿಯ ಮಗ ಅಡವಯ್ಯನೇ ಇಂದಿನ ನಮ್ಮ ಆರಾಧ್ಯ ದೈವ ಶ್ರೀ ನಾಗನೂರಜ್ಜಗಳ ಪುಣ್ಯ ಪಿತೃ. ದ್ಯಾಂಪುರದ ನಂದೀಮಠದ ಮಗಳು ಶ್ರೀಮತಿ ರುದ್ರಮ್ಮನೇ ಇವರಿಗೆ ಜನ್ಮ ಕೊಟ್ಟ ಪುಣ್ಯವಂತೆ !

ಅಡವಯ್ಯ ಮತ್ತು ರುದ್ರಮ್ಮನವರದು 'ಸಗ್ಗಕ್ಕೆ ಕಿಚ್ಚು ಹಚ್ಚು' ಎನ್ನುವಂತಹ ದಾಂಪತ್ಯ. ಅವರಿಗೆ ಗದಿಗಮ್ಮ, ಬಸವಲಿಂಗಯ್ಯ, ನೀಲಮ್ಮ ಎಂಬ ಮೂರು ಮಕ್ಕಳ ಹಿಂದೆ ಒಂದು ಗಂಡು ಮಗು ಹುಟ್ಟಿತು. ಹುಟ್ಟಿದ್ದು 8-12-1896 ರ ಶುಭೋದಯದ ಶುಭ ಮುಹೂರ್ತದಲ್ಲಿ. ಅದಕ್ಕೆ ಅಜ್ಜನ ಹೆಸರನ್ನೇ ಅಂದರೆ 'ಶಿವಬಸವ' ಎಂದೇ ಇಡಲಾಯಿತು ಲಿಂಗಧಾರಣೆಯ ಸಂದರ್ಭದಲ್ಲಿ. ಅಂದಿನ ಆ ಶಿವಬಸವನೇ ಇಂದಿನ ಈ ಪೂಜಾರ್ಹಮೂರ್ತಿ,ಮಹಾಪ್ರಸಾದಿ ಶ್ರೀ ಶ್ರೀ ಶ್ರೀಶಿವಬಸವಯೋಗಿಗಳು.

ಶಿವಬಸವನಿಗೆ ವರ್ಷಗಳು ಎಂಟು ತುಂಬಿರಲಿಲ್ಲ. ಅಷ್ಟರಲ್ಲೇ ಅಡವಯ್ಯನವರು ಬೇಕಾದರು ಆ ಪರಶಿವನಿಗೆ ; ಆತನನ್ನು ತನಗೇ ಬೇಕೆಂದು ಕೈಹಿಡಿದೆತ್ತಿಕೊಂಡುಬಿಟ್ಟ. ರುದ್ರಮ್ಮ ಅನಾಥೆಯಾದಳು. ಮಕ್ಕಳು ತಬ್ಬಲಿ ಆದರು.

ಮಹಾತ್ಮರ ಮಾತು ಮಂತ್ರವಾಗುತ್ತದೆ; ಅವರ ನಡೆ ಪವಾಡವೆನಿಸುತ್ತದೆ; ಶಿವಸಂಕಲ್ಪಕ್ಕೆ ಬದ್ಧರಾದ ಅವರ ಬದುಕಿನಲ್ಲಿ ಒಂದು ಮಹತ್ತರವಾದ ಬದಲಾವಣೆ ಎನ್ನುವಷ್ಟರ ಮಟ್ಟಿಗೆ ಬೆಳೆದು ನಿಲ್ಲುತ್ತದೆ. ಅಂಥದೇ ಘಟನೆ ಸಂಘಟಿಸಿತು ಶಿಶುರೂಪಿ ಶಿವನಲ್ಲಿ, ಅರ್ಥಾತ್ ಶಿವಬಸವನಲ್ಲಿ.

ಒಮ್ಮೆ ಶ್ರೀಮದಥಣಿ ಶಿವಯೋಗಿಗಳು ಹಿರೇಕೊಪ್ಪಕ್ಕೆ ದಯಮಾಡಿಸಿದರು. ಅಂದು ಗುರುಭಕ್ತಿ ಪರಾಯಣ ತೋಡಕರ ಬಾಳಪ್ಪನೆಂಬುವನ ಮನೆಯಲ್ಲಿ ಶಿವಯೋಗಿಗಳ ಬಿನ್ನಹದ ವ್ಯವಸ್ಥೆ ಆಗಿತ್ತು. ಬಾಳಪ್ಪ ಊರಿನ ಜಂಗಮ ಜ್ಯೋತಿಗಳನ್ನೆಲ್ಲಾ ಆಹ್ವಾನಿಸಿದ್ದನು. ಶಿವಾಚಾರ ಸಂಪನ್ನೆಯಾದ ರುದ್ರಮ್ಮನೂ ಶಿಶು ಶಿವಬಸವನನ್ನು ಎತ್ತಿಕೊಂಡು ಶಿವಯೋಗಿಗಳ 'ಕೃಪೆ' ಸ್ವೀಕರಿಸಲು ಬಂದಿದ್ದಳು. ದೇವರ ಕೋಣೆಯಲ್ಲಿ ಶಿವಯೋಗಿಗಳ ಸಂಭ್ರಮದ ಶಿವಪೂಜೆ ನಡೆಯುತ್ತಿತ್ತು. ಶಿವಮಂತ್ರ ಪಠನದ ಹಿನ್ನೆಲೆಯಲ್ಲಿ ಪೂಜಾಕಾರ್ಯ ನಿರಾತಂಕವಾಗಿ ನೆರವೇರುತ್ತಿತ್ತು. ಎಲ್ಲರ ಇಷ್ಟಲಿಂಗಗಳಿಗೂ ಶಿವಯೋಗಿಗಳ ಸಮ್ಮುಖದಲ್ಲಿ ಪುಷ್ಪಾಭಿಷೇಕವಾದ ಮೇಲೆ, ಅಥಣಿಯ ಮುರುಘೇಂದ್ರ ಮಹಾಸ್ವಾಮಿಗಳವರು ಲಿಂಗಪ್ರಾಣವೊ ಅಥವಾ ಪ್ರಾಣಲಿಂಗವೊ ಎನ್ನುವಂತಹ ಅಭೇದ ಅನುಸಂಧಾನದಲ್ಲಿ ಅಂತರ್ಮುಖಿಗಳಾಗಿ ಶಿವಯೋಗ ಸಮಾಧಿಗೆ ಸಂದರು. ಶಿವಯೋಗಿಗಳ ಸಮಾಧಿಗೆ ಭಂಗ ಬಾರದಿರಲೆಂದು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

LIBRARY
Jangamwadi Math, Varanasi
ACC No. 8786

ಎಲ್ಲರೂ ಪೂಜಾ ಕೋಣೆಯಿಂದ ಹೊರಗೆ ಹೋದರು. ಅತ್ತ ಹೆಣ್ಣುಮಕ್ಕಳ ಜೊತೆಯಲ್ಲಿ ರುದ್ರಮ್ಮನವರೂ ಅಡಿಗೆ ಮನೆ ಸೇರಿದರು.

ಪೂಜಾಗೃಹ ಶಬ್ದ ಮುಗ್ಧವಾಗಿತ್ತು!

ಸೂಜಿ ಬಿದ್ದ ಶಬ್ದವೂ ಕೇಳಿಸುವಷ್ಟು ನಿಶ್ಯಬ್ದವಾಗಿತ್ತು!

ಘನ ಸಂಗೀತಗಾರನು ನಾದಬ್ರಹ್ಮಕ್ಕೇರುವಂತೆ ಅಥಣಿಯ ಅಜ್ಜಯ್ಯನವರು ಶಿವಯೋಗ ಸಾಮರಸ್ಯದಲ್ಲಿ ಲೀನರಾಗಿದ್ದರು!

ಆಗ!

ಇದ್ದಕ್ಕಿದ್ದ ಹಾಗೆ ಘಂಟಾನಾದವಾಯಿತು!

ಘಣ ಘಣ ಘಂಟೆ ಒಂದೇ ಸಮನೆ ಶಬ್ದಮಾಡತೊಡಗಿತು.

ಅದರ ಓಂಕಾರದ ಝೇಂಕೃತಿಗೆ ಶಿವಯೋಗಿಗಳ ಸಮಾಧಿ ಹರಿದು, ಅವರು ಬಹಿರ್ಮುಖರಾದರು! ಲಿಂಗ–ಅಂಗ ಸಾಮರಸ್ಯದ ಅನುಸಂಧಾನದಲ್ಲಿದ್ದ ಶಿವಯೋಗಿಗಳ ಸಮಾಧಿಗೆ ಭಂಗತಂದವರು ಯಾರು? ಎಂದು ಭಕ್ತಸ್ತೋಮ ಶಿವಪೂಜಾಗೃಹದತ್ತ ಧಾವಿಸಿತು! ಅಲ್ಲಿ ಅವರು ನೋಡಿದ್ದೇನು?

ಒಂದು ಹಸುಗೂಸು!

ಅದು ಅಂಬೆಗಾಲಿಟ್ಟುಕೊಂಡು ಶಿವಯೋಗಿಗಳ ಗದ್ದುಗೆಯ ಮೇಲೇರಿದೆ. ಅವರ ಮುಂದಿನ ಮಣೆಯ ಮೇಲಿದ್ದ ಗಂಟೆಯನ್ನು ಕೈಗೆತ್ತಿಕೊಂಡು ತನ್ನ ಆನಂದಕ್ಕಾಗಿ ಅಲುಗಿಸಿ ಶಬ್ದ ಮಾಡುತ್ತಿದೆ.

ಭಕ್ತರು ಓಡಿ ಬಂದು ನೋಡುವುದಕ್ಕೂ, ಶಿವಯೋಗಿಗಳು ಸಮಾಧಿಯಿಂದ ಎಚ್ಚರಗೊಳ್ಳುವುದಕ್ಕೂ ಸರಿಹೋಯಿತು.

ಅರಿಯದ ಮಗುವೊಂದರಿಂದ ಆದ ಅಚಾತುರ್ಯಕ್ಕೆ ಎಲ್ಲರೂ ಕ್ಷಮೆಯಾಚಿಸುವ ಭಂಗಿಯಲ್ಲಿ ನಿಂತರು.

ಅಥಣಿ ಶಿವಯೋಗಿಗಳು ತಮ್ಮ ಕೃಪಾನಯನಗಳಿಂದ ಎಲ್ಲರನ್ನೂ ಒಮ್ಮೆ ನೋಡಿ, ಮಗುವನ್ನು ತಬ್ಬಿ ತಮ್ಮ ತೊಡೆಯ ಮೇಲೆ ಕೂರಿಸಿಕೊಂಡರು. 'ನನ್ನ ಪೂಜೆ ನಿನಗೆ ತೃಪ್ತಿ ತಂದಿತೇ ಶಿವನೆ' ಎಂದು ಸಂಬೋಧಿಸಿ, ಅದರ ಹಣೆಗೆ ವಿಭೂತಿ ಧಾರಣೆ ಮಾಡಿ, ಪ್ರಸಾದಕ್ಕೆಂದು ಇಟ್ಟಿದ್ದ ಹಣ್ಣನ್ನು ಕೈಗಿತ್ತು, ಆ ಶಿಶುವಿನ ಪಾದ ಹಿಡಿದು ನಮಸ್ಕರಿಸಿದರು!

'ನೀವಾರೂ ಭಯಪಡುವ ಕಾರಣವಿಲ್ಲ. ನನ್ನ ಸ್ವಾಮಿ ಸಂತುಷ್ಟನಾಗಿದ್ದಾನೆ. "ಜಗತ್ತಿನ ದುಃಖ ಕೋಟಲೆಯನ್ನು ದೂರಮಾಡಬಲ್ಲ ಓರ್ವ ಪ್ರಸಾದಿ ಪುರುಷನನ್ನು ಕರುಣಿಸು ತಂದೆ" ಎಂದು ಬೇಡಿಕೊಂಡೆ ಇಂದಿನ ಸಮಾಧಿ ಸಮಯದಲ್ಲಿ. ಶಿವ ತನ್ನ ಕೈಯಲ್ಲಿದ್ದ ಈ ಶಿಶುವನ್ನು ನನ್ನ ತೊಡೆಯ ಮೇಲಿರಿಸಿದ. ಘಂಟಾನಾದವಾಯಿತು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

Jangamwadi Math, Varanasi
ACC No.........................

ಎಚ್ಚಿತ್ತೆ. ಈ ನನ್ನ ಸ್ವಾಮಿ ಬಳಿ ಇದ್ದ. ಇವನು ಯಾರ ಕಂದ ? ಹೆಸರೇನು ?' ಎಂದರು.

ಅಷ್ಟರಲ್ಲಿ ನಡೆದ ಘಟನೆಯ ವರದಿ ರುದ್ರಮ್ಮನವರಿಗಾಗಿತ್ತು. ಅವರು ಶಿವ ಯೋಗಿಗಳ ಸಮಾಧಿಗೆ ಭಂಗ ತಂದ ಪಾತಕ ತನ್ನಿಂದ, ತನ್ನ ಶಿಶುವಿನಿಂದ ಪ್ರಾಪ್ತ ವಾಯಿತೆಂದು ಭಾವಿಸಿ, ಭಯ ದುಃಖ ಎರಡನ್ನೂ ತುಂಬಿಕೊಂಡು ಧಾವಿಸಿ ಬಂದರು.

'ಸಮಾಧಾನ ತಾಯಿ, ಸಮಾಧಾನ, ನೀನು ಪುಣ್ಯಗರ್ಭೆ! ಈತ ನಿನ್ನ ಮಗನಲ್ಲ. ಶಿವನ ಮಗ ; ಜಗತ್ತಿನ ಶಿಶು ! ಮಾನವಕುಲೋದ್ಧಾರಕ್ಕಾಗಿ ನಿನ್ನ ಹೊಟ್ಟೆಯಲ್ಲಿ ಹುಟ್ಟಿದ್ದಾನೆ ಅಷ್ಟೆ. ಇವನು ಪ್ರಸಾದಕ್ಕಾಗಿಯೇ ಈ ಪ್ರಸಾದ ಸಮಯದಲ್ಲಿ ಪೂಜಾ ಗೃಹವನ್ನು ಪ್ರವೇಶಿಸಿದ್ದಾನೆ. ಆ ಕಾರಣ ಇವನು "ಮಹಾಪ್ರಸಾದಿ" ಎಂದೇ ಪ್ರಸಿದ್ಧನಾಗುತ್ತಾನೆ. ದೀನರಿಗೆ ದಯೆಯಾಗುತ್ತಾನೆ ; ದಲಿತರಿಗೆ ತಾಯಿಯಾಗುತ್ತಾನೆ ; ಹಸಿದವರಿಗೆ ಅನ್ನವಾಗಿ, ಬಳಲಿದವರಿಗೆ ತಿಳಿನೀರುತಾನಾಗಿ ಬೆಳಗುತ್ತಾನೆ. ಇವನದು ಪ್ರಸಾದ ಕಾಯ. ತನ್ನ ಕಾಯವನ್ನೇ ಪ್ರಸಾದ ರೂಪದಲ್ಲಿ ಅರ್ಪಿಸಿಕೊಂಡವನು ; ಇಲ್ಲವೇ ಶಿವನ ಪ್ರಸಾದವೇ ಶರೀರ ಧಾರಣ ಮಾಡಿ ನಿಂತವನು. ಇವನು ಪ್ರಸಾದಿ ಸ್ಥಲದಲ್ಲಿ ನಿಂತು, ಕೆಳಗಿನ ಭಕ್ತ, ಮಹೇಶರನ್ನೂ ಮೇಲಣ ಪ್ರಾಣಲಿಂಗಿ, ಶರಣರನ್ನೂ ತನ್ನೆಡೆಗೆ ಸೆಳೆದುಕೊಂಡು, ಪ್ರಜ್ಞಾನ ಬ್ರಹ್ಮನ ಸಾಕ್ಷಾತ್ಕಾರಕ್ಕಾಗಿ ನಿರಂತರ ತಪಗೈದು, ಸಹಸ್ರ ಸಹಸ್ರ ಜೀವಗಳಿಗೆ ಪ್ರಸಾದವನ್ನು ಕರುಣಿಸಿ, ಅವರ ಆನಂದದಲ್ಲಿಯೇ ಪರಮಾತ್ಮನನ್ನು ಕಾಣುತ್ತಾನೆ. ಈತ ಮಹಾತ್ಮನಾಗುತ್ತಾನೆ ; ಲೋಕಪೂಜ್ಯನಾಗುತ್ತಾನೆ. ಈ "ಮಹಾಪ್ರಸಾದಿ"ಗೆ ನನ್ನ ಸಹಸ್ರ ನಮನಗಳು" ಎಂದರು.

ಎಲ್ಲರೂ ಅವಾಕ್ಕಾದರು :
ರುದ್ರಮ್ಮನ ಆನಂದಕ್ಕೆ ಪಾರವೇ ಇಲ್ಲವಾಯಿತು !

'ತ್ಯಾಪ್ಯಾ' ಎಂದು ಬಾಯಿ ಚಪ್ಪರಿಸುತ್ತ ಗದ್ದುಗೆಯಿಂದಿಳಿದು ತನ್ನತ್ತ ಬಂದ ಬಾಲಶಿವಯೋಗಿಯನ್ನು ಬಾಚಿ ತಬ್ಬಿಕೊಂಡಳು; ಅದರ ಮೈತುಂಬ ಮುತ್ತು ಕೊಟ್ಟಳು.

ಲೋಕದ ಕಣ್ಣಿಗೆ ಪವಾಡದಂತೆ ಕಂಡರೂ ಅದು ಪವಾಡವಲ್ಲ ; ವಾಸ್ತವಿಕ ಘಟನೆ, ಒಂದು ತುತ್ತಿಗೂ ಸ್ಥಿತಿ ಇರದ ಒಬ್ಬ ಬಡ ಬಾಲಕ ಲಕ್ಷೋಪಲಕ್ಷ ಜೀವಿಗಳಿಗೆ ಹಾಲಾಗುತ್ತಾನೆ, ಅನ್ನವಾಗುತ್ತಾನೆ ಎಂದು ಯಾರು ತಾನೆ ಕನಸು ಕಾಣಲು ಸಾಧ್ಯ. ವ್ಯಕ್ತಿಯ ಸಂಕಲ್ಪ ಸತ್ಯವಾದುದಾಗಿದ್ದರೆ, ಶಿವಮಯವೆನಿಸಿದುದಾಗಿದ್ದರೆ ಸಿದ್ಧಿ ತಾನಾಗಿಯೇ ಅದನ್ನು ಹಿಂಬಾಲಿಸುತ್ತದೆ ಎಂಬುದಕ್ಕೆ ನಮ್ಮ ಮಹಾಪ್ರಸಾದಿ ಶಿವಬಸವ ಶಿವಯೋಗಿಗಳೇ ಸಾಕ್ಷಿ ! ಶಿವಬಸವನಿಗೆ ಏಳು ವರ್ಷ, ತಾಯಿ ಶಿವನಪಾದ ಸೇರಿದಳು. ಅಣ್ಣನಿಗೆ ದೈಹಿಕ ದೌರ್ಬಲ್ಯ. ಆತ ಏನೊಂದೂ ದುಡಿಮೆ ಮಾಡಲಾರ;

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಕ್ಕಂದಿರಿಬ್ಬರೂ ಮನೆತನದ ಮರ್ಯಾದೆ ಉಳಿಸಲು ಹೊಸಿಲು ದಾಟುವಂತಿಲ್ಲ. ಇಂತಹ ದಾರುಣ ಪರಿಸ್ಥಿತಿಯಲ್ಲಿ ಉದರಂಭಣ ನಡೆಯುವುದಾದರೂ ಹೇಗೆ? ಏಳು ವರ್ಷದ ಬಾಲಕ ಜೋಳಿಗೆ ಹಾಕಿದ. 'ಶಿವ ಶಿವಾ ಕಂತೇ ಭಿಕ್ಷಾ' ಎಂದ. ಜೋಳಿಗೆ ತುಂಬಿತು. ನಾಲ್ವರ ನಿತ್ಯ ಜೀವನ ಹೇಗೊ ಸಾಗಿತು.

ತಾಯಿ ತೀರಿಕೊಂಡ ಮೇಲೆ ಅಕ್ಕಂದಿರೇ ತಾಯಿಯರಾದರು. ಕಿರಿಯನಾದ ಶಿವಬಸವನನ್ನು ಅಕ್ಕಗಳು ಅಕ್ಕರೆಯ ಸಕ್ಕರೆಯಿತ್ತು ಪೋಷಿಸಿದರು. ಅನಂತರ ಅದೃಶ್ಯಪ್ಪ ಮಾಸ್ತರರ ಮತ್ತು ಹಣಬರಟ್ಟಿ ಶ್ರೀ ಪಟ್ಟದದೇವರು—ಇವರ ಕೃಪಾಶ್ರಯ ಸಿಕ್ಕಿತು. ನಾಗನೂರು, ಹುಬ್ಬಳ್ಳಿಗಳಲ್ಲಿ ವಿದ್ಯಾಭ್ಯಾಸ ಕುಂಟಿಕೊಂಡು ಸಾಗಿ, ಶಿವಯೋಗ ಮಂದಿರದಲ್ಲಿ ವಿರತ ಮಹಾವಿದ್ಯೆ ಕಲಿತು, ಶಿವಯೋಗವನ್ನು ಸಾಧಿಸಿಕೊಂಡರು.

ಹಗಲಿರುಳಿನಿಗ್ಗಾಲಿ ನೂರುರುಳು ಉರುಳಿತು.

ಅದರಡಿಗೆ ಸಿಕ್ಕು ನಾಗನೂರ ರುದ್ರಾಕ್ಷಿ ಮಠದ ಆರನೆಯ ಪಟ್ಟಾಧಿಕಾರಿಗಳಾಗಿದ್ದ ಶ್ರೀ ನಿ. ಪ್ರ. ವೀರಭದ್ರಮಹಾಸ್ವಾಮಿಗಳು ಶಿವಪಾದ ಸೇರಿದರು. ತೆರವಾದ ನಾಗನೂರ ರುದ್ರಾಕ್ಷಿ ಮಠಕ್ಕೆ ಯೋಗ್ಯ ಉತ್ತರಾಧಿಕಾರಿಯಾಗುವ ಭಾಗ್ಯ ಶಿವಬಸವರನ್ನು ಹುಡುಕಿಕೊಂಡು ಬಂತು. ನಾಗನೂರಿನ ಶೀಲಯ್ಯನವರ ಮಠ ಅಥವಾ ಮೂಗಡ್ಲಿಮಠದ ಗುರುಪಾದಯ್ಯನವರನ್ನು ಹಿರೇಕೊಪ್ಪಕ್ಕೆ ಕಳುಹಿಸಿ, ಶುಭಲಕ್ಷಣ ಸಂಪನ್ನನೂ, ಯೋಗ ಮುದ್ರಾನೇತ್ರನೂ, ವಿಶಾಲ ಫಾಲನೂ, ಉಜ್ವಲ ತೇಜಸ್ವಿಯೂ ಆದ ಶಿವಸ್ವರೂಪಿ ಬಾಲಕನನ್ನು ನಾಗನೂರಿಗೆ ಕರೆಸಿಕೊಂಡಿತು. ಆ ಪುಣ್ಯ ಪುರುಷನ ಆಗಮದಿಂದ ನಾಗನೂರು ನಾಣ್ಯವಾಯಿತು, ಮಾನ್ಯವಾಯಿತು; ಮಹಾತ್ಮನಿಗೆ ಆಶ್ರಯವಿತ್ತು ಅವನು ನಡೆದಾಡಿದ ಪುಣ್ಯಕ್ಷೇತ್ರವೇ ಆಗಿ ಪರಿಣಮಿಸಿತು.

ನಾಗನೂರಿನ ರುದ್ರಾಕ್ಷಿ ಮಠಕ್ಕೆ ಮರಿಯಾಗಿ ಬಂದ ಶಿವಬಸವನನ್ನು ಓರ್ವ ತಾಯಿ ಅತ್ಯಂತ ಮಮತೆಯಿಂದ ಕಂಡಳು. ಅವಳೇ ಮಾತೆ ಗಂಗವ್ವ. ಅವಳು ಇಂಚಲದವಳು. ನಾಗನೂರಿನ ನಾಯಕಮನೆತನದ ಸೊಸೆ. ಈ ತಾಯಿ ತನ್ನ ಮಗ ಗುರುನಾಯಕನ ಜೊತೆಯಲ್ಲಿ ಶಿವಬಸವನಿಗೆ ತುತ್ತಿಟ್ಟು ಬೆಳೆಸಿದಳು. ಗಂಗವ್ವ ಶಿವಬಸವನ ಹಡೆದ ತಾಯಿ ಅಲ್ಲ; ಪಡೆದ ತಾಯಿ ಆದಳು.

ಹೀಗೆ ಶಿವಬಸವನು ಶಿವನ ಮರಿಬಸವನಾಗಿ, ಎತ್ತಿದವರ ಕೂಸಾಗಿ ಬೆಳೆದ. ಹುಬ್ಬಳ್ಳಿಯ ರುದ್ರಾಕ್ಷಿಮಠದ ಚೆನ್ನಮಲ್ಲಿಕಾರ್ಜುನ ಸ್ವಾಮಿಗಳು ಮತ್ತು ಅದೇ ಊರಿನ ಸಿದ್ಧಾರೂಢರು ಶಿವಬಸವನ ಆಧ್ಯಾತ್ಮ ಗುರುಗಳಾದರು. ನಿಜಗುಣ ಶಿವಯೋಗಿಗಳ ಕೃತಿಗಳನ್ನು ಅಭ್ಯಸಿಸಿ ಶಿವಯೋಗವನ್ನು ಸಿದ್ಧಿಸಿಕೊಂಡ; ಶಿವಯೋಗಿಯಾದ. ಅಥಣಿಯ ಅಪ್ಪಗಳು ಅಪ್ಪಣೆ ಕೊಡಿಸಿದಂತೆ 'ಮಹಾಪ್ರಸಾದಿ'ಯಾಗಿ ಬೆಳಗಿದ. ಲೋಕಕ್ಕೆ ಕಣ್ಣಾದ, ಉಸಿರಾದ!

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕೆಲವೇ ದಿನಗಳಲ್ಲಿ ಹಾನಗಲ್ಲ ಕುಮಾರ ಶಿವಯೋಗಿಗಳ ಸಾನ್ನಿಧ್ಯ ಲಭಿಸಿತು. ಶಿವಯೋಗ ಮಂದಿರದ ಸ್ಥಾಪನೆಯ ಸಂದರ್ಭದಲ್ಲಿ ಶಿವಬಸವ ತನ್ನ ಹೆಗಲು ಕೊಟ್ಟು ದಂಡಿದ. ಅವನ ಜೊತೆಯಲ್ಲಿ ಗೋಕಾಕದ ಮರಡಿಮಠದ ಕೆಂಪಯ್ಯಸ್ವಾಮಿಗಳು; ಇವರೇ ಮುಂದೆ ಹುಬ್ಬಳ್ಳಿಯ ಮೂರು ಸಾವಿರ ಮಠದ ಜಗದ್ಗುರುಗಳಾಗಿ ಶ್ರೀಗುರು ಸಿದ್ಧ ಮಹಾಸ್ವಾಮಿಗಳೆಂದು ಹೆಸರಾದರು. ಮತ್ತಿಬ್ಬರು ತೆಲಿಸಂಗ ಹಿರೇಮಠದ ಸ್ಥಿರ ಪಟ್ಟಾಧ್ಯಕ್ಷರಾದ ಶ್ರೀ ಬಸವಲಿಂಗ ಸ್ವಾಮಿಗಳು; ಇವರು ಅಂದು ಶಿವಯೋಗ ಮಂದಿರದಲ್ಲಿ ಶಿವಬಸವ ಸ್ವಾಮಿಗಳ ಒಡನಾಡಿಗಳಾಗಿದ್ದಾಗ ನವಲುಗುಂದದ ಗವೀಮಠದ ಪಟ್ಟಾಧಿಕಾರಿಗಳಾಗಿದ್ದರು.

ಶಿವಯೋಗ ಮಂದಿರದಲ್ಲಿ ಹಾನಗಲ್ಲಪ್ಪಗಳ ನೆರಳಾಗಿ ಹನ್ನೆರಡು ವರ್ಷಗಳ ಕಾಲ ನಿಂತವರು ನಾಗನೂರ ಶಿವಬಸವಸ್ವಾಮಿಗಳು ಮಾತ್ರ. ಪರಿಶುದ್ಧ ಚಾರಿತ್ರ್ಯ, ಅಪ್ರತಿಮ ದಾಸೋಹ ಪ್ರೇಮ, ಅನುಪಮ ಸೇವಾಕಾಂಕ್ಷೆ, ಅಚಲ ಕಾರ್ಯ ನಿಷ್ಠೆ, ವಿಶ್ವ ಮಾನವ ಪ್ರೇಮ, ಶುದ್ಧ ಮಾನವತಾ ವಾದ ಮೊದಲಾದ ಸದ್ಗುಣಗಳ ಸಾಕಾರ ಮೂರ್ತಿಯಾದ ಶಿವಬಸವರನ್ನು ಕಂಡು ಹಾನಗಲ್ಲಪ್ಪಗಳು ಸುಪ್ರಸನ್ನರಾದರು. ಹಾನಗಲ್ಲಿನ ಭಕ್ತರೂ ಅಪೇಕ್ಷಿಸಿದರು. ನಾಗನೂರಿನ ರುದ್ರಾಕ್ಷಿ ಮಠದ ಶಿವಬಸವ ಸ್ವಾಮಿಗಳನ್ನೇ ತಮ್ಮ ಮಠದ ಉತ್ತರಾಧಿಕಾರಿಗಳನ್ನಾಗಿ ಸ್ವೀಕರಿಸಬೇಕೆಂದು ಬೇಡಿದರು. ಭಕ್ತರ ಬೇಡಿಕೆ ಶಿವಯೋಗಿಗಳ ಮನಸ್ಸಿಗೂ ಬಂತು. ಒಂದು ದಿನ ಇದೇ ಶಿವಯೋಗ ಮಂದಿರದಲ್ಲಿ ಶಿವಬಸವ ಸ್ವಾಮಿಗಳನ್ನು ಕೇಳಿಯೇ ಬಿಟ್ಟರು.

'ಮರಿದೇವರು, ಶಿವಸಂಕಲ್ಪ ಏನಿದೆಯೊ ಕಾಣೆ, ಆದರೆ ಈ ಮಣ್ಣಿನ ದೇಹ ದಲ್ಲಿ ಅಡಗಿರುವ ಮಂಗಬುದ್ಧಿಯು ಈ ಮನಸ್ಸು ಮತ್ತೆ ಮತ್ತೆ ಕಾಡುತ್ತಿದೆ. ನೀವು ನಮ್ಮ ಸ್ಥಾನವನ್ನು ತುಂಬಬೇಕು' ಎಂದು. ಇದಕ್ಕೆ ನಿಮ್ಮ ಒಪ್ಪಿಗೆ ಇದೆಯೇ ?

'ಕೊಟ್ಟ ಕುದುರೆಯನೇರದವನು ಶೂರನೂ ಅಲ್ಲ, ಧೀರನೂ ಅಲ್ಲ. ಕಟ್ಟಿದ ಲಿಂಗವ ಬಿಟ್ಟು, ಬೆಟ್ಟದ ಲಿಂಗಕ್ಕೆ ಹೋಗಿ ಹೊಟ್ಟಡಿಯಾಗಿ ಬೀಳುವ ಲಟ್ಟಿ ಮೂಳ ನಾನಾಗಲಾರೆ!'

'ನಿಮ್ಮ ಶ್ರದ್ಧೆ, ನಿಷ್ಠೆ ಶ್ಲಾಘನೀಯ. ಆದರೂ ನೀವಿರುವ ನಾಗನೂರಿನ ರುದ್ರಾಕ್ಷಿ ಮಠ ಏನೇನೂ ಸಾಲದು. ನಿಮ್ಮ ಮನೋಧರ್ಮಕ್ಕೆ ಅದು ಸಮರ್ಥ ಕ್ಷೇತ್ರವಾಗಲಾರದು ; ವ್ಯಾಪ್ತಿ ಕಡಿಮೆ ಅದಕ್ಕಾಗಿ.........'

'ಉತ್ಪನ್ನವಿದ್ದುದನ್ನೇ ಹುಡುಕುವುದು ನನ್ನ ಮನೋಧರ್ಮ ಅಲ್ಲ ಗುರುದೇವ. ಚಿಕ್ಕದಿದ್ದರೂ ಚಿಂತೆಯಿಲ್ಲ. ಅರ್ಹತೆ ಇದ್ದರೆ ಇಂದಿನ ಈ ಚಿಕ್ಕದೇ ನಾಳೆ ದೊಡ್ಡ ದಾಗಬಹುದು'

'ನಿಮ್ಮಲ್ಲಿನ ಗುಣರತ್ನಕ್ಕೆ ಮಾರುಹೋಗಿ ಹುಬ್ಬಳ್ಳಿಯ ರುದ್ರಾಕ್ಷಿಮಠದ ಭಕ್ತರೂ ನೀವೇ ಆ ಮಠದ ಅಧಿಕಾರ ಸ್ವೀಕರಿಸಬೇಕೆಂದು ಬೇಡುತ್ತಿದ್ದಾರೆ. ಇತ್ತ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹಾಳಕೇರಿಯ ಅನ್ನದಾನೇಶ್ವರರೂ ಮತ್ತು ಇಳಕಲ್ಲಿನ ವಿಜಯ ಮಹಾಂತೇಶರೂ ನಿಮ್ಮನ್ನು ತಮ್ಮ ಉತ್ತರಾಧಿಕಾರಿಯನ್ನಾಗಿಸಲು ಹಂಬಲಿಸುತ್ತಿದ್ದಾರೆ. ಒಳ್ಳೆಯ ವಸ್ತು ಯಾರಿಗೆ ಬೇಡ! ಎಲ್ಲರಿಗೂ ಬೇಕು.'

'ತಮ್ಮ ಆಶೀರ್ವಾದವೊಂದಿದ್ದರೆ ಇದ್ದಲ್ಲಿಯೇ ಬೆಳೆಯಬಲ್ಲೆ ಎಂಬ ನಂಬಿಕೆ ನನಗಿದೆ ಗುರುದೇವ. ನಾಗನೂರಿನಲ್ಲೇ ನನ್ನನ್ನಿರಿಸುವ ಕೃಪೆಮಾಡಬೇಕೆಂದು ಬೇಡುತ್ತೇನೆ.'

'ನಿಮ್ಮಿಚ್ಛೆಯಂತೆಯೇ ಆಗಲಿ. ಕಾಯಕಮಾಡಿ ಕೈಲಾಸ ನಿರ್ಮಿಸಿರಿ ; ಮೌನದಲ್ಲಿದ್ದು ಮಹತ್ತನ್ನು ಸಾಧಿಸಿ. ನಕ್ಷತ್ರ ನಿಹಾರಿಕೆಯ ಧ್ರುವತಾರೆ ಚಿಕ್ಕ ಚುಕ್ಕಿಯಾಗಿ ಕಂಡರೂ ಜಗತ್ತಿನ ತಮಾಂಧವನ್ನು ನೀಗುವ, ಪ್ರಜ್ವಲಿಸುವ ಜ್ಯೋತಿಪುಂಜ. ಇಂದಿನ ಚಿಕ್ಕದಾದ ನಾಗನೂರಿನ ರುದ್ರಾಕ್ಷಿ ಮಠ ನಿಮ್ಮಿಂದಾಗಿ ಪ್ರಭಾ ಪುಂಜವಾಗಿ ಬೆಳಗಲಿ. ಉಜ್ವಲ ಭವಿಷ್ಯ ಆದರದಾಗಲಿ! ನಿಮ್ಮ ಸೇವೆಯಲ್ಲಿಯೇ ನಿಮಗೆ ಶಿವನ ಸಾಕ್ಷಾತ್ಕಾರವಾಗುವುದು. ನಿಮ್ಮ ಈ ಸೌಜನ್ಯದ ಕೈಂಕರ್ಯದಿಂದಲೇ ಲೋಕೋದ್ಧಾರವಾಗುವುದು, ಶೀಲವು ಸಂವರ್ಧಿಸುವುದು. ಎಲ್ಲವನ್ನೂ ಪ್ರಸಾದ ಭಾವನೆಯಿಂದ ಕಾಣುವ ನಿಮಗೆ ಆ ಪ್ರಸಾದವೇ ಪರಮ ಧ್ಯೇಯವಾಗುವುದು. ಅದರಲ್ಲಿಯೇ ನಿಮ್ಮ ಜೀವನದ ಸುಳುಹೂ ಇದೆ, ಹೊಳಹೂ ಇದೆ. ನಿಮಗೆ ಶುಭವಾಗಲಿ.'

ಮಹಾನುಭಾವನ ಹೃದಯ ತುಂಬಿದ ಆಶೀರ್ವಾದ ಶಿವಬಸವ ಸ್ವಾಮಿಗಳಿಗೆ ನೂರು ಭುಜ, ಸಹಸ್ರ ತೋಳುಗಳಾಗಿ ಪರಿಣಮಿಸಿತು. ಅನಂತರ ಮತ್ತೆ ಒಂದು ದಿನ,

'ಮರಿದೇವರು, ಇತ್ತ ಬನ್ನಿ'

—ಎಂದು ಹತ್ತಿರ ಕರೆದು ಹಾಲಕೆರೆ ಅನ್ನದಾನೀಶ್ವರ ಮಹಾಸ್ವಾಮಿಗಳವರಿಂದ ಆಶ್ರಮ (ಸ್ಥಲ) ದೀಕ್ಷೆ ಕೊಡಿಸಿ, 'ನೀನು ಲೋಕೋಪಕಾರಿಯಾಗು, ಲೋಕೋದ್ಧಾರಕನಾಗು!' ಎಂದು ಆಶೀರ್ವದಿಸಿ ತಮ್ಮ ಕೊರಳಲ್ಲಿದ್ದ ರುದ್ರಾಕ್ಷಿ ಸರವನ್ನು ತೆಗೆದು ಇವರ ಕೊರಳಿಗೆ ಹಾಕಿ ಹರಸಿದರು. ಮತ್ತು ತಮ್ಮ ಪವಿತ್ರ ಹಸ್ತದಿಂದ, ಸ್ವಂತ ಕಾಯಕದಿಂದ ತಯಾರಿಸಿದ ವಿಭೂತಿ ಘಟ್ಟಿಯೊಂದನ್ನು ಅನುಗ್ರಹಿಸಿದರು. ಈ ಎರಡೂ ವಸ್ತುಗಳು ಇಂದಿಗೂ ಗುರುಶಿಷ್ಯರ ಸುಸ್ಮೃತಿಯ ಕುರುಹಾಗಿ ನಮ್ಮ ನಾಗನೂರಜ್ಜಗಳ ಬಳಿಯಲ್ಲಿವೆ.

ನಮ್ಮ ನಾಡು ಸರ್ವಾಂಗ ಸುಂದರವಾಗಬೇಕು ಎಂಬ ಹಂಬಲ ಒಂದು ಕಡೆ, ಭರತ ಖಂಡದ ದಾರುಣ ದಾರಿದ್ರ್ಯದ ನೋವು ಮತ್ತೊಂದು ಕಡೆ. ಇವೆರಡೂ ನಮ್ಮ ನಾಗನೂರಜ್ಜನವರನ್ನು ಕಾಡತೊಡಗಿದವು. 'ನನ್ನ ರಾಷ್ಟ್ರದ ಜನ ಹೊಟ್ಟೆ ತುಂಬ ಅನ್ನ ಕಾಣುವವರೆಗೆ ನಾನು ಅರೆ ಹೊಟ್ಟೆ ಊಟ ಮಾಡುವೆ ; ಮೈ ತುಂಬ ಬಟ್ಟೆ ಹೊದೆಯುವವರೆಗೆ ನಾನು ಅರೆಬತ್ತಲೆ ಇರುತ್ತೇನೆ, ಎಂದು ಪೂಜ್ಯ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬಾಪೂಜಿಯವರು ಪ್ರತಿಜ್ಞೆಮಾಡಿ, ಅದರಂತೆಯೇ ನಡೆದುಕೊಂಡಂತೆ, ನಮ್ಮ ಈ ಪೂಜ್ಯರು ಒಂದು ತುಂಡು ಬಟ್ಟೆ, ಒಂದು ಹೊತ್ತು ಊಟ ಮಾತ್ರ ಸ್ವೀಕರಿಸಿದರು. ಬದುಕಿನ ಜೀವರಸವಾದ ಅನ್ನವೇ ಇಲ್ಲದ ಮೇಲೆ ಬದುಕುವ, ಬೆಳೆಯುವ ಬೌದ್ಧಿಕ ಮಾನಸಿಕ ವಿಕಾಸ – ಉಲ್ಲಾಸಗಳ ಮಾತು ಬಹಳೇ ದೂರ ಉಳಿಯಿತು. 'ಹಸಿದ ಹೊಟ್ಟೆಗೆ ನಿನ್ನ ವೇದಾಂತ ಬೇಡ, ಉಪದೇಶ ಬೇಡ! ಮೊದಲು ಅನ್ನ ಕೊಡು ಆಮೇಲೆ ನಿನ್ನ ಉಪದೇಶ' ಎಂದು ಸಾರಿದ ಸ್ವಾಮಿ ವಿವೇಕಾನಂದರ, ನುಡಿ ನಮ್ಮ ಗುರುಗಳ ಕಿವಿಯ ಗಹ್ವರಗಳಲ್ಲಿ ಸದಾ ಪ್ರತಿಧ್ವನಿಸುತ್ತಿತ್ತು. 'ಅನ್ನ ದೇವರ ಮುಂದೆ ಇನ್ನು ದೇವರು ಇಲ್ಲ' ಎಂಬುದರ ನಿಜವಾದ ಅರ್ಥ ತಿಳಿದರು. ಆರುಹಿಗೆ ಮೊದಲು ಅನ್ನ ; ಆದ್ದರಿಂದ ಶಾಲೆ ಕಾಲೇಜು ಓದುವ ವಿದ್ಯಾರ್ಥಿ ವಿದ್ಯಾರ್ಥಿನಿಯರ ಅನ್ನ ಬ್ರಹ್ಮನನ್ನು ತೃಪ್ತಿಪಡಿಸುವ ಪ್ರಥಮ ಚಿಕಿತ್ಸೆಯನ್ನು ಕೈಗೊಂಡರು. ಅನೇಕ ಪ್ರಸಾದ ನಿಲಯಗಳನ್ನು ಸ್ಥಾಪಿಸುವ ಮೂಲಕ ಕೃತ ಕಾರ್ಯದಲ್ಲಿ ಯಶಸ್ವಿಯಾದರು.

'ನಾಗನೂರ ಮಠದಲ್ಲಿ ಕುಳಿತು ತ್ರಿಕಾಲ ಪೂಜೆ ಮಾಡಿದರೆ ಸಾಲದು. ಅದರಿಂದ ಕೇವಲ ಆತ್ಮಕಲ್ಯಾಣವಾದೀತು. ಆದರೆ ಲೋಕಕಲ್ಯಾಣವಾಗಬೇಕಾದರೆ ಕಾಯಕ ಮಾಡಬೇಕು. ಶಿವಪೂಜೆಯಷ್ಟೇ ಮುಖ್ಯ ಮನುಕುಲದ ಸೇವೆ, ಪ್ರತಿಯೊಬ್ಬ ವ್ಯಕ್ತಿಯೂ ಪರಶಿವನ ಚಿತ್‌ಶಕ್ತಿಯ ಪ್ರತ್ಯಕ್ಷ ರೂಪ. ಪ್ರತಿಯೊಬ್ಬ ವಿದ್ಯಾರ್ಥಿಯೂ ಪ್ರಜ್ಞಾನ ಬ್ರಹ್ಮನ ಕಿರುಮೂರ್ತಿ. ಅವನು ಓದುವ ಪ್ರತಿ ಪುಸ್ತಕವೂ ಪರಶಿವನ ಮಹಾಮಸ್ತಕ ; ಪುಸ್ತಕದ ಪ್ರತಿ ಪುಟವೂ ವಿಶ್ವಾತ್ಮನಾದ ಆ ಮಹಾದೇವನ ಮಂತ್ರ ಪೂತ ಪಟ ; ಅವನು ಬರೆಯುವ ಪ್ರತಿ ಅಕ್ಷರವೂ ಅಕ್ಷಯವಾದ ಮಂತ್ರ ಬೀಜ. ಅವನ ತಪೋದ್ಭೂತ ನಿತ್ಯ ನಂದಾದೀಪದ ಪ್ರಕಾಶದಲ್ಲಿ ಸರಸ್ವತಿಯು ನರ್ತಿಸುತ್ತಾಳೆ. ಅವನ ಪೌರುಷ ಪ್ರಯತ್ನಗಳ ಸರೋವರದಲ್ಲಿ ಸೌಭಾಗ್ಯಲಕ್ಷ್ಮಿಯು ನರ್ತಿಸುತ್ತಾಳೆ. ಆದ್ದರಿಂದಲೇ ವಿದ್ಯಾರ್ಥಿ ಎಂಬುವನು ಓರ್ವ ಮಹಾತಪಸ್ವಿ ಎಂದು ಕರೆದು ಕೊಳ್ಳುವುದು. ಅಂತಹ ತಪಸ್ವಿಯ ಸಂರಕ್ಷಣೆ ನಿನ್ನ ಮೊದಲ ಕೆಲಸವಾಗಲಿ' ಎಂಬ ಅಂತರಾತ್ಮನ ಬೋಧನೆಯಾಯಿತು ನಮ್ಮ ಶ್ರೀಗಳವರಿಗೆ.

ಅವರು ಕೂಡಲೆ ಮೇಲೆದ್ದರು. ಬೆಳಗಾವಿ ನಗರದಲ್ಲಿ ಪುಟ್ಟ ಪ್ರಮಾಣದ ಪ್ರಸಾದನಿಲಯ ತೆರೆದರು. ಅಂದು, ಅಂದರೆ 1932ರ ಜೂನ್ 6 ನೇ ತಾರೀಖು ಇದ್ದ ವಿದ್ಯಾರ್ಥಿಗಳ ಸಂಖ್ಯೆ ಕೇವಲ ಇಪ್ಪತ್ತೈದು. ಇಂದಿನವರೆಗೆ ಸುಮಾರು ಇಪ್ಪತ್ತೈದು ಸಹಸ್ರ ಸಂಖ್ಯೆಯ ವಿದ್ಯಾರ್ಥಿಗಳು ಅದರಲ್ಲಿ ಪ್ರಸಾದ ಸ್ವೀಕರಿಸಿ ವಿದ್ಯಾವಂತರಾಗಿದ್ದಾರೆ. ಈ ಪ್ರಸಾದ ನಿಲಯ ಮೊದಲು ಬೆಳಗಾವಿಯ ಕಿಲ್ಲೆಯಲ್ಲಿ ಸಣ್ಣ ಗೂಡೊಂದರಲ್ಲಿ ಆರಂಭವಾಯಿತು. ಆದರೆ ಬಹುದಿನ ಅಲ್ಲಿರಲಾಗಲಿಲ್ಲ. ಅದು ಊರಿಗೆ ತುಂಬಾ ದೂರದಲ್ಲಿದ್ದುದರಿಂದ ಮಳೆಗಾಲದಲ್ಲಿ ಸೋರಿ ರೋಗರುಜಿನಗಳಿಗೆ ಕಾರಣವಾಗುತ್ತಿದ್ದುದರಿಂದ ಅದನ್ನು ಶಹಾಪೂರಕ್ಕೆ ವರ್ಗಾಯಿಸಲಾಯಿತು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಹಾಪುರದಲ್ಲಿದ್ದುದೂ ಒಂದು ಹಳೆಮನೆಯೇ! ಆದರೆ ಅದು ತುಂಬಾ ದೊಡ್ಡದು. ಬೋಳಮಲ್ಲರಿಗೆ ಸೇರಿದ್ದ ಆ ಮನೆಯಲ್ಲಿ ಯಾರೂ ವಾಸಿಸುತ್ತಿರಲಿಲ್ಲ. 'ದೆವ್ವದ ಮನೆ' ಎಂದು ಹೆಸರಾಗಿ ಬಹಳ ದಿನಗಳವರೆಗೆ ಖಾಲಿ ಇತ್ತು. ಹಲವರು ಅದು ಪ್ರಸಾದ ನಿಲಯ ಆಗುವುದು ಬೇಡ ಅಂದರು. ಆಗ ನಮ್ಮ ಗುರುಗಳು—'ನೋಡಿ ಸ್ವಾಮಿಗಳಿಗೆ ಇಂಥ ಬೇಡವಾದ ಮನೆ (ದೆವ್ವದ ಮನೆ), ಹಿಂಡದ ಆಕಳು, ಬೆಳೆಯದ ಹೊಲ ಇವುಗಳನ್ನೇ ಕೊಡುತ್ತಾರೆ. ಆದರೆ ಶಿವನ ಕೃಪೆಯಿಂದ ಇಂಥ ನಿರುಪಯುಕ್ತ ಭಯಾನಕ ಸ್ಥಳಗಳೇ ಎಲ್ಲರಿಗೂ ಬೇಕಾಗುವ ಕ್ಷೇತ್ರಗಳಾಗುತ್ತವೆ. ಶಿವನಿಚ್ಛೆ ಏನಿದೆಯೋ! ಪಾಲಿಗೆ ಬಂದದ್ದು ಪರಮಾನ್ನ! ಬೇಡ ಎನ್ನಲಾರೆ' ಎಂದು ನಕ್ಕು ನುಡಿದರು. ಸ್ವೀಕರಿಸಿದರು. ಅನಂತರ ಹನುಮನ ಬೀದಿಯಲ್ಲಿ ಸ್ವತಂತ್ರವಾದ ಭವ್ಯ ಕಟ್ಟಡದಲ್ಲಿ 'ಶ್ರೀ ಕುಮಾರೇಶ್ವರ ಪ್ರಸಾದ ನಿಲಯ' ಎಂಬ ಅಭಿದಾನದಿಂದ ಅಸ್ತಿತ್ವಕ್ಕೆ ಬಂತು.

'ಸಮಾಜ ಪ್ರಗತಿ, ಸಮಾಜ ಪ್ರಗತಿ'—ಇದು ನಮ್ಮ ಶಿವಬಸವ ಸ್ವಾಮಿಗಳ ನಿತ್ಯಗಾಯಿತ್ರಿಯಾಗಿತ್ತು. ಅದಕ್ಕಾಗಿ ಹಲವು ಯೋಜನೆಗಳನ್ನು ಹಮ್ಮಿಕೊಂಡರು. ಅವುಗಳಲ್ಲಿ ಪ್ರಸಾದ ನಿಲಯ ಸ್ಥಾಪನೆ ಮೊದಲನೆಯದು. ಅದು ಆಗಿ ಮುಗಿಯಿತು. ಎರಡನೆಯದು, ಶಿಕ್ಷಣ ಸಂಸ್ಥೆಗಳ ಸಂಸ್ಥಾಪನೆ. ಬೆಳಗಾವಿಯಲ್ಲಿ ಶ್ರೀ ಸಿದ್ಧರಾಮೇಶ್ವರ ಶಿಕ್ಷಣ ಸಂಸ್ಥೆಯ ಆಶ್ರಯದಲ್ಲಿ ಶ್ರೀ ಸಿದ್ಧರಾಮೇಶ್ವರ ಪ್ರೌಢಶಾಲೆ, ಅಂಗನವಾಡಿ ಶಿಕ್ಷಕರ ತರಬೇತಿ ಕೇಂದ್ರ, ಜಗದ್ಗುರು ಶ್ರೀಗುರು ಸಿದ್ಧೇಶ್ವರ ಗ್ರಂಥ ಭಂಡಾರ, ಸಂಸ್ಕೃತ ಪಾಠಶಾಲೆ, ಔದ್ಯೋಗಿಕ ತರಬೇತಿ ಕೇಂದ್ರ, ಕಿರಿಯ ಮಹಾವಿದ್ಯಾಲಯ, ಸಿರಸಿಯ ಬಂಟಭಕ್ತ ಮಹಾದಾನಿ ಶ್ರೀ ಆರ್. ಎ. ಶೆಟ್ಟಿಯವರ ಹೆಸರಿನಲ್ಲಿ ಒಂದು ತಾಂತ್ರಿಕ ಶಿಕ್ಷಣಶಾಲೆ, ಒಂದು ಬೃಹತ್ ಪ್ರಮಾಣದ ಕಲ್ಯಾಣ ಮಂಟಪ, ಗ್ರಂಥಾಲಯ, ಓಲೆಗ್ರಂಥಗಳ ಸಂಗ್ರಹಾಲಯ—ಇವೆಲ್ಲವೂ ಶ್ರೀ ಶ್ರೀಗಳವರ ಸಾಧನೆ ಸಿದ್ಧಿಗಳು, ಅಂತೆಯೇ ಬೆಂಗಳೂರಿನಲ್ಲಿ ಜಯನಗರ ಬಡಾವಣೆಯಲ್ಲಿ ಒಂದು ಕಲ್ಯಾಣಕೇಂದ್ರವನ್ನು ಸ್ಥಾಪಿಸಿದರು. ಮುಧೋಳದ ಶ್ರೀ ಮೃತ್ಯುಂಜಯ ಮಹಾಸ್ವಾಮಿಗಳ ನೆರವಿನಿಂದ ಶ್ರೀ ಗುರುಲಿಂಗಯ್ಯ ಮಡಿವಾಳಯ್ಯ ಹಿರೇಮಠರವರು ಗೌರವ ಕಾರ್ಯದರ್ಶಿಗಳಾಗಿ ಇಂದಿಗೂ ಕಾರ್ಯ ನಿರ್ವಹಿಸುತ್ತಿದ್ದಾರೆ. ಶ್ರೀ ಕೊಠಾವಳಿಯವರು ಮೊದಲ ಅಧ್ಯಕ್ಷರಾಗಿದ್ದರು. ಈಗ ಚಂದ್ರಶೇಖರಯ್ಯ ಅನ್ನದಾನಯ್ಯ ಜಮಖಂಡಿ ಮಠರವರುಅಧ್ಯಕ್ಷರಾಗಿದ್ದಾರೆ. ಬೆಂಗಳೂರಿನ ಆ ಸಂಸ್ಥೆಗೆ ನಾಗನೂರ ಶ್ರೀ ಶಿವಬಸವಸ್ವಾಮಿಗಳ ಕಲ್ಯಾಣ ಕೇಂದ್ರ ಎಂದೇ ಹೆಸರಿಟ್ಟಿದ್ದಾರೆ. ಅಲ್ಲಿ ಜಾತಿ ಮತ ಭೇದವಿಲ್ಲ. ಯಾರೇ ಐ.ಎ.ಎಸ್. ಐ.ಪಿ.ಎಸ್. ಪರೀಕ್ಷೆ ಗೆಗೆದುಕೊಳ್ಳಲಿ ಅವರಿಗೆ ವಿದ್ಯಾರ್ಥಿವೇತನ ನೀಡಿ ಪ್ರೋತ್ಸಾಹಿಸುತ್ತಾರೆ. ನೂರಾರು ಜನ ಕಲ್ಯಾಣ ಕೇಂದ್ರದ ನೆರವು ಪಡೆದು ಮುಂದೆ ಬಂದಿದ್ದಾರೆ.

ಇಂತಹ ಮಹಾಮೂರ್ತಿಯ ನಾಡು, ನುಡಿಗಳ ಕೀರ್ತಿಧ್ವಜವನ್ನು ಎತ್ತಿ ಹಿಡಿದು, ವೀರ ವಿರಕ್ತನಾದರೂ ಜ್ಞಾನಾನುರಕ್ತನಾಗಿ ದುಡಿದ ಮಹದ್ವಿಭೂತಿಯು,

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇಂದು ನಮ್ಮ ಈ ಶಿವಾನುಭವ ಸಮ್ಮೇಳನಾಧ್ಯಕ್ಷರಾಗಿರುವುದು ನಮ್ಮೆಲ್ಲರ ಭಾಗ್ಯ ವಿಶೇಷ. ಯಾವ ಕ್ಷೇತ್ರದಲ್ಲಿ ತಾವು ಶಿಕ್ಷಣ ಪಡೆದರೊ ಅದೇ ಕ್ಷೇತ್ರದ ಪ್ರಗತಿಗಾಗಿ ಅಹೋರಾತ್ರಿ ಶ್ರಮಿಸಿದ ಈ ಮಹಾಚೇತನಕ್ಕೆ ಪ್ರಣಾಮಪೂರ್ವಕ ಸ್ವಾಗತಕೋರಿ, ಸಮ್ಮೇಳನದಲ್ಲಿ ಎಲ್ಲ ಕಾರ್ಯಗಳನ್ನೂ ಸುಸೂತ್ರವಾಗಿ ನಡೆಸಿಕೊಡಬೇಕೆಂದು ಅನನ್ಯ ಭಕ್ತಿ ಪುರಸ್ಸರವಾಗಿ ಪ್ರಾರ್ಥಿಸಿಕೊಂಡು ವಿರಮಿಸುತ್ತೇನೆ.'

ನಿಯೋಜಿತ ಕಾರ್ಯಕ್ರಮದಂತೆ ನಿಡಸೋಸಿಯ ಜಗದ್ಗುರು ಶ್ರೀ ನಿಜಲಿಂಗೇಶ್ವರ ಮಹಾಸ್ವಾಮಿಗಳು ದೀಪ ಬೆಳಗಿಸುವ ಮೂಲಕ ಸಮ್ಮೇಳನವನ್ನು ಉದ್ಘಾಟಿಸಿದರು. ಕಿಕ್ಕಿರಿದ ಜನಸ್ತೋಮ ಚಪ್ಪಾಳೆ ತಟ್ಟಿ ತನ್ನ ಹರ್ಷ ವ್ಯಕ್ತಪಡಿಸಿತು. ಉದ್ಘಾಟಕರಾದ ನಿಡಸೋಸಿ ಜಗದ್ಗುರುಗಳವರು ಜನತೆಯನ್ನೂ ಆಶ್ರಮದ ವಟುಗಳನ್ನೂ ಹರಗುರು ಚರಮೂರ್ತಿಗಳನ್ನೂ ಉದ್ದೇಶಿಸಿ ಮಾತನಾಡಿದರು.

'ನಮ್ಮೆಲ್ಲರ ಆರಾಧ್ಯ ದೈವ ಹಾನಗಲ್ಲ ಕುಮಾರೇಶನ ಪವಿತ್ರ ಪಾದಗಳನ್ನು ಸ್ಮರಿಸಿ, ಸಭಾಧ್ಯಕ್ಷ ಶ್ರೀ ನಾಗನೂರಜ್ಜಗಳಿಗೆ ಶರಣು ಸಮರ್ಪಿಸಿ, ಉಪಸ್ಥಿತರಿರುವ ಹರಗುರು ಚರಮೂರ್ತಿಗಳೆ, ಅಭಿಮಾನೀ ವಟುಗಳೇ ಹಾಗೂ ಆತ್ಮೀಯರೆ'

ಶಿವಾನುಭವ ಸಮ್ಮೇಳನದಂತಹ ಸ್ತುತ್ಯಕಾರ್ಯವನ್ನು ತನ್ನ ಕೈಗೆತ್ತಿಕೊಂಡು ಶಿವಯೋಗ ಮಂದಿರ ಇಂದು ನಮ್ಮೆಲ್ಲರ ಕೃತಜ್ಞತೆಗೆ ಪಾತ್ರವಾಗಿದೆ. ಈ ಸಮ್ಮೇಳನಕ್ಕೆ ನಮ್ಮ ಅಭಿಮಾನದ ಮೂರ್ತಿ, ಮಹಾತಪಸ್ವಿ, ಕರ್ಮಯೋಗಿ ಶ್ರೀ ನಾಗನೂರ ಶಿವಬಸವ ಸ್ವಾಮಿಗಳನ್ನು ಅಧ್ಯಕ್ಷರನ್ನಾಗಿ ಆರಿಸಿರುವುದು ಚಿನ್ನಕ್ಕೆ ಸುವಾಸನೆಯನ್ನು ಕೊಟ್ಟಂತಾಗಿದೆ.

ಉದ್ಘಾಟನೆಯ ಈ ಸಂಸಂದರ್ಭದಲ್ಲಿ ಎರಡು ಮಾತು :

ಜಗತ್ತಿಗೊಂದು ಜಾಡ್ಯ ಯಾವಜ್ಜೀವವೂ ಅಂಟಿ ಬಂದಿದೆ. ಅದೇ ಜಾತಿ ಜಾಡ್ಯ ಅದರಿಂದ ಜಗತ್ತಿಗೆ ಮುಕ್ತಿ ಇಲ್ಲ, ಪಾಶ್ಚಾತ್ಯರಲ್ಲಿ ಕರಿಯ ಬಿಳಿಯ ಎಂಬ ವರ್ಣಭೇದ ವಿದ್ದರೆ, ಪೌರ್ವಾತ್ಯರಲ್ಲಿ ನೂರಾರು ಸಾವಿರಾರು ಜಾತಿಗಳಿವೆ. ಭಾರತಕ್ಕಂತೂ 'ಜಾತಿ' ಎಂಬುದು ಯಾರೊ ಕೊಟ್ಟ ಶಾಪ. ಆದು ಶಾಪದಿಂದ ದಿನದಿನಕ್ಕೂ ತಪ್ತವಾಗುತ್ತಿದೆ. ಇದರ ಪರಿಣಾಮವಾಗಿ ಬಹುಶಃ, ಒಂದಲ್ಲ ಒಂದುದಿನ ಅದರ ಸನಾತನ ಸಂಸ್ಕೃತಿಯ ಸರ್ವನಾಶ ನಿಶ್ಚಿತ. ಅಂತಾದಲ್ಲಿ ಭಾರತ ಭಾರತವಾಗಿ ಬದುಕಲಾರದು. ಆ ಪಿಡುಗನ್ನು ನಿವಾರಿಸಬಲ್ಲ ಏಕೈಕ ಧರ್ಮ ಎಂದರೆ ವೀರಶೈವ. ಮುಖದ ಮೇಲೆ ಉಗುಳಿ ಮತಾಂತರಗೊಳಿಸಬೇಕೆಂಬ ಬರ್ಬರ ಬುದ್ಧಿಯಾಗಲಿ, ಗುಳ್ಳೆನರಿಯಂತೆ ನಯದ ಮಾತುಗಳನ್ನಾಡಿ ಅಮಾಯಕರನ್ನು ತನ್ನ ಕುಲಕ್ಕೆ ಸೇರಿಸಿ ಕೊಳ್ಳುವ ಕುಟಿಲತೆಯಾಗಲಿ, ತುಂಬು ಮುಡಿತನದಿಂದ ಮಾನವತೆಯನ್ನೇ ಮಾರಿ ಕೊಳ್ಳುವ ಪಾಷಂಡ ಹೃದಯವಾಗಲಿ ಈ ಧರ್ಮಕ್ಕಿಲ್ಲ. ಇದರದು ವಿಶ್ವ ವಿಶಾಲ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭಾವನೆ. ಸರ್ವರೂ ಸಾಕ್ಷಾತ್ ಶಿವಸ್ವರೂಪಿಗಳು. ಒಬ್ಬನಿಗೆ ಅನ್ಯಾಯ ಎಸಗಿದರೆ ಶಿವನಿಗೇ ದ್ರೋಹ ಬಗೆದಂತೆ ಎಂಬ ಭಾವನೆ ಈ ಧರ್ಮದ್ದು.

ಮನುಷ್ಯನಾಗಿ ಹುಟ್ಟಿದ ಯಾವನೇ ವ್ಯಕ್ತಿ ಇರಲಿ ಅವನು ತಾಯ ಗರ್ಭದಿಂದ ಹೊರಬರುವಾಗ ತನ್ನದು ಈ ಜಾತಿ ಅಥವಾ ಆ ಜಾತಿ ಎಂಬ ಹಣೆಪಟ್ಟಿ ಹಚ್ಚಿಸಿ ಕೊಂಡು ಬಂದಿರುವುದಿಲ್ಲ. ಜನ್ಮ ತಳೆದ ಶಿಶುವಿಗೆ ಯಾವ ಜಾತಿಯೂ ಇಲ್ಲ, ಯಾವ ಕುಲವೂ ಇಲ್ಲ, ಯಾವ ಗೋತ್ರವೂ ಇಲ್ಲ. ಆದ್ದರಿಂದ ಮಹಾ ಕವಯಿತ್ರಿ ಜಯದೇವಿ ತಾಯಿ ಲಿಗಾಡೆಯವರು ಹುಟ್ಟಿಗೆ ಕುಲವಿಲ್ಲ ಎಂದು ಹೇಳುತ್ತಾರೆ :

ಹುಟ್ಟಿಗೆ ಕುಲವಿಲ್ಲ, ಬಟ್ಟೆಗೆ ಬೆಲೆ ಇಲ್ಲ
ಮುಟ್ಟ ಅರಿಬೇಕು ಆಚಾರದ—ಶಿವನಲ್ಲಿ
ದಿಟ್ಟ ಇಡಬೇಕು ನಿಶ್ಚಯ

ಅಂತೆಯೇ,

'ಬಟ್ಟೆಗೆ ಬೆಲೆಯಿಲ್ಲ' ಅಂದರೆ ಬದುಕು ಮಾಡಲು ಪ್ರತಿ ಜೀವಿಯೂ ಆಶ್ರಯಿಸಿದ ಕಾಯಕಕ್ಕೆ ಬೆಲೆಕಟ್ಟಬರುವುದಿಲ್ಲ. ಅಂದರೆ ಮೇಲು ಕೀಳು ಎಂಬ ತಾರತಮ್ಯ ಇಲ್ಲ. ಪೂಜೆಯ ಕಾಯಕ ಎಷ್ಟು ಶ್ರೇಷ್ಠವೊ ಮೋಚ್ಚೆ ಕಾಯಕ ಅಷ್ಟೇ ಶ್ರೇಷ್ಠ, ಪವಿತ್ರ. ಅದನ್ನೇ (The Dignity of Labour) ಎನ್ನುತ್ತಾರೆ. ಕಾಯಕದ ಹಿರಿಮೆಯನ್ನು ಎತ್ತಿಹಿಡಿದು ಧಾರ್ಮಿಕ ಸುಧಾರಣೆಗೆ ಸಾಮಾಜಿಕ ಕ್ರಾಂತಿಯ ತಿರುವು ಕೊಟ್ಟ ಕೀರ್ತಿ ವೀರಶೈವಕ್ಕೆ ಸಲ್ಲುತ್ತದೆ. ಈ ದಿಸೆಯಲ್ಲಿ ವಿಶ್ವೇತಿಹಾಸದಲ್ಲಿ ವಿಶ್ವಮಾನವ ಬಸವಣ್ಣನದು ಮೊದಲ ಹೆಸರು. ರಾಷ್ಟ್ರಕನಲ್ಲಿ ಕಾಯಕನಿಷ್ಠೆ ಇರಬೇಕು. ಸತ್ಯ ಶುದ್ಧ ಕಾಯಕದ ಅನುಷ್ಠಾನ ಅವನ ಆದ್ಯ ಕರ್ತವ್ಯ. ಅವನಿಗೆ ದುಡಿಮೆಯೇ ದೇವರು. ಆದ್ದರಿಂದ ಪ್ರತಿಯೊಬ್ಬನೂ ದುಡಿದು ತಿನ್ನಬೇಕು ; ಕಾಯಕವೇ ಕೈಲಾಸ. ತಾನು ಕೈಗೆತ್ತಿಕೊಂಡ ಕಾಯಕದಲ್ಲಿ ಭಕ್ತಿ ಶ್ರದ್ಧೆ ಇರಬೇಕು. ಅದಕ್ಕೆ ಕೀಳು—ಮೇಲು ಎಂಬ ಸೂತಕ ತಟ್ಟಬಾರದು.

ಜಯದೇವಿ ತಾಯಿಯವರ ವೈಚಾರಿಕತೆಯ ಮೂರನೆಯ ಅಂಶ ಆಚಾರಕ್ಕೆ ಸಂಬಂಧಿಸಿದ್ದು. 'ಮುಟ್ಟ ಅರಿಬೇಕು ಆಚಾರದ' ಎನ್ನುತ್ತಾರೆ. ದುಡಿಮೆ ದಾನ ಏನೇ ಇದ್ದರೂ ಎಷ್ಟೇ ಇದ್ದರೂ ಆಚಾರ ರಹಿತ ವರ್ತನೆಯಾವಲ್ಲಿ ಅದು ಸಂಪೂರ್ಣ ನಿರರ್ಥಕ,

ಆಚಾರಕರಸಾಗು, ನೀತಿಗೆ ಪ್ರಭುವಾಗು
ಮಾತಿನಲಿ ಚೂಡಾಮಣಿಯಾಗು ನನ ಕಂದ
ಜ್ಯೋತಿಯೆ ಆಗು ಜನಕೆಲ್ಲ.

ಎನ್ನುತ್ತಾಳೆ ನಮ್ಮ ಜಾನಪದದ ತಾಯಿ. ಆದ್ದರಿಂದ ಆಚಾರ ಸಂಪನ್ನನಾಗಬೇಕು ಮನುಷ್ಯ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬಸವಣ್ಣನನ್ನು ಭಕ್ತಿ ಭಂಡಾರಿ ಎಂದು ಕರೆಯುತ್ತೇವೆ. ಅವನ ಭಕ್ತಿಯಷ್ಟೇ ಮಹತ್ವದ್ದು ಅವನ ಲೌಕಿಕ ಪ್ರಜ್ಞೆ. ಅಣ್ಣ ತುಂಬು ವಾಸ್ತವವಾದಿ. ವಾಸ್ತವಿಕ ಜಗತ್ತು ಮತ್ತು ಅದರ ಉದ್ಧಾರ ಇವೇ ಅವನ ಹಸಿವು; ಹಂಬಲ. ಮಾನವನ ಇಹದ ಬದುಕು ಸ್ಫುಟವಾಗಬೇಕು, ಋಜುವಾಗಬೇಕು, ಹಸನಾಗಬೇಕು, ಹದವಾಗಬೇಕು, ಒಳ್ಳೆಯ ಬೆಳಸು ಬೆಳೆಯುವ ಬೆಳ್ವೊಲವಾಗಬೇಕು. ಅಂತಾಗದಿದ್ದರೆ ಪರವನ್ನು ಕುರಿತ ಚಿಂತನೆ ನಿರರ್ಥಕ. ಪರವೆಂಬುದು ಬೇರೆಲ್ಲೂ ಇಲ್ಲ ಅದಿರುವುದು ಇಹದಲ್ಲೇ.

> ದೇವಲೋಕ ಮರ್ತ್ಯಲೋಕವೆಂಬುದು ಮತ್ತೆ ಬೇರುಂಟೆ ?
> ಈ ಲೋಕದೊಳಗೇ ಮತ್ತೆ, ಅನಂತಲೋಕ.

—ಎಂದು ಸಾರಿ ಸಾರಿ ಹೇಳಿದ್ದಾನೆ. ಹೇಳಿದ್ದಷ್ಟೇ ಅಲ್ಲ, ಅದೇ ಬಾಳು ಬಾಳಿದ್ದಾನೆ. ಅರ್ಥವಿಲ್ಲದ ಆದರ್ಶಕ್ಕೆ ಆತ ಬೆಲೆ ಕೊಡಲಿಲ್ಲ. ಸತ್ತಮೇಲೆ ತೆರೆಯುಬಹುದಾದ ಭಾವನಾಸ್ವರ್ಗ ಅವನ ಗೌರವಕ್ಕೆ ಪಾತ್ರವಾದ ವಸ್ತುವೇ ಅಲ್ಲ. ಅದಕ್ಕೆಂದೇ ನುಡಿದ—

> ' ಸತ್ತು ಬೆರೆಸಿಹೆನೆಂದರೆ ಕಬ್ಬಿನ ತುದಿಯ ಮೆಲಿದಂತೆ '

—ಎಂದು. ಕಬ್ಬಿನ ಕಾಂಡದ ಸವಿ ಅದರ ತುದಿಯಲ್ಲಿಲ್ಲ. ಕಬ್ಬಿನ ತುದಿ ಉಪ್ಪು ಇಲ್ಲವೆ ನೀರಸ. ಅದನ್ನು ಸವಿಯ ಹೋದವನ ಶ್ರಮ ವ್ಯರ್ಥ. ಆದುದರಿಂದ ಅದರ ಗೊಡವೆ ನಿನಗೆ ಬೇಡ. ಇಹದಲ್ಲಿ ಸಹಜವಾದ, ಸತ್ಯವಾದ, ಶುದ್ಧವಾದ ಬದುಕು ನಡೆಸು. ಅಷ್ಟು ಸಾಕು—ಎಂಬುದು ಅಣ್ಣನ ವಿವೇಕದ ಮಾತು. ಮಾನವ ಮಹಾ ದೇವನೆ ಆಗಲಿ ಅದರಲ್ಲಿ ಯಾವ ದೊಡ್ಡಸ್ತಿಕೆಯೂ ಇಲ್ಲ. ಆದರೆ ಅವನು ಮೊದಲು ಮನುಷ್ಯನಾಗಿದ್ದಾನೆಯೆ ಎಂಬುದು ಅಣ್ಣನ ಮೂಲಭೂತ ಪ್ರಶ್ನೆ. ಆದುದರಿಂದ ಮತ್ತೇನಾಗಲಿ ಬಿಡಲಿ, ಮನುಷ್ಯ ಮೊದಲು ತನ್ನಲ್ಲಿರುವ ಮಾನವೀಯ ಗುಣಗಳನ್ನು ಬೆಳೆಸಿಕೊಂಡು ಮನುಷ್ಯನಾದರೆ, ಆಗುವುದನ್ನು ಕಲಿತರೆ ಸಾಕು ಎಂಬ ತೃಪ್ತಿ ಅವನಿಗಿದ್ದಂತೆ ತೋರುತ್ತದೆ. ಒಟ್ಟಿನಲ್ಲಿ, ಮಾನವತಾವಾದಿಯಾದ ಬಸವಣ್ಣ ಮಾನವ ಮೊದಲು ಇಲ್ಲಿ ಸಲ್ಲಬೇಕು; ಸಂದರೆ ಸಾಕು ಎನ್ನುತ್ತಾನೆ.

> 'ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರಯ್ಯಾ'

—ಎಂದ. ಅವನ ದೃಷ್ಟಿಯಲ್ಲಿ ನಾವು ಮೊದಲು ಸಲ್ಲಬೇಕಾದ್ದು ಇಲ್ಲಿ; ಅಲ್ಲಲ್ಲ. ಇಲ್ಲಿ ಸಂದರೆ ಅಲ್ಲಿ ಸಂದಂತೆಯೇ. ಅಂತೂ ಇಹದಲ್ಲಿ ಪರವನ್ನು ಕಾಣುವುದು, ಕಂಡರಿಸು ವುದು, ಅವನ ಮುಖ್ಯೋದ್ದೇಶ. ಅಣ್ಣನ ಸ್ವರ್ಗ ನರಕಗಳ ಕಲ್ಪನೆ ವಿಶಿಷ್ಟವಾದುದ್ದು, ವಿಚಿತ್ರವೂ ಆದದ್ದು :

> ದೇವಲೋಕ ಮರ್ತ್ಯಲೋಕವೆಂಬುದು ಬೇರಿಲ್ಲ ಕಾಣಿ ಭೋ
> ಸತ್ಯವ ನುಡಿವುದೇ ದೇವಲೋಕ,
> ಮಿಥ್ಯವ ನುಡಿವುದೇ ಮರ್ತ್ಯಲೋಕ
> ಆಚಾರವೇ ಸ್ವರ್ಗ, ಅನಾಚಾರವೇ ನರಕ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

—ಅಂದರೆ ಸ್ವರ್ಗ ನರಕಗಳು ಬದುಕಿನಲ್ಲೇ ಇವೆ; ಬೇರೆಲ್ಲೊ ಅಂತರಿಕ್ಷದಲ್ಲಿಲ್ಲ. ಬದುಕನ್ನು ನಂದನವನನ್ನೊ, ನರಕವನ್ನೊ ಮಾಡಿಕೊಳ್ಳುವುದು ಸಂಪೂರ್ಣವಾಗಿ ವ್ಯಕ್ತಿಯನ್ನೇ ಅವಲಂಬಿಸಿದೆ ಎಂಬುದನ್ನು ಸ್ಪಷ್ಟಪಡಿಸಿದ್ದಾನೆ.

'ಸಂಸಾರ ತುಚ್ಛ, ಹೇಯ ಎಂದು ತೆಗಳಿದವರು ಹಲವರುಂಟು. ಆದರೆ ಅಣ್ಣನ ದೃಷ್ಟಿಯಲ್ಲಿ ಅದು ಒಂದು ಯೋಗ, ಸಂಸಾರಯೋಗ'

'ಗಂಡನ ಮೇಲೆ ಸ್ನೇಹವಿಲ್ಲದ ಹೆಂಡತಿ,
ಲಿಂಗದ ಮೇಲೆ ನಿಷ್ಠೆಯಿಲ್ಲದ ಭಕ್ತ
ಇದ್ದರೇನೋ ಶಿವಶಿವಾ! ಹೋದರೇನೋ?
ಕೂಡಲಸಂಗಮದೇವಯ್ಯಾ ಊಡದ ಆವಿಂಗೆ
ಉಣ್ಣದ ಕರುವ ಬಿಟ್ಟಂತೆ!'

'ಅರಸನ ಕಂಡು ತನ್ನ ಪುರುಷನ ಮರೆದರೆ
ಮರನೇರಿ ಕೈ ಬಿಟ್ಟಂತಾಯಿತ್ತಯ್ಯಾ!
ಇಹಲೋಕಕ್ಕೆ ದೂರ, ಪರಲೋಕಕ್ಕೆ ದೂರ'

—ಇಂತಹ ಮಾತುಗಳಲ್ಲಿ ಅವನ ಸಂಸಾರಯೋಗ ಅಡಗಿದೆ. ಸಂಸಾರದಲ್ಲಿ ಸಾಮರಸ್ಯ ವೇರ್ಪಡದಿದ್ದರೆ ಅದು ಇಹಕ್ಕೂ ಅಲ್ಲ, ಪರಕ್ಕೂ ಅಲ್ಲ, ಆ ಬಾಳು ಹಾಳು. ಆಗ ಸತಿಪತಿಗಳಿಬ್ಬರೂ ಎಲ್ಲಿಯೂ ಸಲ್ಲದ ಖೋಟಾ ನಾಣ್ಯಗಳು. ಒಂದುವೇಳೆ ಅಲ್ಲಿ ಸಲ್ಲಬೇಕೆನಿಸಿದರೆ ಮೊದಲು ಇಲ್ಲಿ ಸಲ್ಲುವ ಸುಖ ಸಂಸಾರ ನಡೆಸಲಿ. ಇದು ಸಂಸಾರ ಯೋಗದ ಮೂಲ ಮಂತ್ರ.

ಭೂತದಯೆಯೇ ಭಗವಂತನ ಆರಾಧನೆ; ಭೂತನಾಥನ ತೃಪ್ತಿ. ಹಸಿದವನಿಗೆ ಅನ್ನ ಕೊಟ್ಟು ತೃಪ್ತಿಪಡಿಸಿದರೆ ಪರಮಾತ್ಮನನ್ನು ತೃಪ್ತಿಪಡಿಸಿದಂತೆಯೇ ಸರಿ. ಇಂತಹ ಮಾನವೀಯಂತೆ ಅಣ್ಣನದು. ಆತ ವ್ಯಕ್ತಿಗೆ ಕೊಟ್ಟಷ್ಟು ಬೆಲೆಯನ್ನು ಬೇರಾವ ದೈವಕ್ಕೂ ಕೊಟ್ಟಿಲ್ಲ. ಅವನ ನೂರಾರು ವಚನಗಳಲ್ಲಿ ಈ ಅಂಶ ಕಂಡುಬರುತ್ತದೆ. ಉದಾಹರಣೆಗೆ—

ಮಡಕೆ ದೈವ, ಮೊರ ದೈವ, ಬೀದಿಯ ಕಲ್ಲು ದೈವ,
ಹಣಿಗೆ ದೈವ, ಬಿಲ್ಲ ನಾರಿ ದೈವ ಕಾಣಿರೋ,
ಕೊಳಗ ದೈವ, ಗಿಣ್ಣಿಲು ದೈವ ಕಾಣಿರೋ
ದೈವ, ದೈವವೆಂದು ಕಾಲಿಡಲಿಂಬಿಲ್ಲಾ!

—ಇಂತಹ ಅಸಂಖ್ಯಾತ ದೈವಗಳನ್ನು ಕಂಡಾಗ ತನಗೆ ತಾನೇ ಪ್ರಶ್ನಿಸಿಕೊಳ್ಳುತ್ತಾನೆ:

ಅರಗು ತಿಂದು ಕರಗುವ ದೈವವ
ಉರಿಯ ಕಂಡರೆ ಮುರುಟುವ ದೈವವನೆಂತು ಸರಿಯೆಂಬೆನಯ್ಯಾ?
ಅವಸರ ಬಂದರೆ ಮಾರುವ ದೈವವನೆಂತು ಸರಿಯೆಂಬೆನಯ್ಯಾ?
ಅಂಜಿಕೆಯಾದರೆ ಹೂಳುವ ದೈವವನೆಂತು ಸರಿಯೆಂಬೆನಯ್ಯಾ?

CC0. In Public Domain. Jangamwadi Math Collection, Varanasi

ಎಂದು. ಇದನ್ನು ನೋಡಿದರೆ ಬಸವಣ್ಣ ಸಂಕುಚಿತ ಬುದ್ಧಿಯುವನು ಎನ್ನಿಸಬಹುದು ; ಇಲ್ಲವೆ ನಾಸ್ತಿಕ ಎನ್ನಿಸಬಹುದು. ಏಕದೇವೋಪಾಸನೆಯ ಮೊಂಡುತನದಲ್ಲಿ ಬಸವಣ್ಣ ಅನ್ಯದೈವಗಳನ್ನು ತೆಗಳುತ್ತಿದ್ದಾನೆ ಎಂದಂದುಕೊಳ್ಳಬಹುದು. ಆದರೆ ಅವನು ಅಂತಹ ಸಣ್ಣವನಲ್ಲ. ಅವನಿಗೆ ತನ್ನ ಇಷ್ಟದೈವವಾದ ಕೂಡಲಸಂಗಮನಿಗಿಂತಲೂ ಎಂಗಿಲಾದ ದೈವ ಬೇರೆ ರೂಪದಲ್ಲಿ ಬೇರೆಡೆಯಲ್ಲಿದೆ. ಅದಿರುವುದು ಕಡು ಬಡವನ ಗುಡಿಸಲಿನಲ್ಲಿ, ಸದಾ ದುಡಿಯುತ್ತಿರುವ ಕರ್ಮಯೋಗಿಯಲ್ಲಿ, ನುಡಿದಂತೆ ನಡೆಯುವ ಮಹಾತ್ಮನಲ್ಲಿ, ಅರೆದರೆ ಸಣ್ಣವಾಗಿ ಒರೆದರೆ ಬಣ್ಣವಾಗುವ ಪುಣ್ಯಾತ್ಮನಲ್ಲಿ. ಭಾಂಡ ಭಾಜನ ಶುದ್ಧವಿರುವವನಲ್ಲಿ, ಮಾಡುವ ನೀಡುವ ನಿಜಗುಣವುಳ್ಳಾತನಲ್ಲಿ, ಸತ್ಯ ಪ್ರೇಮ ಅಹಿಂಸೆಗಳನ್ನು ಅನುಷ್ಠಾನಕ್ಕೆ ತಂದ ಪೂಜ್ಯನಲ್ಲಿ, ಪರವಧುವನ್ನು ಮಹಾದೇವಿ ಎಂಬ ಸದಾಚಾರ ಸಂಪನ್ನನಲ್ಲಿ, ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ಶರಣಶ್ರೇಷ್ಠನಲ್ಲಿ, ವೈರಿಯೂ ಮೆಚ್ಚುವಂತಹ ವ್ರತಿಯಲ್ಲಿ, ಜಂಗಮ ಮೆಚ್ಚುವಂತಹ ಭಕ್ತನಲ್ಲಿ, ಪರಧನ, ಪರಸತಿ, ಪರದೈವ—ಇವುಗಳನೊಲ್ಲೆನೆಂಬ ಹಾಗೂ ಲಿಂಗ, ಜಂಗಮ ಒಂದೇ ಎಂಬ, ಪ್ರಸಾದ ದಿಟವೆಂಬ ಛಲಗಾರನಲ್ಲಿ, ಕಾಯುದ ಕಳವಳಕ್ಕಂಜದೆ, ಉರಿ ಬರಲಿ, ಸಿರಿ ಬರಲಿ, ಬೇಕು—ಬೇಡ ಎನ್ನುವ ಸಮಾಧಾನಿಯಲ್ಲಿ, ವಿಪ್ರನಿಂದ ಅಂತ್ಯಜನವರೆಗೆ ಸಕಲರನ್ನೂ ಒಂದೇ ಎಂದು ತಿಳಿದು ನಡೆಸುವ, ಬೋಧಿಸುವ, ಕೀಳೆಂಬ ಕೊಳೆಯನ್ನು ತೊಳೆದು ಶುದ್ಧಿಗೈವ ಜಗತ್ ಜಲಗಾರನಲ್ಲಿ, ಆರು ಮುನಿದು ನಮ್ಮನೇನ ಮಾಡುವರು ಎಂಬ ನಿಷ್ಠುರಿಯಲ್ಲಿ, ದರ್ಪದೌರ್ಜನ್ಯಗಳಿಗೆ ಬಲಿಯಾಗದೆ ಧ್ಯೇಯಕ್ಕಾಗಿ ದೇಹವನ್ನು ಸಮರ್ಪಿಸಲು ಸಿದ್ಧನಿರುವ ಸ್ವಾಭಿಮಾನದ ಶಿಶುವಿನಲ್ಲಿ, ನೆಲನೊಂದೆ ಹೊಲಗೇರಿ ಶಿವಾಲಯಕ್ಕೆ, ಜಲವೊಂದೆ ಶೌಚಾಚಮನಕ್ಕೆ, ಕುಲವೊಂದೇ ತನ್ನ ತಾನರಿದವಂಗೆ, ಫಲವೊಂದೆ ಷಡುದರುಶನ ಮುಕ್ತಿಗೆ ಎಂಬುದನ್ನರಿತು, ಅಸ್ಪೃಶ್ಯತೆಯ ಅರ್ಥವನ್ನೇ ಅರಿಯದ, ಸರ್ವರಲ್ಲೂ ಸೋದರ ಭಾವವನ್ನುಳ್ಳ ನಿಷ್ಕಳ ನಿಜೈಕ್ಯನಲ್ಲಿ; ಮುತ್ತಿನ ಹಾರದಂತೆ, ಮಾಣಿಕ್ಯದ ದೀಪ್ತಿಯಂತೆ, ಸ್ಫಟಿಕದ ಸಲಾಕೆಯಂತೆ, ಲಿಂಗವೂ ಮೆಚ್ಚಿ 'ಅಹುದಹುದು' ಎನ್ನುವಂತೆ ನುಡಿವ, ನಡೆವ, ಒಡೆತನ ಉಳ್ಳವನಲ್ಲಿ, ಸದಾಕಾಲವೂ 'ಸೋಹಂ' ಎನ್ನದೆ, 'ದಾಸೋಹಂ' ಎನ್ನುವ ವಿನಮ್ರ ಮೂರ್ತಿಯಲ್ಲಿ, ಭಕ್ತನಾಗಿ ಭಕ್ತಿ ದಾಸೋಹ, ಯುಕ್ತನಾಗಿ ಯುಕ್ತ ದಾಸೋಹ, ಐಕ್ಯನಾಗಿ ಮಮಕಾರ ದಾಸೋಹ—ಹೀಗೆ ಸರ್ವವಿಧದಲ್ಲೂ ದಾಸೋಹವನ್ನು ಆಹ್ವಾನಗೈಯುವ ಅನುಭಾವಿಯಲ್ಲಿ, ವಿಶ್ವಜಿತ, ಧನುಜಿತ, ಸರ್ವಜಿತ, ಸುತ್ರಾಮಜಿತ, ಸ್ಮಜಿತ, ಉರ್ವರಾಜಿತ, ಅಶ್ವಜಿತ, ಗೋಜಿತ, ಸ್ವರ್ಜಿತ, ಸುಸಂವೇದ್ಯ, ವೇದನಾದಾತೀತ, ತುರೀಯ ಪರಮಾನಂದ, ನಿರವಯ, ಸೂರ್ಯಕೋಟಿ ಪ್ರಭೆಯ ಬೆಳಗಿನ ಸಹಸ್ರ ಕಿರಣದ ಅಗ್ರಪಟಲದ ಬೆಳಕು ಕಂಡವನಲ್ಲಿ, ಘನಗಂಭೀರ ಮಹಾಘನದೊಳಗಿನ ಘನಕ್ಕೆ ಘನವಾದ ಅಂದರೆ ಬೆಳಗಿನೊಳಗಣ ಬೆಳಗು ಮಹಾಬೆಳಗಿನಲ್ಲಿ ಬೆರೆದು ಬಯಲಾದವನಲ್ಲಿ !

Digitization by eGangotri and Sarayu Trust. Funding by MoE-IKS
CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹಾಗಲ್ಲದೆ—

ಒಂದನಾಡ ಹೋಗಿ ಒಂಬತ್ತನಾಡುವ ಡಂಭಕನಲ್ಲಲ್ಲ, ನಂಬದೆ ನಚ್ಚದೆ ಬರಿದೆ ಕರೆವ ಆಷಾಢಭೂತಿಯಲ್ಲಲ್ಲ, ನುಡಿದು ಹುಸಿವ, ನಡೆದು ತಪ್ಪುವ ಪ್ರಪಂಚಿಯಲ್ಲಲ್ಲ; ಮರದ ನೆರಳಿದ್ದೂ ತನ್ನ ನೆರಳನರಸುವ ಅತಿ ಬುದ್ಧಿವಂತನಲ್ಲಲ್ಲ, ಕಾಮ ಹೇಮವ ತೊರೆಯದೆ, ಜರೆಯದೆ, ಶ್ವಾನನಂತೆ ಸುತ್ತುವವನಲ್ಲ, ಅರಸನ ಕಂಡೊಡನೆಯೆ ತನ್ನ ಪುರುಷನನ್ನು ಮರೆಯುವ ಪತಂಗದಲ್ಲಲ್ಲ, ಜ್ಯೋತಿವಿಡಿದು ಕತ್ತಲೆಯನ್ನರಸುವ ಮರುಳು ಮಾನವನಲ್ಲಲ್ಲ!

ಇಂತಹ ಮಾನವತಾವಾದಿ ಬಸವಣ್ಣ ತನ್ನ ಮನೋಧರ್ಮವನ್ನು ಎಲ್ಲ ವಚನಗಳಲ್ಲೂ ಅಡಗಿಸಿಟ್ಟಿದ್ದಾನೆ.

—ಇಷ್ಟು ಹೇಳಿ ಈ ಮಹಾಮಣಿಹದಲ್ಲಿ ಭಾಗಿಯಾಗಲು ಅವಕಾಶವಿತ್ತ ಮಹಾ ಪ್ರಸಾದಿ ನಾಗನೂರಜ್ಜನವರ ಚರಣಗಳಿಗೆ ಹಾಗೂ ಎಲ್ಲ ಗುರುಗಳು, ಜಗದ್ಗುರುಗಳ ವರಿಗೆ ಪ್ರಣಾಮಗಳನ್ನು ಸಲ್ಲಿಸಿ ವಿರಮಿಸುತ್ತೇನೆ'

ವಂದಿಸಿ ಕುಮಾರೇಶ್ವರನಿಗೆ ಮನದಲ್ಲೇ ನಮಿಸಿ ಕುಳಿತುಕೊಂಡರು.

ಕರತಾಡನವಾಯಿತು.

ಸಮ್ಮೇಳನಾಧ್ಯಕ್ಷರು ಅಧ್ಯಕ್ಷ ಪೀಠದಿಂದ ಹೀಗೆ ಆಶೀರ್ವಚನ ನೀಡಿದರು ಸರ್ವರೂ ಧನ್ಯರಾಗುವಂತೆ.

ಎನಗಿಂತ ಕಿರಿಯರಿಲ್ಲ, ಶಿವಭಕ್ತರಿಗಿಂತ ಹಿರಿಯರಿಲ್ಲ
ನಿಮ್ಮ ಪಾದಸಾಕ್ಷಿ, ಎನ್ನ ಮನಸ್ಸಾಕ್ಷಿ
ಕೂಡಲ ಸಂಗಮದೇವಾ, ಎನಗಿದೇ ದಿವ್ಯ.

ಅಣ್ಣನ ಅಮೃತೋಪಮ ವಾಣಿ ಇಂದು ನನ್ನ ಸಂದರ್ಭದಲ್ಲೂ ಪ್ರಸ್ತುತ ಎಂಬುದು ನನ್ನ ಭಾವನೆ? ಕಾರಣ ನನಗಿಂತಲೂ ವಯೋವೃದ್ಧರೂ ಜ್ಞಾನವೃದ್ಧರೂ, ಗುರು, ಮಹಾಗುರು, ಜಗದ್ಗುರುಗಳವರಿದ್ದರೂ ನನ್ನಂತಹ ಸಾಮಾನ್ಯ ಶಿಶುವನ್ನು ಈ ಗಾದಿಯ ಮೇಲೆ ತಂದು ಕೂರಿಸಿದ್ದು ನನಗೆ ನಾಚಿಕೆ ತರುತ್ತಿದೆ. ಅಲ್ಲದೆ ಪಲ್ಲಕ್ಕಿಯ ಮೇಲೇರಿಸಿ ಹೆಗಲುಕೊಟ್ಟ ಎಲ್ಲ ಪೂಜ್ಯಪಾದರುಗಳಿಗೆ ನಾನೆಷ್ಟು ಋಣಿಯಾಗಬೇಕು. ಅದರಿಂದ ಪಾಪವೇ ಸಂಘಟಿಸಿತೆಂದು ತಿಳಿದುಕೊಳ್ಳುತ್ತಿದ್ದೇನೆ. ಅದರ ನಿವಾರಣೆಗೆ ನಾನೆಷ್ಟು ಜನ್ಮಗಳೆತ್ತಬೇಕೋ ತಿಳಿಯದಾಗಿದೆ. ನನ್ನ ಆರಾಧ್ಯದೈವ ಹಾನಗಲ್ಲ ಕುಮಾರೇಶನು ಸಕಲರಿಗೂ ಒಳಿತನ್ನು ಅನುಗ್ರಹಿಸಲಿ. ಇದು ನನ್ನ ಅನಂತ ಪ್ರಾರ್ಥನೆ.

ನನ್ನ ದೃಷ್ಟಿಯಲ್ಲಿ, ಕುರ್ಚಿಯಿಂದ ವ್ಯಕ್ತಿಗೆ ಗೌರವ ಬರುವುದಿಲ್ಲ; ವ್ಯಕ್ತಿಯಿಂದ ಕುರ್ಚಿಯು ಕಿಮ್ಮತ್ತು ಹೆಚ್ಚುತ್ತದೆ. ಹಾನಗಲ್ಲಪ್ಪಗಳು ಏರಿಕುಳಿತ ಕುರ್ಚಿಯನ್ನು ನಾನೇರುತ್ತಿದ್ದೇನೆ. ಇದರ ಔಚಿತ್ಯ ನನಗೆ ತಿಳಿಯದು. ಆದರೆ ಕಾಯಕನಿಷ್ಠೆ ನ್ನನ ನಿತ್ಯ ನಡೆ; ತ್ರಿವಿಧ ದಾಸೋಹ ನನ್ನ ಗುರಿ. ಅವುಗಳನ್ನು ಶಿವಯೋಗಿಗಳು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನನ್ನ ಪಾಲಿಗೆ ಸದಾ ಕರುಣಿಸಲಿ ಎಂದು ಪ್ರಾರ್ಥಿಸಿಕೊಳ್ಳುತ್ತಾ, ಉಪಸ್ಥಿತರಿರುವ ಸಾಕ್ಷಾತ್ ಶಿವಸ್ವರೂಪಿಗಳಾದ ಎಲ್ಲರಿಗೂ ಶರಣು ಸಮರ್ಪಿಸಿ ಪ್ರಾಸಂಗಿಕವಾಗಿ, ಅಧ್ಯಕ್ಷ ಸ್ಥಾನಕ್ಕೆ ಘನತೆ ತರುವ ಎರಡು ಮಾತು ಹೇಳುತ್ತೇನೆ. ಅಪ್ರಸ್ತುತವೆನಿಸಿದರೆ ಎಲ್ಲ ಗುರುವರ್ಯರುಗಳೂ ಕ್ಷಮಿಸಿ ಆಶೀರ್ವದಿಸಬೇಕೆಂದು ಕೈಜೋಡಿಸಿ ಪ್ರಾರ್ಥಿಸಿ ಕೊಳ್ಳುತ್ತೇನೆ.

ಮೈ ಮನಸ್ಸುಗಳಿಗೆ ಹಸಿವೆ ಇದ್ದಂತೆ ಆತ್ಮಕ್ಕೂ ಹಸಿವೆ ಎಂಬುದಿದೆ. ಮೈ ಹಸಿವೆ ಅನ್ನ, ನಿದ್ರೆ, ಮೈಥುನಗಳಿಂದ ಇಂಗಿದರೆ, ಮನಸ್ಸಿನ ಹಸಿವೆ ಸಾಹಿತ್ಯಾದಿ ಲಲಿತ ಕಲೆಗಳ ಮೂಲಕ ತೃಪ್ತವಾಗುತ್ತದೆ. ಅದೇ ರೀತಿ ಆತ್ಮದ ಹಸಿವೆಯನ್ನು ಅಧ್ಯಾತ್ಮ ಪೂರೈಕೆಯಿಂದಲೇ ತಣಿಸಬೇಕಾಗುತ್ತದೆ. ಮೈ ಹಸಿವೆಯನ್ನು ನೀಗಿಸುವ ವಿಧಾನ ಎಲ್ಲ ಪ್ರಾಣಿಗಳಲ್ಲೂ ಸಾಮಾನ್ಯ, ಆದರೆ ಉತ್ಕೃಷ್ಟ ಪ್ರಾಣಿ, ಇಲ್ಲವೇ ಪತಿತ ದೇವತೆ ಎಂದೆನಿಸಿಕೊಂಡ ಮಾನವ ಅಷ್ಟರಿಂದಲೆ ತೃಪ್ತನಾಗಲಾರ. ಅವನಿಗೆ ಲೋಕವನ್ನು ಅನುಭವಿಸುವ ಹೃದಯವಿದೆ ; ತನ್ನ ಪರಿಸರದೊಡನೆ ಸ್ಪಂದಿಸುವ ಚೇತನವಿದೆ ; ತನ್ನ ಅನುಭವದ ಕಕ್ಷೆಯಲ್ಲಿ ಅಳವಟ್ಟದ್ದನ್ನು ಕಲೆಯ ಮೂಲಕ ಅಭಿವ್ಯಕ್ತಪಡಿಸುವ ಸಾಮರ್ಥ್ಯವಿದೆ. ಮರಳಿನಲ್ಲಿ ಎಣ್ಣೆ ತೆಗೆವ, ಕಲ್ಲಲ್ಲಿ ನಾರೆತ್ತುವ, ಶೂನ್ಯದಲ್ಲಿ ಸೃಷ್ಟಿ ಮಾಡುವ ಗಾರುಡಿಗತನ ಇದೆ. ಕವಿಚೇತನದ ಸೌಂದರ್ಯಾನುಭೂತಿಯು ಕಾವ್ಯಾಭಿವ್ಯಕ್ತಿ ಪಡೆದಾಗ ಸಹೃದಯ ಚೇತನ ಅದನ್ನು ಆಸ್ವಾದಿಸಿ ಆನಂದಿಸುತ್ತದೆ. ಆ ಆನಂದವನ್ನು ಕಾವ್ಯಾನಂದ ಅಥವಾ ರಸ ಎಂದು ಕರೆದಿದ್ದಾರೆ ನಮ್ಮ ಭಾರತೀಯ ಕಾವ್ಯಮೀಮಾಂಸಕರು.

ಮಾನವನ ವಿಕಾಸ ಶೀಲ ಮನಸ್ಸು ಸದಾ ನವನವೋನ್ಮೇಷ ಶಾಲಿನಿಯಾದಂತೆ, ಸದಾ ಉರ್ಧ್ವಗಾಮಿಯೂ ನಕ್ಷತ್ರಯಾತ್ರಿಯೂ ಆಗಿದೆ. ಭೂಮಿಯಿಂದ ಭೂಮದವರೆಗೂ ವ್ಯಾಪಿತವಾಗಿ, ವಿಶ್ವದಾಚೆಗೂ ನಾಲ್ವೆರಳು ಎತ್ತರದಲ್ಲಿ ನಿಲ್ಲುವ, ನಿಂತುನೋಡುವ ಅನ್ಯಾದೃಶ ದಕ್ಷತೆ ಇದೆ. ನಿರ್ಗುಣ, ನಿರಾಕಾರ ಶಕ್ತಿಯನ್ನು ಸಗುಣ ಸಾಕಾರಗೊಳಿಸುವ, ಅಚಿಂತ್ಯ, ಅನೂಹ್ಯ ಅಗೋಚರ ಎನಿಸಿದ್ದನ್ನು ಸಚಿತ್ರ, ಸದ್ರೂಪ, ಸಗೋಚರಗೊಳಿಸುವ ಸಾಮರ್ಥ್ಯವೂ, ಅಗ್ರಾಹ್ಯವೆನಿಸಿದ್ದನ್ನು ಕಣ್ಣಾರ ಕಂಡು ಕೈಯಾರ ಕಂಡರಿಸುವ ಚಾತುರ್ಯವೂ ಅದಕ್ಕಿದೆ. ಕಾವ್ಯಾನುಭೂತಿಗಿಂತಲೂ ಮಿಗಿಲಾದ ಆತ್ಮಾನುಭೂತಿ ಅದರದು. ಅದೇ ಮನುಕುಲ ಪ್ರಜ್ಞೆಯ ತುರೀಯ ಸ್ತರ. ಕವಿಚೇತನ ಸೌಂದರ್ಯದ ಸೀಮೆಯಲ್ಲಿ ವಸಂತ ವಿಹಾರ ಕೈಕೊಂಡಂತೆ, ಋಷಿ ಚೇತನ ಸತ್ಯ ಶಾಶ್ವತ ನಿತ್ಯ ಪರಿಪೂರ್ಣವಾದ ಆಧ್ಯಾತ್ಮ ವಲಯದಲ್ಲಿ ವಿಹರಿಸಿ ವಿಶ್ರಾಂತಿಪಡೆಯುತ್ತದೆ. ಅಧ್ಯಾತ್ಮ ಲೋಕದ ಆತ್ಮಾನಂದ ಅಥವಾ ಬ್ರಹ್ಮಾನಂದವು ಕಲಾಲೋಕದ ಕಾವ್ಯಾನಂದಕ್ಕಿಂತಲೂ ಮಿಗಿಲಾದದ್ದು ; ಬಹು ಮೌಲ್ಯವುಳ್ಳದ್ದು. ಕವಿ ಬೇಂದ್ರೆಯವರು ಹೇಳುವಂತೆ ಅದು 'ಓಂಕಾರ ನಾದಕಿಂತ ಕಿಂಚಿದೂನ'ವಾದದ್ದು. ಇದು ಶಬ್ದಾರ್ಥ ಸಂಜನಿತ, ಅದು ನಾದಬಿಂದು ಕಳಾತೀತ ; ಇದು ಸಹೃದಯ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹೃದಯಾಹ್ಲಾದ ಕಾರಿಣಿ, ಅದು ಅಪರೋಕ್ಷ ಜ್ಞಾನಿಗಳ ಆತ್ಮಾನಂದ ಬೋಧಿನಿ. ಕಾವ್ಯಾನಂದವನ್ನು ಸಕಲ ಪ್ರಯೋಜನ ಮೌಲಿ ಭೂತಾವ್ ಎಂತಲೂ, 'ಬ್ರಹ್ಮಾನಂದ ಸಹೋದರ' ಎಂತಲೂ ಕರೆದರು. ನಿಜ; ಕಾವ್ಯಾನಂದ ಬ್ರಹ್ಮಾನಂದದ ಸಹೋದರ ನಿಜ; ಆದರೆ ಬ್ರಹ್ಮಾನಂದ ಅಲ್ಲ, ಬ್ರಹ್ಮಾನಂದವೇ ಬೇರೆ; ಅದು ಕಾವ್ಯಾನಂದದ ಹಿರಿಯ ಅಣ್ಣ. ಅದರದು ಮೊದಲ ದರ್ಜೆ, ತುರೀಯಸ್ತರ, ಮಹೋನ್ನತಿಯ ಮಜಲು. ಆ ಮಜಲನ್ನೇರಲು ಅನೇಕ ಧರ್ಮಗಳು, ದರ್ಶನಗಳು ಶ್ರಮಿಸಿವೆ ಅವುಗಳಲ್ಲಿ ವೀರಶೈವವೂ ಒಂದು.

ವೀರಶೈವ ಸಿದ್ಧಾಂತ ಶೂನ್ಯ ಸಿದ್ಧಾಂತ ; ವೀರಶೈವ ದರ್ಶನ ಶೂನ್ಯದ ದರ್ಶನ. ಶೂನ್ಯದ ಅರ್ಥ ಇಲ್ಲವಾಗುವುದಲ್ಲ, ಎಲ್ಲವಾಗುವುದು. ಅದು ಸಕಲವನ್ನೂ ಗರ್ಭೀಕರಿಸಿಕೊಂಡ ಸ್ಥಲ ಅಥವಾ ಶಿವ. ಕಾವ್ಯ ಸಂದರ್ಭವನ್ನು ಕುರಿತು ಕವಿ—ವಿಮರ್ಶಕ ಟಿ. ಎಸ್. ಎಲಿಯಟ್ ಹೇಳುವಂತೆ ಅದು ವ್ಯಕ್ತಿತ್ವ ನಿರಸನ ಸ್ಥಿತಿ (The extinction of personality) ನಿರಸನದ ಅರ್ಥ ವ್ಯಕ್ತಿತ್ವದ ನಾಶ ಎಂದಲ್ಲ; ಅದರ ಸಮಾವೇಶ ; ವ್ಯಷ್ಟಿ ಸಮಷ್ಟಿಯಲ್ಲಿ ಒಂದಾಗುವುದು, ಲೀನವಾಗುವುದು, ಸಕಲದಲ್ಲೂ ಬೆರೆಯುವುದು. ಹನಿ ನೀರಿಗೆ ಸ್ವತಂತ್ರ ಅಸ್ತಿತ್ವವಿದ್ದರೂ, ಅದಕ್ಕೆ ಭರಿಸುವ ಇಲ್ಲವೇ ತನ್ನನ್ನು ತಾನು ರಕ್ಷಿಸಿಕೊಳ್ಳುವ ಸಾಮರ್ಥ್ಯ ಇಲ್ಲ. ಬಿದ್ದೆಡೆಯಲ್ಲೇ ಭಗ್ನವಾಗಿ ಹೋಗಬಹುದು. ಆದರೆ ಅದೇ ಹನಿ, ಸಾಗರವನ್ನು ಸೇರಿಕೊಂಡಾಗ ಸಾಗರದ ಸಾಮರ್ಥ್ಯ ಪಡೆಯುತ್ತದೆ ; ಸಾಗರವೇ ತಾನಾಗುತ್ತದೆ. ಅದೇ ರೀತಿ ವ್ಯಷ್ಟಿ ಸಮಷ್ಟಿಯಲ್ಲಿ ಸೇರಿ ಸಮಷ್ಟಿ ತಾನಾಗುತ್ತಾನೆ. ಕಾವ್ಯ ಸಂದರ್ಭದಲ್ಲಿ ಕವಿ–ಸಹೃದಯರು ಸೇರಿ ವಿಶ್ವಾತ್ಮರಾಗುತ್ತಾರೆ. ಅಧ್ಯಾತ್ಮ ಸಂದರ್ಭದಲ್ಲಿ ಜೀವ—ದೇವರು ಕೂಡಿ ಏಕಾತ್ಮರಾಗುತ್ತಾರೆ. ಹಾಲಿಗೆ ಹಾಲು, ನೀರಿಗೆ ನೀರು, ಬೆಳಕಿನಲ್ಲಿ ಬೆಳಕು, ಬೆರೆತಂತೆ ಬೆರೆಯುತ್ತಾರೆ ; ಬೆರೆತು ಬಯಲಾಗುತ್ತಾರೆ ; ಮತ್ತೆ ಮೂರನೆಯ ವಸ್ತು ವಾಗುತ್ತಾರೆ. ಇದೇ ಲಿಂಗ ಅಂಗ ಸಾಮರಸ್ಯ ಸ್ಥಿತಿ ; ಸಚ್ಚಿದಾನಂದ ನಿತ್ಯ ಪರಿಪೂರ್ಣ ಸ್ಥಿತಿ ; ಶಿವ ಸಮಯದ ಸಹಜ ಶಿವಾನಂದ ಸ್ಥಿತಿ.

ಸ್ಥೂಲ ಗ್ರಹಿಕೆಗೆ ಲಿಂಗ ಬೇರೆ, ಅಂಗ ಬೇರೆ. ಆದರೆ ಸೂಕ್ಷ್ಮ ಗ್ರಹಣಕ್ಕೆ ಎರಡೂ ಅಭಿನ್ನ, ಅಭೇದ್ಯ, ಅಖಂಡ. ಒಂದೇ ಒಡೆದು ಎರಡಾದ ರೂಪ. ಇವುಗಳಲ್ಲಿ ರೂಪಭೇದವಿದೆಯೇ ಹೊರತು ಸ್ವರೂಪ ಭೇದ ಇಲ್ಲ. ಅಂತ್ಯದಲ್ಲಿ ಎರಡೂ ಬೇರೆಯಾಗಿ ಉಳಿಯುವಂಥವೂ ಅಲ್ಲ. ಹೇಗೆಂದರೆ—

ಚಿನ್ನದಿಂದಲಾದ ಹಲವು ಬಂಗಾರವನಳಿದು
ಕರಗಿಸಿದರೆ ಮುನ್ನಿನ ಚಿನ್ನವೆ ಆದಂತೆ,
ಉದಕದಿಂದಾದ ವಾರಿಕಲ್ಲು
ಕರಗಿ ಮುನ್ನಿನ ಉದಕವೆ ಆದಂತೆ

5

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಚಿನ್ಮಯ ವಸ್ತುವಿನಿಂದುದಯಿಸಿದ ಚಿತ್‌ಸ್ವರೂಪನಾದ ಶರಣನು
ಆ ಚಿನ್ಮಯ ಪರವಸ್ತುವನೆ ಬೆರೆಸಿ
ಪರಮ ಶಿವಯೋಗಿಯಾದನು ಕಾಣಾ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೆ ॥

ಆದ್ದರಿಂದ ಅಲೆಯಾದ ನೀರು ಸಮುದ್ರ; ಸಮುದ್ರದ ನೀರೇ ಅಲೆ. ಆತ್ಮನೇ ಒಂದೆಡೆ ಜೀವಾತ್ಮ, ಮತ್ತೊಂದೆಡೆ ಪರಮಾತ್ಮ. ಅಲ್ಲಿ ನೀರು ಹೇಗೋ ಹಾಗೆ ಇಲ್ಲಿ ಆತ್ಮ ಉಭಯ ಸಾಮಾನ್ಯ. ಅದು ಲೀಲೆಯಾದಡೆ ಉಮಾಪತಿ, ಲೀಲೆ ತಪ್ಪಿದಡೆ ಸ್ವಯಂಭು. ಆದರೆ ಕಾರ್ಮಿಕ, ಮಾಯಾ, ಆಣವ ಮಲಗಳಿಂದಾವೃತವಾದ ಅಂಗನಲ್ಲಿನ ಆತ್ಮನದು ನಿವೃತ್ತಿ ಮಾರ್ಗ; ಅದು ತನ್ನನ್ನೇ ತಾನು ಬಿಡಿಸಿಕೊಳುತ್ತಾ ಹೋಗುತ್ತದೆ. ನಿರ್ಮಲ, ನಿರಾಕುಳ, ನಿರಂಜನನೆನಿಸಿದ ಲಿಂಗದಲ್ಲಿನ ಆತ್ಮನದು ಪ್ರವೃತ್ತಿ ಮಾರ್ಗ. ಅದು ಪರಿಪೂರ್ಣತ್ವದ ಕಡೆಗೆ ಏರುತ್ತಾ ಹೋಗುತ್ತದೆ. ಈ ಉಭಯ ಸಂಯೋಗ ದಿಂದಾದ ಮೂರನೆಯದೇ ಪರವಸ್ತು; ಅದೇ ಶಿವ; ಶಿವ ಜೀವದ ಸಂಯೋಜನೆಗೆ ಶಕ್ತಿ ಕಾರಣ. ಆ ವಿಶಿಷ್ಟ ಶಕ್ತಿಯೇ ವಿಶ್ವ ಜಗತ್ತನ್ನಾಳುತ್ತಿದೆ; ಆಡಿಸುತ್ತಿದೆ. ಸಮಸ್ತ ಚೇತನಾಚೇತನಗಳೂ ಆ ಮೂಲಶಕ್ತಿಯ ಆವಿರ್ಭಾವಗಳು. ವೀರಶೈವ ಆ ಶಕ್ತಿಯನ್ನು ಲಿಂಗದಲ್ಲಿ ಸಾಂಕೇತಿಸಿದೆ. ಅದನ್ನು ಪೂಜಿಸುವ ಮೂಲಕ ಜೀವ ತನ್ನನ್ನೇ ತಾನು ಆರಾಧಿಸಿಕೊಳ್ಳುತ್ತದೆ. ಕಾರಣ ಜೀವವೂ ಆ ಶಕ್ತಿಯ ಒಂದಂಶವಾದ್ದರಿಂದ. ಹೀಗೆ ಉಪಾಸಿತರಾಗುವ ಶಿವ—ಜೀವರು 'ಶಕ್ತಿ'ಯ ಅವಿನಾಭಾವಿ ಅಂಶಗಳು.

ಈ ಬಗೆಯ ದೇವ ಜೀವರ ಐಕ್ಯಾನುಸಂಧಾನ ಸ್ವರೂಪವನ್ನು 'ಶಿವಾದ್ವೈತ' ಎಂದು ಕರೆಯುತ್ತಾರೆ. ಅದಕ್ಕೆ ದ್ವೈತಾದ್ವೈತ, ಶಕ್ತಿವಿಶಿಷ್ಟಾದ್ವೈತ ಎಂಬ ಪರ್ಯಾಯ ನಾಮಗಳೂ ಇವೆ. 'ಬ್ರಹ್ಮ ಸತ್ಯ ಜಗತ್ತು ಮಿಥ್ಯ' ಎಂದಿತು ಅದ್ವೈತ! ಆದರೆ ಅವೆರಡೂ ಸತ್ಯ ಎಂದು ಸಾರಿ ತೋರಿತು ವೀರಶೈವ. ಆಧ್ಯಾತ್ಮ ಕಲ್ಪನೆಗೆ ಸಾಮಾಜಿಕ ಅರ್ಥ(Social Consolidation) ಕೊಟ್ಟದ್ದು ಇದರ ವೈಶಿಷ್ಟ್ಯ.

ವೀರಶೈವದ ದೃಷ್ಟಿಯಲ್ಲಿ ಜಗತ್ತಾಗಲಿ, ಶರೀರವಾಗಲಿ ನಶ್ವರವಲ್ಲ, ಹೇಯವಲ್ಲ, ತುಚ್ಛವಲ್ಲ. ಅದು ಆತ್ಮ ಸಿದ್ಧಿಗೆ ಅನಿವಾರ್ಯವೆನ್ನಿಸಿದ ಏಕೈಕ ಸಾಧನ. ಅದೇ ಅದರ ಆಲಂಬನ. ಅಗ್ನಿಗೆ ಅನಿಲ, ತೈಲ, ಕಾಷ್ಠಗಳು ಇದ್ದಂತೆ; ಆದರೆ ಪಡಿಪದಾರ್ಥಗಳ ಪದಾರ್ಥ ಭಾವವನ್ನು ನಿವಾರಿಸಿ, ಅವುಗಳನ್ನು ಪ್ರಸಾದ ರೂಪಗಳನ್ನಾಗಿ ಮಾರ್ಪಡಿಸಿ ಕೊಳ್ಳಬೇಕು. ಆ ಪ್ರಕ್ರಿಯೆಯ ಪ್ರಯೋಗಸಿದ್ಧಿಯೇ ವೀರಶೈವ. ಜಗತ್ತಿನ ಎಲ್ಲ ಪಂಥಗಳೂ ಚೈತನ್ಯವೆ (Spirit) ಬೇರೆ, ಜಡವೇ (Matter) ಬೇರೆ ಎಂದು ವಾದಿಸಿದರೆ, ಅವೆರಡೂ ಒಂದೇ, ಭಿನ್ನವಲ್ಲ ಎಂದು ಹೇಳುತ್ತದೆ ವೀರಶೈವ. ಶ್ರೀಕರ ಭಾಷ್ಯದಲ್ಲಿ ಶ್ರೀಪತಿ ಪಂಡಿತನು ಹೇಳುವಂತೆ ಇದು 'ಸರ್ವಶ್ರುತಿ ಸಮನ್ವಯ ಸಿದ್ಧಾಂತ.'

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಿವಾದ್ವೈತ ಸಿದ್ಧಾಂತವು ಆಚರಣೆಯ ಘಟ್ಟದಲ್ಲಿ ಹಲವು ಆಯಾಮಗಳನ್ನು ಪಡೆಯುತ್ತದೆ. ಅವುಗಳಲ್ಲಿ ಮುಖ್ಯವಾದವು ಭಕ್ತ, ಮಾಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ ಮತ್ತು ಐಕ್ಯ ಎಂಬವು ಷಟ್‌ಸ್ಥಲಗಳು. ಗುರು, ಲಿಂಗ, ಜಂಗಮ, ಪ್ರಸಾದ,ಪಾದೋದಕ,ವಿಭೂತಿ,ಮಂತ್ರ ಮತ್ತು ರುದ್ರಾಕ್ಷಿ ಎಂಬವು ಅಷ್ಟಾವರಣಗಳು. ಲಿಂಗಾಚಾರ, ಸಮಯಾಚಾರ, ಶಿವಾಚಾರ, ಗಣಾಚಾರ ಮತ್ತು ಭೃತ್ಯಾಚಾರ ಎಂಬವು ಪಂಚ ಆಚಾರಗಳು. ಜೀವ ದೇವನಾಗುವ, ನರ ಹರನಾಗುವ, ಮಾನವ ಮಹಾದೇವನಾಗುವ ಆತ್ಮವಿಕಾಸದ ಕಲ್ಪನೆಯೇ ಷಟ್‌ಸ್ಥಲ. ಆತ್ಮವು ಹಂತ ಹಂತವಾಗಿ ವಿಕಾಸಗೊಳ್ಳುತ್ತಾ ಹೋಗಿ, ಶಿವತ್ವದ ಮಹಾವಲಯದಲ್ಲಿ ಒಂದಾಗಿ, ಚೆಂದಾಗಿ ಬೆರೆಯುವುದನ್ನು ತೋರುತ್ತದೆ ವೀರಶೈವ ದರ್ಶನ. ಅನುಷ್ಠಾನ ಸಂದರ್ಭದಲ್ಲಿ ಜ್ಞಾನಪ್ರಧಾನ ಸಿದ್ಧಾಂತವನ್ನು, ಪ್ರಜ್ಞಾಪ್ರಧಾನ ಅನುಭಾವವನ್ನು ಸಮರಸವಾಗಿ ಸ್ವೀಕರಿಸಿ, ಶಿವ ಜೀವರ ಸಮಾನತೆಯನ್ನು ಸಾರುತ್ತದೆ.

ಏಕದೇವೋಪಾಸನೆ ಭಕ್ತಸ್ಥಲದ ಭಕ್ತನಲ್ಲಿರಬೇಕಾದ ಪ್ರಾಥಮಿಕ ಅರ್ಹತೆ. ಮಾಹೇಶ್ವರ ಸ್ಥಲದಲ್ಲಿನ ಭಕ್ತ ಸಕಲ ಚರಾಚರಗಳಲ್ಲೂ ಶಿವನನ್ನೇ ದರ್ಶಿಸುತ್ತಿರುತ್ತಾನೆ. ಪ್ರಸಾದಿಸ್ಥಲದಲ್ಲಿ ಸಮಸ್ತವೂ ಅವನ ಕೊಡುಗೆ ಎಂದು ತಿಳಿದು ಸಕಲವನ್ನೂ ಪ್ರಸಾದ ಭಾವನೆಯಿಂದಲೇ ಸ್ವೀಕರಿಸಿ, ತನ್ನನ್ನೇ ಪ್ರಸಾದವಾಗಿ ಅರ್ಪಿಸಿಕೊಂಡು ಬದುಕುತ್ತಾನೆ. ಇವು ಮೂರೂ ಕ್ರಿಯಾವಲಯ ಪ್ರಕ್ರಿಯೆಗಳು, ಉಳಿದ ಮೂರು ಜ್ಞಾನವಲಯದಲ್ಲಾಗುವ ಅನುಭೂತಿ ವಿಶೇಷಗಳು. ಪ್ರಾಣಲಿಂಗಸ್ಥಲದ ಸಾಧಕ ಪ್ರಾಣ ಮತ್ತು ಲಿಂಗಗಳ ಉಭಯ ಭಾವವಳಿದ ನಿರ್ಲಿಪ್ತ ಸ್ಥಿತಿಗೇರುತ್ತಾನೆ. ಶರಣ ಸ್ಥಲದಲ್ಲಿ ತಾನೆ ಶಿವನಾಗುತ್ತಾನೆ. ಮೊದಲ ಮೃಣ್ಮಯದ ಜಡ ಅಥವಾ ಸ್ಥಾವರ ಇಲ್ಲಿ ಚಿನ್ಮಯದ ಚೇತನವಾಗಿ ಪರಿಣಾಮಗೊಂಡಿರುತ್ತದೆ. ಶಿವನಿಗಿಂತಲೂ ಶರಣ ಶ್ರೇಷ್ಠನೆನಿಸುತ್ತಾನೆ. ಅವನು ಇದ್ದು ಬದ್ಧನಲ್ಲ, ಸುಳಿದು ಸೂತಕಿಯಲ್ಲ ಎಂಬ ಜೀವನ್ಮುಕ್ತತೆಯಲ್ಲಿ ಸ್ಥಿತನಾಗುತ್ತಾನೆ. ಆದರ ಮುಂದಿನ ಮೆಟ್ಟಿಲೇ ಐಕ್ಯಸ್ಥಲ. ಜೀವ—ದೇವರಿಬ್ಬರೂ ವೈಯಕ್ತಿಕತೆಯನ್ನಳಿಸಿಕೊಂಡು ಒಂದಾಗಿ 'ಶಿವ' ಎಂಬ ಪರವಸ್ತುವಾಗುತ್ತಾರೆ ; ಭಿನ್ನತೆಯನ್ನರಿಯದೆ ಬಯಲಾಗುತ್ತಾರೆ.

"ಮರ್ತ್ಯವನ್ನು ಮರೆಯದೆ, ಕಾಣದ ಕೇಳದ ಕಲ್ಪನೆಯ ಸ್ವರ್ಗಕ್ಕೆ ಕೈಚಾಚದೆ, ಇಹವನ್ನೇ ಪರಹವನ್ನಾಗಿ, ಸೃಷ್ಟಿಯ ಸಮಸ್ತವನ್ನೂ ಶಿವವನ್ನಾಗಿ ಮಾರ್ಪಡಿಸಿ ರೂಪಿಸಿದ ಏಕೈಕ ಸಿದ್ಧಾಂತ ವೀರಶೈವ ಸಿದ್ಧಾಂತ. ಧರ್ಮ ಎಂದರೆ ಜಾತಿ ಎಂಬ ಹೀನಾರ್ಥ ಅದಕ್ಕೆ ತಿಳಿದಿಲ್ಲ. ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸುವ, ಪರರನ್ನು ತನ್ನಂತೆಯೇ ಕಾಣುವುದನ್ನು ಕಲಿಸುವ, ಮಾನವೀಯ ಮೌಲ್ಯವನ್ನು ಎತ್ತಿ ಹಿಡಿಯುವ ಕೇವಲ ಕಾಯಕ ನಿಷ್ಠೆಯಲ್ಲೇ ಕೈವಲ್ಯವನ್ನು ಕರಸ್ಥಲಕ್ಕೆ ತಂದಿರಿಸುವ, ದಾಸೋಹದ ಮೂಲಕ ದುಡಿಸುವ, ದುಡಿಮೆ ಧರ್ಮಗಳೆಲ್ಲವುಗಳಲ್ಲೂ ಸರ್ವರಿಗೂ ಸಮಪಾಲು,

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಮಬಾಳು ಕೊಡುವ ವಿಶ್ವಮಾನವಧರ್ಮ ವೀರಶೈವಧರ್ಮ. ಕ್ರಿಯೆ, ಜ್ಞಾನ ಮತ್ತು ಭಕ್ತಿ—ಈ ಮೂರನ್ನೂ ಮಾನ್ಯ ಮಾಡಿ, ಸಾಧಕನ ಅಂತಃಶಕ್ತಿಯನ್ನು ವೃದ್ಧಿಪಡಿಸಿ, ಲಿಂಗಾಂಗ ಸಂಯೋಗದಿಂದ ಶಿವನನ್ನು ಸೃಷ್ಟಿಸಿಕೊಟ್ಟ ವಿಶಿಷ್ಟದರ್ಶನ ವೀರಶೈವ ದರ್ಶನ. ಇದು ನುಡಿದು ತೋರಿದ, ನಡೆದು ಆಚರಿಸಿದ ಷಟ್‌ಸ್ಥಲ ಮಾರ್ಗವು ವಿಶ್ವಧರ್ಮಕ್ಕೆ ಕೊಟ್ಟ ವಿಶಿಷ್ಟ ಕೊಡುಗೆಯಾಗಿದೆ. ಒಟ್ಟಿನಲ್ಲಿ, ಸೈದ್ಧಾಂತಿಕ ಸ್ತರದಲ್ಲೇ ಸ್ಥಿತವಾಗುತ್ತಿದ್ದ ಧರ್ಮ ದರ್ಶನಗಳಿಗೆ ಲೌಕಿಕ ಹಾಗೂ ವ್ಯಾವಹಾರಿಕ ಚಾಲನೆಯನ್ನು ನೀಡಿ, ಮನುಕುಲದ ಬದುಕನ್ನು ಬಂಗಾರವನ್ನಾಗಿಸಿದ ವಿಶ್ವಧರ್ಮ ವೀರಶೈವಧರ್ಮ. ಇಷ್ಟು ಹೇಳಿ ಸರ್ವರಿಗೂ ಶಿರಸಾಷ್ಟಾಂಗ ನಮಸ್ಕಾರಗಳನ್ನು ಸಮರ್ಪಿಸಿ ವಿರಮಿಸುತ್ತೇನೆ.'

ಕಾರ್ಯದರ್ಶಿಯವರಿಂದ ವಂದನಾರ್ಪಣೆ ಆಯಿತು.

ಸಭೆ ಮುಕ್ತಾಯಗೊಂಡಿತು.

ಮತ್ತೆ ಪ್ರಕಟಣೆಯೊಂದು ಸಾರಿತು ಶ್ರೀಗುರು ನಾಗನೂರ ಶಿವಬಸವ ಶಿವಯೋಗಿಗಳ ಅಪೇಕ್ಷೆಯ ಮೇರೆಗೆ 'ವಿಜಯ ವಾತಾಪಿ' ನಾಟಕ ಪ್ರದರ್ಶನ ಇದೆ ಎಂದು.

ಬಿಡುವಿನ ವೇಳೆಯನ್ನು ಬಳಸಿಕೊಂಡ ಜನ ಮತ್ತೆ ಬಂದು ನೆರೆಯಿತು. ಆಗಮಿಸಿದ್ದ ಹರಗುರು ಚರಮೂರ್ತಿಗಳು ಸಂಚಾರ ಮುಗಿಸಿ, ಸ್ನಾನಮಾಡಿ ಪೂಜೆ ಪ್ರಸಾದಗಳನ್ನು ಪಡೆದು ಬಂದು ತಮ್ಮ ತಮ್ಮ ಗದ್ದುಗೆಗಳಲ್ಲಿ ಮಂಡಿಸಿದರು.

ನಾಂದಿ ಆಯಿತು.

ಕಲಾವಿದ ಸಂಕ್ಕಲುಪುಟ್ಟಿ ಶಿವರುದ್ರಯ್ಯನು ಎಲ್ಲ ಜಗದ್ಗುರುಗಳನ್ನೂ, ಮಹಾ ಗುರುವನ್ನೂ,ಸಭಿಕ ಮಹಾಶಯರನ್ನೂ ಸ್ವಾಗತಿಸಿ,ಬಾದಾಮಿ ಚಾಲುಕ್ಯ ಚಕ್ರವರ್ತಿಗಳ ಆಳ್ವಿಕೆಯ ಅವಧಿಯಲ್ಲಿ ಅವರ ಪರಮ ಶತ್ರುಗಳಾದ ಕಾಂಚಿಯ ಪಲ್ಲವರ ಬಳಿ ಇದ್ದ ಶಿವಭಕ್ತ ಸಿರಿಯಾಳದೇವನ ದಿವ್ಯಜೀವನವನ್ನು ಆಧರಿಸಿ ಕನ್ನಡದ ಕವಿಯೊಬ್ಬನು ರಚಿಸಿದ 'ವಿಜಯ ವಾತಾಪಿ' ಎಂಬ ನಾಟಕದ ಸ್ಥೂಲ ಪರಿಚಯ ಮಾಡಿಕೊಟ್ಟನು. ವಾತಾಪಿ ಅಥವಾ ಬಾದಾಮಿ ಮೊದಲು ಪಲ್ಲವರಿಗೆ ಸೋತರೂ ಅಂತ್ಯದಲ್ಲಿ ಇಮ್ಮಡಿ ಪುಲಕೇಶಿಯ ಎರಡನೆಯ ಮಗ ವಿಕ್ರಮಾದಿತ್ಯನ ಕಾಲದಲ್ಲಿ ಮತ್ತೆ ತಲೆ ಎತ್ತಿ ಮೆರೆಯುತ್ತದೆ. ಕನ್ನಡಿಗರ ಸಾಹಸ, ಸಿರಿಯಾಳದೇವನ ಭಕ್ತಿ, ಪಲ್ಲವರ ಶಕ್ತಿ, ಮುಮುಕ್ಷುಗಳ ಮುಕ್ತಿ ಎಲ್ಲವೂ ಸಂಗಮಿಸಿದ ಕಥಾನಕ ಇಲ್ಲಿದೆ. ಅವಲೋಕಿಸಿ ಕಲಾವಿದರನ್ನು ಆಶೀರ್ವದಿಸಬೇಕೆಂದು ಪ್ರಾರ್ಥಿಸಿಕೊಂಡನು.

ನಾಟಕ ಆರಂಭವಾಯಿತು.

★

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಐದು

ಮೂರನೆಯ ದಿನದ ಪ್ರಭಾತ ಸಮಯ!

ಅರುಣೋದಯಕ್ಕೆ ಮುನ್ನವೆ ಶಿವಯೋಗ ಮಂದಿರ ಎದ್ದು ತನ್ನ ನಿತ್ಯಕರ್ಮ ದಲ್ಲಿ ತೊಡಗಿತ್ತು. ಆಶ್ರಮದ ನಿಯಮದಂತೆ ಬೆಳಗಿನ ಜಾವ ಐದು ಗಂಟೆಗೆ ಸರಿಯಾಗಿ ವಟುಗಳು ಗುರುಗಳು ಎಲ್ಲರೂ ಎದ್ದು ಮುಖ ತೊಳೆದುಕೊಂಡು, ತಮ್ಮ ತಮ್ಮ ಕೊಠಡಿಗಳನ್ನು ಸ್ವಚ್ಛಗೊಳಿಸಬೇಕು. ಅನಂತರ ಯೋಗಾಭ್ಯಾಸ, ಸ್ನಾನ, ಪೂಜೆ, ಪ್ರಸಾದ, ಅಧ್ಯಯನ ಇಲ್ಲವೆ ಶಿವಾನುಭವ ಗೋಷ್ಠಿ. ಸಂಜೆಯ ಕಾರ್ಯ ಕ್ರಮದಲ್ಲಿ ನಿತ್ಯವೂ ಬದಲಾವಣೆ ಇರುತ್ತಿತ್ತು. ಒಂದೊಂದು ದಿನ ಸಂಗೀತಾಭ್ಯಾಸ, ಒಂದೊಂದು ದಿನ ಹರಿಕಥೆ, ಪುರಾಣ ಪಠಣ, ಶ್ರವಣ, ವಾಖ್ಯಾನ ಇತ್ಯಾದಿ ಕಾರ್ಯ ಕ್ರಮಗಳು. ಸಂಜೆ ಹೂಪತ್ರೆ ತರುವುದು, ಅನಂತರ ಸ್ನಾನ, ಪೂಜೆ, ಪ್ರಸಾದ. ಏಳು ಗಂಟೆಯಿಂದ ರಾತ್ರಿ ಹತ್ತು ಗಂಟೆಯವರೆಗೆ ಅಧ್ಯಯನ. ಇಲ್ಲವೇ ಗುರು, ಮಹಾಗುರು, ಜಗದ್ಗುರುಗಳು ದಯಮಾಡಿಸಿದಾಗ ಶಿವಾನುಭವಗೋಷ್ಠಿ ಕಾರ್ಯಕ್ರಮಗಳ ನ್ನೇರ್ಪಡಿಸಿ ಅದರಲ್ಲಿ ಎಲ್ಲರೂ ಸಕ್ರಿಯವಾಗಿ ಭಾಗವಹಿಸುವುದು. ಅನಂತರ ವಿಶ್ರಾಂತಿ. ಅಮಾವಾಸ್ಯೆ ಮತ್ತು ಪೌರ್ಣಿಮೆಗಳು. ಅವುಗಳ ಹಿಂದೆ ಒಂದು ದಿನ, ಮುಂದೆ ಒಂದು ದಿನ ಒಟ್ಟು ತಿಂಗಳಿಗೆ ಆರು ದಿನಗಳು ಹಾಗೂ ಹಬ್ಬ ಹರಿದಿನಗಳಂದೂ ಅನಧ್ಯಯನ.

ಅನಧ್ಯಯನ ದಿನಗಳಲ್ಲಿ ವಿಭೂತಿ ತಯಾರಿಕೆ, ಲಿಂಗನಿರ್ಮಾಣ, ಅವುಗಳಿಗೆ ಕಾಂತಿ ಹಿಡಿಸುವ ವಿಧಾನ ಕಲಿಕೆ, ಶಿವದಾರಗಳನ್ನು ಹೊಸೆಯುವುದು, ವನಸ್ಪತಿಗಳನ್ನು ಸಂಗ್ರಹಿಸಿ, ಅವುಗಳಿಂದ ಪುಡಿ, ಮಾತ್ರೆ, ಲೇಹ ಮೊದಲಾದ ರೂಪದ ಔಷಧಗಳನ್ನು ಸಿದ್ಧಪಡಿಸುವುದು. ಆಶ್ರಮಕ್ಕೆ ಬಂದ ಬಡರೋಗಿಗಳ ಶುಶ್ರೂಷೆ ಔಷಧೋಪಚಾರ ಬರಲಾಗದ ಅಕ್ಕಪಕ್ಕದ ಹಳ್ಳಿಗಳಲ್ಲಿರುವ ರೋಗಿಗಳನ್ನು ತಾವೇ ತಂಡ ತಂಡವಾಗಿ ಹೋಗಿ ಅವರ ಕಾಯಿಲೆಗಳಿಗೆ ಮದ್ದುಕೊಟ್ಟು ಗುಣಪಡಿಸುವುದು. ಔಷಧಕ್ಕಿಂತ ಮಿಗಿಲಾಗಿ ಸೇವಾ ಶುಶ್ರೂಷೆ, ಶುಶ್ರೂಷೆಯಷ್ಟೇ ಪ್ರಮಾಣದ ಪ್ರೀತಿವಾತ್ಸಲ್ಯ. ನಯ ತುಂಬಿದ ಆತ್ಮೀಯತೆ ಬೆರೆತ ಮಾತುಗಳು. ಅವುಗಳಿಂದಲೇ ಅರ್ಧರೋಗ ನಿವಾರಣೆಯಾಗುತ್ತಿತ್ತು. ಕೆಲವರು ಜ್ಯೋತಿಷ್ಯ ಶಾಸ್ತ್ರ, ಶಿಲ್ಪಶಾಸ್ತ್ರ, ವೈದಿಕಾದಿ ವಿಧಿ ವಿಧಾನಗಳನ್ನು ಕಲಿಯುತ್ತಿದ್ದರು. ಯಂತ್ರ ತಂತ್ರಗಳ ಅಭ್ಯಾಸವನ್ನೂ ಮಾಡುತ್ತಿದ್ದರು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಚಿತ್ರ, ಶಿಲ್ಪ, ನೃತ್ಯ, ಸಂಗೀತ ಮತ್ತು ಸಾಹಿತ್ಯ-ಈ ಐದು ಬಗೆಯ ಲಲಿತ ಕಲೆಗಳನ್ನು ಕಲಿಯಲು ಆಸಕ್ತಿ ಇದ್ದವರಿಗೆ ಅಲ್ಲಿ ಒಳ್ಳೆಯ ವಾತಾವರಣವನ್ನೇರ್ಪಡಿಸಲಾಗಿತ್ತು. ಅದರ ಜೊತೆಗೆ ಆಗಾಗ ಸಂಜೆ ಸಭೆ ಸೇರಿ ಚರ್ಚಾ ಸ್ಪರ್ಧೆಗಳನ್ನೇರ್ಪಡಿಸುತ್ತಿದ್ದರು. ವಾಚಾಳಿತನ ಬೆಳೆಸಿಕೊಳ್ಳಲು, ವಿಚಾರಶಕ್ತಿಯನ್ನು ಹೆಚ್ಚಿಸಿಕೊಳ್ಳಲು ಅದರಿಂದ ತುಂಬಾ ಸಹಾಯವಾಗುತ್ತಿತ್ತು. ಆಶ್ರಮದ ವಟುಗಳಿಗೆ ಸಭಾಕಂಪವಾಗಲಿ, ತಪ್ಪು ನುಡಿದೇವೆಂಬ ಭೀತಿಯಾಗಲಿ ಎಳ್ಳಷ್ಟೂ ಇರುತ್ತಿರಲಿಲ್ಲ. ಸೃಜನಶೀಲ ಕವಿ ಇಲ್ಲವೇ ಸಾಹಿತಿ ಬರೆದ ಕಾವ್ಯ ಅಥವಾ ವಿಮರ್ಶೆ ಮೊದಲಾದ ಕೃತಿಗಳನ್ನು ಎಲ್ಲರೂ ಓದಿ, ಕೇಳಿ ಚರ್ಚಿಸಿ ಅದರ ಬಗ್ಗೆ ಉತ್ತಮ ವಿಮರ್ಶೆ ಕೊಡುತ್ತಿದ್ದರು. ಆ ಮೂಲಕ ಕೃತಿಕಾರನಿಗೆ ತನ್ನ ದೋಷಗಳನ್ನು ತಿದ್ದುಕೊಳ್ಳುವ, ಗುಣಗಳನ್ನು ವೃದ್ಧಿಪಡಿಸಿಕೊಳ್ಳುವ ಅವಕಾಶ ಸಿಗುತ್ತಿತ್ತು.

ಇದರಿಂದಾಗಿ ಶಿವಯೋಗ ಮಂದಿರದ ವಿದ್ಯಾರ್ಥಿ ವಟುಗಳಿಗೆ ಶೀಲಸಂಪಾದನೆ, ಚಾರಿತ್ರ್ಯ ಶುದ್ಧೀಕರಣ, ಅಧ್ಯಯನ ವೃದ್ಧಿ, ಜ್ಞಾನಾರ್ಜನೆ, ಕಾಯಕನಿಷ್ಠೆ, ಭಕ್ತಿ ಪ್ರತಿಪಾದನೆ, ಲಿಂಗನಿಷ್ಠೆ, ಪರೋಪಕಾರ ಬುದ್ಧಿ ಇವು ವೃದ್ಧಿಯಾಗಿ, ಅವರ ಆಧ್ಯಾತ್ಮದ ಹಸಿವು, ಸಂಸ್ಕೃತಿಯ ಹಂಬಲ ಇವು ತೃಪ್ತಿಗೊಳ್ಳುತ್ತಿದ್ದವು. 'ಸಮಾಜ ಪೂಜಕನಾಗುವವನು ಮೊದಲು ಸಮಾಜ ಸೇವಕನಾಗಬೇಕು' ಎಂಬುದು ಹಾನಗಲ್ಲ ಕುಮಾರ ಯೋಗಿಗಳ ಮನೀಷೆಯಾಗಿದ್ದಿತು. ನಾವೆಲ್ಲರೂ ಸೇವಕರು. ಪರಶಿವನೊಬ್ಬನೇ ಪೂಜಕ. ಅವನು ಸ್ವಾಮಿ, ನಾವು ಭೃತ್ಯರು. ನಾವು ಮಾಡುವ ದೀನ ದಲಿತ ಸೇವೆ ಅವನ ಪೂಜೆ, ನಾವಾಡುವ ಪ್ರೀತಿ ವಾತ್ಸಲ್ಯದ ನುಡಿ ಅವನನ್ನು ಕುರಿತ ಪ್ರಾರ್ಥನೆ, ನಾವು ಕುಡಿವ ನೀರು ಅವನಿತ್ತ ತೀರ್ಥ, ಆಹಾರ ಅವನ ಕರುಣೆಯ ಪ್ರಸಾದ. 'ಇಳೆ ನಿಮ್ಮ ದಾನ, ಬೆಳೆ ನಿಮ್ಮ ದಾನ, ಸುಳಿದು ಸುತ್ತುವ ಗಾಳಿ ನಿಮ್ಮ ದಾನ' ಸಕಲವೂ ಅವನ ಕೊಡುಗೆ. ಅವನು ಕೊಟ್ಟದ್ದನ್ನು ಅವನಿಗೇ ಮುಟ್ಟಿಸಿ ಮುಕ್ತರಾಗಬೇಕು. ಅಂದರೆ ಅವನಿತ್ತ ಜ್ಞಾನವನ್ನು ಅಜ್ಞಾನಿಗಳಲ್ಲಿ, ಅವನಿತ್ತ ಹೊನ್ನನ್ನು ದೀನ ದರಿದ್ರರಲ್ಲಿ, ಅವನಿತ್ತ ಶುಚಿಯನ್ನು ಅಸ್ಪೃಶ್ಯರಲ್ಲಿ ಬೆರೆಸಿ, ಬೆಳೆಸಿ, ಬೆಳಗಿಸಬೇಕು. ತಾವು ಬದುಕಿ ಅನ್ಯರಿಗೂ ಬದುಕು ಕೊಡಬೇಕು. ಅಂತಹ ಮಾನವೀಯ ಮೌಲ್ಯವರಿತ ಮಹಾ ವಿದ್ಯೆಯನ್ನು ಕಲಿಯುವ ಕಲಿಸುವ ಸುವರ್ಣ ಸಂಧಿ ಏರ್ಪಟ್ಟಿದ್ದ ಏಕೈಕ ತಾಣ ಆ ಶಿವಯೋಗ ಮಂದಿರ !

ನಾಗನೂರ ಶ್ರೀ ಶಿವಬಸವ ಸ್ವಾಮಿಗಳು ಮೂರು ಸಾವಿರ ಮಠದ ಜಗದ್ಗುರು ಶ್ರೀ ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳವರು ನಿರ್ಮಿಸಿಕೊಟ್ಟಿದ್ದ ಪೂಜಾ ಗೃಹದಿಂದ ಪೂಜಾ ಪ್ರಸಾದಗಳನ್ನು ಮುಗಿಸಿಕೊಂಡು ಎಲ್ಲ ಜಗದ್ಗುರುಗಳ ಜೊತೆಯಲ್ಲಿ ಹೊರಬಂದರು. ಬಹು ಎತ್ತರವಾದ ಆಕೃತಿ. ಭವ್ಯತೆಯೇ ಸಾಕಾರಗೊಂಡ ನಿಲುವು ಅವರದು. ಜೊತೆಯಲ್ಲಿಯೇ ಶಿಷ್ಯ ರಾಜಶೇಖರಸ್ವಾಮಿ. ಶ್ರೀ ಗುರುವಿನ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹಣೆಯಲ್ಲಿ ಮೂರು ಬೆರಳಿನ ವಿಭೂತಿ ಢಾಳಾಗಿ ಬೆಳಗುತ್ತಿತ್ತು. ಉದ್ದನೆಯ ಕಾವಿಯ ಕಫನಿ, ತಲೆಯ ಮೇಲೆ ಕಾವಿ ಪೇಟ, ಕೈಯಲ್ಲಿ ದೊಡ್ಡ ದಂಡ, ಕಾಲಲ್ಲಿ ಹಾವುಗೆಗಳು ದಪ್ಪ ರುದ್ರಾಕ್ಷಿಮಾಲೆ ಕೊರಳಲ್ಲಿ ಶೋಭಿಸುತ್ತಿತ್ತು. ರಾಜಶೇಖರ ಅಪ್ಪಗಳ ಕೈ ಹಿಡಿದು ನಿಧಾನವಾಗಿ ನಡೆಸುತ್ತಿದ್ದ. ದೂರದಲ್ಲಿ ಕುಳಿತಿದ್ದ ಪ್ರೇಕ್ಷರಿಗೆ ಆಗಮಿಸುತ್ತಿದ್ದ ಶಿವಬಸವಸ್ವಾಮಿಗಳು ರಾಜಬೀದಿಯಲ್ಲಿ ಸರ್ವಾಲಂಕೃತವಾಗಿ ಹರಿದು ಬರುತ್ತಿರುವ ದೇವರ ತೇರಿನಂತೆ ಕಂಡರು!

ಹಾನಗಲ್ಲ ಸದಾಶಿವ ಸ್ವಾಮಿಗಳು ಮುಂದೆ ಮುಂದೆ ನಡೆದು ಹಾರ್ದಿಕ ಸ್ವಾಗತ ಬಯಸುತ್ತಿದ್ದರು. ಎಲ್ಲರೂ ಸಭಾಂಗಣವನ್ನು ಸಮೀಪಿಸುತ್ತಲೆ ಜನತೆ ಎದ್ದುನಿಂತು ಗೌರವ ಸೂಚಿಸಿ, ನಿಂತೆಡೆಯಲ್ಲೆ ನೆಲಕ್ಕೆ ಹಣೆ ಹಚ್ಚಿ ಮಣಿಯುತ್ತಿತ್ತು. ನಡೆಮುಡಿಯ ಹಾದಿಯಲ್ಲಿ ಕರ್ಪೂರ ಹಚ್ಚಿ ನಮಿಸುತ್ತಿತ್ತು! ಆಶ್ರಮದ ವಟುಗಳು ವೇದ ಘೋಷ ವನ್ನು ಸ್ತುತಿಸುತ್ತಿದ್ದರು. ಮಂಗಳವಾದ್ಯಗಳು ಮೊಳಗುತ್ತಿದ್ದವು; ನಾಗನೂರಪ್ಪಗಳು ಆಶೀರ್ವಾದ ಮುದ್ರೆಯನ್ನಾಡಿಸುತ್ತಾ ಆಗಮಿಸಿ ಪೀಠಸ್ಥರಾದರು.

ಕೂಡಲೇ ಇಡೀ ಜನಸ್ತೋಮ :

ನಾಗನೂರ ಶ್ರೀ ಶಿವಬಸವ ಸ್ವಾಮಿಗಳಿಗೆ
ಜಯವಾಗಲಿ........ಜಯವಾಗಲಿ
ಮಹಾಪ್ರಸಾದಿ ನಾಗನೂರಪ್ಪಗಳಿಗೆ
ಜಯವಾಗಲಿ........ಜಯ:ವಾಗಲಿ!

ಎಂದು ಉದ್ಘೋಷಿಸಿತು.

ಗವಾಯಿಗಳ ಗಾಯನ, ಪ್ರಾರ್ಥನೆಗಳು ಮುಗಿದ ಮೇಲೆ ಆಶ್ರಮವಾಸಿ ಸ್ವಾಗತಿಸಿದನು. ಅನಂತರ ಸುಕ್ಕುಲಪುಟ್ಟ ಶಿವರುದ್ರಯ್ಯನಿಂದ ಪ್ರಾಸ್ತಾವಿಕ ಭಾಷಣ. ಆತ ಎಲ್ಲ ಹರಗುರು ಚರಮೂರ್ತಿಗಳಿಗೂ ದೀರ್ಘದಂಡ ನಮಸ್ಕಾರಮಾಡಿ, ಎದ್ದು ನಿಂತು, ಸಕಲರಿಗೂ ಶರಣು ಎಂದು ಪ್ರಸ್ತಾವನೆಗೆ ಮೊದಲಾದ.

ಆತ್ಮೀಯರೇ,

ಶಿವಾನುಭವ ಸಮ್ಮೇಳನದ ಅಂಗವಾಗಿ ನಡೆಯಲಿರುವ ಇಂದಿನ ಈ ವಿದ್ವತ್ ಸಭೆಗೆ ಅಧ್ಯಕ್ಷರಾಗಿ ಕಾರ್ಯಕ್ರಮಗಳನ್ನು ಸುಸೂತ್ರವಾಗಿ ನಡೆಸಿಕೊಡಬೇಕೆಂದು ಶ್ರೀಮತ್ ಕುಪ್ಪೂರು ಗದ್ದಿಗೆ ಮಠಾಧ್ಯಕ್ಷರಾದ ಷಟ್‌ಸ್ಥಲ ಬ್ರಹ್ಮ ಶ್ರೀ ಶ್ರೀ ಶ್ರೀ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳವರನ್ನು ಸ್ವಾಗತ ಸಮಿತಿಯ ಪರವಾಗಿ, ತಮ್ಮೆಲ್ಲರ ಪರವಾಗಿ ಪ್ರಾರ್ಥಿಸಿಕೊಳ್ಳುತ್ತೇನೆ.

ಸಭೆ ಸಂಪೂರ್ಣವಾಗಿ ಅನುಮೋದಿಸಿದಂತೆ ಕಾಣಲಿಲ್ಲ!

ಚಪ್ಪಾಳೆಗಳು ದಿಕ್ಕು ತುಂಬಿ ಬರಲಿಲ್ಲ!

ಅದಕ್ಕೆ ಬದಲು ಶ್ರೀ ಚಂದ್ರಶೇಖರಸ್ವಾಮಿಗಳ ಹೆಸರನ್ನು ಉಚ್ಚರಿಸುವಾಗಲೇ ಒಬ್ಬ,

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

'ಓ' ಎಂದು ಸುದೀರ್ಘ ಉದ್ಗಾರ ತೆಗೆದ!

ಇನ್ನೊಬ್ಬ 'ಸಮಿತಿಯ ಆಯ್ಕೆಗೆ ಧಿಃಕ್ಕಾರ ಎಂದ!'

ಮತ್ತೊಬ್ಬ, 'ಏನ್ರಿ ಇದು ಅಪಚಾರ ವಿರಕ್ತ ದೇಹದಲ್ಲಿ ಅನ್ಯರಕ್ತದ ಪ್ರವೇಶವೆ?' ಎಂದ.

ಮಗದೊಬ್ಬ! 'ಇವರಿಗೆ ನಮ್ಮವರ್‍ಯಾರು ಸಿಗತಾ ಇರಲಿಲ್ಲವಾ?!' ಎಂದ.

ಇದನ್ನು ಕೇಳಿದ ಕೂಡಲೆ ಸಭೆಯ ಬಲ ಮಗ್ಗುಲಲ್ಲಿದ್ದವನು ತೋಳೇರಿಸುತ್ತಾ ಮೇಲೆದ್ದ.

'ಯಾಕೆ? ಚಂದ್ರಶೇಖರ ಸ್ವಾಮಿಗಳು ನಮ್ಮೊರು ಅಲ್ಲವಾ?

ಅವರು ಲಿಂಗಾಯತರಲ್ಲವಾ?

ಸ್ವಾಮಿಗಳಲ್ಲವಾ?

ಯಾಕೆ ಭೇದಭಾವನೆ'

'ಅವರು ಪಂಚಪೀಠಕ್ಕೆ ಸೇರಿದವರು, ಗುರುಮಠದವರು!'

'ಸೇರಿದ್ದರೇನಂತೆ, ಪಂಚಪೀಠಗಳು ವೀರಶೈವ ಮಠಗಳಲ್ಲವೆ? ಜಗದ್ಗುರು ಪಂಚಾಚಾರ್ಯರುಗಳು ವೀರಶೈವರಲ್ಲವೆ?'

'ಅಲ್ಲಾ...ಅವರು ಶುದ್ಧ ವೀರಶೈವರಲ್ಲ!'

'ಶುದ್ಧ ವೀರಶೈವರಲ್ಲ...ನಿಜ; ಪ್ರಬುದ್ಧ ವೀರಶೈವರು..! ಶ್ರೇಷ್ಠ ವೀರಶೈವರು!

'ತಿಳಿಯಿತೇ! ಅವರು ನಿಮ್ಮ ಅಪ್ಪಗಳು!'

'ಅಪ್ಪನ ಹೆಸರು ಎತ್ತಿದರೆ ಅನಾಹುತ ಆಗುತ್ತೆ!'

'ಏನಾಗುತ್ತೆ ಮಣ್ಣು!...ನಿಮ್ಮ ಯೋಗ್ಯತೆಗೆ ಬೆಂಕಿ ಹಾಕ!'

'ನಾಲಗೆ ಹದ್ದು ಮೀರ್‍ತಾ ಇದೆ, ನಮ್ಮ ಯೋಗ್ಯತೆ ಪ್ರಶ್ನಿಸೋಕೆ ಬಂದರೆ ನಿಮ್ಮ ಅಸ್ತಿತ್ವವೇ ಉಳಿಯೋದಿಲ್ಲ; ಹುಷಾರ್!'

'ಏನ್ರೋ ಮಾಡ್ತಿರಾ?...ವೀರಶೈವ ಧರ್ಮಕ್ಕೆ ನೀವೊಬ್ಬರೇ ಏನ್ರೋ ಗುತ್ತಿಗೆದಾರ್‍ರು! ನಮಗೂ ಹಕ್ಕಿದೆ. ಕುಲ ಹದಿನೆಂಟು ಜಾತಿ ಸೇರಿ ಆಗಿರೋ ಈ ವೀರಶೈವ ಎಲ್ಲರಿಗೂ ಸೇರಿದ್ದು! ಆದರ ಲಾಭ-ನಷ್ಟಗಳಲ್ಲಿ ಎಲ್ಲರಿಗೂ ಪಾಲಿದೆ ಎಂಬುದನ್ನು ಮರೆಯಬೇಡಿ!'

ಸಭೆಯಲ್ಲಿ ಕೋಲಾಹಲವೆದ್ದಿತು.

ಗದ್ದಲವೋ ಗದ್ದಲ.

ಒಬ್ಬಿಬ್ಬರು ಹೊಡೆದಾಟಕ್ಕೂ ನಿಂತರು.

ಹಾಗೆಯೇ ಬಿಟ್ಟರೆ ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತದೆಂದು ತಿಳಿದ ಹಾನಗಲ್ಲ ಸದಾಶಿವ ಸ್ವಾಮಿಗಳು ಮೇಲೆದ್ದರು.

'ಮಹನೀಯರೇ...ಸಭಿಕ ಮಹಾಶಯರೇ...'

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅವರು ಕೂಗಿದ್ದು ಅವರಿಗೇ ಕೇಳಿಸುತ್ತಿರಲಿಲ್ಲ.

ಅಷ್ಟು ಗದ್ದಲ, ಗಲಭೆ!

ಶ್ರೀಗಳವರಿಗೂ ಸಹನೆ ಮೀರಿತು. ಶ್ರೀ ಕುಮಾರೇಶನ ಗರ್ಭಗುಡಿಯ ಮುಂದಿದ್ದ ಜಯಘಂಟೆಯನ್ನು ತಂದು ಜೋರಾಗಿ ಬಾಜಿಸಿದರು. ಅದರಿಂದ್ದದ್ದ ಢಣಢಣ ಓಂಕಾರ ನಾದ ಸಭೆಯನ್ನು ಸ್ತಬ್ಧಗೊಳಿಸಿತು.

'ಮಹನೀಯರೆ, ನಾವಿನ್ನೂ ಬದುಕಿದ್ದೇವೆ! ಸ್ವಾಮಿಗಳು ಅನ್ನಿಸಿಕೊಂಡವರು ನಾವು ಇಲ್ಲಿರಬೇಕೊ ಅಥವಾ ಎದ್ದು ನಮ್ಮ ನಮ್ಮ ಮಠಗಳಿಗೆ ಹೋಗಬೇಕೊ ಹೇಳಿ ಬಿಡಿ'.

ಸಭೆ ನಿಶ್ಶಬ್ದವಾಯಿತು.

'ನೀವು ಸಮಾಜದ ಹಿರಿಯರು. ನಿಮ್ಮಿಂದ ಸಮಾಜ ಅಥವಾ ನೀವೇ ಸಮಾಜ! ಆದರೆ ಈಗ ಅದು ಸಮಾಜ ಅನ್ನಿಸಿಕೊಳ್ಳುವ ಅರ್ಹತೆ ಉಳಿಸಿಕೊಂಡಿಲ್ಲ. ಇದು ನಾವೆಲ್ಲರೂ ತಲೆ ತಗ್ಗಿಸುವಂತಹ ವರ್ತನೆ. ಇಂತಹ ಹೊಣೆಗೇಡಿ ಸಮಾಜಕ್ಕೆ ನಮ್ಮನ್ನು ರಕ್ಷಕರಾಗಿಯೋ ಭಿಕ್ಷುಕರಾಗಿಯೋ ಹೆಸರಿತ್ತು ಸ್ವಾಮಿಗಳನ್ನಾಗಿ ಮಾಡಿದ್ದೀರಿ. ನಮಗೆ ಮರ್ಯಾದೆ ಇದೆಯೇ? ಇದು ಸಮಾಜವೆ? ಇದು ಸಮಾಜವನ್ನು ನಡೆಸಿ ಕೊಳ್ಳುವ ರೀತಿಯೇ?'

'ಒಬ್ಬ ಭಕ್ತ ಎದ್ದು ನಿಂತ—ಬುದ್ಧಿ, ಸಂದರ್ಭ ಒದಗಿಬಂದದ್ದರಿಂದ ಮಾತನಾಡು ತ್ತಿದ್ದೇನೆ. ಕೃಪೆಮಾಡಿ ಉದ್ಧಟತನ ಎಂದು ಭಾವಿಸಬಾರದು'.

'ನೀವೂ?'

'ಶೆಟ್ಟೀಕೆರ ಪೇಟೆ ಯಜಮಾನ... ಹೆಸರು ಸಿದ್ದಪ್ಪ'

'ಸಿದ್ದಪ್ಪನವರೆ, ನಿಮ್ಮ ಅಭಿಪ್ರಾಯ?'

'ಮಕ್ಕಳು ಕೆಡುವುದಕ್ಕೆ ತಂದೆತಾಯಿಗಳು ಕಾರಣ, ವಿದ್ಯಾರ್ಥಿ ಹಾಳಾಗುವುದಕ್ಕೆ ಉಪಾಧ್ಯಾಯ ಕಾರಣ, ಸಮಾಜದ ಅವನತಿ, ಅಧೋಗತಿಗಳಿಗೆ ಮಠಾಧಿಪತಿಗಳಾದ ನೀವು ಕಾರಣ.'

'ಇರಬಹುದು, ಆದರೆ.........'

'ಇರಬಹುದೇನು? ಇದ್ದದ್ದೇ... ಜಾರಿಕೆಯ ಮಾತು ಬೇಡ. ಸಮಾಜ ಸಂರಕ್ಷಕರಾದ ಸ್ವಾಮಿಗಳಾದ ನೀವೆಲ್ಲರೂ ಒಂದಾಗಿ, ಚೆಂದಾಗಿ, ಸಹಯೋಗದೊಂದಿಗೆ ಬದುಕಿ, ಸಮಾಜವನ್ನು ಆಗಾಗ ಎಚ್ಚರಿಸಬೇಕಾಗಿತ್ತು. ಹಾಗೆ ಮಾಡಲಿಲ್ಲ. ನೂರಾರು ವರ್ಷಗಳಿಂದಲೂ ನಿಂತ ನೀರಾಗಿ ಕೊಳೆತ, ಕೊಚ್ಚೆಯಾಗಿ ನಾರುತ್ತಿರುವ ಈ ಸಮಾಜ ವೆಂಬ ತಿಪ್ಪೆಯಲ್ಲಿ ನೂರಾರು ಕ್ರಿಮಿ ಕೀಟಗಳು ಎದ್ದು ವಾತಾವರಣವನ್ನು ಹಾಳು ಮಾಡುತ್ತಿವೆ! ಇದಕ್ಕೆ ಕಾರಣರು ಯಾರು? ನೀವು? ಹೊಣೆಗಾರಿಕೆ ಯಾರದು?

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಿಮ್ಮದು ! ಅದನ್ನು ಬದಿಗಿಟ್ಟು ಸಮಾಜ, ಸಮಾಜ ಎಂದು ಅಮಾಯಕ, ಅಪ್ರಜ್ಞ ಸಮುದಾಯದ ಮೇಲೆ ಗೂಬೆ ಕೂರಿಸಿ ನೀವು ದೂರ ನಿಲ್ಲಬೇಡಿ; ಇದು ಶುದ್ಧ ಪಲಾಯನ ವಾದ !'

'ನಮ್ಮದು ಪಲಾಯನ ವಾದವೆ ? ಶಿವಶಿವಾ !'

'ಹೌದು'

'ಬುದ್ಧಿ, ತಾವು ದಯಮಾಡಿ, ಮುಹೂರ್ತವಹಾಡಿ, ನಾನು ಈ ಶೆಟ್ಟರಿಗೆ ಉತ್ತರ ಕೊಡುತ್ತೇನೆ.' ಎಂದು ಮೇಲೆದ್ದರು ಸೋಮಶೇಖರ್.

'ಹೇಳಿ ಶೆಟ್ಟರೆ, ನಿಮ್ಮ ಆರೋಪವೇನು ?'

'ನೋಡಿ, ಸೋಮಶೇಖರ್. ಸ್ವಾಮಿಗಳಿಗೆ ಧರ್ಮ, ಸಮಾಜಗಳ ಬಗ್ಗೆ ಕಾಳಜಿ ಇಲ್ಲ. ಆದ್ದರಿಂದ ಅವರು ಪಲಾಯನ ವಾದಿಗಳು.'

'ಅವರದು ಪಲಾಯನ ವಾದದ ಪಾಪ ; ನಮ್ಮದು ಸಮಾಜವನ್ನು ಕೊಲೆಗೈದ ಪಾತಕ'

'ಹೇಗೆ ?'

'ಸಮಾಜದ ಹಿರಿಯರು ಎಂದು ಕರೆಸಿಕೊಂಡ ನಾವು, ಬುದ್ಧಿಜೀವಿಗಳು ಅನಿಸಿಕೊಂಡ ವಿದ್ಯಾವಂತರು ಏನು ಮಾಡಿದಿವಿ...? ಹನ್ನೆರಡನೆಯ ಶತಮಾನದಲ್ಲಿ ಪಲ್ಲವಿಸಿ ಫಲವಿತ್ತ ವೀರಶೈವ ಸಮಾಜ ವೃಕ್ಷಕ್ಕೆ ಅನಂತರದ ಯುಗಗಳಲ್ಲಿ ಬಂದಳಿಕೆ ಹತ್ತಿಸಿದಿವಿ. ಅದು ಒಳಗೇ ಬೇರು ಬಿಟ್ಟು ವೃಕ್ಷವನ್ನೇ ನಾಶಗೊಳಿಸುವಷ್ಟು ಬಲಿಷ್ಠವಾಯಿತು. ಇದು ನಾವು ಗೈದ ಪಾಪ ; ಇನ್ನು ಮಠಗಳು ಮಾಡಿದ್ದೇನು ?'

'ಹೇಳಿ ಕೇಳೋಣ'

'ಕೇಳಿ, ಪಂಚಪೀಠಗಳು ಮತ್ತು ಅದರ ಅನುಯಾಯಿಗಳು ತಮ್ಮ ಪ್ರತಿಷ್ಠೆಯನ್ನು ವಿಶೇಷ ರೀತಿಯಲ್ಲಿ ಬೆಳಸಿಕೊಂಡರು. ಪರಶಿವನ ಪಂಚಮುಖದಿಂದ ಧುಮ್ಮಿಕ್ಕಿದವರು ತಾವೇ ಎಂದು ಭ್ರಮಿಸಿ ಬೇರೆಯವರನ್ನು ಕೀಳಾಗಿ ಕಾಣತೊಡಗಿದರು. ಬಸವಣ್ಣನಂತೆ ಇವರೂ ಸಹ ಶೈವವನ್ನು ತೊರೆದು ವೀರಶೈವವನ್ನು ಅಪ್ಪಿಕೊಂಡವರು. ಆದರೆ ಅಲ್ಲಿಂದ ಟಿಸಿಲೊಡೆದು ಬಂದ ಈ ಭಾಗ ಉಳಿದ ಭಾಗದೊಡನೆ ಒಡವೆರೆದು ಬೆಳೆಯಿತೇನು ? ಇಲ್ಲ. ಅದು ಪ್ರತ್ಯೇಕವಾಗಿಯೇ ಉಳಿಯಿತು. ತನ್ನ ಪೂರ್ವಾಶ್ರಮದ ಸ್ಥಾವರ ಪೂಜೆ, ಯಜ್ಞ ಸಂಪ್ರದಾಯ, ವೈದಿಕಾಚರಣೆ ಬಿಡಲೇ ಇಲ್ಲ. ಮತ್ತೆ ತಾನೇ ಶ್ರೇಷ್ಠ ಎಂದು ಎತ್ತರದ ಪೀಠ ಕೇಳಿತು. ಸಭೆ ಸಮಾರಂಭಗಳಲ್ಲೂ ಉನ್ನತ ಸ್ಥಾನದಲ್ಲಿ ಕುಳಿತು ಮೆರೆಯಿತು. ಅದಕ್ಕೆ ತಾನೇ ಶ್ರೇಷ್ಠ, ಉಳಿದವರೆಲ್ಲರೂ ಕನಿಷ್ಠ, ಕೆಲವೆಡೆ ತುಚ್ಛ ಎಂಬ ಭಾವನೆಯು ಬಂದಿದ್ದರೂ ಸಾಕು. ಸಂಸ್ಕೃತದಲ್ಲೇ ತನ್ನ ಮೋಕ್ಷವನ್ನು ಕಂಡುಕೊಂಡಿತು. ಕನ್ನಡ ಕಂಡರೆ ಆದಕ್ಕೆ ಕಣ್‌ಕಿಸುರು ! ಅಣ್ಣನ ಅನುಗ್ರಹದಿಂದ ಬೆಳೆದುಬಂದ ಲಿಂಗವಂತರನ್ನು ಬಸವನ ಕುಲದವರೆಂದು ಬೇರೆ ಮಾಡಿ, ಮುಟ್ಟಿದರೆ ಮೈಲಿಗೆ ಆಗುತ್ತೇನೆಂದು ಭಾವಿಸಿ ತಾನು ಮೇಲೆಯೇ ಉಳಿಯಿತು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇನ್ನು ವಿರಕ್ತರು ಅನ್ನಿಸಿಕೊಂಡವರು ಎಡೆಯೂರು ಸಿದ್ಧಲಿಂಗೇಶ್ವರರ ತರುವಾಯ ತುಂಬಾ ಮಡಿತನ ಕಲಿತುಬಿಟ್ಟರು. ಮಾತನಾಡಿದರೆ ನೀರಲ್ಲಿ ಮುಳುಗ ಹೊರಟರು. ಅವರಲ್ಲಿಯೇ ಎಂದೂ ಇಲ್ಲದ ಗುರು, ಮಹಾಗುರು, ಜಗದ್ಗುರುಗಳು ಸೃಷ್ಟಿ ಆದರು. ವೀರ ವಿರಕ್ತರಾದ ಅವರಲ್ಲೂ ಹೊನ್ನು ಮಣ್ಣಿನ ಹಂಬಲ ಹರಿಯಲಿಲ್ಲ. ಹಣವಿದ್ದವರು ಜಗದ್ಗುರುಗಳು ಎಂದು ಕರೆದುಕೊಂಡು ಉಳಿದವರನ್ನು ತಮ್ಮ ಸೇವಕರನ್ನಾಗಿ ಮಾಡಿಕೊಂಡರು. ಗುರು ವರ್ಗದಲ್ಲಿರುವ ಅನುಶ್ರೇಣಿ ಅವರಲ್ಲೂ ಬಂತು.

ಗುರು—ವಿರಕ್ತರ ಮಡಿತನದ ಭಿನ್ನ ಭಾವನೆಗಳನ್ನು ನೋಡಿ ಲಿಂಗಧಾರಿಗಳಾದ ಸಾದರು, ನೊಣಬರು, ಕುಂಬಾರರು, ಮಡಿವಾಳರು, ಹಡಪದವರು, ತಮ್ಮಲ್ಲೇ ಕೆಲವರು ಜಂಗಮರನ್ನು ಸೃಷ್ಟಿಸಿಕೊಂಡರು. ಸಮಾಜದ ನಾಯಕರು, ಸ್ವಾಮಿಗಳು, ಬುದ್ಧಿಜೀವಿಗಳು ಹಣವಂತ ವರ್ತಕರು ಇವರೇ ಮೊದಲಾದವರ ಕೈಗೆ ಸಿಕ್ಕು ವಿಶ್ವ ಧರ್ಮವೆನಿಸಬಹುದಾಗಿದ್ದ ವೀರಶೈವ ಕೇವಲ ಒಂದು ಮತವಾಗಿ ಪರಿಣಾಮ ಪಡೆಯಿತು. ಇನ್ನು ಉಳಿದ ಅಮಾಯಕ, ಅವಿದ್ಯಾವಂತ, ಅಶಕ್ತ ಜನ ಹಣವಂತರ ಗುಲಾಮರಾಗಿ, ಇಲ್ಲವೇ ಮಠದ ನಾಯಿಗಳಾಗಿ ಬದುಕು ಮಾಡಿದುವು. ಬಡಜನರ ಕಣ್ಣಿಗೆ ಮಣ್ಣೆರಚಿ, ಅವರ ಮತ ಗಿಟ್ಟಿಸಿಕೊಂಡು, ಮೋಜು ಮಾಡುತ್ತಿರುವ ರಾಜಕಾರಣಿಗಳಂತೆ ನಮ್ಮ ನಿಮ್ಮಂತಹ ಸಮಾಜದ ಹಿರಿಯರೂ ಮಠಾಧಿಪತಿಗಳೂ ವರ್ತಿಸಿದರು. ರಕ್ಷಕರಾದವರೇ ಸಮಾಜದ ಭಕ್ಷಕರಾದರು! ಅದರಿಂದಾಗಿ ನಮ್ಮ ಭಂಡಾರಿ, ನೇಕಾರ, ಕುಂಬಾರ, ಬಡಗಿ, ಚಮ್ಮಾರ, ಕುರುಬ, ಕಮ್ಮಾರ, ಮಡಿವಾಳ, ವರ್ತಕ, ಮೊದಲಾದವರು ಭಂಡಾರಿಯಾಗಿ, ನೇಕಾರನಾಗಿ, ಕುಂಬಾರನಾಗಿ, ಬಡಗಿಯಾಗಿ, ಚಮ್ಮಾರನಾಗಿ, ಕುರುಬನಾಗಿ, ಕಮ್ಮಾರನಾಗಿ, ಮಡಿವಾಳಿಯಾಗಿ, ವರ್ತಕನಾಗಿಯೇ ಉಳಿದರು; ವೀರಶೈವರಾಗಲೇ ಇಲ್ಲ. ಇಂತೆಲ್ಲ ಕಾಯಕ ಯೋಗಿಗಳನ್ನು ಪಡೆದ ಲಿಂಗವಂತ ಸಮಾಜ ಅವರೆಲ್ಲರನ್ನು ತನ್ನ ಕಕ್ಷೆಯಲ್ಲಿಟ್ಟುಕೊಂಡು ರಕ್ಷಿಸಿಕೊಂಡು ಬರುವ ಸೌಭಾಗ್ಯವನ್ನು ಪಡೆಯಲೇ ಇಲ್ಲ.

ಈ ವಿಶ್ವಧರ್ಮದಲ್ಲಿ ಪುರೋಹಿತಶಾಹಿಯೊಂದು ಬಂದಳಿಕೆಯಂತೆ ಹುಟ್ಟಿ ಕೊಂಡಿತು. ಗುರು ಎಂದರೆ ಗುರುವರ್ಗ, ಪಟ್ಟದ ಮಠಗಳ ಗುರುಗಳು; ಜಂಗಮ ಅಂದರೆ ವಿರಕ್ತಮಠದ, ನಿರಾಭಾರಿ ಮಠ ನಿರಂಜನ ಮೂರ್ತಿಗಳು; ಲಿಂಗ ಅಂದರೆ ಆ ಜಗನ್ನಿಯಾಮಕನಾದ ಪರಾತ್ಪರ ವಸ್ತುವಿನ ಸಂಗ್ರಹ ರೂಪ. ಈ ಗುರು, ಲಿಂಗ, ಜಂಗಮ ಮೂವರಲ್ಲೂ ಅಭೇದ ಇರಬೇಕಾಗಿತ್ತು. ಅದನ್ನು ಮರೆತು, ಅಥವಾ ಮರೆಯಿಸಿ ಇಂಗು ತಿನ್ನಿಸಿದ ಮಂಗನನ್ನು ಆಡಿಸಿದಂತೆ ಹಿರಿಯರು ಸಮಾಜದ ನೇತಾರರು ಅನ್ನಿಸಿಕೊಂಡ ನಾವು ಆಡಿಸತೊಡಗಿದೆವು. ಇಡೀ ಸಮಾಜವನ್ನೇ ಈ ಹೀನ ಸ್ಥಿತಿಗೆ ತಂದೆವು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಗುರು—ವಿರಕ್ತ, ಬಣಜಿಗ—ಸಾದ, ನೊಣಬ—ಜಂಗಮ ಇವೇ ಮೊದಲಾದ ಲಿಂಗವಂತರ ಕಿತ್ತಾಟಗಳನ್ನು ಕಂಡು, ಅದರ ದುರ್ಲಾಭ ಪಡೆದುವು ಅನ್ಯಮತ ಅಥವಾ ಧರ್ಮಗಳು. ಸರ್ಕಾರ ಆಯೋಗದ ಮೇಲೆ ಆಯೋಗ ತಂದಿತು ಕರ್ನಾಟಕದಿಂದ ಲಿಂಗಾಯಿತರನ್ನು ಉಚ್ಚಾಟಿಸಿತು. ಅವರು ಇದ್ದೂ ಸತ್ತ ಹಾಗೆ ಜೀವಂತ ಹೆಣಗಳಾಗಿ ಬದುಕಬೇಕಾಯಿತು. ದುರ್ಯೋಧನನು ವೈಶಂಪಾಯನ ಕೊಳದಲ್ಲಿ ಅಡಗಿಕೊಂಡಿದ್ದಾಗ, ಪಾಂಡವರ ಕಡೆಯವರು ಕುರುಭೂಮಿಯಲ್ಲಿ ಕುರು ಭೂಪಾಲನನ್ನು ಹುಡುಕಿದರಂತೆ! ಅಂತಹ ವಿಪರ್ಯಾಸ ಕರ್ನಾಟಕದ ಲಿಂಗಾಯತರಿಗೆ ಪ್ರಾಪ್ತವಾಯಿತು. ಅವರು ಆಟಕ್ಕುಂಟು ಲೆಕ್ಕಕ್ಕಿಲ್ಲ ಎನ್ನುವಂತಾದರು. ಈ ಅನಾಥಪ್ರಜ್ಞೆ ಕರುಳು ಹಿಂಡುವು ದಿಲ್ಲವೆ? ಕನ್ನಡನಾಡನ್ನು ಅನಾದಿಕಾಲದಿಂದಲೂ ಆಳಿಕೊಂಡು ಬಂದವರು ವೀರಶೈವರು, ಕಲ್ಯಾಣ, ಕೊಡಗು, ಕೆಳದಿ, ಕಿತ್ತೂರು, ಸ್ವಾದಿ, ಬೀಳಗಿ, ಹರಪನಹಳ್ಳಿ, ಹಾಗಲವಾಡಿ, ಬಿಜ್ಜಾವರ, ಮೈಸೂರು, ಮತ್ತೋಡು, ಬೆಳವಡಿ, ಸಿರಸಂಗಿ, ವಣಗಡಿ ಕೆಳಲೆ, ಸುಗಟೂರು, ಬೆಳಗೋಡು, ನುಗ್ಗಿಹಳ್ಳಿ, ಬೆಟ್ಟದಪುರ, ಉಮ್ಮತ್ತೂರು, ಬೂದಿಹಾಳು, ಪಿರಿಯಾಪಟ್ಟಣ, ಹದಿನಾಡು, ವಿಜಯನಗರ, ಹಗರಟಗೆ, ಕುರಗೋಡು—ಇಂತಹ ನೂರಾರು ರಾಜ್ಯ, ಸಾಮ್ರಾಜ್ಯಗಳಲ್ಲಿ ವೀರಶೈವರು ಆಡಳಿತ ನಡೆಸಿದರೆಂದು ಇತಿಹಾಸ ಹೇಳುತ್ತದೆ. ವೀರಶೈವರು ಅದೆಲ್ಲವನ್ನೂ ಮರೆತು ಮೂರ್ಖರಂತೆ ವರ್ತಿಸುತ್ತಿದ್ದಾರೆ. ಇದು ತುಂಬಾ ನಾಚಿಕೆಗೇಡಿನ ವಿಷಯ.

ಬಸವಣ್ಣ ಬ್ರಾಹ್ಮಣನಾಗಿ ಹುಟ್ಟಿದ್ದರೂ ವೈದಿಕ ಧರ್ಮವನ್ನು ತ್ಯಜಿಸಿ,ವೀರಶೈವ ಧರ್ಮವನ್ನು ಸ್ವೀಕರಿಸಿದ್ದು ವೀರಶೈವದ ಹಲವು ಮಾನನೀಯವ ಮೌಲ್ಯಗಳನ್ನು ಕಂಡು; ಅದೊಂದು ಕ್ಷುಲ್ಲಕ ಕ್ಷುದ್ರ ಸಂಕುಚಿತ ಹೀನ ಪ್ರವೃತ್ತಿಯ ಅಥವಾ ಕಂದಾಚಾರದ ಜಾತಿ ಎಂದಲ್ಲ. ಆ ವಿಶ್ವಧರ್ಮದಲ್ಲಿ ತನ್ನ ಹಲವೊಂದು ಜೀವನ ಮೌಲ್ಯಗಳನ್ನು ಬೆರೆಸಿ ಪ್ರಕಾಶಕ್ಕೆ ತರಲೆಂಬ ಹಿರಿಯ ಕನಸು ಕಟ್ಟಿಕೊಂಡ. ಮಾನವತೆ, ಕಾಯಕ ನಿಷ್ಠೆ, ದಾಸೋಹ ಭಾವನೆ, ಏಕದೇವೋಪಾಸನೆ, ಅಂತರಂತ ಬಹಿರಂಗ ಶುದ್ಧಿ, ಕಂದಾಚಾರ ಅಥವಾ ಮೂಢನಂಬಿಕೆಗಳ ನಿರ್ಮೂಲನ, ಸೇವೆ, ನಿಷ್ಠೆ, ಭಕ್ತಿ, ಪ್ರೇಮ, ಆತ್ಮಸಾಂತ್ವನ, ಆತ್ಮಪ್ರಜ್ಞೆ ಅಥವಾ ಪ್ರತ್ಯಯ ಇವುಗಳನ್ನು ವೃದ್ಧಿಗೊಳಿಸಿ ಮನುಕುಲದ ಬದುಕನ್ನು ಬಂಗಾರವಾಗಿಸುವ ಹಂಬಲ ಅವನದಾಗಿತ್ತು. ಅದಕ್ಕೆ ಅಂದಿನ ವೀರಶೈವ ನಿಜಕ್ಕೂ ಅನುಕೂಲಕರ ವಾತಾವರಣ ನಿರ್ಮಿಸಿತ್ತು. ಆದರೆ ಅದನ್ನು ವಿಶ್ವಧರ್ಮವಾಗಿ ಬೆಳೆಸಲು ಅಣ್ಣನ ಅನಂತರ ಅವಕಾಶ ದೊರಕದೆ ಇದ್ದುದು ಆ ಧರ್ಮದ ಒಂದು ಮಹಾ ದುರಂತ! ಅಣ್ಣನಾಗಲಿ ಅಥವಾ ಜಗದ್ಗುರು ರೇಣುಕ ರಾಗಲಿ ಆಡಿ ಆಚರಿಸಿ ತೋರಿಸಿದ 'ಸಕಲ ಜೀವಾತ್ಮರಿಗೆ ಲೇಸನೇ ಬಯಸುವ' ಅಥವಾ 'ಸರ್ವಜನ ಹಿತಕಾರಣಿ' ಎಂಬುದನ್ನು ಮರೆತು ನಮ್ಮ ವಂತ ಪೀಠಾಧಿಪತಿಗಳು ಸಂಕುಚಿತ ಬುದ್ಧಿಯಿಂದ ಈ ಧರ್ಮ ಸಾಧಿಸಿ ತೋರಿಸಬೇಕಾಗಿದ್ದ ಮಾನವ ಕಲ್ಯಾಣ ಹಾಗೂ ಸರ್ವಧರ್ಮ ಸಮನ್ವಯ ಸಾಧ್ಯವಾಗದೆ ಹೋದದ್ದು ನಮ್ಮ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ರಾಷ್ಟ್ರದ ಭವಿಷ್ಯದಲ್ಲೇ ಆದ ಒಂದು ದುರ್ದೈವ, ಇಲ್ಲವೇ ಅನಿಷ್ಟದ ಸಂಗತಿ! ನೋಡಿ ಶೆಟ್ಟರೆ, ಮಠಗಳನ್ನು ಕಟ್ಟಿದವರು ನಾವು! ಸ್ವಾಮಿಗಳನ್ನು ಮಾಡಿದವರು ನಾವು! ಜಾತಿ ಒಳಜಾತಿಗಳಿಗೂ ಒಬ್ಬೊಬ್ಬ ಜಂಗಮನನ್ನು ಸೃಷ್ಟಿಮಾಡಿದವರು ನಾವು! ಪುರೋಹಿತ ಶಾಹಿ ಶುರುವಾದ ಕೂಡಲೇ ಅವರವರಲ್ಲೇ ಕಚ್ಚಾಟ ತಂದಿಕ್ಕಿದವರು ನಾವು! ಮಠಕ್ಕೊಬ್ಬ ಸ್ವಾಮಿ ಬೇಕು ಅಂದಾಗ ಅವನನ್ನು ಆಯ್ಕೆಮಾಡಿದ್ದು ಹೇಗೆ? ಕುಲದಲ್ಲಿ ಜಂಗಮ ಆಗಬೇಕು. ಆ ಜಂಗಮ ಜ್ಞಾನಿಯೇ? ಎಂದಿಗೂ ಅಲ್ಲ. ಒಬ್ಬನಿಗೆ ಮೂರು ಜನ ಗಂಡುಮಕ್ಕಳಿದ್ದರೆ ಹಿರಿಯವನು ದಷ್ಟಪುಷ್ಟನಾಗಿದ್ದಾನೆ. ಅವನು ದುಡಿದರೆ ಮನೆಯವರ ಹೊಟ್ಟೆಗೆ ಅನ್ನ; ಇಲ್ಲದಿದ್ದರೆ ಮಣ್ಣು. ಅಪ್ಪ ಅಮ್ಮ ಸತ್ತರೆ ತಲೆಗೊಳ್ಳಿ ಹಿಡಿಯಾಕೆ ಅವನು ಬೇಕೇಬೇಕು. ಆದ್ದರಿಂದ ಅವನು ಸ್ವಾಮಿ ಆಗೋದು ಬೇಡ. ಇನ್ನು ಕಿರಿಯವರು ತುಂಬಾ ಶಾಣ ಇದಾನೆ. ಅವನಿಂದ ವಂಶಕ್ಕೆ ಕೀರ್ತಿ ಬರುತ್ತೆ. ಅವನು ಸ್ವಾಮಿ ಆಗೋದು ಬೇಡ. ಮಧ್ಯದವನು ಶುದ್ಧ ಪೆದ್ದ. ದಗದ ಮಾಡೋಕೆ ತಾಖತ್ತಿಲ್ಲ; ವಿದ್ಯೆ ಕಲಿಯೋಕೆ ತಲೆ ಇಲ್ಲ. ಎತ್ತಲೂ ಮುಟ್ಟದ ಈ ಮುಠ್ಠಾಳನನ್ನು ಬೇಕಾದರೆ ಮಠಕ್ಕೆ ಕೊಟ್ಟುಬಿಡೋಣ. ತಗೊಳ್ಳಿ, ಇವನನ್ನೇ ಸ್ವಾಮಿ ಅಂತಾ ಮಾಡಿಕೊಂಡುಬಿಡಿ, ನಿಮ್ಮ ಧರ್ಮ! ಅಂತಾ ಹೇಳಿ ಅಂಥಾ ಆಯ್ಕೆ ಮಾಡಿದೋರು ನಾವು. ಬುದ್ಧೀ ಅವನು ಹಾಗೆ, ಇವನು ಹೀಗೆ ಅಂತಾ ಸ್ವಾಮಿ ಆದವನ ಕಿವಿ ಹಿಂಡಿ, ಇಲ್ಲವೆ ನಿಮ್ಮನ್ನು ಹಾಗೆ ಮಾಡ್ತೇನೆ, ಹೀಗೆ ಮಾಡ್ತೇನೆ ಅಂತಾ ಬೆದರಿಸಿ ಬುಟ್ಟಿಯಲ್ಲಿ ಹಾಕ್ಕೊಂಡು, ಸ್ವಾಮಿ ಅನ್ನುವವನನ್ನು ಕೇವಲ ಒಂದು ಸೂತ್ರದ ಬೊಂಬೆಯನ್ನಾಗಿ ಮಾಡಿಕೊಂಡವರು ನಾವು! ಸ್ವಾಮಿಗಳಲ್ಲಿ, ಮಠಗಳಲ್ಲಿ ಹಣ ಇದ್ದರೆ, ಅದನ್ನು ಹೇಗಾದರೂ ಮಾಡಿ ಕಬಳಿಸೋಕೆ ಏನೆಲ್ಲ ಹಂಚಿಕೆಗಳನ್ನು ಹಾಕಿಕೊಂಡು ಮಠಗಳನ್ನು ದನದ ಕೊಟ್ಟಿಗೆ, ಚಪ್ಪಲಿ ಮಾರೋ ಅಂಗಡಿ, ಸಿನಿಮಾ ಮಂದಿರ ಇಲ್ಲವೇ ಕುಂಡುಕರ ಪಡಖಾನೆ, ಕುಣಿಯೋರ ಬಾರ್‌ಗಳನ್ನಾಗಿ ಪರಿವರ್ತಿಸಿದ ಸಮಾಜ ಸುಧಾರಕರು ನಾವು! ತೊಂಬತ್ತೊಂಬತ್ತು ಬಾರಿ ನಾವು ಕೇಳಿದ ಹಾಗೆ ಹಣ ಕೊಟ್ಟ ಬಡಪಾಯಿ ಸ್ವಾಮಿ, ನೂರನೇ ಬಾರಿ ಕೈಯಲ್ಲಿಲ್ಲದೆ ಕೊಡದೇ ಹೋದರೆ ಅವನ ಮೇಲೆ ಅಪಪ್ರಚಾರ ಮಾಡಿ, ಮಾನಗೆಟ್ಟ ಹೆಣ್ಣನ್ನು ಬೀದಿಗೆಳೆದು ತಂದು ಅವಳನ್ನು ಮಹಾಪತಿವ್ರತೆ ಅಂತ ಕರೆದು, ಅವಳ ಪಾತಿವ್ರತ್ಯಕ್ಕೆ ಭಂಗ ತಂದ ಅಂತ ಟಾಂಟಾಂ ಹೊಡೆದು ಪವಿತ್ರ ಪಾತ್ರದಲ್ಲಿ ಪಾಷಾಣ ತುಂಬೋರು ನಾವು! ಇಷ್ಟೆಲ್ಲಾ ದೋಷಗಳನ್ನು ನಮ್ಮಲ್ಲಿ ಇಟ್ಟುಕೊಂಡು ದೇವರಂತೆ ಒಳ್ಳೆಯದು, ಕೆಟ್ಟದ್ದು ಎರಡನ್ನೂ ಸಮವೆಂದು ಭಾವಿಸುವ ಈ ಸ್ವಾಮಿಗಳವರನ್ನೇಕೆ ದೂರುತ್ತೀರಿ?'

'ನಮ್ಮ ತಾತ ಮುತ್ತಾತಂದಿರ ಕಾಲದಿಂದಲೂ ಶುದ್ಧೀಕರಣ ಆಗಬೇಕಾಗಿತ್ತು. ಅಂದಿನ ನಮ್ಮ ನಿರ್ಣಯಗಳು ಸಮಾಜದ ರಕ್ಷೆ_ಶಿಕ್ಷೆಗಳಾಗಿ, ರೀತಿ–ನೀತಿಗಳಾಗಿ,

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಹಜ ಸಂಹಿತೆಗಳಾಗಿ ಅವುಗಳೇ ಅದರ ದಾರಿದೀಪಗೆಗಳಾಗಿ ಬೆಳಗಬೇಕಾಗಿತ್ತು. ಮನೆಯೆಲ್ಲಾ ಹತ್ತಿ ಉರಿದು ಎಲ್ಲರೂ ಎಲ್ಲವೂ ಬೆಂದು ಬೂದಿಯಾದ ಮೇಲೆ ಮನೆಗೆ ಬೆಂಕಿ ಬಿದ್ದದ್ದು ಹೇಗೆ? ಅದು ಸುಟ್ಟ ಬಗೆ ಹೇಗೆ? ಸುಡಲು ಬಿಟ್ಟವರು ಯಾರು? ಇದೆಲ್ಲ ಕುರಿತು ವಿಚಾರಗೋಷ್ಠಿ ನಡೆಸಿ ವರದಿ ತೆಗೆದುಕೊಂಡು, ಎಲ್ಲದನ್ನೂ ಮರೆತು ಮಲಗುವ ಸರಕಾರದ ನೀತಿಗಿಂತ ನಿಮ್ಮ ಸಮಾಜ ರೀತಿ ಏನೇನೂ ಭಿನ್ನವಾಗಿಲ್ಲ!'

'ಮತ್ತೆ ಅದೇ ವ್ಯರ್ಥಾಲಾಪ. ಸಿದ್ದಪ್ಪನವರೆ ಅಣ್ಣ ಹೇಳಿದ ಮಾತು ನೆನೆಯಿರಿ :

ಲೋಕದ ಡೊಂಕ ನೀವೇಕೆ ತಿದ್ದುವಿರಯ್ಯ
ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ
ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ
ನೆರೆಮನೆಯವರ ದುಃಖಕ್ಕೆ ಅಳುವವರ ಮೆಚ್ಚ
ನಮ್ಮ ಕೂಡಲ ಸಂಗಮದೇವ.

ಆದ್ದರಿಂದ ಮೊದಲು ನೀವು ಶುದ್ಧರಾಗುವುದನ್ನು ಕಲಿಯಿರಿ. ಆಮೇಲೆ ಉಳಿದವರನ್ನು ಶುದ್ಧೀಕರಿಸುವಿರಂತೆ!'

'ಅದು ಸತ್ಯವಾದ ಮಾತು! ಸೋಮಶೇಖರ್, ನಾನು ಯಾರನ್ನೂ ತಿದ್ದುವ ಸಾಹಸಕ್ಕೆ ಕೈಹಾಕಿಲ್ಲ; ಹಾಕುತ್ತಿಲ್ಲ. ಆದರೆ ನಮ್ಮಲ್ಲಿ ಯಾರಲ್ಲೂ ಆತ್ಮಪ್ರಜ್ಞೆ ಇಲ್ಲವಲ್ಲ ಎಂದು ಸಂಕಟಪಡುತ್ತಿದ್ದೇನೆ'.

'ಅಂದರೆ'

'ಅಂದರೆ, ನಾವು ಯಾರು? ನಮ್ಮ ಕರ್ತವ್ಯಗಳೇನು? ದೇಶ, ಧರ್ಮ, ದೇವರು ಇತ್ಯಾದಿಗಳ ಬಗ್ಗೆ ನಮ್ಮ ಹೊಣೆಗಾರಿಕೆ ಎಂಥದು ¨ ಈ ಅರಿವು ನಮಗಾಗಲಿ ಮಠಾಧಿಪತಿಗಳಿಗಾಗಲಿ, ಸಮಾಜದ ಸುಧಾರಕರಿಗಾಗಲಿ, ಅದರ ಸದಸ್ಯನಾಗಿರುವ ಶ್ರೀಸಾಮಾನ್ಯನಿಗಾಗಲಿ ಇಲ್ಲದಿರುವುದೇ ಸೋಜಗ. ಈ ಮಹಾಸಭೆ ಅನ್ಯಥಾ ಭಾವಿಸದಿದ್ದರೆ, ನಾನು ಬಹು ಹಿಂದೆ ಓದಿದ ಕಥೆಯೊಂದು ನೆನಪಿಗೆ ಬರುತ್ತೆ.

'ಹೇಳಿಬಿಡಿ. ಯಾವುದನ್ನೂ ಬಚ್ಚಿಡಬೇಡಿ!'

ಕೇಳಿ :

ಕನ್ನಡಿಯ ಹೆಸರನ್ನೇ ಕೇಳದಿದ್ದ ಪರ್ಷಿಯಾ ದೇಶದ ಒಂದು ಹಳ್ಳಿ. ಅಲ್ಲೊಂದು ಚಿಕ್ಕ, ಆದರೆ ಚೊಕ್ಕ ಸಂಸಾರ. ಅನ್ಯೋನ್ಯ ಪ್ರೀತಿ ವಾತ್ಸಲ್ಯಗಳಿಂದ ತುಂಬಿದ ಸರಳ ಸುಂದರವಾದ ಬದುಕು ಅದರದು. ಒಮ್ಮೆ ಆ ಸಂಸಾರದಲ್ಲಿ ವಿರಸ ಉಂಟಾಯಿತು. ಮನೆಯ ಯಜಮಾನನಿಗೆ ಒಂದು ಚಿಕ್ಕ ಕನ್ನಡಿ ಸಿಕ್ಕಿತು. ಅದನ್ನು ತನ್ನ ಮುಖದ ಮುಂದೆ ಹಿಡಿದುಕೊಂಡಾಗ ಅದರಲ್ಲಿ ಅವನ ಪ್ರತಿಬಿಂಬ ಕಾಣಿಸಿತು. ಅದು ತನ್ನ ಬಿಂಬ ಎಂದು ತಿಳಿಯುವಷ್ಟು ಆತ್ಮಜ್ಞಾನ ಅವನಿಗಿರಲಿಲ್ಲ. ಆತ ತನ್ನ ಅಜ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನನ್ನು ನೋಡಿದ್ದರಿಂದ ಅದು ಮಡಿದುಹೋಗಿದ್ದ ತನ್ನ ಅಜ್ಜನ ಫೋಟೋ ಎಂದು ಭಾವಿಸಿದ. ಕೂಡಲೇ ದುಃಖವಾಯಿತು; ತಾತನ ಬಗ್ಗೆ ಭಕ್ತಿಯೂ ಮೂಡಿತು. ಕನ್ನಡಿಯ ಆ ಬಿಂಬವನ್ನು ಬಲಗೈಯಿಂದ ಮುಟ್ಟಿ ಕಣ್ಣಿಗೊತ್ತಿಕೊಂಡ. ಇದೇ ರೀತಿ ತನ್ನ ತಾತನ ನೆನಪಾದಾಗಲೆಲ್ಲಾ ಆತ ಕನ್ನಡಿಯನ್ನು ತನ್ನ ಕಿಸೆಯಿಂದ ತೆಗೆಯುವುದು, ನೋಡುವುದು, ಕಣ್ಣಿಗೊತ್ತಿಕೊಳ್ಳುವುದು, ತನ್ಮೂಲಕ ತನ್ನ ಭಕ್ತಿ ಪೂರ್ವಕ ಪ್ರಣಾಮಗಳನ್ನು ಅರ್ಪಿಸುವುದು ಮತ್ತೆ ಕಿಸೆಯಲ್ಲಿ ಭದ್ರಪಡಿಸುವುದು; ಹೀಗೆ ಮಾಡುತ್ತಿದ್ದ. ಯಜಮಾನನ ಈ ವರ್ತನೆ ಅವನ ಹೆಂಡತಿಯಲ್ಲಿ ಸಂದೇಹ ಹುಟ್ಟಿಸಿತು ಸಹಜವಾಗಿ. ಅವಳು ಗಂಡನಿಲ್ಲದ ವೇಳೆಯಲ್ಲಿ ಅವನ ಕೋಟಿನ ಜೇಬಿನಿಂದ ಆ ಕನ್ನಡಿಯನ್ನು ತೆಗೆದು ನೋಡಿದಳು. ಅದರಲ್ಲಿ ತನ್ನ ಬಿಂಬ ಕಾಣಿಸಿತು. ಅವಳೂ ತನ್ನ ಗಂಡನಂತೆಯೇ ಆತ್ಮಪ್ರತ್ಯಯವಿಲ್ಲದ ವ್ಯಕ್ತಿ. ಅಂದರೆ ಅದು ತನ್ನದೇ ಪ್ರತಿಬಿಂಬ ಎಂಬ ಅರಿವು ಅವಳಿಗೂ ಇರಲಿಲ್ಲ. ಕೂಡಲೇ ತಪ್ಪು ತಿಳಿದಳು. ತನ್ನ ಗಂಡ ಯಾವಳೋ ಹೆಣ್ಣನ್ನು ಪ್ರೇಮಿಸಿಬಿಟ್ಟಿದ್ದಾನೆ, ಅವಳ ಭಾವ ಚಿತ್ರವನ್ನು ತನ್ನ ಕಿಸೆಯಲ್ಲಿಟ್ಟುಕೊಂಡು ನೆನಪಾದಾಗಲೆಲ್ಲಾ ತೆಗೆತೆಗೆದು ನೋಡಿ ಮುತ್ತಿಟ್ಟು ಬಚ್ಚಿಡುತ್ತಿದ್ದಾನೆ ಎಂದು ಊಹಿಸಿದಳು.

ಸರಿ, ಗೃಹಿಣಿಗೆ ಗಂಡನ ಮೇಲೆ ಸಂದೇಹ ಬಂದರೆ ಗೃಹದಲ್ಲಿ ಶಾಂತಿ ಇರಲು ಸಾಧ್ಯವೆ? ಆ ಸದ್ಗೃಹಸ್ಥನ ಮನೆ ಕುರುಕ್ಷೇತ್ರವಾಯಿತು. ಮನೆಯಲ್ಲಿನ ತಟ್ಟೆ, ತಂಬಿಗೆ, ಲೋಟ ಸೌಟುಗಳೆಲ್ಲಾ ಮಾತಾಡಿದವು. ಹಾಲಿನಂತಿದ್ದ ಆ ವ್ಯಕ್ತಿಯ ಸಂಸಾರ ಒಡೆದು ಹಾಳಾಗುವ ಮಟ್ಟಕ್ಕೇರಿತು. ಸುದ್ದಿ ಆ ಊರಿನಲ್ಲಿದ್ದ ಧರ್ಮ ಗುರುಗಳಿಗೆ ಮುಟ್ಟಿತು. ಧರ್ಮಗುರು ಆ ಸದ್ಗೃಹಸ್ಥನ ಮನೆಗೆ ಬಂದ. ಬಂದು, ಗಂಡಹೆಂಡಿರಿಬ್ಬರನ್ನೂ ಕೂರಿಸಿಕೊಂಡು ವಿಚಾರಣೆ ನಡೆಸಿದ. ಹೆಂಡತಿಯ ಆಪಾದನೆಯನ್ನು ನಿರಾಕರಿಸಿ ಗಂಡ ತನ್ನನ್ನು ತಾನು ಸಮರ್ಥಿಸಿಕೊಂಡ. ಸಮಾಧಾನದಿಂದ ಎಲ್ಲವನ್ನೂ ಕೇಳಿದ ಧರ್ಮಗುರು ಆ ಕನ್ನಡಿಯನ್ನು ಈಸಿಕೊಂಡು ನೋಡಿದ. ಅದರಲ್ಲಿ ತನ್ನ ಬಿಂಬ ಕಾಣಿಸಿತು. ಕೂಡಲೇ ಅಚ್ಚರಿಗೊಂಡವನಾಗಿ, ಆ ದಂಪತಿಗಳ ದಡ್ಡತನಕ್ಕೆ ನಕ್ಕು ಹೇಳಿದ—"ಕೇಳಿ ಇದು ಫೋಟೊ ನಿಜ. ಆದರೆ ನೀನು ಹೇಳಿದಂತೆ ನಿನ್ನ ಅಜ್ಜನದೂ ಅಲ್ಲ, ಅವಳು ಹೇಳಿದಂತೆ ಒಬ್ಬ ತರುಣೀಮಣಿಯದೂ ಅಲ್ಲ, ಇದು ಓರ್ವ ಧರ್ಮಗುರುವಿನದು" ಎಂದ. ಅವನಿಗೂ ಅದು ತನ್ನ ಪ್ರತಿಚ್ಛಾಯೆ ಎಂದು ತಿಳಿಯುವ ಆತ್ಮಜ್ಞಾನ ಇರಲಿಲ್ಲ. ನಮ್ಮ ಧರ್ಮದ ಸ್ಥಿತಿ ಹೀಗಾಗಿದೆ ಇಂದು. 'ನಾವು ಯಾರು?' ನಮ್ಮ ಸಂಸ್ಕೃತಿ ನಮ್ಮ ಪರಂಪರೆ ಎಂಥದು? ನಮ್ಮ ಧರ್ಮದ ವ್ಯಾಪ್ತಿ ದೀಪ್ತಿಗಳು ಹೇಗೆ? ಇವುಗಳ ಬಗ್ಗೆ ಎಚ್ಚರವೂ ಇಲ್ಲ; ತಿಳಿದುಕೊಳ್ಳಲು ವ್ಯವಧಾನವೂ ಇಲ್ಲ. ಕಥೆಯ ಪ್ರತಿಮೆಯಲ್ಲಿ ನಿರೂಪಿಸಿದಂತೆ ಧರ್ಮದ ಹೆಸರಿನಲ್ಲಿ ಜಾತಿಯನ್ನು ಜೋಪಾನ ಮಾಡುತ್ತಿರುವ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಠಾಧಿಪತಿಗಳು ನಮ್ಮ ಧರ್ಮಗುರುಗಳು, ಸಮಾಜಸುಧಾರಣೆಯ ಸೋಗು ಹಾಕಿಕೊಂಡಿರುವ ಗಣ್ಯ ಪುಣ್ಯ ವ್ಯಕ್ತಿಗಳು ಅನ್ನಿಸಿಕೊಂಡ ಹಿರಿಯರಾದ ನಾವು ಗಂಡಂದಿರು; ಮುಗ್ಧ ಸ್ವಭಾವದ ಸಾಮಾನ್ಯ ಜನತೆ ನಮ್ಮ ಹೆಂಡತಿ. ಕಥೆಯಲ್ಲಿ ಹೇಗೆ ಮೂವರಿಗೂ ಆತ್ಮಪ್ರತ್ಯಯ ಇರಲಿಲ್ಲವೋ ಹಾಗೆ ನಮ್ಮಲ್ಲಿನ ಈ ಮೂವರಲ್ಲೂ ಆತ್ಮಜ್ಞಾನ ಇಲ್ಲ. ಅಂದಮೇಲೆ ಧರ್ಮದ ರಥ ಮುಂದೆ ಸಾಗುವುದಾದರೂ ಹೇಗೆ?

'ಮನುಷ್ಯನಿಗಿರುವಂತೆ ಸಮುದಾಯದ ಸಮಗ್ರ ಪ್ರಾತಿನಿಧ್ಯ ವಹಿಸಿದ ಧರ್ಮಕ್ಕೂ ಒಂದು ಮನಸ್ಸಿದೆ. ಅದರದು ಸಮಷ್ಟಿಚೇತನ. ಅನೇಕ ವ್ಯಷ್ಟಿಗಳ ಸಹಯೋಗ ದಿಂದಾದ ಸಮಷ್ಟಿ ಚೇತನ. ಆ ಚೇತನದಲ್ಲಿ ಆತ್ಮಪ್ರತ್ಯಯದ ಅಭಾವ ಪ್ರಾಪ್ತ ವಾದರೆ ಧರ್ಮದ, ತನ್ಮೂಲಕ ದೇಶದ ಅವನತಿ ಕಟ್ಟಿಟ್ಟಬುತ್ತಿ'.

'ದಯವಿಟ್ಟು ಸತ್ತ ಮಗುವಿಗೆ ಜಾತಕ ಬರೆಯಲು ಹೋಗಬೇಡಿ ಸಿದ್ದಪ್ಪ ಶೆಟ್ಟರೆ, ಆದದ್ದು ಆಗಿಹೋಯಿತು ಮುಂದೇನು ಮಾಡಬೇಕು ಹೇಳಿ?'

'ಹಿಂದಿನದ್ದನ್ನು ನೆನೆಯದೆ ಮುಂದೆ ನಡೆಯುವುದಾದರೂ ಹೇಗೆ ಸೋಮಣ್ಣ ನವರೆ? ತುಮಕೂರಿನ ಧೀಮಂತ ವಕೀಲರು ನೀವು. ನೀವು ಬಹುಬೇಗ ನಿಮ್ಮ ಕುದುರೆ ಹಾರಿಸಬೇಡಿ. ಕೇಳಿ, ಯಾವ ದೇಶಕ್ಕೇ ಆಗಲಿ ಇತಿಹಾಸವಿಲ್ಲದೆ ಅಂದರೆ ಪ್ರಾಚೀನಪ್ರಜ್ಞೆ ಇಲ್ಲದೆ ಗತಿಹಾಸ ಅಂದರೆ ಭವಿಷ್ಯ ಇಲ್ಲ. ಸಮಾಜಕ್ಕೂ ಅಷ್ಟೇ!'

'ಹಾಗಾದರೆ ಅವರು ಮಾಡಿದ್ದಾದರೂ ಏನು?'

'ಭಕ್ತರ ಮನೆಯಲ್ಲಿ ಉಂಡರು, ಬಸವಣ್ಣನ ಗುಡಿಯಲ್ಲಿ ಮಲಗಿದರು!'

'ನೀವು?'

'ನಾವು ಸಂಸಾರಿಗಳು. ಸಾಂಸಾರಿಕ ಜೀವನದ ಬೇಕು ಬೇಡಗಳನ್ನು ಈಡೇರಿಸುವುದರಲ್ಲಿ ನಿರತರಾದೆವು'.

ಬಡತನಕ್ಕೆ ಉಂಬುವ ಚಿಂತೆ
ಉಂಬುವುದಾದರೆ ಉಡುವ ಚಿಂತೆ
ಉಡುವುದಾದರೆ ಹೆಂಡಿರ ಚಿಂತೆ
ಹೆಂಡಿರಾದರೆ ಮಕ್ಕಳ ಚಿಂತೆ
ಮಕ್ಕಳಾದರೆ ಬದುಕಿನ ಚಿಂತೆ
ಬದುಕಾದರೆ ಕೇಡಿನ ಚಿಂತೆ
ಕೆಡದಿರೇ ಮರಣದ ಚಿಂತೆ.

—ಹೀಗೆ ಚಿಂತೆಯ ಸಂತೆಯಲ್ಲಿ ತಿನಿಸುಕೊಳ್ಳುವ ವ್ಯಾಪಾರಿಗಳಾದಿರಿ'

'ಹೌದು'

'ಅದು ನಿಮ್ಮ ಹೊಣೆಗೇಡಿತನ ಅಲ್ಲವೆ ಯಜಮಾನರೆ?'

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

'ಇಲ್ಲವೆಂದವರಾರು ಬುದ್ಧಿ!'

'ನಿಮ್ಮದು ಸಿಂಹಪಾಲು!'

'ಹೇಗೆ?'

'ನಿಮ್ಮನ್ನು ನಾವು ಸಮಾಜದ ಸಂರಕ್ಷಕರೆಂದು ಆರಿಸಿ, ಕಾವಿತೊಡಿಸಿ ಪೀಠದ ಮೇಲೆ ಕೂರಿಸಿದ್ದಾದರೂ ಏಕೆ?'

'ನಿಮ್ಮಿಂದ ಬಯ್ಯಿಸಿಕೊಳ್ಳುವುದಕ್ಕೆ'

'ಅಲ್ಲ, ಹಾಗಲ್ಲ....ದಯವಿಟ್ಟು ಕೋಪಿಸಿಕೊಳ್ಳಬೇಡಿ....ನೊಂದು ನುಡಿಯಲೂ ಬೇಡಿ, ಕೇಳಿ. ಹುತ್ತದ ಹುಳು ಹುತ್ತ ಕಟ್ಟುತ್ತೆ; ಅದರಲ್ಲಿ ನಾಗರಹಾವು ಬಂದು ಸೇರಿಕೊಳ್ಳುತ್ತೆ; ವಾಸಮಾಡುತ್ತೆ. ಸಿಕ್ಕಿದವರನ್ನು ಕಚ್ಚುತ್ತೆ. ಹುತ್ತದ ಹುಳುವನ್ನೇ ತಿನ್ನುತ್ತೆ. ಮತ್ತೆ ಅದರ ಹುತ್ತದಲ್ಲೇ ಆಶ್ರಯ ಪಡೆಯುತ್ತೆ. ಅದಕ್ಕೆ ಎಷ್ಟು ಹಾಲು ಹಾಕಿದರೂ, ಅದು ಕುಡಿದ ಹಾಲೆಲ್ಲಾ ವಿಷವಾಗಿಯೇ ಪರಿಣಮಿಸುತ್ತೆ. ಹಸು ಹುಲ್ಲು ತಿಂದು ಹಾಲು ಕೊಟ್ಟರೆ, ಹಾವು ಹಾಲುಕುಡಿದು ವಿಷ ಕಕ್ಕುತ್ತೆ. ಅದೇ ರೀತಿ ರೇಣುಕಾದಿ ಭಗವತ್ಪಾದರು, ಬಸವ, ಅಲ್ಲಮ, ಅಕ್ಕ, ಚನ್ನಬಸವ, ಸಿದ್ಧರಾಮಾದಿ ಶರಣ ಶರಣೆಯರು ತಮ್ಮ ಬೆವರಿನ ಹಳ್ಳಹರಿಸಿ ನಿರ್ಮಿಸಿ ಬೆಳೆಸಿದ, ವೀರಶೈವದ ಧರ್ಮಕೋಶಕ್ಕೆ ಹಲವು ವಿಷ ಜಂತುಗಳು ಬಂದುಸೇರಿ ವಾಸಿಸುತ್ತಿವೆ. ಅವು ತಾವೂ ಬದುಕುವುದಿಲ್ಲ, ಅನ್ಯರನ್ನೂ ಬದುಕಗೊಡುವುದಿಲ್ಲ. ಆದ್ದರಿಂದ ಹುತ್ತವ ಬಡಿದರೆ ಹಾವು ಸಾಯುವುದಿಲ್ಲ. ಅದರಲ್ಲಡಗಿರುವ ಹಾವನ್ನು ಹೊರತೆಗೆದು ಬಡೆಯಿರಿ; ಬಡಿಯಲು ನಿಮಗೆ ಭಯವಾದರೆ ಬಡಿಯುವವರಿಗಾದರೂ ಅವಕಾಶ ಕಲ್ಪಿಸಿಕೊಡಿ ಎಂದು ಪ್ರಾರ್ಥಿಸಿಕೊಂಡೆ; ಅಷ್ಟೇ.'

'ಇದೇ ವಿಷಯವನ್ನು ಕುರಿತು ಚರ್ಚಿಸುವುದಕ್ಕಾಗಿಯೇ ಇಂದಿನ ಈ ವಿದ್ವತ್ ಸಭೆಯನ್ನು ಕರೆದದ್ದು; ಸಮನ್ವಯಾಚಾರ್ಯ ಶ್ರೀ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳನ್ನು ಅಧ್ಯಕ್ಷರಾಗಿರಬೇಕೆಂದು ಪ್ರಾರ್ಥಿಸಿಕೊಂಡದ್ದು.'

'ಬುದ್ಧೀ ತಮ್ಮ ಸದ್ ವಿವೇಚನೆ, ದೂರದೃಷ್ಟಿಗಳಿಗೆ ಭಕ್ತರೆಲ್ಲರ ಪರವಾಗಿ ಸಹಸ್ರ ಸಹಸ್ರ ಪ್ರಣಾಮಗಳು. ಇದರರಿವಿಲ್ಲದ ಕೆಲವರು ಗದ್ದಲ ಮಾಡಿರಬಹುದು. ಅವರ ಪರವಾಗಿ ಕೈಮುಗಿದು ಕ್ಷಮೆ ಯಾಚಿಸುತ್ತೇನೆ. ಮನ್ನಿಸೋಣವಾಗಲಿ.'

'ಕ್ಷಮೆ ಕೇಳಿಕೊಳ್ಳಬೇಕಾದ್ದು ನಮ್ಮ ಕುಪ್ಪೂರಜ್ಜಯ್ಯನವರಲ್ಲಿ, ಕ್ಷಮಿಸ ಬೇಕಾದವರು ಅವರು. ಅವರನ್ನು ಕೇಳಿ. ಇಂದಿನ ಈ ಕಾರ್ಯಕ್ರಮ ಯಶಸ್ವಿಯಾಗಿ ಆಗಬೇಕಾಗಿದ್ದರೆ ಅವರೊಬ್ಬರಿಂದ ಮಾತ್ರ ಸಾಧ್ಯ. ನಿಮ್ಮೆಲ್ಲರ ಅಪಮಾನದಿಂದ ಅವರ ಮನಸ್ಸು ನೊಂದಿದೆ. ಮೊದಲು ಅದಕ್ಕೆ ಸಮಾಧಾನ ಹೇಳಿ.'

'ಅಗತ್ಯವಾಗಿ'

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಯಜಮಾನ್ ಸಿದ್ಧಪ್ಪ ಮೇಲೆದ್ದವನೆ ಅಂಗೈ ಅಗಲದ ಕರ್ಪೂರ ತೆಗೆದು ಕೊಂಡು ಹೋಗಿ ಶ್ರೀಮತ್ ಕಪ್ಪೂರು ಗದ್ದಿಗೆ ಮಠಾಧಿಪತಿಗಳಾದ ಷ. ಬ್ರ. ಶ್ರೀ ಚಂದ್ರಶೇಖರ ಶಿವಾಚಾರ್ಯರ ಮುಂದೆ ಹಚ್ಚಿಟ್ಟು, ಉದ್ದಕ್ಕೆ ಅಡ್ಡಬಿದ್ದು 'ಬುದ್ಧೀ, ನಮ್ಮೆಲ್ಲರ ತಪ್ಪುಗಳನ್ನು ತಾಯಿಯಂತೆ ಮನ್ನಿಸಿ, ಆಶೀರ್ವಚನ ನೀಡಲು ದಯ ಮಾಡಿಸಬೇಕಾಗಿ ಪ್ರಾರ್ಥಿಸುತ್ತೇನೆ.' ಎಂದು ತುಂಬ ಕಳಕಳಿಯಿಂದ ಪ್ರಾರ್ಥಿಸಿಕೊಂಡ.

'ಸಭಾ ಕಾರ್ಯಕ್ರಮ ಸಾಂಗವಾಗಿ ನೆರವೇರಲಿ ಸಿದ್ದಪ್ಪ'

'ತಾವಿಲ್ಲದೆ ನೆರವೇರುವುದಾದರೂ ಹೇಗೆ ಗುರುವೆ ?'

'ಇದ್ದೇವಲ್ಲಾ'

'ಇಲ್ಲಿದ್ದರೆ ಸಾಲದು ; ಅಲ್ಲಿಗೆ ಅಧ್ಯಕ್ಷ ಸ್ಥಾನಕ್ಕೆ ದಯಮಾಡಿಸಬೇಕು'

'ಬೇಡಪ್ಪ, ನಿಮ್ಮೆಲ್ಲನೇಕರಿಗೆ ನಾನು ಬೇಡ. ಬೇಡವಾದ ವಸ್ತುವನ್ನು ಯಾರೂ ಬಲತ್ಕಾರದಿಂದ ಬಳಿಗೆ ತರಬಾರದು ಅಲ್ಲವೆ ?'

'ಬುದ್ಧೀ, ಇಲ್ಲಿ ತತ್ವದ ಅಪಾರ್ಥವಾಗಿದೆಯೇ ವಿನಃ ವ್ಯಕ್ತಿಯ ನಿಂದನೆಯಲ್ಲ; ಅವಹೇಳನವೂ ಅಲ್ಲ. ಷಟಸ್ಥಲ ಬ್ರಹ್ಮಿಗಳು ಪಂಚಪೀಠಗಳ ಪ್ರತಿನಿಧಿಗಳು, ಅವರ ಜವಾಬ್ದಾರಿಯ ಬಗ್ಗೆ, ಆಚರಣೆಯ ಬಗ್ಗೆ ಅವರಿಗೆ ಎಚ್ಚರ ನೀಡುವ ಕರ್ತವ್ಯ ಸಮಾಜದ್ದು. ಆ ಕಾರ್ಯವನ್ನು ಅದು ನಿರ್ವಹಿಸಿದೆ. ಅದನ್ನು ವೈಯಕ್ತಿಕ ಅಪಮಾನವೆಂದು ಕೃಪೆಮಾಡಿ ಭಾವಿಸಬಾರದಾಗಿ ಪ್ರಾರ್ಥನೆ.'

'ನಾನು ಅಪಮಾನ ಎಂದು ಎಂದೂ ಭಾವಿಸಿಲ್ಲ. ಸಮಾಜ ಸುಧಾರಣೆಯ ಆಂದೋಲನಕ್ಕಿಳಿದಾಗಲೇ ನಾನು ಎಲ್ಲ ಮಾನ, ಅಪಮಾನಗಳನ್ನು ಕಟ್ಟಿ ದೂರ ಇರಿಸಿ ಬಂದಿದ್ದೇನೆ. ಅಕ್ಕ ಹೇಳುವಂತೆ :

ಬೆಟ್ಟದ ಮೇಲೊಂದು ಮನೆಯ ಮಾಡಿ
ಮೃಗಗಳಿಗಂಜಿದೊಡೆಂತಯ್ಯ
ಸಮುದ್ರದ ತಡಿಯಲ್ಲಿ ಮನೆಯ ಮಾಡಿ
ನೊರೆತೆರೆಗಳಿಗಂಜಿದಡೆಂತಯ್ಯ
ಸಂತೆಯೊಳಗೊಂದು ಮನೆಯ ಮಾಡಿ
ಶಬ್ದಕ್ಕೆ ನಾಚಿದಡೆಂತಯ್ಯ
ಚೆನ್ನಮಲ್ಲಿಕಾರ್ಜುನದೇವ ಕೇಳಯ್ಯ
ಲೋಕದೊಳಗೆ ಹುಟ್ಟಿರ್ದ ಬಳಿಕ,
ಸ್ತುತಿ ನಿಂದೆಗಳು ಬಂದಡೆ
ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು.

—ಈ ನಿಲವು ನನ್ನದು ಸಿದ್ದಪ್ಪ. ಹಾನಗಲ್ಲಪ್ಪಗಳು ಹಮ್ಮಿಕೊಂಡಿರುವ ಈ ಮಹಾಮಣಿಹದಲ್ಲಿ ಭಾಗಿಯಾಗುವುದೇ ಭಾಗ್ಯ. ನನಗಷ್ಟು ಸಾಕು. ಪೂಜ್ಯರಾದ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜಗದ್ಗುರುಗಳು, ನಾಗರೂಜ್ಜಯ್ಯನವರು ಇವರ ಪಾದ ದರ್ಶನ, ಸ್ಪರ್ಶ ಇವು ಮೋಕ್ಷ ದೊರಕಿದಷ್ಟು ಆನಂದ. ನಾನಿಲ್ಲಿದ್ದೇ ಎಲ್ಲವನ್ನು ಅವಲೋಕಿಸುತ್ತೇನೆ.'

'ಆದರೂ ತಾವು ಆ ಸ್ಥಾನವನ್ನು ತುಂಬಿದರೇನೇ ಸಭೆಗೆ ಭೂಷಣ!'

'ಅಲ್ಲಿ ಮಾಡುವುದನ್ನು ನಾನು ಇಲ್ಲಿಯೇ ಮಾಡಬಹುದಲ್ಲ. ಸೇವೆಗೆ ಸ್ಥಾನವೇ ಬೇಕೇ ?

'ಹಾಗಲ್ಲ ಗುರುದೇವ, ಎಲ್ಲದಕ್ಕೂ ಔಚಿತ್ಯ ಎನ್ನುವುದೊಂದಿದೆ. ಡಾಬು ಸೊಂಟದಲ್ಲಿರಬೇಕು; ಮುಂಗೈಗೆ ಬರಬಾರದು. ಕಾಲಂದುಗೆ ಕಾಲಲ್ಲಿರಬೇಕು ಕೊರಳಿಗೆ ಬರಲಾರದು ; ಕೊರಳಿನ ಹಾರವನ್ನು ಕಾಲಲ್ಲಿ ಹಾಕಿಕೊಳ್ಳಲಾಗದು; ಯಾವ ಯಾವ ವಸ್ತು ಎಲ್ಲೆಲ್ಲಿರಬೇಕೋ ಅಲ್ಲಲ್ಲಿದ್ದರೇನೇ ಅದಕ್ಕೆ ಬೆಲೆ ! '

'ನಾನು ಬೇಸರದಿಂದ ನುಡಿಯುತ್ತಿದ್ದೇನೆ ಎಂದು ಭಾವಿಸಬೇಡಿ ಯಜಮಾನರೆ. ನನಗೆ ಏನೇನೂ ಬೇಸರ ಇಲ್ಲ. 'ಕೆಡುವ ಒಡವೆಯನ್ನು ಮಡಗಿಡಬೇಡ' ಎಂಬ ಗಾದೆ ಇದೆ. ಕೊಳೆಯುವ ವಸ್ತುವನ್ನು ಯಾವತ್ತೂ ಬಚ್ಚಿಡಬಾರದು. ಅದು ಇಟ್ಟೆಡೆಯಲ್ಲೇ ಕೊಳೆತು, ನಾತು, ಹುಳುಗಳನ್ನು ಹುಟ್ಟಿಸಿ ರೋಗ ಸೃಷ್ಟಿಮಾಡುತ್ತೆ. ಹಾಗೆ ನಮ್ಮ ಸಮಾಜದ ಲೋಪದೋಷಗಳ ಬಗ್ಗೆ ಮುಕ್ತಚರ್ಚೆ ಆಗಬೇಕಿತ್ತು. ಅದು ಇಂದು ಆಯಿತು. ನನಗೆ ತುಂಬಾ ಹರ್ಷತಂದ ದಿನ ಇದು. ನನ್ನಲ್ಲಿಯೇ ಬಹುದಿನಗಳಿಂದಲೂ ಬೆಳೆಯುತ್ತಲಿದ್ದ ಆಸೆಯ ಬಳ್ಳಿಗೆ ಇಂದು ನೀವೆಲ್ಲರೂ ನೀರೆರೆದಿದ್ದೀರಿ, ತುಂಬಾ ಸಂತೋಷ. ಸಮಾಜದ ಬಗ್ಗೆ ನಿಜವಾದ ಕಳಕಳಿ ಉಳ್ಳವರು ಹತ್ತುಜನ ಒಂದೆಡೆ ಸೇರಿ, ಬಿಚ್ಚು ಮನಸ್ಸಿನಿಂದ ಚರ್ಚಿಸಲು ಅವಕಾಶ ಕಲ್ಪಿಸಿ ಕೊಟ್ಟ ಹಾನಗಲ್ಲಪ್ಪಗಳಿಗೆ ಶರಣ ಶರಣಾರ್ಥಿ'.

ಕೂಡಲೆ ಹಾನಗಲ್ಲ ಸದಾಶಿವಸ್ವಾಮಿಗಳು, ನಾಗನೂರ ಶ್ರೀ ಶಿವಬಸವಸ್ವಾಮಿಗಳು, ಎದ್ದುಬಂದು, ಸ್ವಾಮಿಗಳ ಮಧ್ಯೆ ಕುಳಿತಿದ್ದ ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳಿಗೆ ಸಾಷ್ಟಾಂಗವೆರಗಿ, 'ದಯಮಾಡಿಸಬೇಕು' ಎಂದು ಬಿನ್ನಹ ಮಾಡಿದರು.

ಉಪಾಯವಿಲ್ಲದೆ ಸ್ವಾಮಿಗಳು ಮೇಲೇಳಬೇಕಾಯಿತು.
ಎದ್ದು ಬಂದರು, ಗದ್ದುಗೆಯನ್ನು ಅಲಂಕರಿಸಿದರು.

ಸಭೆಯಲ್ಲಿ ಒಂದು ಬಗೆಯ ಹರ್ಷ, ಕುತೂಹಲ ಕುಣಿದಾಡುತ್ತಿರುವಂತೆ ಭಾಸವಾಯಿತು. ಹಾನಗಲ್ಲ ಶ್ರೀಗಳವರು ಎದ್ದು ನಿಂತು —

'ಎಲ್ಲ ಉಪಸ್ಥಿತರಿರುವ ಜಗದ್ಗುರುಗಳವರಿಗೂ, ಹರಗುರು ಚರಮೂರ್ತಿಗಳಿಗೂ ಸಾಷ್ಟಾಂಗ ಪ್ರಮಾಣಗಳನ್ನೆಸಗಿ, ಎದುರಿನಲ್ಲಿರುವ ಈ ಸಮಾಜ ಶಿವನಿಗೂ ನಮನಗಳನ್ನು ಸಲ್ಲಿಸಿ,

'ಆತ್ಮೀಯರೇ,

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಹಾ ಸನ್ನಿಧಾನಂಗಳವರ ಅಪೇಕ್ಷೆಯ ಮೇರೆಗೆ, ತಮ್ಮೆಲ್ಲರ ಅನುಮತಿ ಪಡೆದು ಇಂದಿನ ಈ ವಿದ್ವತ್ ಸಭೆಯ ವಿಚಾರಗೋಷ್ಠಿಯನ್ನು ಆರಂಭಿಸುತ್ತಿದ್ದೇವೆ. ಇದರ ಅಧ್ಯಕ್ಷರು ಶ್ರೀಮತ್ ಕುಪ್ಪೂರು ಗದ್ದಿಗೆಮಠದ ಅಧಿಪತಿಗಳಾದ ಷಟ್‌ಸ್ಥಲ ಬ್ರಹ್ಮ ಶ್ರೀ ಶ್ರೀ ಶ್ರೀ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳವರು. ಅವರನ್ನು ತಮ್ಮೆಲ್ಲರ ಪರವಾಗಿ, ನಮ್ಮ ಶಿವಯೋಗ ಮಂದಿರದ ಪರವಾಗಿ ಭಕ್ತಿ ಪೂರ್ವಕವಾಗಿ ಸ್ವಾಗತಿಸುತ್ತೇನೆ'.

ಪ್ರಚಂಡ ಕರತಾಡನ ಆಯಿತು!

'ಹರ್ಷೋದ್ಗಾರ ಮೊಳಗಿತು !!'

'ಎರಡನೆಯದಾಗಿ, ಇಂದು ವಿದ್ವತ್‌ಗೋಷ್ಠಿಯಲ್ಲಿ ಮಂಡಿತವಾಗುವ ವಿಷಯ ವೀರಶೈವ ಸಮನ್ವಯ' ಈ ವಿಷಯ ವಿಶ್ಲೇಷಣೆ, ವಿಚಾರ ವಿವೇಚನೆ ತಮಗೆ ಸಮ್ಮತ ಎಂದು ಭಾವಿಸಿದ್ದೇವೆ'.

'ಈಗಾಗಲೇ ಸಮನ್ವಯ ಸಾಧನೆ ಆಗಿಲ್ಲವೇ ವೀರಶೈವರಲ್ಲಿ. ಮತ್ತೇಕೆ ಅದೇ ಸುದ್ದಿ, ಬುದ್ದೀ'

'ನಮ್ಮ ಬಾಗಲಕೋಟೆಯ ಬಾಳಯ್ಯನವರು ಹೇಳುತ್ತಿದ್ದಾರೆ—ವೀರಶೈವರಲ್ಲಿ ಸಮನ್ವಯ ಆಗಿ ಹೋಗಿದೆ ಎಂದು. ಬಾಳಯ್ಯನವರು ದಯವಿಟ್ಟು ಕ್ಷಮಿಸಬೇಕು, ವೀರಶೈವರಲ್ಲಿ ಸಮನ್ವಯ ಸಾಧನೆ ಆಗಿಬಿಟ್ಟಿದ್ದರೆ ಇಂದಿನ ಈ ವಿದ್ವತ್ ಸಭೆಯನ್ನು ಕರೆಯುವ ಅವಶ್ಯಕತೆಯೇ ಇರುತ್ತಿರಲಿಲ್ಲ ಅಥವಾ ಇಲ್ಲಿನವರೆಗೂ ಆದ ಗದ್ದಲಕ್ಕೆ ಗುಂದ್ದಾಟಕ್ಕೆ ಅವಕಾಶವೇ ಇರುತ್ತಿರಲಿಲ್ಲ, ಅದು ಆಗಿಲ್ಲ......'

'ಆಗುವ ಅಗತ್ಯವೂ ಇಲ್ಲ' ಮಧ್ಯದಲ್ಲಿಯೇ ಬಾಯಿ ಹಾಕಿದರು ಭಾಲ್ಕಿಯ ೀರಣ್ಣನವರು. 'ಬುದ್ದೀ...ವೀರಶೈವರಲ್ಲಿ ಸಮನ್ವಯ ಸಾಧಿತವಾಗುತ್ತೆ ಎಂಬುದು ುರಿಯ ಭ್ರಮೆ. ಸಾಧಿಸುತ್ತೇನೆ ಎಂಬುವವನ ಕೈಗೆ ಸಿಗುವುದು ಕೇವಲ ಮೊದಲ ೂಂಬು. ಅದು ಆಗುವುದೂ ಇಲ್ಲ; ಆಗಲೂ ಬಾರದು ಎಂಬುದು ನನ್ನ ಸ್ಪಷ್ಟ ಅಭಿಪ್ರಾಯ'.

'ಹು ಹ್ಹ ಹ್ಹ' ನಗುತ್ತಲೇ ಹಾನಗಲ್ಲಪ್ಪನವರು ಹೇಳಿದರು...

'ವೀರಣ್ಣನವರೆ ಆಗುವುದಿಲ್ಲ ಎಂದು ನಿರಾಶರಾಗಬೇಡಿ. ಆಗಲೂ ಬಾರದು ಎದು ಶಾಪಹಾಕಲೂ ಬೇಡಿ. ಪ್ರಯತ್ನಿಸುವುದು ನಮ್ಮ ಕರ್ತವ್ಯ. ಹಾಳಾಗಿರುವ ಅಧೋಗತಿಗಿಳಿದಿರುವ ಸಮಾಜಕ್ಕೆ, ನುಸಿ ಹತ್ತುತ್ತಿರುವ ಈ ಧರ್ಮಕ್ಕೆ ಕಾಯಕಲ್ಪ ಮಾಡಿಸೋಣ. ಸಫಲವಾದರೆ ಸಮಾಜಕ್ಕೆ ಕ್ಷೇಮ, ಲಾಭ ಆಗದಿದ್ದರೆ ನಷ್ಟವೇನೂ ಇಲ್ಲ ಕಲ್ಲು ಎಸೆಯೋಣ; ಅದು ತಾಕಿ ಹಣ್ಣು ಬಿದ್ದರೆ ಸಂತೋಷ, ಬೀಳದಿದ್ದರೆ ವ್ಯಥೆಪಡಬೇಕಾಗಿಲ್ಲ. ಬಿದ್ದರೆ ಒಂದು ಹಣ್ಣು, ಹೋದರೆ ಒಂದು ಕಲ್ಲು; ಅಷ್ಟೆ. ಪ್ರಯತ್ನ ಯಾವ ಬೆಲೆಯನ್ನೂ ಬೇಡುವುದಿಲ್ಲ'.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

'ತಮ್ಮ ಚಿತ್ತ ಬುದ್ಧಿ! ಆದರೆ...'

'ಹೂಂ...ಹೇಳಿ...ಸಂದೇಹವೇಕೆ...ನಿಮಗನ್ನಿಸಿದ್ದನ್ನು ಸ್ಪಷ್ಟ ಹೇಳಿಬಿಡಿ'

'ಬುದ್ಧೀ....ಕುಲ ಹದಿನೆಂಟು ಜಾತಿ ಸೇರಿ ಆಗಿರೋ ಈ ಲಿಂಗವಂತ ಸಮಾಜ ದಲ್ಲಿ ಮೇಲುಕೀಳು ಇದ್ದೇ ಇರುತ್ತೆ. ಅದನ್ನು ಒಂದು ಮಟ್ಟಕ್ಕೆ ತರುವುದು ಸಾಧ್ಯವೆ? ಅಲ್ಲದೆ ಈ ಹಾಳು ಗುರು, ವಿರಕ್ತ ಎಂಬ ಭೇದಭಾವನೆ ಕ್ಷಯರೋಗದ ವಿಷಕ್ರಿಮಿಯಂತೆ ಸಮಾಜವನ್ನು ಒಳಗೇ ತಿನ್ನುತ್ತಿದೆ!'

'ನಿಮ್ಮ ಮಾತು ಸತ್ಯ. ಸತ್ಯ ಕಟುವಾದರೂ ಮಾನ್ಯ! — ಗುರು ವಿರಕ್ತ ಭೇದಗಳನ್ನು ಹೆಸರಿಸಿದಿರಿ. ಅವೆರಡನ್ನೂ ಒಂದು ಮಾಡುವುದು ಅಗಾಧ ಅಸಾಧ್ಯ ಎಂದು ನಾನು ಭಾವಿಸಿಲ್ಲ. ಸದ್‌ಭಾವನೆಯಿಂದ ನೀವು ನಾವು ಸೇರಿದರೆ ಖಂಡಿತ ಆಗದಿರುವಂಥದೇನೂ ಅಲ್ಲ. ಚಂದ್ರಲೋಕದಲ್ಲಿ ಬೀಡುಬಿಟ್ಟ ಕ್ಷಿಪಣಿಯನ್ನು ಭೂಮಿಯಲ್ಲಿರುವ ವಿಜ್ಞಾನಿ ನಿಯಂತ್ರಿಸುತ್ತಾನೆ. ಮಾನವ ಚುಕ್ಕೆಗಳ ಕೂಡ ಚಕ್ಕಂದ ಆಡಿಬರುತ್ತಾನೆ. ಆಡಿ ನಿಸರ್ಗವನ್ನೇ ತನ್ನ ನಿಯಂತ್ರಣಕ್ಕೆ ಒಳಪಡಿಸಿದ್ದಾನೆ. ಅವನ ಶಕ್ತಿ, ಸಾಹಸ, ಮೇಧಾವಿತನಕ್ಕೆ ಎಣೆಯೇ ಇಲ್ಲದಿರುವುದು ತುಂಬಾ ಶ್ಲಾಘನೀಯ. ಅಂತಹ ಅದ್ಭುತ ಆಶ್ಚರ್ಯಗಳೂ, ಅಘಟನ ಘಟನೆಗಳೂ ಸಂಭವಿಸಲು ಸಾಧ್ಯವಾಗಿರುವಾಗ, ನಾವು ನಾಲ್ಕು ಜನ ಒಂದಾಗುವುದು ಕಷ್ಟವೇ?'

'ಕಷ್ಟ ಗುರುವೆ, ಹರಿವ ನೀರನ್ನು ಸೆರೆ ಹಿಡಿಯಬಹುದು: ಬೀಸುವ ಗಾಳಿಯನ್ನು ನಿಯಂತ್ರಿಸಬಹುದು, ಉರಿವ ಸೂರ್ಯನನ್ನು ಹಿಡಿದು, ಒಡೆದು, ವಿಶ್ಲೇಷಿಸಬಹುದು. ಮಿಂಚುವ ಮಿಂಚನ್ನು ಹತೋಟಿಯಲ್ಲಿಟ್ಟುಕೊಳ್ಳಬಹುದು. ಆದರೆ ಈ ಮನುಷ್ಯರ ಮನಸ್ಸುಗಳನ್ನು ಒಂದೆಡೆ ಜೋಡಿಸುವುದು ನಿಜಕ್ಕೂ ಅಸಾಧ್ಯ. ಅದು ವ್ಯರ್ಥಸಾಹಸವೂ, ಹೌದು. ಒಂದುವೇಳೆ ಅದು ಸಫಲವಾದರೆ ಅದೊಂದು ಪವಾಡವೇ ಎಂಬುದು ನನ್ನ ಭಾವನೆ!'

'ವೀರಣ್ಣನವರ ಮಾತು ಅನುಭವ ಜನ್ಯ. ಆದರೂ ಸದ್ಯದಲ್ಲಿ ಒಂದು ವಿಷಯವನ್ನು ಈ ಮಹಾಸಭೆಯ ಮುಂದಿರಿಸಲು ಯತ್ನಿಸುತ್ತೇನೆ.

ನೋಡಿ —

ಇಂದಿನ ನಮ್ಮ ಉತ್ಸವ ಮೂರ್ತಿ, ಈ ಸಭೆಯ ಅಧ್ಯಕ್ಷತೆ ವಹಿಸಿರುವ ಶ್ರೀ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ಯಾರು? ಇವರ ಪೂರ್ವಾಶ್ರಮ ಯಾವುದು? ಬೇರೆ ಯಾವುದೂ ಅಲ್ಲ. ನಮ್ಮ ಇಳಕಲ್ಲ ಪೀಠವನ್ನೇರಿದ್ದ, ಅದರ ಪ್ರಗತಿ ಪ್ರಸ್ಥಾನಗಳಿಗೆ ಕಾರಣರಾದ ಶ್ರೀ ಶ್ರೀ ವಿಜಯಮಹಾಂತೇಶ ಮಹಾಸ್ವಾಮಿಗಳ ಪೂರ್ವಾಶ್ರಮವೇ ಆಗಿದೆ. ಅಂದರೆ ಅವರ ಜನ್ಮಸ್ಥಳವಾದ ಹಾಸನ ಜಿಲ್ಲೆಯ ಸಸಿವಾಳವೇ ನಮ್ಮ ಶ್ರೀ ಚಂದ್ರಶೇಖರಸ್ವಾಮಿಗಳ ತಾಯಿಯ ತೌರುಮನೆ. ನಮ್ಮ ಆರಾಧ್ಯ ದೈವರಾದ, ಹುಬ್ಬಳ್ಳಿಯ ಮೂರುಸಾವಿರ ಮಠದ ಜಗದ್ಗುರುಗಳಾದ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೀ ಶ್ರೀ ಶ್ರೀ ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಂಗಳ ಪೂರ್ವಾಶ್ರಮವೂ ಸಸಿವಾಳವೇ! ಅದು ನಿಮಗೆ ಗೊತ್ತಿದೆ. ಮೂರುಸಾವಿರ ಮಠದ ಜಗದ್ಗುರುಗಳವರ ಸೋದರತ್ತೆಯ ಮಕ್ಕಳೇ ನಮ್ಮ ಇಂದಿನ ಸಭಾಧ್ಯಕ್ಷರು. ಅಂದಮೇಲೆ ಒಂದೇ ವೃಕ್ಷದ ಎರಡು ಹೂವುಗಳು. ಇವುಗಳಲ್ಲಿ ಒಂದು ಮಾವು, ಮತ್ತೊಂದು ಬೇವು ಆಗಲು ಸಾಧ್ಯವೆ? ಅಥವಾ ಆ ಹೂವುಗಳೆರಡನ್ನೂ ಬಣ್ಣ, ಬಂಡುಗಳೆರಡರಲ್ಲೂ ಬೇರೆ ಬೇರೆ ಎನ್ನುವುದು ಯುಕ್ತವೇ?

ಗುರು ಯಾರು? ವಿರಕ್ತ ಯಾರು? ಇಬ್ಬರೂ ನಮ್ಮ ಸಮಾಜದ ಎರಡು ಕಣ್ಣುಗಳು. ಕಣ್ಣುಗಳು ಎರಡಾದರೂ ಕಾಣ್ಕೆ ಒಂದೆ! ಅದು ವೀರಶೈವ ಸಮಾಜದ ಏಳಿಗೆ. ಇವೆರಡೂ ಒಂದೇ ಶರೀರದ ಎರಡು ಅಂಗಗಳು. ಒಂದು ಹೃದಯ, ಮತ್ತೊಂದು ಶ್ವಾಸಕೋಶ. ಇವುಗಳಲ್ಲಿ ಯಾವುದು ಉಚ್ಚ? ಯಾವುದು ನೀಚ ಹೇಳಿ.

ಲಿಂಗ ಅಂಗಗಳ ಸಾಮರಸ್ಯ ಸ್ವರೂಪವೆ ವೀರಶೈವ. ಅಂದ ಮೇಲೆ ಗುರು – ಜಂಗಮ ಅರ್ಥಾತ್ ಗುರು – ವಿರಕ್ತ ಸೇರಿ ಲಿಂಗವಂತ ಸುಖೀಸಮಾಜ ಎನ್ನಿಸದೆ?'

'ಆದರೆ ಅವೆರಡಕ್ಕೂ ಇಂದು ಕ್ಯಾನ್ಸರ್ ಬಂದಿದೆ ಬುದ್ಧಿ'

'ಹೌದು...ರೋಗ ಬಂದಿದೆ. ಅದರ ನಿವಾರಣೆ ನಮ್ಮೆಲ್ಲರ ಕರ್ತವ್ಯ.'

'ಅದನ್ನು ಆಪರೇಷನ್ ಮಾಡಿ ತೆಗೆಯುವ ಶಸ್ತ್ರವೈದ್ಯ ಬೇಕು'

'ಹೌದು ಸಮರ್ಥ ಶಸ್ತ್ರವೈದ್ಯ ಬೇಕು'

'ಅವನಿನ್ನೂ ಹುಟ್ಟಿಲ್ಲದಿರುವುದು ವಿಷಾದದ ಸಂಗತಿ'

'ವಿಷಾದಿಸಬೇಡಿ...ಹುಟ್ಟಿದ್ದಾನೆ'

'ಎಲ್ಲಿ?...ಯಾರು?'

'ನಮ್ಮ ನಾಗನೂರಜ್ಜಗಳ ರೂಪದಲ್ಲಿ'

'ಬಹಳ ಸಂತೋಷ!'

'ನಾಗನೂರಜ್ಜನವರು ನಿಜಕ್ಕೂ ಸಮನ್ವಯ ಸಾಧಕರು. ಅವರಷ್ಟೇ ಕಾಳಜಿ ಇರುವವರು ನಮ್ಮ ಕುಪ್ಪೂರು ಗದ್ದಿಗೆ ಅಜ್ಜಯ್ಯನವರು'

'ಈಗ ಆ ಗುರು – ವಿರಕ್ತ ಎಂಬ ಭೇದ ಭಾವದ ಕ್ಯಾನ್ಸರ್ ರೋಗಿಯನ್ನು ಎತ್ತಿ ತನ್ನಿ ಅವನ ಶಸ್ತ್ರ ಚಿಕಿತ್ಸೆಗೆ ಸೂಕ್ತ ವ್ಯವಸ್ಥೆ ಮಾಡೋಣ. ಅವನ ಅನಿಷ್ಟ ನಿವಾರಣೆಗೆ ಇಂದಿನ ಮಹಾಧಿವೇಶನ ನಾಂದಿಹಾಡಿದರೆ ಅದು ನಮ್ಮೆಲ್ಲರ ಸೌಭಾಗ್ಯ ಎಂದು ಭಾವಿಸುತ್ತೇನೆ.'

'ಬಂಧುಗಳೇ, ಇಲ್ಲಿಯೇ ಪರ ಮತ್ತು ವಿರೋಧವಾಗಿ ವಾದಗಳು ಎದ್ದುವು. ಇದು ಚರ್ಚೆಗೆ ಒಳಗಾಗುವ ಅಗತ್ಯ ಇದೆ. ಅದರಿಂದ ಸಮಾಜದ ಆರೋಗ್ಯ ಸಾಧಿತ ವಾಗುತ್ತೆ ಎಂಬುದು ನಮ್ಮ ಅಭಿಪ್ರಾಯ. ಸಭೆ ನಡೆಯಲಿ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಮ್ಮ ಶಿವರುದ್ರಯ್ಯನವರು ನಮ್ಮ ಹಿಂದಿನ ವಿದ್ವತ್‌ಗೋಷ್ಠಿಯ ಅಧ್ಯಕ್ಷರಾದ ಷಟ್‌ಸ್ಥಲಬ್ರಹ್ಮ ಶ್ರೀ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳನ್ನು ಪರಿಚಯಿಸಲಿ. ಅನಂತರ ಎಲ್ಲ ಕಾರ್ಯಕ್ರಮಗಳೂ ಸುಸೂತ್ರವಾಗಿ ನೆರವೇರಲಿ. ಆದರೆ ಯಾರೂ ಭಾವಾವೇಶಕ್ಕೆ ಬಲಿಯಾಗಬಾರದಾಗಿ ವಿನಂತಿಸಿಕೊಂಡು, ಮುಂದಿನ ಕಾರ್ಯಕ್ರಮಕ್ಕೆ ಅನುವು ಮಾಡಿಕೊಡುತ್ತೇನೆ'.

ಹಾನಗಲ್ಲಪ್ಪಗಳು ಎಲ್ಲರಿಗೂ ಕೈ ಮುಗಿದು ಕುಳಿತರು.

ಸುಕ್ಕುಲಪುಟ್ಟಿ ಶಿವರುದ್ರಯ್ಯ ಅಧ್ಯಕ್ಷರ ಪರಿಚಯ ಮಾಡಿಕೊಡಲು ಎದ್ದು ನಿಂತರು.

'ಉಪಸ್ಥಿತರಿರುವ ಜಗದ್ಗುರುಗಳಲ್ಲಿ ಸಮ್ಮೇಳನಾಧ್ಯಕ್ಷರಾದ ನಾಗನೂರ ಶ್ರೀ ಶಿವಬಸವ ಮಹಾಸ್ವಾಮಿಗಳವರಲ್ಲಿ, ಹರಗುರು ಚರಮೂರ್ತಿಗಳವರಲ್ಲಿ ಹಾಗೂ ಸಮಸ್ತ ಸದ್ಭಕ್ತ ವೃಂದದಲ್ಲಿ – ಭಕ್ತಿಪೂರ್ವಕ ಪ್ರಣಾಮಗಳು.

ಇಂದಿನ ವಿದ್ವತ್‌ಗೋಷ್ಠಿಯ ಅಧ್ಯಕ್ಷತೆ ವಹಿಸಿರುವ ಷಟ್‌ಸ್ಥಲ ಬ್ರಹ್ಮ ಶ್ರೀ ಶ್ರೀ ಶ್ರೀ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳವರನ್ನು ಈ ಸಭೆಗೆ ಪರಿಚಯ ಮಾಡಿಕೊಡುವ ಭಾಗ್ಯ ನನ್ನದಾಗಿದೆ. ಅದನ್ನು ಅತ್ಯಂತ ಹರ್ಷದಿಂದ ನೆರವೇರಿಸುತ್ತೇನೆ.

ಆತ್ಮೀಯರೇ,

ಶ್ರೀ ಚಂದ್ರಶೇಖರ ಮಹಾಸ್ವಾಮಿಗಳು ಕಾಯಿಸೀಮೆಯವರು. ನಮ್ಮ ಹಾನಗಲ್ಲಪ್ಪಗಳು ಸೂಕ್ಷ್ಮವಾಗಿ ಪರಿಚಯಿಸಿದಂತೆ ಶ್ರೀ ಶ್ರೀಗಳವರ ತಾಯಿಂದಿರಾದ ಶ್ರೀಮತಿ ಬಸಮ್ಮನವರ ತೌರು, ಹಿಂದಿನ ಚಿತ್ತರಗಿ ವಿಜಯ ಮಹಾಂತೇಶಸ್ವಾಮಿಗಳ ಹಾಗೂ ಇಂದಿನ ಮೂರು ಸಾವಿರ ಮಠದ ಜಗದ್ಗುರುಗಳವರ ಪೂರ್ವಾಶ್ರಮವಾದ ಸಸಿವಾಳ. ಶ್ರೀ ಶ್ರೀಗಳವರು ಶಾಲೀವಾಹನ ಶಕ 1838ನೆಯ ಅಂದರೆ ಕ್ರಿ. ಶ. 1916 ನಳ ಸಂವತ್ಸರದ ಜ್ಯೇಷ್ಠಮಾಸದ ಷಷ್ಠಿ ಸೋಮವಾರ, ವೃಶ್ಚಿಕ ಲಗ್ನದಲ್ಲಿ, ಮಂಗಲ ಚಂದ್ರ ಯೋಗದಲ್ಲಿ ಚಿಕ್ಕಮಗಳೂರು ಜಿಲ್ಲಾ ಕಡೂರು ತಾಲೂಕು ಪಂಚನಹಳ್ಳಿಯಲ್ಲಿ ಶ್ರೀ ಮಹಾದೇವಯ್ಯನವರ ತೃತೀಯ ಪುತ್ರರಾಗಿ ಜನಿಸಿದರು. ಇವರ ಹಿರಿಯ ಅಣ್ಣನವರೆ ಪ್ರಸಿದ್ಧರಾದ ಏಜೆಂಟ್ ರುದ್ರಯ್ಯನವರು. ಇವರ ಪೂರ್ವಜರದು ನಿಡುವಳ್ಳಿ. ಅಲ್ಲಿನ ಶ್ರೀಗುರು ಮರುಳು ಸಿದ್ಧೇಶ್ವರರು ಇಂದಿಗೆ ಸುಮಾರು ಎರಡು ನೂರು ವರ್ಷಗಳ ಹಿಂದೆ ವೀರ ವಿರಾಗಿಗಳಾಗಿ, ಪರಿವ್ರಾಜಕರಾಗಿ ಹೊರಟು ತುಮಕೂರು ಜಿಲ್ಲಾ ಚಿಕ್ಕನಾಯಕನಹಳ್ಳಿ ತಾಲೂಕು ಬಳಿ ಇರುವ ಕುಪ್ಪೂರು ಎಂಬ ಗ್ರಾಮದ ಸಮೀಪದಲ್ಲಿ ಜೀವ ಸಹಿತ ಕೈಲಾಸಕ್ಕೆ ಹೋದರು. ಆ ಮಹಾಮಹಿಮರ ಜಾಗೃತ ಕ್ಷೇತ್ರವೆ ಶ್ರೀಮತ್ ಕುಪ್ಪೂರು ಗದ್ದಿಗೆಮಠ. ಶ್ರೀ ಗುರು ಮರುಳುಸಿದ್ಧೇಶ್ವರರಿಂದ ಸ್ಥಾಪಿತವಾದ ಆ ಕ್ಷೇತ್ರಕ್ಕೆ ನಮ್ಮ ಶ್ರೀ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ಏಳನೆಯ ಪಟ್ಟಾಧಿಕಾರಿಗಳಾಗಿ ಆಗಮಿಸಿದರು. ಇವರ ಹಿಂದೆ ಶ್ರೀ ನಂಜುಡ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದೇವರು, ಶ್ರೀ ಚೆನ್ನವೀರದೇವರು, ಶ್ರೀ ಬಸವಲಿಂಗಾರ್ಯರು, ಶ್ರೀ ಗುರುಬಸವ ದೇಶಿಕರು, ಶ್ರೀ ಬಸವಮರಿಗಳು, ಅನಂತರ ಶ್ರೀ ಮರುಳಮರಿಗಳು ಆಗಿ ಹೋಗಿದ್ದಾರೆ. ಶ್ರೀ ಮರುಳಮರಿಗಳಾದ ನಂತರ, ಕೆಲವು ದಿನಗಳವರೆಗೆ ಗುರುಗಳೇ ಸಿಗಲಿಲ್ಲ ಮಠಕ್ಕೆ. ಆಗ ಮಠದ ಧರ್ಮಾಧಿಕಾರಿಗಳಾಗಿದ್ದ ವೀರಪ್ಪದೇವರು ಎಂಬುವರು ಕ್ಷೇತ್ರನಾಥ ಶ್ರೀ ಗುರು ಮರುಳುಸಿದ್ಧೇಶ್ವರರ ವಂಶಜರಾದ ಮಹಾದೇವಯ್ಯ ಎಂಬವರು ಪಂಚನಹಳ್ಳಿಯಲ್ಲಿದ್ದಾರೆ. ಅವರಿಗೊಬ್ಬ ಸುಲಕ್ಷಣ ಸಂಪನ್ನನಾದ ಮಗ ಇದ್ದಾನೆ ಎಂಬ ಸುದ್ದಿಯನ್ನು ಕೇಳಿದ ಕೂಡಲೇ ಪಂಚನಹಳ್ಳಿಗೆ ಹೋದರು. ಅಲ್ಲಿ ಗೋಲಿ ಆಟ ಆಡುತ್ತಿದ್ದ ವರ್ಚಸ್ವೀ ಬಾಲಕ ಚಂದ್ರಶೇಖರನನ್ನು ಕಂಡರು. ಕೂಡಲೇ ಮನಸ್ಸಾಯಿತು. ಬಾಲಕನಿಗೆ ತಂದೆ ಇರಲಿಲ್ಲ. ತಾಯಿ ಇದ್ದರು. ಹಿರಿಯ ಅಣ್ಣ ಶ್ರೀ ರುದ್ರಯ್ಯನವರಿಗೆ ವಿಷಯ ತಿಳಿಸಿ, ಅವರ ಒಪ್ಪಿಗೆ ಪಡೆದು ಅಂದೇ ಅಲ್ಲೇ ಮುದ್ರೆ ಉಂಗುರವನ್ನು ಬೆರಳಿಗಿಟ್ಟು, ತಮ್ಮ ಮಠದ ಭಾವೀ ಶ್ರೀ ಶ್ರೀಗಳವರೆಂದು ಘೋಷಿಸಿ ಸಾಷ್ಟಾಂಗ ನಮಸ್ಕಾರ ಮಾಡಿದರು. ಅನಂತರ ಶ್ರೀ ಶಾಲೀವಾಹನ ಶಕ 1846 ಅಂದರೆ ಕ್ರಿ. ಶ. 1924 ನೆಯ ರಕ್ತಾಕ್ಷಿನಾಮ ಸಂವತ್ಸರದ ಶ್ರಾವಣ ಸಪ್ತಮಿ ಜೀವವಾರದ ಸ್ವಾತೀ ನಕ್ಷತ್ರದ ಶುಭೋದಯ ಸಂದರ್ಭದ ತುಲಾ ಲಗ್ನ ಶುಭಾಂಶದಲ್ಲಿ ಹೊನ್ನವಳ್ಳಿ ಬೃಹನ್ಮಠದ ಅಧಿಪತಿಗಳಾದ ಶ್ರೀ ಚೆನ್ನವೀರದೇಶಿಕೇಂದ್ರ ಮಹಾಸ್ವಾಮಿಗಳವರ ಅಮೃತ ಹಸ್ತದಿಂದ ಷಟ್‌ಸ್ಥಲಬ್ರಹ್ಮ ಪದವಿಯನ್ನು ಶ್ರೀಮತ್ ಕಂಪ್ಲೂರು ಗದ್ದಿಗೆ ಮಠದ ಚರಪಟ್ಟಾಧಿಕಾರವನ್ನೂ ಶ್ರೀ ಚಂದ್ರಶೇಖರರಿಗೆ ನೀಡಲಾಯಿತು.

ಶ್ರೀ ಗುರು ಷ. ಬ್ರ. ಶ್ರೀ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳವರು ಶುದ್ಧ ಸಾಮುದ್ರಿಕಾ ಲಕ್ಷಣವುಳ್ಳ ಮಹಾಯೋಗಿಗಳು. ತೇಜಃಪುಂಜ ಮುಖಮಂಡಲ, ವಿಶಾಲವಾದ ಹಣೆ, ನೀಳವಾದ ಮೂಗು, ದೀರ್ಘವಾದ ಕಿವಿ, ಕರುಣೆ ತುಂಬಿದ ಕೊಡಗಳಂತೆ ಇಲ್ಲವೆ ಜಾಜ್ವಲ್ಯಮಾನವಾಗಿ ಬೆಳಗುತ್ತಿರುವ ಜ್ಯೋತಿಗಳಂತೆ ಹೊಳೆ ಹೊಳೆವ ಕಣ್ಣುಗಳು, ಸುಲಕ್ಷಣ ಸುಂದರ ದೇಹ, ದಯೆಯೇ ಮೂರ್ತಿವೆತ್ತಂತಿರುವ ಮಂಗಲ ಮೂರ್ತಿ.

ಇವರು ಪರಮ ತಪೋಧನರು, ವೀರ ವಿರಾಗಿಗಳು, ಭಕ್ತಜನ ವತ್ಸಲರು, ಶ್ರೀ ಗುರು ಮರುಳುಸಿದ್ಧರಂತೆಯೇ ಸರ್ವಧರ್ಮ ಸಮನ್ವಯ ಸಾಧಕರು. ಅಂತೆಯೇ ಗುರು—ವಿರಕ್ತ ಸಾಮರಸ್ಯ ಶಿಲ್ಪಿಗಳು. ತಮ್ಮ ಮಠಕ್ಕೆ ಶೂನ್ಯ ಸಿಂಹಾಸನಾಧಿಪತಿಗಳಾದ ಚಿನ್ಮೂಲಾದ್ರಿಯ ಜಗದ್ಗುರು ಶ್ರೀ ಮುರುಘರಾಜೇಂದ್ರ ಮಹಾಸ್ವಾಮಿಗಳವರನ್ನೂ, ಹುಬ್ಬಳ್ಳಿಯ ಮೂರುಸಾವಿರ ಮಠದ ಜಗದ್ಗುರು ಶ್ರೀ ಶ್ರೀ ಶ್ರೀಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳವರನ್ನೂ, ಗದಗಿನ ತೋಂಟದಾರ್ಯ ಮಠದ ಜಗದ್ಗುರು ಸಿದ್ಧಲಿಂಗ ಮಹಾಸ್ವಾಮಿಗಳವರನ್ನೂ, ಧಾರವಾಡದ ಶ್ರೀ ಮುರುಘಾ ಮಠದ ಅಪ್ಪಗಳನ್ನೂ, ಶ್ರೀ ಸಿದ್ಧಗಂಗಾ ಮಠದ ಶ್ರೀ ನಿ. ಪ್ರ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೀ ಶಿವಕುಮಾರ ಮಹಾಸ್ವಾಮಿಗಳವರನ್ನೂ, ಸುತ್ತೂರು ಮಠದ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರನ್ನೂ, ಹಾರನಹಳ್ಳಿ ಕೋಡಿಮಠದ ಶ್ರೀ ನಿ. ಪ. ಶ್ರೀ ನೀಲಲೋಚನ ಸ್ವಾಮಿಗಳವರನ್ನೂ, ಹೊನ್ನಾಳಿ ಹಿರೇಕಲ್ಮಠ, ಚನ್ನಗಿರಿ, ಮುಡೇನಹಳ್ಳಿ, ಮಠದದೊಡ್ಡಿ, ಪೂರಿಗಾಲಿ, ರಾಜಾಪುರ, ದೊಡ್ಡವೀರಲೇಕುರ್ಕಿ, ದೊಡ್ಡಗುಣಿ, ಬೆಂಗಳೂರಿನ ಶಂಕರಮಠ, ಬೇಲಿಮಠ, ಗಂಜಾಂಮಠ, ಕೊಡಗಿನ ಎಸಳೂರು ಮಠ, ಕೆಳದಿ ಮಠ, ನೊಣವಿನಕೆರೆ ವಿರಕ್ತಮಠ, ವಿಭೂತಿಪುರ ಮಠ, ಬಿಜಾಪುರ, ಬೆಳಗಾವಿ, ರಾಯಚೂರು, ಭಾಲ್ಕಿ ಮೊದಲಾದ ಎಲ್ಲ ಮಠದ ಶ್ರೀ ಶ್ರೀಗಳವರನ್ನೂ ತಮ್ಮಲ್ಲಿಗೆ ಬರಮಾಡಿಕೊಂಡು ಆದರಿಸಿ, ಶಿವಪೂಜಾ ಕಾಯಕಗಳನ್ನು ಅದ್ದೂರಿಯಿಂದ ನೆರವೇರಿಸಿ, ಸಂತುಷ್ಟಿಗೊಳಿಸಿ ಬೀಳ್ಕೊಟ್ಟಿದ್ದಾರೆ. ಹೀಗೆ ಎಲ್ಲರಲ್ಲೂ, ಎಲ್ಲ ಧರ್ಮಗಳಲ್ಲೂ ಸಮನ್ವಯತೆಯನ್ನು ಸಾಧಿಸಿದ್ದಾರೆ. ಎಲ್ಲ ಸ್ವಾಮಿಗಳಿಗೂ ತಮ್ಮ ಆದರ್ಶವನ್ನು ಎತ್ತಿ ತೋರಿಸಿದ್ದಾರೆ. ಎಲ್ಲ ಮಠಗಳಿಗೂ ತಮ್ಮ ಶ್ರೇಷ್ಠ ಆದರ್ಶದ ಮಾರ್ಗದರ್ಶನ ಮಾಡುತ್ತಿದ್ದಾರೆ.

ಇಂತಹ ಮಹದ್ವಿಭೂತಿಯ ದರ್ಶನಾಶೀರ್ವಾದ ನಮಗೂ, ನಮ್ಮ ಸಮಾಜಕ್ಕೂ ನಮ್ಮ ರಾಷ್ಟ್ರಕ್ಕೂ, ಸಮಸ್ತ ಮಾನವಕುಲಕ್ಕೂ ಸದಾ ಇರಲಿ ಎಂದು ಹಾರೈಸಿ, ಶ್ರೀ ಶ್ರೀಗಳವರು ಅಧ್ಯಕ್ಷತೆ ವಹಿಸಿ, ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿಕೊಡ ಬೇಕೆಂದು ಅನನ್ಯ ಭಕ್ತಿಯಿಂದ ಪ್ರಾರ್ಥಿಸಿಕೊಳ್ಳುತ್ತೇನೆ.

ನಿಯೋಜಿತ ಕಾರ್ಯಕ್ರಮದಂತೆ ವಿದ್ವತ್ ಸಭೆಯ ಉದ್ಘಾಟನೆ ಗದಗಿನ ತೋಂಟದಾರ್ಯ ಮಠದ ಜಗದ್ಗುರು ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರ ಅಮೃತ ಹಸ್ತದಿಂದ ನೆರವೇರಿತು.

ಜಗದ್ಗುರುಗಳವರು ಸಭೆಯನ್ನು ವಿಧ್ಯುಕ್ತವಾಗಿ ಉದ್ಘಾಟಿಸಿ ಆಶೀರ್ವಚನ ವಿತ್ತರು.

ಪ್ರಾತಃ ಸ್ಮರಣೀಯರಾದ ಬಸವಾದಿ ಪ್ರಮಥರನ್ನೂ, ಹಾನಗಲ್ಲ ಕುಮಾರ ಶಿವಯೋಗಿಗಳನ್ನು ಸ್ಮರಿಸಿ ಮೂರು ದಿನಗಳು ನಡೆಯುವ ಶಿವಾನುಭವ ಸಮ್ಮೇಳನದ ಅಧ್ಯಕ್ಷರೂ ಕಾಯಕಯೋಗಿಗಳೂ ಆದ ಶ್ರೀಮನ್ನಿರಂಜನ ಪ್ರಣವ ಸ್ವರೂಪಿ ನಾಗನೂರ ರುದ್ರಾಕ್ಷಿ ಮಠದ ಶ್ರೀ ಶಿವಬಸವ ಮಹಾಸ್ವಾಮಿಗಳವರೆ, ಇಂದಿನ ವಿದ್ವತ್ ಸಭೆಯ ಅಧ್ಯಕ್ಷತೆ ವಹಿಸಿರುವ ಷಟ್‌ಸ್ಥಲಬ್ರಹ್ಮಿ ಶ್ರೀ ಶ್ರೀ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳವರೆ, ಉಪಸ್ಥಿತ ಹರಗುರು ಚರಮೂರ್ತಿಗಳೆ, ಶಿವಯೋಗ ಮಂದಿರದ ವರ್ಚಸ್ವೀ ವಟುಗಳೇ ಹಾಗೂ ಈ ಸಮಾರಂಭದಲ್ಲಿ ಪಾಲ್ಗೊಂಡಿರುವ ಎಲ್ಲ ಮಹಾಶಯರೆ,

ನಿಮಗೆಲ್ಲರಿಗೂ ಶರಣಾರ್ಥಿಗಳು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇದುವರೆಗೆ ಧರ್ಮದಾಸೋಹದಲ್ಲಿ ಪಾಲ್ಗೊಂಡಿರಿ. ಅಲ್ಲಿ ಸಿಹಿಗಿಂತಲೂ ಖಾರದ ಅಡಿಗೆಯೇ ಬಹಳವಿತ್ತು. ಅದು ಸಹಜ. ನಾವೆಲ್ಲರೂ ವೀರಶೈವ ಎಂಬ ಧರ್ಮದೇವತೆಯ ಕೈಬಳೆಗಳು. ಒಂದೇ ಬಳೆ ಇದ್ದರೆ ಅದು ಶಬ್ದ ಮಾಡಲಾರದು ಎರಡಿದ್ದರೆ ಶಬ್ದಮಾಡುತ್ತವೆ. ಹತ್ತಿದ್ದರೂ ಶಬ್ದಮಾಡುತ್ತವೆ. ಆದರೆ ಆ ಶಬ್ದ ಕೇಳಲು ಕಿವಿಗೆ ಹಿತವಾಗಿರಬೇಕು. ಗಾಜಿನ ಬಳೆಗಳು ಗಮ್ಮತ್ತು ತೋರಿಸಲೆಂದು ಒಂದಕ್ಕೊಂದು ಬಲವಾಗಿ ತಾಕಿದರೆ ಒಡೆದು ಚೂರಾಗುತ್ತವೆ. ಅಂತಾಗುವುದು ಬೇಡ. ಧರ್ಮದೇವತೆಯ ಮುತ್ತೈದೆತನವನ್ನು ಕಳೆಯುವ ಪಾತಕ ಮಾಡುವುದು ಬೇಡ. ತಾಯಿಯನ್ನು ಬದುಕಿಸಿ, ನಾವೂ ಬದುಕೋಣ ಬನ್ನಿ. ನನ್ನ ಆಹ್ವಾನವನ್ನು ಸ್ವೀಕರಿಸಿ.

ವೀರಶೈವ ಧರ್ಮದ ಬಗ್ಗೆ ಎಷ್ಟು ಹೇಳಿದರೂ, ಎಷ್ಟು ಕೇಳಿದರೂ ಕಡಿಮೆಯೆ. ನೂರಾರು ವರ್ಷಗಳಿಂದ ಹೇಳುತ್ತಾ ಬಂದಿದ್ದಾರೆ, ನೂರಾರು ವರ್ಷಗಳಿಂದ ಬರೆಯುತ್ತಾ ಬಂದಿದ್ದಾರೆ. ಹೇಳುವವರೂ ಹೋದರು ಕೇಳುವವರೂ ಹೋದರು. ಬರೆಯೋರೂ ಹೋದರು. ಆದರೆ ಹೇಳೋದೂ ಮುಗಿದಿಲ್ಲ, ಕೇಳೋದೂ ಮುಗಿದಿಲ್ಲ. ಬರೆಯೋದೂ ಮುಗಿದಿಲ್ಲ. ಧರ್ಮ ಅನ್ನುವ ವಿಷಯವೇ ಅಂತಹದು. ಸಾಹಿತ್ಯ ಅನ್ನುವ ವಿಷಯವೇ ಅಂಥದು. ಆ ದಿಸೆಯಲ್ಲಿ ವೀರಶೈವ ಭಾರತಕ್ಕೆ ಅಷ್ಟೇಕೆ ಪ್ರಪಂಚಕ್ಕೆ ಒಂದು ಹೊಸ ಬೆಳಕು ಒಂದು ಹೊಸ ದರ್ಶನ ಕೊಟ್ಟಿತು. ಇದು ಒಂದು ರೀತಿ ವೈದಿಕ ವ್ಯವಸ್ಥೆಯ ಸುಧಾರಣಾ ಧರ್ಮವಾಗಿ, ಸುಧಾರಣಾ ವೇದಿಕೆಯಾಗಿ ಬಂತು ಎಂದು ಹೇಳುತ್ತಾರೆ. ವೈದಿಕರಲ್ಲಿ ಕಂದಾಚಾರ ಇರುತ್ತದೆ. ಬಹಳ ಕರ್ಮಠತನ ಇರುತ್ತದೆ. ಜಾತಿ—ವ್ಯವಸ್ಥೆ ಇರುತ್ತದೆ. ಇಂಥ ವ್ಯವಸ್ಥೆಯಲ್ಲಿಯ ಪ್ರಾಚೀನ ವೀರಶೈವ, ಬಸವಪೂರ್ವದ ವೀರಶೈವ ಒಂದು ಸುಧಾರಣಾ ವೇದಿಕೆಯಾಗಿ ಬಂತು. ಅದು ಬಸವಣ್ಣನ ಕಾಲದಲ್ಲಿ ಉಜ್ವಲತೆಯನ್ನು ಪಡೆಯಿತು. ಹ್ಯಾಗೆ ಯೂರೋಪದ ಧರ್ಮ ಏಸುವಿನ ಕಾಲದಲ್ಲಿ ಹೊಸತನವನ್ನು ಪಡೆಯಿತೊ ಹಾಗೆ ಪೂರ್ವದ ವೀರಶೈವ ಬಸವಣ್ಣನ ಕಾಲದಲ್ಲಿ ಉಜ್ವಲ ಪ್ರಕಾಶವನ್ನು ಉಜ್ವಲ ಬೆಳಕನ್ನು ಪಡೆಯಿತು. ಆದರೆ ಏಸುವಿನ ಧರ್ಮಕ್ಕೆ ಅನೇಕ ಕಂದಾಚಾರಗಳು, ಕರ್ಮಠರು ಗಂಟುಬಿದ್ದಾಗ 'ಮಾರ್ಟಿನ್ ಲ್ಯೂಥರ್ ಕಿಂಗ್'ನಂಥವರು ಮತ್ತೆ ಮತ್ತೆ ಉದಯವಾಗಿ, ಆ ಧರ್ಮಕ್ಕೆ ಹೊಸತನವನ್ನು ಕೊಟ್ಟರು. ಉಸಿರುಕಟ್ಟಿಸುವಂಥ ವಾತಾವರಣದಿಂದ ಆ ಧರ್ಮವನ್ನು ಮುಕ್ತ ಮಾಡಿದರು. ಹೀಗಾಗಿ ಆ ಧರ್ಮ ಕೊನೆಗೆ ತನ್ನ ಧರ್ಮದ ಆವರಣದ ಹಿನ್ನೆಲೆಯಲ್ಲಿ ಸಮಾನತೆ ಮಾನವೀಯತೆಯನ್ನು ಆಶ್ರಯಿಸುವಂತೆ ಕಮ್ಯೂನಿಸಂಗೆ ಅದು ಆಶ್ರಯವಾಯಿತು. ಕಮ್ಯೂನಿಸಂ ಇಂದು ಧರ್ಮವನ್ನು ನಂಬುವುದಿಲ್ಲ, ದೇವರನ್ನೂ ನಂಬುವುದಿಲ್ಲ. ಆದರೆ ಕ್ರಿಶ್ಚಿಯನ್ನರು ಹೇಳುವಂಥ ಸಮಾನತೆ ಮಾನವತೆಯನ್ನು ತನ್ನ ಬದುಕಿನ ಬುನಾದಿಯನ್ನಾಗಿ ಮಾಡಿ ಕೊಂಡಿದೆ. ಬಸವಣ್ಣ ಪ್ರತಿಪಾದಿಸಿದ ಶರಣ ಧರ್ಮಕ್ಕೆ ಇಂಥ ಪರಿಸ್ಥಿತಿ ಬರಲಿಲ್ಲ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬಸವಣ್ಣ ಹೋದ ಕೂಡಲೆ ಇದು ಏನಾಯಿತು ಮತ್ತೆ ಕಂದಾಚಾರಿಗಳ ಕೈಯಲ್ಲಿ ಸಿಕ್ಕಿತು; ಕರ್ಮಠರ ಕೈಯಲ್ಲಿ ಸಿಕ್ಕಿತು. ಪುರೋಹಿತಶಾಹಿಗಳ ಕೈಯಲ್ಲಿ ಸಿಕ್ಕಿತು. ಇದು ಮತ್ತೆ ಸಂಸ್ಕೃತವನ್ನು ಆಶ್ರಯಿಸಿಕೊಂಡಿತು. ಮತ್ತೆ ತಾಡೋಲೆಗಳ ಮೇಲೆ ಸಂಸ್ಕೃತದಲ್ಲಿ ಬರೆಯಲಿಕ್ಕೆ ಪ್ರಾರಂಭಿಸಿದರು. ಯಾವುದನ್ನು ಬಸವಣ್ಣ ನಿರಾಕರಿಸಿದ್ದನೊ ಸಕಲ ಜೀವಾತ್ಮರಿಗೆ ಲೇಸನೇ ಬಯಸುವುದನ್ನು ಹೇಳಿದ್ದನೊ ಅದನ್ನು ಮರೆತರು. ಷಟ್‌ಸ್ಥಲ ಚಕ್ರವರ್ತಿ ಎನ್ನಿಸಿಕೊಂಡ ಅವನ ಅಳಿಯ ಚನ್ನಬಸವಣ್ಣ ಹೇಳುತ್ತಾನೆ—

ವಾರಗಳು ಏಳೆಂಬರು ಕುಲಗಳು ಹದಿನೆಂಟು ಎಂಬ ನಾವು ನಂಬೆವು,
ಹಗಲೊಂದು ವಾರ, ಇರುಳೊಂದು ವಾರ
ಭವಿಯೊಂದು ಕುಲ ಭಕ್ತನದೊಂದು ಕುಲ

ಇಂಥ ಒಂದು ಅತ್ಯಂತ ತರ್ಕಬದ್ಧವಾದ ಸುವ್ಯವಸ್ಥಿತವಾದಂಥ ಧಾರ್ಮಿಕ ವ್ಯವಸ್ಥೆ ಯನ್ನು ಬಸವಣ್ಣ ತಂದರೂ ಕೂಡ ಸ್ವೀಕರಿಸಲಿಲ್ಲ. ಬಸವಣ್ಣ ಹೇಳುತ್ತಾನೆ :

ವೇದಗಳಿಗೆ ಒರೆಯನಿಕ್ಕುವೆ, ಆಗಮದ ಬೆನ್ನ ಬಾರನೆತ್ತುವೆ.
ಶಾಸ್ತ್ರಗಳ ಮೂಗ ಕೊಯ್ಯುವೆ ಕೂಡಲಸಂಗಮದೇವಾ
ಮಾದಾರ ಚೆನ್ನಯ್ಯನ ಮಗ ನಾನು...

ಎಂದು.. ಅಂದರೆ, ವೇದ, ಆಗಮ, ಉಪನಿಷತ್‌ಗಳೂ ತರ್ಕಗಳ ಹೆಸರು ಹೇಳಿ ನೀವು ಜನಗಳನ್ನು ಶೋಷಿಸುತ್ತಾ ಇದ್ದೀರಿ. ಸಂಸ್ಕೃತ ಭಾಷೆಯ ಭಯವನ್ನು ಜನರಲ್ಲಿ ಹುಗಿಸಿ, ಎಲ್ಲಾ ಸಂಸ್ಕೃತದಲ್ಲಿದೆ, ಎಲ್ಲಾ ದೇವ ಭಾಷೆಯಲ್ಲಿದೆ, ಇದು ದೇವರ ಭಾಷೆ ಎಂದು ಜನರನ್ನು ಹೆದರಿಸ್ತಾ ಇದ್ದೀ. ವಾಸ್ತವಿಕವಾಗಿ ದೇವರಿಗೆ ಯಾವ ಭಾಷೆಯಾದರೇನು ? ಭಾವ ಅರ್ಥವಾದರೆ ಸಾಕು. ಅದನ್ನೇ ಬಸವಣ್ಣ ಅಚ್ಚ ಕನ್ನಡದಲ್ಲಿ ಧರ್ಮದ ಬೆಳಕಿಗಾಗಿ ಕನ್ನಡವನ್ನೇ ಆಶ್ರಯಿಸಿ ಕನ್ನಡದಲ್ಲೇ ಧರ್ಮ ಪ್ರಚಾರ ಮಾಡಿದ. ಹದಿನಾರಾಣೆ ಕನ್ನಡದಲ್ಲಿ ಈ ಕ್ರಾಂತಿ ನಡೆಯಿತು. ದುರ್ದೈವ ಬಸವಣ್ಣ ಹೋದ ಕೂಡಲೆ ಮತ್ತೆ ಪಟ್ಟಭದ್ರರು ಎದ್ದು ಕೂತರು. ಅನಂತರ ಏನಾಯಿತು ? ಕನ್ನಡದಲ್ಲಿ ಬಂದಂಥ ಈ ಧರ್ಮ ಮೂಲೆಗುಂಪಾಯಿತು. ಸಂಸ್ಕೃತವೇ ಮತ್ತೆ ಪ್ರಧಾನವಾಯಿತು. ಹೀಗಾಗಿ ಮತ್ತೆ ಜನಗಳಲ್ಲಿ ಜಾತಿ–ವ್ಯವಸ್ಥೆ ನೆಲೆಗೊಂಡಿತು. ವೃತ್ತಿಗಳೇ ಜಾತಿಗಳಾದವು. ಜನಗಳು ಆ ಜಾತಿ ವ್ಯವಸ್ಥೆಯ ಚೌಕಟ್ಟಿನಲ್ಲಿ ಮತ್ತೆ ಭದ್ರರಾದರು. ಹೀಗೆ ಮಾಡೋಣದರಿಂದ ಜಾತಿಯ ಪಂಜರದಲ್ಲಿ ಜಾತೀಯತೆಯ ಗುಹೆಯಲ್ಲಿ ಈ ವೀರಶೈವ ಈ ಲಿಂಗಾಯಿತ ಸಿಗೋಣದರಿಂದ, ಏನು ಅನಾಹುತ ಆಯಿತು ಅನ್ನುವುದನ್ನು ಈಗ ನಾವು ಅನುಭವಿಸುತ್ತಿದ್ದೇವೆ. ಈಗ ಕಚ್ಚಾಡುತ್ತಿದ್ದೇವೆ.

ಯಾವಾಗ ಈ ವೀರಶೈವರು ಜಾತಿ ವ್ಯವಸ್ಥೆಗೆ ಹೊಂದಿಕೊಂಡರೋ ಆ ಜಾತಿ ವ್ಯವಸ್ಥೆಯ ನೀಚತನ ಏನಿದೆ ಅವೆಲ್ಲಾ ನಮ್ಮ ಧರ್ಮದಲ್ಲಿ ಬಂದುಬಿಡ್ತು. ಅದರ ಪರಿಣಾಮವಾಗಿ ಜಂಗಮರು, ಬಣಸ್ಥಾನದವರು ಬೇರೆಯಾದರು ಉಳಿದ ವರ್ಗದವರಿಂದ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆಮೇಲೆ ಅದರ ಪರಿಣಾಮ ಏನಾಯಿತು. ಮೇಲಿನವರು ಮೇಲಾದರು, ಕೆಳಗಿನವರು ಕೆಳಗಾದರು. ಅವರಲ್ಲಿ ಗುಂಪುಗಾರಿಕೆ ಬೆಳೆಯಿತು. ಅವರಲ್ಲಿ ಗುರುಗಳಾದರು. ಇಂಥಾ ಅವಕಾಶ ಸಿಕ್ಕಾಗ ನಾವೂ ಯಾಕೆ ಗುರುಗಳು ಮಾಡಕೊಬಾರದು ಅಂತಾ ಅವರು ಶುರುಮಾಡಿದರು. ಹಾಗಾಗಿ ಮತ್ತೆ ನಮ್ಮಲ್ಲಿ ಕುಲಕ್ಕೊಬ್ಬ ಗುರು, ಅದಕ್ಕೊಂದು ಮಠ ಆದುವು. ಮಠದ ವ್ಯವಸ್ಥೆ ಬಂದ ಕೂಡಲೇ ಅದು ಜಾತಿವಾದಕ್ಕೆ ಬಂದುಬಿಟ್ಟಿತು. ಮಠಗಳು ಒಂದು ಮಟ್ಟಿಗೆ ಸಮಾಜಕ್ಕೆ ಎಷ್ಟು ಒಳ್ಳೆಯದು ಮಾಡಿವೆಯೋ ಒಂದು ರೀತಿಯಿಂದ ಸ್ವಲ್ಪ ಅಪಾಯವನ್ನೂ ಮಾಡಿವೆ. ಪ್ರಜ್ಞಾವಂತರಿಗೆಲ್ಲಾ ಗೊತ್ತು. ಒಂದು ಸರ್ಕಾರ ಬೀಳಲಿಕ್ಕೆ ನಮ್ಮದೇ ಆದ ಒಂದು ಮಠ ಕಾರಣವಾಯಿತು ಎನ್ನುವುದು ಐತಿಹಾಸಿಕ ಸತ್ಯ ಸಂಗತಿ. ಯಾಕೆ ಅಂತ ಅಂದರೆ ಅಲ್ಲಿ ಅಂಥ ಸ್ವಾರ್ಥ ಬರ್ತದೆ, ಪ್ರತಿಷ್ಠೆ ಬರ್ತದೆ, ಅಹಂ ಬರ್ತದೆ. ಆದನಂತರ ನಾವು ನಮ್ಮ ಹಿಂದಿನದನ್ನು ವಿಚಾರ ಮಾಡಲಿಲ್ಲ, ಹೊಸದನ್ನು ವಿಚಾರ ಮಾಡಲಿಲ್ಲ. ಹರಿಯೋ ನೀರನ್ನು ನಾವು ಅಡ್ಡಕಟ್ಟಿದರೆ ಅದು ನಿಂತು ಕೊಳೀತದೆ, ಹುಳು ಆಗ್ತಾವೆ ವಾಸನೆ ಬರ್ತದೆ. ಆ ನಿಂತ ನೀರನ್ನು ತೀರ್ಥ ಅಂತಾ ತೆಗೆದುಕೊಂಡ ಹಾಗೆ ನಮ್ಮ ಧರ್ಮ ದೊಡ್ಡದು, ನನ್ನ ಕುಲಾನೇ ದೊಡ್ಡದು, ನಮ್ಮ ಜಾತೀನೇ ದೊಡ್ಡದು – ಅಂತಾ ಮೆರೆಯಿತು. ಆ ಸಮಾಜಕ್ಕೆ ಹೊಸತನದ ಗಾಳಿ ಬರಬೇಕಾಗಿತ್ತು, ಅಲ್ಲಿ ಹೇಗೆ ಪ್ರಾಟೆಸ್ಟೆಂಟ್ ಹುಟ್ಟಿ ಬಂತೋ ಅಥವಾ ಮಾರ್ಟಿನ್ ಲ್ಯೂಥರ್‌ನಂಥವರು ಹುಟ್ಟಿ ಬಂದರೋ, ಪೀಟರ್‌ನಂಥವರು ಹುಟ್ಟಿ ಬಂದರೋ ಹಾಗೆ ಈ ಜಾತಿಯ ಮಠಮಾನ್ಯಗಳ ವಿರುದ್ಧ ಅಥವಾ ಈ ಜಾತಿಯ ಸಂಘ ಸಂಸ್ಥೆಗಳ ವಿರುದ್ಧ ಬಂಡಾಯ ಮಾಡಿ ಈ ವೀರಶೈವ ಮೂಲತತ್ವಕ್ಕೆ ತಿರುಗುವ ಹಾಗೆ ಮಾಡಿದ್ದಿದ್ದರೆ ಇವೊತ್ತಿನ ಈ ಗೊಂದಲ, ಇವೊತ್ತಿನ ಈ ಸಂಘರ್ಷಣ, ಇವೊತ್ತಿನ ಈ ಒಂದು ಸಂಕೀರ್ಣತೆ ನಮಗೆ ಉಂಟಾಗ್ತಾ ಇರಲಿಲ್ಲ. ನಾವು ಹತ್ತರ ಜೊತೆಗೆ ಹನ್ನೊಂದನೆಯವರಾಗಿ ಬಂದು ಬಿಟ್ಟೆವು. ಲಿಂಗಾಯಿತರಲ್ಲಿ ಮಹಾದೇವಿ ದೊಡ್ಡಾಕಿ ಆದಳು, ಮುಕ್ತಾಯಕ್ಕ ಕೂಡ ಆದಳು; ಶಾಂಭವಿ ರೇಣುಕರ ಕಾಲಕ್ಕೆ ದೊಡ್ಡಾಕಿ ಆದಳು. ಅನಂತರ ಲಕ್ಕಮ್ಮ, ಪಿಟ್ಟವ್ವೆ, ರೆಮ್ಮವ್ವೆ, ಬೊಂತಾದೇವಿ, ಸಂಕವ್ವೆ ಇವರೆಲ್ಲಾ ದೊಡ್ಡವರಾದರು ನಿಜ. ಅನಂತರದಲ್ಲಿ ಯಾರಾದರು ? ಎಂಟುನೂರು ವರ್ಷಗಳು ಒಂದು ದೊಡ್ಡ ಶೂನ್ಯವನ್ನೇ ನಾವು ಕಾಣ್ತೇವಿ.

ಯಾಕೆ ಹೀಗಾಯ್ತು ? ಹದಿನಾರನೇ ಶತಮಾನದಲ್ಲಿ ಮಠಗಳು ಸ್ಥಾಪನೆಗೊಂಡಾಗ, ಈ ಮಠದ ವ್ಯವಸ್ಥೆಗಳು ಸಮಾಜದ ಮೇಲೆ ತಮ್ಮ ಪ್ರಭುತ್ವವನ್ನು ಮಾಡಿಕೊಳ್ಳಬೇಕಾದಾಗ ಹೆಣ್ಣುಮಕ್ಕಳಿಂದ ದೂರಿದ್ದವರಿಗೆ ಸಮಾಜದಿಂದ ಹೆಚ್ಚು ಪ್ರಾಶಸ್ತ್ಯ ಸಿಕ್ತಾ ಇರೋಣವಾದ್ದರಿಂದ ಹೆಣ್ಣುಮಕ್ಕಳನ್ನು ಸಂಪೂರ್ಣವಾಗಿ ಧಾರ್ಮಿಕ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವ್ಯವಸ್ಥೆಯಿಂದ ದೂರ ಇಡುವಂಥಾ ಪ್ರಯತ್ನ ಆಯಿತು. ಅದು ಮಠದ ವ್ಯವಸ್ಥೆಯಿಂದ ನಡೆಯಿತು. ಆಗ ದೂರಾದಂಥ ಹೆಣ್ಣುಮಕ್ಕಳು ಇಂದಿಗೂ ದೂರವಾಗಿಯೇ ಇರೋಣದರಿಂದ ಇವೊತ್ತು ನಮ್ಮ ಹೆಣ್ಣುಮಕ್ಕಳಲ್ಲಿ ಕ್ರಿಯಾಶೀಲತೆ ಇಲ್ಲ. ಸಂಪೂರ್ಣವಾಗಿ ವೀರಶೈವ ಮಹಿಳಾ ಸಮಾಜ ಜಡತೆಯನ್ನು ಅನುಭವಿಸುತ್ತಾ ಇದೆ.

ಎಂಥ ಪರಂಪರೆಯನ್ನು ನಮ್ಮವರು ಕಟ್ಟಿದರು. ನೆನೆಸ್ಕೊಬೇಕು! ಕರ್ನಾಟಕದ ಮೊತ್ತಮೊದಲ ಸೋಸಲಿಸ್ಟ್ ಅಥವಾ ವಿಶ್ವಕ್ಕೆ ಮೊತ್ತಮೊದಲು ಕರ್ನಾಟಕ ಕೊಟ್ಟಂತಹ ಸೋಸಲಿಸ್ಟ್ ಬಸವಣ್ಣ! ಇಂಥಾ ಬಸವಣ್ಣನನ್ನು ಕೊಟ್ಟವರು ವೀರಶೈವರು. ಬ್ರಾಹ್ಮಣ ಜೈನ ಸಾಹಿತ್ಯಗಳು ಕನ್ನಡ ಸಾಹಿತ್ಯದಲ್ಲಿ ವಿಜೃಂಭಿಸುವಾಗ ಆ ಸಾಹಿತ್ಯಗಳನ್ನು ಮಂಕುಗೊಳಿಸುವ ಹಾಗೆ ಸ್ವತಂತ್ರವಾದಂತಹ ವಚನ ಸಾಹಿತ್ಯದ ಅಭಿವ್ಯಕ್ತಿಯ ಮೂಲಕ ವಿಶ್ವಸಾಹಿತ್ಯಕ್ಕೆ ಕನ್ನಡ ಕೊಟ್ಟಂತಹ ದೊಡ್ಡ ಕಾಣಿಕೆ ಅನ್ನಿಸಿಕೊಂಡಂತಹ ವಚನ ಸಾಹಿತ್ಯವನ್ನು ಕೊಟ್ಟವರು ವೀರಶೈವರು! ಅಷ್ಟೇ ಅಲ್ಲ ಆ ಜಾತ್ಯಾಂತರದಲ್ಲಿ ಆ ಮುಸಲ್ಮಾನರ ಹಾಗೆ ಸಮಾನತೆಯಲ್ಲಿ ನಂಬಿಕೆ ಇಟ್ಟುಕೊಂಡ ಹಾಗೆ ವೀರಶೈವರೂನು ನಂಬಿಕೆ ಇಟ್ಟುಕೊಂಡಿರೋದರಿಂದ ತಮ್ಮ ಮಠಮಾನ್ಯಗಳನ್ನು ಬೇರೆ ಜಾತಿಯ ಜನಗಳಿಗೂ ಕೂಡ ತೆಗೆದಿಟ್ಟರು. ಇದನ್ನು ವೈದಿಕ ವ್ಯವಸ್ಥೆಯಲ್ಲಿ ಯಾರೂ ಮಾಡಲಿಲ್ಲ. ಇದನ್ನು ನೂರಾರು ವರ್ಷಗಳಿಂದ ಲಿಂಗಾಯಿತರು ಮಾಡಿಕೊಂಡು ಬಂದಿದ್ದಾರೆ. ಜಾತ್ಯಂತರ ವ್ಯವಸ್ಥೆಯಲ್ಲಿ ಮುಸಲ್ಮಾನರು ಇಟ್ಟುಕೊಂಡ ಹಾಗೆ ನೀವು ಯಾರು ಲಿಂಗಾಯತರಾಗ್ತೀರಾ ಬನ್ನಿ, ನೀವು ಯಾರು ವೀರಶೈವರಾಗ್ತೀರ ಬನ್ನಿ ಅಂತಾ ಹೇಳಿ ನಮ್ಮ ಗುರು–ವಿರಕ್ತ ಎರಡೂ ವರ್ಗದವರು ಬಂದವರಿಗೆಲ್ಲ ಲಿಂಗ ಕೊಟ್ಟು ತಮ್ಮ ಧರ್ಮದೊಳಗೆ ತೆಗೆದುಕೊಂಡರು. ಇದು ವೈದಿಕ ವ್ಯವಸ್ಥೆಯಲ್ಲಿ ಹೊಸದು. ಇದೂ ಕೂಡ ಮಾಡಿದಂಥವರು ವೀರಶೈವರು! ಕಿತ್ತೂರು, ನರಗುಂದ ಮುಂತಾದೆಡೆಯಲ್ಲಿ ಸ್ವಾತಂತ್ರ್ಯಕ್ಕೆ, ಬಂಡಾಯಕ್ಕೆ ಪ್ರೇರಣೆ ಕೊಟ್ಟವರು, ಹೊಸ ಆಯಾಮ ಕೊಟ್ಟವರು ವೀರಶೈವರು! ಆದರೆ ಈ ಜಾತೀಯತೆ, ಈ ಪೌರೋಹಿತ್ಯತೆ ಇದೆಲ್ಲಾ ನಮ್ಮನ್ನು ಒಂದು ರೀತಿ ಜಡರನ್ನಾಗಿ ಮಾಡಿತು, ಒಂದು ರೀತಿ ಶುಂಠರನ್ನಾಗಿ ಮಾಡಿತು ಅಂತಾ ಹೇಳಿದರೆ ಅದು ಅತಿಶಯೋಕ್ತಿಯೇನೂ ಅಲ್ಲ. ನಾವು ಬಹಳ ಜಡರಾಗಿ ಬಿಟ್ಟೆವು. ಈ ಅವಧಿಯಲ್ಲಿ ಮತ್ತೊಬ್ಬ ಬಸವಣ್ಣನನ್ನು ಹುಟ್ಟಿಸಿಕೊಳ್ಳಲಿಕ್ಕಾಗಲಿಲ್ಲ. ಬಸವಣ್ಣ ಮಾಡಿದ ಕೆಲಸಕ್ಕೆ ನಾವು ಜಾಸ್ತಿಮಾಡಿ ಸೇರಿಸುವುದು ಆಗಲಿಲ್ಲ. ಬ್ಯಾಂಕಿನಲ್ಲಿದ್ದ ಬ್ಯಾಲೆನ್ಸನ್ನು ಹೇಗೆ ದರಿದ್ರಮಂಗ ದಿನಾ ಚೆಕ್ ಬರೆದು ತರಿಸ್ಕೊಂಡು, ತರಿಸ್ಕೊಂಡು ಬರೀ ತಿನ್ನೋದು ಮಾಡಿ, ಕಡೆಗೆ ಬ್ಯಾಂಕಿನ ಬ್ಯಾಲೆನ್ಸ್‌ಲ್ಲಾ ಹೋಗಿ ಅವರು ಚೆಕ್ ವಾಪಸ್ ಕಳಿಸ್ತಾರೆ, ನಮ್ಮದೂ ಹಾಗೆ ಆಯಿತು. ಬಸವಣ್ಣನದೇ ಹೇಳೋದಾಯ್ತು, ಪಂಚಾಚಾರ್ಯರದ್ದನ್ನೇ ಹೇಳೋದಾಯ್ತು, ನೀವೇನು ಹೊಸದನ್ನು ಮಾಡಿದಿರಿ? ಹೊಸದನ್ನೇನೂ ನಾವು ಸೇರಿಸಲಿಲ್ಲ. ಬದಲಾವಣೆ ತಂದು,

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹೊಂದಾಣಿಕೆ ತಂದು ಅದರಲ್ಲಿ ಸೇರಿಸಲಿಲ್ಲ. ಹೀಗಾಗಿ ಬರೀ ಹಿಂದಿನದನ್ನೇ ಹೇಳೋದಾಯ್ತು. ಆ ದಿಸೆಯಲ್ಲಿ ಇವೊತ್ತು ಬಹಳ ವಿಚಾರ ಮಾಡಬೇಕಾಗಿದೆ. ಬಹಳಷ್ಟು ನಮ್ಮೊಳಗೆ ನಾವು ತಿಳಿದುಕೊಳ್ಳಬೇಕಾಗಿದೆ. ವೈಯಕ್ತಿಕ ಸ್ವಾರ್ಥ. ವೈಯಕ್ತಿಕ ಪ್ರತಿಷ್ಠೆಗಳು ನಮಗೆ ಅಡ್ಡಿ ಬರಲಿಕ್ಕೆ ಹತ್ತಿವೆ. ವಿರಕ್ತರಿಗೂ ಅಡ್ಡಿ ಬರಲಿಕ್ಕೆ ಹತ್ತಿವೆ, ಆಚಾರ್ಯರಿಗೂ ಅಡ್ಡಿ ಬರಲಿಕ್ಕೆ ಹತ್ತಿವೆ. ಎಲ್ಲರೂ ತಿಳಿದುಕೊಂಡಿರೋವಷ್ಟರ ಮಟ್ಟಿಗೆ ಇವರಾರೂ ದೊಡ್ಡ ಮನುಷ್ಯರಲ್ಲ, ಅವರೂ ದೊಡ್ಡ ಮನುಷ್ಯರಲ್ಲ. ಅದಕ್ಕೆ ಈಗ ನಾಗನೂರು ಸ್ವಾಮಿಗಳಂಥ ಹಿರಿಯರು ನಮ್ಮ ಕುಪ್ಪೂರು ಗದ್ದಿಗೆ ಚರಮೂರ್ತಿಗಳಂಥವರು ಈ ಹಿರಿಯರು—ಇವರಿಗೆ ಆಧುನಿಕ ಓದು ಇಲ್ಲ; ಆದರೆ ಮನಸ್ಸು, ಆಧುನಿಕ ಇದೆ! ಅದನ್ನು ಮೆಚ್ಚಿಕೊಳ್ಳಬೇಕು. ಅವರು ಕೆಳಕ್ಕೆ ಕೂರಲು ಸಂಕೋಚಪಡಲಿಲ್ಲ. ಸಮಾಜಕ್ಕಾಗಿ – ಇಲ್ಲಲ್ಲ – ಅಲ್ಲಿ ಕೂರಲಿಕ್ಕೆ ತಯಾರಿದ್ದೀನಿ ಅಂತಾ ಅವರು ಅಂದಾಗ, ಮೇಲೆ ಕೆಳಗೆ ಅನ್ನೋ ಪ್ರಶ್ನೆ ತರೋದು ಬ್ಯಾಡ. ಸಮಾಜದ ಕೆಲಸ ಆಗ್ತದೋ ಇಲ್ಲೋ ಅದು ಮುಖ್ಯ. ಬಸವಣ್ಣ ಹೇಳಿದ್ದು ಇದು. ಸಿದ್ಧಲಿಂಗ ಹೇಳಿದ್ದು ಇದು, ಹಾನಗಲ್ಲ ಕುಮಾರ ಸ್ವಾಮಿಗಳು ಹೇಳಿದ್ದು ಇದು, ನಮ್ಮ ಧರ್ಮ, ನಮ್ಮ ಗುರುಗಳು ಕಲಿಸಿದ್ದು ಇದೇ. ಇದನ್ನು ನಮ್ಮ ನಾಗನೂರು ಸ್ವಾಮಿಗಳು ಬಹಳ ಚೆನ್ನಾಗಿ ಮಾಡಿಕೊಂಡು ಬರ್ತಾ ಇದ್ದಾರೆ. ಆ ದಿಸೆಯಲ್ಲಿ ನಮ್ಮಂಥಾ ವಿದ್ಯಾವಂತರು ಕೂಡ ನಾಚಿಕೊಳ್ಳುವಷ್ಟು ಬಹಳ ಉದಾರವಾಗಿ ಸಮಾಧಾನವಾಗಿ ತಮ್ಮ ಮಠದಲ್ಲೂ ಕೂಡ ಅವರು ನೆಲದ ಮೇಲೆ ಚಾಪೆ ಹಾಸಿಕೊಂಡು ಕೂತಿರ್ತಾರೆ. ಅವರು ಬೆಳಗಾವಿಯಲ್ಲಿ ಮಾಡಿದ ಕೆಲಸ ನೋಡಿದರೆ ನೀವು ದಿಗ್ಭ್ರಾಂತರಾಗ್ತೀರಿ. ಅವರು ಯಾವ ಮಠದ ಜಗದ್ಗುರುಗಳೂ ಅಲ್ಲ, ಸಂಸ್ಥಾನಿಕರಲ್ಲ, ಲಕ್ಷಗಟ್ಟಲೆ ಆಸ್ತಿ ಅವರಿಗಿಲ್ಲ, ರೊಕ್ಕಾ ಬರುವಂಥಾ ಶಾಲಾ – ಕಾಲೇಜುಗಳನ್ನು ಅವರು ತೆಗೆಸಿಲ್ಲ. ಆದರೂ ಕೂಡಾನು ಅವರು ಆ ಭಾಗದಲ್ಲಿ ಎಂಥಾ ದೊಡ್ಡ ಘಟದವರು ಇದ್ದಾರೆ ಅಂತ ಅಂದ್ರೆ ಕನ್ನಡದ ಕೋಟೆ ಕಾಯುವ ಸ್ವಾಮಿಯಾಗಿ ಅವರು ಇವೊತ್ತು ನಿಂತುಕೊಂಡಿದ್ದಾರೆ. ಅವರು ಹಾಗೆ ನಿಂತುಕೊಳ್ಳದಿದ್ದರೆ ಬೆಳಗಾವಿ ಕರ್ನಾಟಕದಲ್ಲಿ ಉಳಿಯೋದು ಕಷ್ಟ ಇತ್ತು; ಬೆಳಗಾವಿಯಲ್ಲಿ ಕನ್ನಡ ಬೆಳೆಯೋದು ಕಷ್ಟ ಇತ್ತು. ಅವರು ಆಗಿನ ಕಾಲಕ್ಕೆ ಬೋರ್ಡಿಂಗ್ ಕಟ್ಟಿದರು ಅಂತ್ಹೇಳಿ ಆಗಿನ ಕಾಲಕ್ಕೆ ಹೆಣ್ಣು ಮಕ್ಕಳ ಹಾಸ್ಟೆಲ್ ಮಾಡಿದರು ಅಂತ್ಹೇಳಿ, ಉತ್ತರ ಕರ್ನಾಟಕದ ಕೆಲವು ಲಿಂಗಾಯತರು ಇವೊತ್ತು ವಿದ್ಯಾವಂತರಾಗಿ, ಅವರ ಕುಟುಂಬಗಳೆಲ್ಲಾ ಆರ್ಥಿಕ ಸ್ಥಿತಿಯಲ್ಲಿ ಉನ್ನತಿಗೇರಲಿಕ್ಕೆ ಸಾಧ್ಯವಾಯಿತು. ಅಂಥಾ ಸ್ವಾಮಿಗಳವರದೂ ಎಂಥಾ ದೂರದೃಷ್ಟಿ! ನಾವು ಲಿಂಗಾಯತರು ಬಸವಣ್ಣನ ಪರಂಪರೆಯ ಜನ, ರೇಣುಕಾದಿ ಆಚಾರ್ಯರ ಪರಂಪರೆಯ ಜನ, ಯಾವಾಗಲೂ ಬಹಳ ವಿಚಾರಮಾಡಿ, ಮುಂದೆ ಹೆಜ್ಜೆ ಇಡಬೇಕು. ಸಿದ್ಧಲಿಂಗೇಶ್ವರರೇ ಒಂದು ವಚನದಲ್ಲಿ ಹೇಳುತ್ತಾರೆ—

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಲ್ಲರೂ ಅಹುದೆಂಬುವದು ಪ್ರಮಾಣವಲ್ಲ ಕಾಣಭೋ,
ಎಲ್ಲರೂ ಅಲ್ಲಾ ಎಂಬುದು ಪ್ರಮಾಣವಲ್ಲ ಕಾಣಭೋ,
ಅದೇನು ಕಾರಣವೆಂದೊಡೆ ಶಿವಶರಣರ ಹೃದಯದಂತಃಸ್ಥವನರಿಯರಾಗಿ
ಎನ್ನ ಅಹುದೆಂಬುವವನು, ಅಲ್ಲ ಎಂಬುದನು
ಮನ್ಮನೋಮೂರ್ತಿ ಮಹಾಲಿಂಗಾ ಗುರು ಶಿವ ಸಿದ್ದೇಸ್ವರ ಪ್ರಭುವೇ ನೀನೆ ಬಲ್ಲೆ

ಎಂದರೆ ಬಹಳ ಜನ ಹೌದು ಅಂದರೆ ಖರೆ, ಬಹಳ ಜನ ಅಲ್ಲ ಅಂದರೆ ಅದು ಸುಳ್ಳು, ಹಿಂಗೆಲ್ಲಾ ಅಲ್ಲ. ಹೌದು ಅಲ್ಲ ಅನ್ನೋದಕ್ಕಿಂತ ನಮ್ಮ ವಿವೇಕ ಏನು ಹೇಳ್ತದೆ? ನಮ್ಮ ಮನಸ್ಸು ಏನು ಹೇಳ್ತದೆ. ನಮ್ಮ ಪರಂಪರೆ ಜನ ಏನು ಹೇಳಿದ್ದಾರೆ. ಅದನ್ನು ನಾವು ವಿಚಾರ ಮಾಡೋಣ. ನಮ್ಮವರು ಎಂಥಾ ಸಮಾಜ ಕಟ್ಟಿದ್ದಾರೆ, ಜಾತಿ ಹಿಡಿದು ಸಮಾಜ ಕಟ್ಟಿಲ್ಲ, ನೀತಿ ಹಿಡಿದು ಸಮಾಜ ಕಟ್ಟಿದ್ದಾರೆ, ಹೃದಯ ಹಿಡಿದು ಸಮಾಜ ಕಟ್ಟಿದ್ದಾರೆ!

ನೆಲನೊಂದೆ ಹೊಲಗೇರಿ ಶಿವಾಲಯಕ್ಕೆ
ಜಲವೊಂದೆ ಶೌಚಾಚಮನಕ್ಕೆ
ಕುಲವೊಂದೆ ತನ್ನ ತಾನರಿದವಂಗೆ;
ಫಲವೊಂದು ಷಡುದರುಶನ ಮುಕ್ತಿಗೆ;
ನಿಲವೊಂದೆ, ಕೂಡಲಸಂಗಮದೇವಾ, ನಿಮ್ಮನರಿದವಂಗೆ.

ಎಂಥಾ ದೊಡ್ಡ ದೊಡ್ಡ ಮಾತಂಗಳನ್ನು ಹೇಳಾರೆ, ಹೇಳಾದಷ್ಟೇ ಅಲ್ಲ. ನಡೆದಾರೆ! ಪ್ರಭು ಯಾರು? ಬಸವಣ್ಣ ಯಾರು? ಮೋಳಿಗೆ ಮಾರಯ್ಯ ಯಾರು? ಎಲ್ಲರನ್ನೂ ತೆಗೆದುಕೊಳ್ರಿ, ಇವರೆಲ್ಲಾ ಬೇರೆ ಕಡೀಂದ ಬಂದವರೆ! ಬುದ್ಧಧರ್ಮ ಇವತ್ತು ಜಗತ್ತಿನಲ್ಲೆಲ್ಲಾ ಏಕೆ ಬೆಳೀತದೆ? ಬುದ್ಧ ಹಚ್ಚಿದ ದೀಪ ಈಗ ದೀಪಕ್ಕೆ ದೀಪ ಹಚ್ಚಿಕೊಂಡು, ಭೂತಾನದಲ್ಲಿದೆ, ಚೀನಾದಲ್ಲಿದೆ, ಬರ್ಮಾದಲ್ಲಿದೆ, ಬೇರೆ ಬೇರೆ ದೇಶಗಳಲ್ಲಿದೆ. ಏಸುಕ್ರಿಸ್ತನ ಧರ್ಮ, ಮಹಮದ್ ಪೈಗಂಬರನ ಧರ್ಮ ಏಕೆ ದಿನ ದಿನಕ್ಕೆ ಬೆಳೀತಾ ಇದೆ. ನಮ್ಮ ಲಿಂಗಾಯತ ಧರ್ಮ ಯಾಕೆ ಬೆಳೀತಾ ಇಲ್ಲ? ನಾವೇಕೆ ಬೆಳಿಸ್ತಾ ಇಲ್ಲ? ಅದಕ್ಕವಕಾಶ ಕೊಟ್ಟಿಲ್ಲ. ಬೇರೆಯವರು ಬರೋದಕ್ಕೆ ಆಗದ ಹಾಗೆ ನಾವು ಬಾಗಿಲು ಬಂದ್‌ಮಾಡಿಕೊಂಡಿದ್ದೀವಿ. ಬೆಕ್ಕು ನಿಮ್ಮ ಮನೇಗದಾವು, ನಾಯಿ ನಿಮ್ಮ ಮನೇಗದಾವು, ನೀವು ಕಾಲಿಗೆ ಹಾಕೋ ಮೆಟ್ಟು ನಿಮ್ಮ ಪಡಸಾಲೆಗದಾವು. ಅವಕ್ಕಿಂತ ಕಡಿಮೆಯೇ ಮನುಷ್ಯ? ಇದನ್ನು ಎಷ್ಟುಮಂದಿ ಒಪ್ತಾರೆ ನಮ್ಮಲ್ಲಿ? ಇಂಥಾದನ್ನೆಲ್ಲಾ ನಾವು ಬಿಟ್ಟಿದ್ದರಿಂದ ನಮ್ಮಿಂದ ದಲಿತರು ದೂರು ಆದರು, ಭವಿಗಳು ದೂರ ಆದರು. ಯಾರ ಸಲುವಾಗಿ ಬಸವಣ್ಣ ಪ್ರಾಣ ಕೊಟ್ಟ, ಯಾರ ಸಲುವಾಗಿ ಬಸವಣ್ಣ ತನ್ನ ಕ್ರಾಂತಿಮಾಡಿ, ಆ ಕಲ್ಯಾಣ ಕ್ರಾಂತಿ ವಿಫಲ ಆದರೂ ಕೂಡ ಹರಳಯ್ಯ ಮಧುವಯ್ಯರ ಮಕ್ಕಳ ಲಗ್ನಮಾಡಿದ, ಅದೆಲ್ಲ. ಬಲಿದಾನ ವ್ಯರ್ಥ ಆಗಬೇಕೆ? ಇದನ್ನೆಲ್ಲಾ ನಾವು ಪ್ರಶ್ನೆಮಾಡಿಕೋ ಬೇಕಾಗ್ತದೆ,

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆಶ್ರಮದ ವಟುಗಳನ್ನು ಕುರಿತು ಒಂದು ಮಾತು :

ನೀವು ಪುಣ್ಯವಂತರು. ಹಾನಗಲ್ಲ ಕುಮಾರೇಶನ ಕೃಪೆಯಲ್ಲಿ ಬೆಳೆಯುತ್ತಿದ್ದೀರಿ. ನೀವು ಒಂದು ಜ್ಞಾಪಕ ಇಟ್ಟುಕೊಳ್ಳಬೇಕು. ಸದಾ ಓದುವ ಹವ್ಯಾಸ ಬೆಳೆಸಿಕೊಳ್ಳಿ. ಹೆಚ್ಚು ಹೆಚ್ಚು ಓದುವುದರಿಂದ ನಿಮ್ಮ ಆತ್ಮಕ್ಕೊಂದು ಬಲ ಬರುತ್ತೆ ; ನಿಮ್ಮಲ್ಲೇ ಆತ್ಮವಿಶ್ವಾಸ ಮೂಡುತ್ತೆ. ಮನುಷ್ಯನ ಜೀವನದಲ್ಲಿ ಬದಲಾವಣೆ ಬರುವುದೇ ಪುಸ್ತಕದಿಂದ! ಕೇಳಿ—ಒಂದು ಖುರಾನ್ ಸುಮಾರು ನೂರು ಕೋಟಿ ಮುಸಲ್ಮಾನರನ್ನು ಒಂದು ಮಾಡುತ್ತದೆ. ಒಂದೇ ಒಂದು ಬೈಬಲ್ ನೂರ ಐವತ್ತು ಕೋಟಿ ಕ್ರಿಶ್ಚಿಯನರನ್ನು ನಿಯಂತ್ರಿಸುತ್ತೆ ; ಒಂದೇ ಒಂದು 'ದಾಸ್ ಕ್ಯಾಪಿಟಲ್' ಅನ್ನುವಂಥಾ ಮಾರ್ಕ್ಸ್‌ನ ಪುಸ್ತಕ ಪ್ರಪಂಚದ ಅರ್ಧಭಾಗ ಜನರನ್ನು ಕಮ್ಯುನಿಸ್ಟ್‌ರನ್ನಾಗಿ ಮಾಡಿದೆ. ಅಂದ ಮೇಲೆ ಪುಸ್ತಕದ ಮಹತ್ವ ಎಷ್ಟು ದೊಡ್ಡದು ತಿಳಿಯಿರಿ. ಆ ಕಾರಣ ನಾವು ಪುಸ್ತಕದ ವಿಚಾರದಲ್ಲಿ ನಿರ್ಲಕ್ಷರಾಗಬಾರದು. ಹೆಚ್ಚು ಹೆಚ್ಚು ಓದಬೇಕು ಅಂತಾ ಹಾರೈಸುತ್ತೇನೆ.

ನನ್ನ ಪೂರ್ವಾಶ್ರಮ ಸಂದರ್ಭದಲ್ಲಿ ನಾನು ಎಂ.ಎ. ವಿದ್ಯಾರ್ಥಿಯಾಗಿದ್ದಾಗಲೇ ಕುಪ್ಪೂರು ಗದ್ದಿಗೆ ಮಠಕ್ಕೆ ಹೋಗಿದ್ದೆ. ನಮ್ಮ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ನಿತ್ಯವೂ ನಡೆಸುತ್ತಿರುವ ಜ್ಞಾನ ದಾಸೋಹ ಮತ್ತು ಉದರ ದಾಸೋಹಗಳಲ್ಲಿ ಭಾಗಿಯಾಗಿದ್ದೆ. ಅವರು ಅಗಾಧ ಸೇವೆ ಸಲ್ಲಿಸುತ್ತಾ ಬಂದಿದ್ದಾರೆ. ಗುರು–ವಿರಕ್ತರ ಐಕ್ಯಕ ಸಂಗಮಸ್ಥಾನ ಅಂದರೆ ಶ್ರೀ ಕುಪ್ಪೂರು ಗದ್ದಿಗೆಮಠ; ಮಾತೃ ಹೃದಯಿಗಳೆಂದರೆ ನಮ್ಮ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು. ಇವರಿಗೂ, ಎಲ್ಲರಿಗೂ ಮತ್ತೊಮ್ಮೆ ಶರಣು ಶರಣಾರ್ಥಿಗಳು'

ವಿಶ್ವವಿದ್ಯಾನಿಲಯದ ಮಹಾನ್ ವಿದ್ವಾಂಸರೊಬ್ಬರು ತಮ್ಮ ಪ್ರಬಂಧವನ್ನು ಮಂಡಿಸಿದರು.

ಡಾ॥ ಸ್ವಾಮಿಯವರು :

ಸಮ್ಮೇಳನಾಧ್ಯಕ್ಷರಾದ ನಾಗನೂರಪ್ಪಗಳ, ಸಭಾಧ್ಯಕ್ಷರಾದ ಕುಪ್ಪೂರಜ್ಜಯ್ಯನವರ. ಉಪಸ್ಥಿತರಿರುವ ಎಲ್ಲ ಜಗದ್ಗುರುಗಳು, ಮಠಾಧಿಪತಿಗಳು, ಸಕಲ ಶಿವಾಚಾರ್ಯರುಗಳ ಪಾದಪದ್ಮಗಳಿಗೆ ಮಣಿದು,

ಭಕ್ತಮಹಾಶಯರೆ,

ವೀರಶೈವದ ಬಗ್ಗೆ ಮುಕ್ತ ಮನದ ಚರ್ಚೆ ಈಗಾಗಲೇ ಆಗಿದೆ. ಆದರೂ ಸಂಶೋಧನಾತ್ಮಕವಾಗಿ ನಾನು ಕಂಡದ್ದನ್ನು ತಮ್ಮೆಲ್ಲರ ಸಮ್ಮುಖದಲ್ಲಿ ಅರಿಕೆ ಮಾಡಿಕೊಳ್ಳಲು ನಿಂತಿದ್ದೇನೆ. ಕೃಪೆಮಾಡಿ ಲಾಲಿಸಬೇಕಾಗಿ ಪ್ರಾರ್ಥನೆ.

ವೀರಶೈವ ಒಂದು ಜಾತಿ ಅಲ್ಲ, ಅದೊಂದು ಧರ್ಮ, ವಿಶ್ವಮಾನವ ಧರ್ಮ. ನುಡಿದಂತಹ ನಡೆ ಆದರದು. ಅಂಗೈಯಲ್ಲಿ ಆಕಾಶ ತೋರುವ ಚಮತ್ಕಾರ ವೀರಶೈವಕ್ಕೆ ತಿಳಿದಿಲ್ಲ. ಅಂಜುಳಿಯಲ್ಲಿ ಲಿಂಗದೇವನನ್ನು ಮೂರ್ತೀಭವಿಸುವ ಶಕ್ತಿಯುಳ್ಳ ಭಕ್ತಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅದಕ್ಕೆ ಗೊತ್ತಿದೆ. ಭಕ್ತಿಯ ಅರ್ಥ ಬೇಡುವುದಲ್ಲ, ನೀಡುವುದು. ಹಾಗೆ ಕೋಳಿಗಳಂತೆ ಎಲ್ಲರನ್ನೂ ಪ್ರೀತಿಸುವುದು. ಜ್ಞಾನ ಯಾವನೊಬ್ಬನ ಆಸ್ತಿ ಅಲ್ಲ. ಅದರ ಮೇಲೆ ಎಲ್ಲವನಿಗೂ ಹಕ್ಕುಂಟು. ಅನ್ನವನ್ನು ಹಂಚಿ ತಿನ್ನಬೇಕು, ಜ್ಞಾನವನ್ನು ಹಂಚಿಕೊಂಡು ಬದುಕಬೇಕು. ಆತ್ಮನ ಗಮ್ಯಸ್ಥಾನ ಕಾಣದ ಕೇಳದ ಸ್ವರ್ಗ ಅಲ್ಲ, ಕಾಣುವ ಕೇಳಿಸುವ ಈ ಭೂಮಿ. ಸಕಲಕ್ಕೂ ಈ ಜಗತ್ತೇ ಆದಿ; ಆಧಾರ. 'ಸತ್ತು ಬೆರೆಸಿಹೆನೆಂದಡೆ ಕಬ್ಬಿನ ತಂದಿಯ ಮೇಲಿದಂತೆ' ಎನ್ನುತ್ತದ ವೀರಶೈವ. ಕಲ್ಪನೆಯ ಕೈಲಾಸ ಅದರ ದೃಷ್ಟಿಯಲ್ಲಿ ಅರ್ಥವಿಲ್ಲದ್ದು. ಇಹದ ಸುಂದರವಾದ, ಸೈತಾದ ಸಾಮರಸ್ಯದಿಂದ ಕೂಡಿದ ಜೀವನವೇ ಕೈಲಾಸ.

ಮನುಕುಲವನ್ನೇ ಪ್ರೀತಿಸಿದ ವೀರಶೈವವು ಉಚ್ಚ—ನೀಚ ಭಾವನೆಯನ್ನು ತೊಡೆದು ಹಾಕಿತು. ಗಂಡು ಹೆಣ್ಣು ಎಂಬ ಭೇದವನ್ನು ದೂರಮಾಡಿತು. ಬುದ್ಧ ದೇವನನ್ನು ಬಿಟ್ಟರೆ ಭರತ ಖಂಡದಲ್ಲಿ ಅಷ್ಟೇಕೆ ಇಡೀ ವಿಶ್ವದ ಇತಿಹಾಸದಲ್ಲಿ ಅತ್ಯಂತ ಮಹತ್ತರವಾದ ಸಾಮಾಜಿಕ ಕ್ರಾಂತಿಯನ್ನು ಹಮ್ಮಿಕೊಂಡ ಮಹಾನುಭಾವನೆಂದರೆ ಬಸವಣ್ಣ. ಹರಿಜನ ಗಿರಿಜನರನ್ನು ಉದ್ಧರಿಸಿದ ತಂದೆ ಅವನು. ಸ್ತ್ರೀಗೆ ಪುರುಷನಷ್ಟೆ ಸಮಾನವಾದ ಸ್ಥಾನಮಾನಗಳನ್ನು ದೊರಕಿಸಿಕೊಟ್ಟ ಅಣ್ಣ ಅವನು. ಅವನಿಂದ ಅದೆಷ್ಟೋ ಕೋಟಿ ಜನತೆ ಜೀವನದಲ್ಲಿ ಬೆಳಕುಕಂಡಿತು. ಬದುಕು ಮಾಡಿತು. ರಾಷ್ಟ್ರಕವಿ ಕುವೆಂಪು ಹೇಳುವಂತೆ ನಮ್ಮ ಹಿಂದಿನ ಯುಗಗಳಲ್ಲಿ ಉಚ್ಚ ಕುಲಗಳು ವೀರಶೈವದಂತೆ ತಮ್ಮ ಹೃದಯ ಶ್ರೀಮಂತಿಕೆಯನ್ನು ಮೆರೆದು, ತಾವೂ ಬದುಕಿ, ಅನ್ಯರಿಗೂ ಬದುಕು ಕೊಟ್ಟಿದ್ದಿದ್ದರೆ ಭಾರತಕ್ಕೆ ಅನ್ಯ ಧರ್ಮೀಯರ ದುರಾಕ್ರಮಣ ವಾಗಲಿ, ಅವರ ಪಾದಾರ್ಪಣವಾಗಲಿ ಆಗಲು ಸಾಧ್ಯವೇ ಇರುತ್ತಿರಲಿಲ್ಲ. ಈ 'ಮಾತು ಇಂದಿಗೂ ಪ್ರಸ್ತುತ.

ಈ ಶೂನ್ಯ ದರ್ಶನವನ್ನು ಪ್ರತಿಪಾದಿಸುವ ವೀರಶೈವ ಧರ್ಮ ಅನಾದಿಕಾಲದ್ದು. ಪ್ರಾಗಿತಿಹಾಸ ಕಾಲಕ್ಕೆ ಪೂರ್ವದಿಂದಲೂ ಆಸೇತು ಹಿಮಾಚಲದವರೆಗೆ ವ್ಯಾಪಿಸಿ ಕೊಂಡಿದ್ದ ಶೈವ, ಕಾಶ್ಮೀರ ಶೈವ, ತಮಿಳು ಶೈವ, ಲಾಕುಳ, ಕಾಳಾಮುಖ, ಕಾಪಾಲಿ ಮೊದಲಾದ ಪಂಥಗಳು ಪ್ರಾಚೀನ ಯುಗದಲ್ಲೇ ಮಾರ್ಪಟ್ಟು ವೀರಶೈವವಾದುವೆಂದು ಹೇಳುವುದುಂಟು. ಶೈವದ ಪ್ರಕ್ರಿಯೆಯಾದ ಕರ್ಮವನ್ನು ಧ್ವಂಸ ಮಾಡಿದ (ದಕ್ಷ ಯಜ್ಞ ವಿನಾಶಿ) ವೀರಭದ್ರನೇ ವೀರಶೈವದ ಸಂಸ್ಥಾಪಕ ಎಂಬುದು ಪ್ರತೀತಿ.

ಅದಕ್ಕೆ ನನ್ನದೊಂದು ಸಂಶೋಧನೆಯ ಟಿಪ್ಪಣಿ ಇದೆ. ಕೇಳಿ :

1. ಆರ್ಯ ದ್ರಾವಿಡ ಸಮ್ಮಿಲನ ಎಲ್ಲಿದೆಯೋ ಅಲ್ಲಿದೆ ವೀರಶೈವದ ಉಗಮ. ಆರ್ಯರ ಶಿವ, ದ್ರಾವಿಡರ ರುದ್ರ ಸೇರಿದಾಗ ಆದವನೇ 'ಶಿವರುದ್ರ' ಅದೇ ಆದಿ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

2. ದ್ರಾವಿಡರು ದೇಶಿಯರು, ಆರ್ಯರು ವಿದೇಶೀಯರು ಇವರಿಬ್ಬರ ಸಮಾಗಮದ ಅಥವಾ ಬಾಂಧವ್ಯದ ಸಂಕೇತವೇ 'ದಕ್ಷಯಾಗ'

3. ಶೈವವೇ ಬಹಳ ಕಾಲದವರೆಗೆ ಮುಂದುವರಿಯಿತು. ಆದರಲ್ಲಿ ಮೊದಲು ಅದ್ವೈತ ಹುಟ್ಟಿಕೊಂಡಿತು, ಜೈನ ಪ್ರಾಬಲ್ಯವನ್ನು ಕಡಿಮೆಮಾಡಲು. (ಜೈನ ಹುಟ್ಟಿದ್ದೂ ಬೌದ್ಧವನ್ನು ಇಳಿಸಲು)

4. ಶಂಕರಿಂದ ಎಂಟನೇ ಶತಮಾನದಲ್ಲಿ ಆರಂಭವಾದ ಅದ್ವೈತದ ಮೂಲ ಇರುವುದು ಅನಾದಿಕಾಲದಿಂದಲೂ ಬೆಳೆದುಬಂದಿದ್ದ ಶೃಂಗೇರಿಯ 'ರೇವಣಸಿದ್ಧ ಸಂಪ್ರದಾಯ'ದಲ್ಲಿ. ಅಲ್ಲಿನ ಅಧಿಪತಿ ರೇವಣಸಿದ್ಧನೇ ದೇಶಪರ್ಯಟನೆ ಮಾಡಿಕೊಂಡು ಬಂದ ಶಂಕರರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಪ್ರದಾನ ಮಾಡಿ, ಅವರಿಗೆ ಶೃಂಗೇರಿಯಲ್ಲಿ ಒಂದು ಸ್ಥಾನ ಒದಗಿಸಿರಬಹುದು. ಆ ಕಾರಣ ಚಂದ್ರಮೌಳೀಶ್ವರಲಿಂಗ ಮತ್ತು ರತ್ನಗಣಪತಿಯು ಶಂಕರರಿಗೆ ಪ್ರಾಪ್ತವಾಯಿತು ಅವರ ಪೂರ್ವಜರಾದ ರೇವಣಸಿದ್ಧ ಪರಂಪರೆಯ ಆದಿ ಜಗದ್ಗುರು ರೇವಣರಿಂದ. ಇದಕ್ಕೆ ಶಿವತತ್ತ್ವ ರತ್ನಾಕರ ಆಧಾರ.

5. ಶಂಕರರನಂತರ ಶೃಂಗೇರಿಯ ಮಠಾಧಿಪತಿಗಳಾಗಿ ಹಲವರು ಬಂದರು. ಅವರು ಬಹುಶಃ ಕೇರಳದ ಕಡೆಯವರೆಂದು ತೋರುತ್ತದೆ. ಹಿಂದಿನಿಂದಲೂ ಇದ್ದ ಪೀಠಾಧಿಪತಿಗಳಾದ ರೇವಣಸಿದ್ಧ ಸಂಪ್ರದಾಯಿಗಳಿಗೂ ಹೊಸದಾಗಿ ಅಧಿಕಾರ ಸ್ವೀಕರಿಸಿದ ಮಠಾಧಿಪತಿಗಳಿಗೂ ಅಭಿಪ್ರಾಯ ಭೇದ ಬಂದು ಅವರು ಇವರಿಂದ ಬೇರೆಯಾದರು. ತಮ್ಮದಾದ ಪೀಠವನ್ನು ಶೃಂಗೇರಿಯ ಸಮೀಪದ ಬಾಳೆಹಳ್ಳಿಯಲ್ಲಿ ಸ್ಥಾಪನೆಮಾಡಿದರು. ಅದ್ವೈತಿಗಳೊಡನೆ ಹೋರಾಡಿ ಹೊರ ಬಂದಿದ್ದರಿಂದ ಅದು 'ವೀರಪೀಠ' ಎಂದು ಕರೆಸಿಕೊಂಡಿತು. ತನ್ನ ಆದಿ ಪುರುಷ ವೀರಭದ್ರನ ಕುರುಹಾಗಿ 'ವೀರಪೀಠ' ಸ್ಥಾಪನೆ, 'ವೀರಸಿಂಹಾಸನ'ದ ಪ್ರತಿಷ್ಠಾಪನೆ ಆಗಿದ್ದಿರಬಹುದು. ಒಟ್ಟಿನಲ್ಲಿ ಬಾಳೆ ಹೊನ್ನೂರು ಮಹಾಸಂಸ್ಥಾನ ಸ್ಥಾಪನೆ ಆಯಿತು.

6. ರೇವಣಸಿದ್ಧ ಸಂಪ್ರದಾಯವರೆಲ್ಲರೂ ಸಾಮಾನ್ಯವಾಗಿ ರೇವಣಸಿದ್ಧ ಎಂದೇ ನಾಮಾಂಕಿತರಾದವರು. ಶೃಂಗೇರಿಯವರಲ್ಲಿ ಶಂಕರಾಚಾರ್ಯ, ಬಾಳೇಹಳ್ಳಿಯವರಲ್ಲಿ ರೇಣುಕಾಚಾರ್ಯ—ಈ ಆಚಾರ್ಯ ಪರಂಪರೆ ಬೆಳೆದು ಬಂತು.

7. ಬಾಳೇಹಳ್ಳಿಮಠ ಧರ್ಮಪ್ರಚಾರದ ಕೇಂದ್ರವಾಯಿತು. ಪ್ರಾಚೀನ ಸಂಪ್ರದಾಯದ ಓರ್ವ ರೇವಣಸಿದ್ಧಯತಿ ದೇಶ ಸಂಚಾರ ಕೈಕೊಂಡ. ಆಗಲೇ ಅವನು 'ದೇಶಿಕ'ನೆಂದು ಹೆಸರು ಪಡೆದಿದ್ದು. ಈ ದೇಶಿಕ ಶೈವದಿಂದ ಭಿನ್ನವಾದ ವೀರಶೈವ ಎಂಬ ಪಂಥದ ಸಂಘಟನೆಗೆ ತೊಡಗಿದ. ಕಾಂಚಿಯಲ್ಲಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವರದರಾಜಸ್ವಾಮಿ ದೇಗುಲದಲ್ಲಿ ಪವಾಡ, ಮಾಸನೂರಿನ ಬಳಿ ಯಕ್ಷ ಮಿಥುನಗಳನ್ನು ಸುಟ್ಟ ಪವಾಡ. ವಿಕ್ರಮನಿಗೆ ಖಡ್ಗ ಪ್ರದಾನಗೈದ ಪವಾಡ, ಕೊಲ್ಲಾಪುರದಲ್ಲಿ ಗೋರಕ್ಷ ಪವಾಡ ಮೆರೆದು ಕೊಲ್ಲೀಪಾಕಿಗೆ ಬಂದಾಗ, ಬಹುಶಃ ಆತ ಅಲ್ಲಿ ಶಿವೈಕ್ಯನಾಗಿರಬಹುದು. ಅದರ ಕುರುಹಾಗಿ ಕೊಲ್ಲೀಪಾಕಿಯಲ್ಲಿ ಸೋಮೇಶ್ವರಲಿಂಗದ ಸ್ಥಾಪನೆ ಆಯಿತು. ಅಂತೆಯೇ ಆಸೇತು ಹಿಮಾಚಲದ ವರೆಗೆ ಪಂಚ ಪೀಠಗಳು ಸ್ಥಾಪನೆಯಾದವು.

8. ಆದಿ ಜಗದ್ಗುರು ರೇವಣಸಿದ್ಧ ದೇಶಿಕೇಂದ್ರರ ತರುವಾಯ ಬಾಳೇಹಳ್ಳಿ ಮಠದ ಆಧಿಪತ್ಯವನ್ನು ಅನೇಕ ಜನ ರೇವಣರು ವಹಿಸಿಕೊಂಡು ನಡೆಸಿಕೊಂಡು ಬಂದರು. ಅವರಲ್ಲಿ 12 ನೆಯ ಶತಮಾನದ ರೇವಣನು ಬಿಜ್ಜಳನ ಕಾಲದಲ್ಲಿದ್ದಾತ; ಬಸವಣ್ಣನ ಸಮಕಾಲೀನ. ವೀರಶೈವ ಧರ್ಮದ ತತ್ತ್ವ, ದರ್ಶನ, ಸಿದ್ಧಾಂತ ಗಳು ಬಸವಣ್ಣನಿಗೆ ಮೆಚ್ಚಾದವು. ಈ ವ್ಯವಸ್ಥಿತ ಸಿದ್ಧಾಂತಕ್ಕೆ ತನ್ನ ಅನುಭಾವ ವನ್ನು ಬೆರೆಸಿದ. ಆ ಧರ್ಮದ ಆಶ್ರಯದಲ್ಲಿ ತನ್ನ ಸಾಮಾಜಿಕ ಸುಧಾರಣೆ ಗಳನ್ನು ಆಗುಮಾಡಿಕೊಂಡ. ಬಸವಣ್ಣನ ಮತ್ತು ಅಂದಿನ ರೇವಣರ ಮನೋ ಧರ್ಮಗಳು ಒಂದೇ ಆಗಿದ್ದವು. ಅದರಿಂದಾಗಿ ಅಣ್ಣನ ಚಳವಳಿಗೆ ರೇವಣಸಿದ್ಧ ರಿಂದ ಯೋಗ್ಯ ಚಾಲನೆ ಸಿಕ್ಕಿತು. ಒಕ್ಕಲಿಗ ಸಿದ್ಧರಾಮ. ನಟುವ ಕುಲದ ಅಲ್ಲಮ—ಹೀಗೆ ಬೇರೆ ಬೇರೆ ಜಾತಿಗಳವರೆಲ್ಲರೂ ಇದರಲ್ಲಿ ಸೇರಿದರು. 'ವೀರಶೈವ' ಒಂದಾಗಿ ಹೊರಸೂಗ್ಗಿತು.

9. ರೇವಣರು ಕಾಡ ಕುರುಬರನ್ನು ಕಲೆ ಹಾಕಿದರು. ಬಸವಣ್ಣ ಹೊಲೆಯ ಮಾದಿಗ ಎಂದೆಲ್ಲ ಅಂದು ಕರೆಯುತ್ತಿದ್ದ ಕೀಳು ಕುಲದವರನ್ನೆಲ್ಲಾ ಒಂದಾಗಿಸಿದ. ಈ ಸಾಮಾಜಿಕ ಆಂದೋಳನವು ಅಣ್ಣ ಮತ್ತು ರೇವಣರ ನೇತೃತ್ವದಲ್ಲಿ ತುಂಬಾ ಯಶಸ್ವಿಯಾಯಿತು.

10. ರೇವಣರಿಗೆ ಹಿಂದಿನಿಂದಲೂ ರಾಜಮನ್ನಣೆ ಇತ್ತು. ಇವರ ಶಾಖಾಧಿಕಾರಿ ಯೋರ್ವನು ಕಲ್ಯಾಣದ ಚಾಲುಕ್ಯ ಚಕ್ರವರ್ತಿಯ ಹೆಂಡತಿ ಸುಗ್ಗಲೆಗೆ ಶಿವದೀಕ್ಷೆ ಕೊಟ್ಟಿದ್ದ. ಅಣ್ಣ ಬಿಜ್ಜಳನ ಬಳಿ ಇದ್ದರೂ ಅವನಿಗೆ ರಾಜಾಶ್ರಯದ ಅಗತ್ಯ ಕಂಡುಬರಲಿಲ್ಲ. ಆದರೂ ಅವನ ಮಹಾಮಂತ್ರಿತ್ವ ಪ್ರಭಾವ ಬೀರಿತು. ಧರ್ಮ ಪ್ರಚಾರದಲ್ಲಿ ಆಚಾರ್ಯರೂ ಶರಣರೂ ಜೊತೆಗೂಡಿ ಹೆಗಲು ಕೊಟ್ಟರು.

11. ರೇವಣರೂ ಬಸವಣ್ಣನವರೂ ಒಂದೇ ಬಳ್ಳಿಯ ಎರಡು ಹೂವುಗಳು. ಇಬ್ಬರೂ ಮೂಲತಃ ಬ್ರಾಹ್ಮಣರೇ, ಶೈವರೆ. ಇಬ್ಬರೂ ಶೈವದಲ್ಲಿದ್ದ ಕೆಲವು ದೋಷಗಳನ್ನು ಕಂಡು ಹೊರಬಂದವರು. ರೇವಣ ವಂಶೀಯರು ಗುರುಗಳಾ ದರು, ಬಸವಣ್ಣ ಬೆಳಸಿದವರು ಜಂಗಮರಾದರು. ಇಬ್ಬರಿಗೂ ಒಂದು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇಷ್ಟಲಿಂಗ ಕೊಡಮಾಡಲ್ಪಟ್ಟಿತು. ಗುರು–ಲಿಂಗ–ಜಂಗಮಗಳು ಸ್ಥಿತವಾದವು; ಲಿಂಗ–ಅಂಗ ಸಾಮರಸ್ಯದ ಸಂಹಿತೆ ಸೃಷ್ಟಿಯಾಯಿತು ; ವೀರಶೈವ ಆಯಿತು ; ಅದೇ ಲಿಂಗಾಯತ, ಲಿಂಗವಂತ ಎಂದೂ ಕರೆಸಿಕೊಂಡಿತು. ಜಗದ್ಗುರು ರೇಣುಕ ಭಗವತ್ಪಾದರಿಂದ ಮತವಾಗಿ ಸ್ಥಾಪಿತವಾಗಿ, ಅನಂತರ ತನ್ನದೇ ಆದ ವಿಶಿಷ್ಟ ವಿನೂತನ ಮನುಕುಲೋದ್ಧಾರಕ ತತ್ತ್ವಗಳಿಂದಾಗಿ ಅದೊಂದು ವಿಶ್ವ ಧರ್ಮವಾಗಿ ಪರಿಣಾಮ ಪಡೆಯಿತು. ಲೋಕ ಸಂಗ್ರಹಕಾರ್ಯವನ್ನೇ ತನ್ನ ಮುಖ್ಯ ಗುರಿಯಾಗಿಟ್ಟುಕೊಂಡಿದ್ದರಿಂದ ಅದು 'ವಿಶ್ವಮಾನವ ಧರ್ಮ'ವಾಗಿ ಮೆರೆಯಿತು.

12. ಕಲ್ಯಾಣದ ಕ್ರಾಂತಿಯ ನಂತರ ರೇವಣರಿಗೂ ಬಸವಾನುಯಾಯಿಗಳಿಗೂ ಪರಸ್ಪರ ಭೇಟಿಯಾಗಲಿಲ್ಲ. ಅದರಿಂದಾಗಿ ಅವರಲ್ಲಿ ಸಾಮರಸ್ಯ ಬೆಳೆಯಲಿಲ್ಲ. (ಕಿಂಚಿತ್ತು ಕೂಡಿ ಬೆಳೆದದ್ದೇದರೆ ಶ್ರೀಶೈಲದಲ್ಲಿ, ಕುಪ್ಪೂರು ಗದ್ದುಗೆಯಲ್ಲಿ ಮತ್ತು ಸುತ್ತೂರಿನಲ್ಲಿ ಮಾತ್ರ ; ಬೇರೆಡೆ ಅಲ್ಲ) ಗುರುಪರಂಪರೆಯವರು ಹಳೆಯ ಶೈವ ಸಂಪ್ರದಾಯಗಳನ್ನು ಕೈಬಿಡಲಿಲ್ಲ. ತಮ್ಮವೇ ಆದ ಆಚಾರ ವಿಚಾರ ಗಳನ್ನು ಪ್ರಚಾರಮಾಡುತ್ತಾ ಹೊರಟರು. ಬಸವಣ್ಣನ ಅನುಯಾಯಿಗಳು ಅವನ ತತ್ತ್ವಗಳನ್ನು ಬೋಧಿಸುತ್ತಾ ಹೊರಟರು.

13. ಕಲ್ಯಾಣದ ರಾಜಕೀಯ ಕ್ರಾಂತಿಯಿಂದಾಗಿ ವೀರಶೈವ ಒಡೆಯಿತು. ತನ್ನ ಅಸ್ತಿತ್ವವನ್ನೇ ಅಳಿಸಿಕೊಂಡಿತು. ಆದರೆ ಆಚಾರ್ಯ ಪರಂಪರೆ ಒಂದು ಕಡೆ, ಅಣ್ಣನ ಪರಂಪರೆ ಒಂದು ಕಡೆ ತಮಗೆ ತಿಳಿದಂತೆ ಕೆಲಸ ಮಾಡಿದವು. ಎರಡರಲ್ಲೂ ಏಕತೆ ಮೂಡಲಿಲ್ಲ ; ಸಾಮರಸ್ಯವೂ ಬೆಳೆಯಲಿಲ್ಲ.

14. ವೀರಶೈವ ತನ್ನ ಅಸ್ತಿತ್ವವನ್ನು ಮತ್ತೆ ಕಂಡುಕೊಂಡದ್ದು ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ಸಂದರ್ಭದಲ್ಲಿ. ಅದನ್ನು ಸ್ಥಾಪಿಸಿದವರು ವೀರಶೈವರೇ ಆದ ಸಂಗಮವಂಶದವರು. ಅವರ ಆಶ್ರಯದಲ್ಲಿ ವೀರಶೈವ ಅನುಪ್ರಾಣಿತವಾಗಿ ಸಂಪಾದನೆಯ ಕಾರ್ಯವನ್ನು ಬಿರುಸಾಗಿ ನಡೆಸಿತು. ಶೂನ್ಯಸಂಪಾದನೆ ಮೊದಲಾದ ಹತ್ತಾರು ಸಂಪಾದನೆಗಳು ಬೆಳಕುಕಂಡವು. ನೂರೊಂದು ಜನ ವಿರಕ್ತರು ಹುಟ್ಟಿಕೊಂಡರು. ಪ್ರಚಾರ, ಪ್ರಸಾರ. ಅದ್ಭುತವಾಗಿ ನಡೆಯಿತು.

15. ವಿಜಯನಗರ ಪತನಾನಂತರ ಕೆಳದಿಯದು ಮಹತ್ವದ ಪಾತ್ರ ಎಲ್ಲ ವಿಧದಲ್ಲೂ, ವೀರಶೈವ ಸಂದರ್ಭದಲ್ಲಿ, ಅದು ವಿಶೇಷತಃ ಆಚಾರ್ಯ ಪೀಠಗಳನ್ನು ಓಲೈಸಿತು. ವಚನ ವಾಙ್ಮಯದ ಕನ್ನಡತನ ಕಾಣೆಯಾಗಿ ಸಂಸ್ಕೃತ ಮತ್ತೆ ಮೆರೆದಾಡಿತು. ವೀರಶೈವಧರ್ಮ ಶಿರೋಮಣಿ, ವೀರಶೈವಾನಂದ ಚಂದ್ರಿಕೆ ಮೊದಲಾದ ಧರ್ಮಗ್ರಂಥಗಳು ಸಂಸ್ಕೃತದಲ್ಲಿ ಹುಟ್ಟಿದವು. ಕೆಳದಿಯಿಂದಾಗಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪಂಚಪೀಠಗಳು ಪ್ರಾಬಲ್ಯಕ್ಕೆ ಬಂದವು. ಅವುಗಳಿಗೂ ಶೃಂಗೇರಿ ಪೀಠಕ್ಕೂ ಯಥೇಚ್ಛವಾದ ದಾನ ದತ್ತಿಗಳು ದೊರೆತವು. ವಿರಕ್ತಪಂಥ ರಾಜರ ಆಸ್ಥಾನ ತೊರೆದು ಜನಮನಕ್ಕೆ ಹತ್ತಿರ ವಾಗತೊಡಗಿತು, ಮಠಗಳು ಹುಟ್ಟಿಕೊಂಡವು. ಮಡಿತನ ಹೆಚ್ಚಿತು. ಮದುವೆ, ಮೈಲಿಗೆ ಎನಿಸಿತು. ವಿರಕ್ತ ಪಂಥ ಆಚಾರ್ಯ ಪಂಥದ ಹಲವು ಅಂಶಗಳನ್ನು ಒಪ್ಪಲಿಲ್ಲ. ಆದರಿಂದಾಗಿ ತನ್ನದೇ ಆದ ದಿಕ್ಕಿನಲ್ಲಿ ಗವಿಸತೊಡಗಿತು. ವೀರಶೈವ ಶುದ್ಧ ಶೈವದ ವಿರುದ್ಧದ ಬಂಡಾಯವಾದರೆ, ವಿರಕ್ತರದು ಆಚಾರ್ಯ ವಿರುದ್ಧ ಚಳವಳಿ ಆಯಿತು. ತದನಂತರ ಇವೆರಡಕ್ಕೂ ಸಲುವಳಿ ಕೂಡಿ ಬರಲೇ ಇಲ್ಲ.

16. ಇವು ಪ್ರತ್ಯೇಕ ಪಂಥ, ಪಂಗಡಗಳಾದದ್ದು ಹಾಳಾಗಲಿ, ಪ್ರಬಲ ವಿರೋಧಿ ಗಳಾಗಿ, ವಿದ್ವೇಷಿಗಳಾಗಿ ಬೆಳೆದದ್ದು ವೀರಶೈವದ ದೌರ್ಭಾಗ್ಯ. ರೇವಣರು ಆರಂಭಿಸಿ, ಬಸವಣ್ಣನವರು ಅನುಮೋದಿಸಿ ಪ್ರಾಚುರ್ಯಕ್ಕೆ ತಂದ ಮಾನವ ಮಹಾಧರ್ಮದ ಅರ್ಥವನ್ನೇ ಹಾಳುಮಾಡಿದುವು.

17. ಈ ಎರಡೂ ಪಂಥಗಳ ಕಿತ್ತಾಟವನ್ನು ಕಂಡು ರೋಸಿಹೋಗಿ ಸಾದರು, ಒಕ್ಕಲಿಗರು, ನೊಳಂಬರು, ಗೌಡ ಮನೆತನದವರು ಹೊರಬಂದರು. ತಮ್ಮವೇ ಆದ ಮಠಗಳನ್ನೂ ಮಠಾಧಿಪತಿಗಳನ್ನೂ ಕಂಡುಕೊಂಡರು. ಅಯ್ಯಾಚಾರಕ್ಕೆ ಬೇಕಾದ ಜಂಗಮರನ್ನೂ ಸೃಷ್ಟಿಸಿಕೊಂಡರು. ಮೇಲಿನ ಎರಡೂ ಪಂಥ ಗಳನ್ನು ವಿರೋಧಿಸಿ ನಿಂತರು. ಹದಿನಾರಾಣೆ ವೀರಶೈವರೆನಿಸಿದವರ ಮಡಿತನವೂ ಇವರು ಸಿಡಿದೇಳಲು ಕಾರಣವಾಯಿತು. ಪ್ರತಿಯೊಬ್ಬನನ್ನೂ ಅವನವನ ಜಾತಿ ಹಿಡಿದು ಕರೆಯಹತ್ತಿದರು; ಅವನು ನಮ್ಮವೇ ಧರ್ಮದವನು ಎಂಬ ಭಾವನೆ ಬೆಳೆಯಲೇ ಇಲ್ಲ. ಲಿಂಗ ಜಂಗಮರು ಒಂದೇ ಎಂಬ ಭಾವನೆ ದೂರ ವಾಯಿತು. ಹೀಗಾಗಿ ಮಡಿವಾಳಿ ಮಡಿವಾಳಿಯೇ ಆಗಿ ಉಳಿದ, ಕುಂಬಾರ ಕುಂಬಾರನಾಗಿಯೇ ಬದುಕಿದ, ಕಮ್ಮಾರ ಕಮ್ಮಾರನಾಗಿಯೇ ಜೀವನ ಸಾಗಿಸಿದ; ಎಲ್ಲರೂ ತಾವು ಲಿಂಗಾಯತರು, ತಾವು ವೀರಶೈವರು, ಒಬ್ಬಳೇ ತಾಯ ಮಕ್ಕಳು ಎಂಬುದನ್ನು ಮರೆತರು. ವೀರಶೈವ ಛಿದ್ರವಿಛಿದ್ರ ವಾಯಿತು. ಒಡೆದ ಹಾಲು ಹೆಪ್ಪಲ್ಲ; ಒಡೆದ ಗಾಜು ಕನ್ನಡಿ ಅಲ್ಲ!

18. ಒಂದನ್ನು ಎರಡು ಮಾಡುವವನು ಪಾಪಿ, ಎರಡನ್ನು ಒಂದು ಮಾಡುವವನು ಮಹಾತ್ಮ. ಆದಿ ಜಗದ್ಗುರು ರೇಣುಕರಂತಹ, ಜಗದಣ್ಣ ಬಸವಣ್ಣನಂತಹ ಧೀಮಂತ ವ್ಯಕ್ತಿಗಳು ಇಂದು ಲಕ್ಷ ಸಂಖ್ಯೆಯಲ್ಲಿ ಬೇಕಾಗಿದ್ದಾರೆ. ವೀರಶೈವ ಒಂದೇ, ಅದರಲ್ಲಿ ಒಡಕಿಲ್ಲ ಎಂಬುದನ್ನು ತೋರಿಕೊಡುವ ಮಹಾಚೇತನದ ಅಗತ್ಯತೆ ಇದೆ ಇಂದು.

19. ಗುರು ಜಂಗಮರು ವೀರಶೈವದ ರಕ್ಷಕರು, ಪಾಲಕರು. ವೀರಶೈವ ಧರ್ಮ–ದೀಕ್ಷೆ, ಶಿಕ್ಷೆ–ರಕ್ಷೆ, ಧರ್ಮಾಚರಣೆ ಇತ್ಯಾದಿ ಆಧ್ಯಾತ್ಮದ ಹಕ್ಕು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಗುರುಗಳದು. ಜ್ಞಾನಬೋಧೆ, ತತ್ತ್ವ ಪ್ರಚಾರ ವಿರಕ್ತರದು. ಇವೆರಡನ್ನೂ ಕೂಡಿಸಿಕೊಂಡು, ಬೋಧಿಸುವವರೇ ಧರ್ಮಕ್ಕೆ ಬಾದೆ ತಂದಾಗ ಅವರನ್ನು ತಿದ್ದಿ ನಡೆಸಿಕೊಂಡು ಹೋಗುವುದು ಉಳಿದವರ ಕರ್ತವ್ಯ. ಜಂಗಮ ಜಾತಿ ಅಲ್ಲ. ಅದು ಮಹಾಜ್ಞಾನಿಗಿರುವ ಪರ್ಯಾಯ ನಾಮ. ಯಾವ ಜ್ಞಾನಿ ಬೇಕಾದರೂ ಜಂಗಮನಾಗಿ ಬೋಧಿಸಬಹುದು.

20. 12 ನೆಯ ಶತಮಾನದಲ್ಲಿ ಶೈವದಿಂದ ಟಿಸಿಲೊಡೆದ ದ್ವೈತ, ವಿಶಿಷ್ಟಾದ್ವೈತಗಳು ಅದ್ವೈತದಂತೆಯೇ ತಮ್ಮ ತಮ್ಮ ಮಡಿತನಗಳನ್ನು ಹೆಚ್ಚಿಸಿಕೊಂಡು, ವೈಶಿಷ್ಟ್ಯಗಳನ್ನೇ ಮೆರೆದುವು. ಅವು ಕೀಳು ಕುಲದವರನ್ನು ಹತ್ತಿರ ಸೇರಿಸಲಿಲ್ಲ. ಅಸ್ಪೃಶ್ಯರು ಎಂದು ಕರೆದು ದೂರವಿರಿಸಿದವು. ಸಂಸ್ಕೃತದ ಉಚ್ಚಾರಣೆ ಶೂದ್ರರನ್ನು ಬಹಿಷ್ಕರಿಸಿತು. ಉದ್ಗ್ರಂಥಗಳ ಅಧ್ಯಯನ ಶೂದ್ರನ ಪಾಲಿಗೆ ಮೊಲದ ಕೊಂಬಾಯಿತು.

21. ಕೀಳು ಕುಲದವರು ಒಂದು ಕಡೆ, ಕುಲಗೆಟ್ಟವರು ಮತ್ತೊಂದು ಕಡೆ. ಅಂದರೆ 12ನೆಯ ಶತಮಾನದಲ್ಲಿ ಭರತಖಂಡಕ್ಕೆ ಕಾಲಿರಿಸಿ, ಅನಂತರ ರಾಜಕೀಯವಾಗಿ ಅಸ್ತಿತ್ವ ಪಡೆದುಕೊಂಡ ಯವನ ಧರ್ಮವೊಂದು ಮತಾಂತರ ಕಾರ್ಯವನ್ನು ಬಿರುಸಾಗಿ ನಡೆಸಿತು. ಆ ಧರ್ಮೀಯನಿಂದ ಮುಖಕ್ಕೆ ಉಗುಳಿಸಿಕೊಂಡವನು ಜಾತಿ ಕೆಡುತ್ತಿದ್ದ. ಅವನನ್ನು ಯಾವ ವೈದಿಕ ಪಂಥವೂ ಶುದ್ಧೀಕರಿಸಿ ಮತ್ತೆ ತನ್ನ ಕುಲಕ್ಕೆ ಸೇರಿಸಿಕೊಳ್ಳಲಿಲ್ಲ. ಜಾತಿಭ್ರಷ್ಟನಾದವನಿಗೆ ಹೊಸ ಧರ್ಮ ಹಿಡಿಸಲಿಲ್ಲ, ಹಳೇಧರ್ಮ ಸೇರಿಸಲಿಲ್ಲ. ಅದರಿಂದಾಗಿ ಬೇರೆಡೆಗೆ ತನ್ನ ನಿರ್ವಿಣ್ಣ ಕಣ್ಣು ಹರಿಸಿದ. ವೀರಶೈವ ಅವನ ರಕ್ಷೆಗೆ ಬಂತು. ಅವನನ್ನು ವೀರಶೈವನನ್ನಾಗಿಸಿ, ನಿಜವಾದ ಭಾರತೀಯನನ್ನಾಗಿಸಿ ಅವನಿಗೊಂದು ಬದುಕು ಕೊಟ್ಟಿತು.

22. ಇಂತಹ ಎಲ್ಲ ಕುಲದವರನ್ನೂ ಒಂದು ಧರ್ಮೀಯರು ಎನಿಸಿದ ವೀರಶೈವ ಒಂದು ಕಾಸ್ಮಾಪಾಲಿಟನ್ ಧರ್ಮವಾಗಿ ವಿಶ್ವಮಾನ್ಯತೆ ಪಡೆಯಿತು ಅದಕ್ಕೊಂದು ಸಂಹಿತೆ, ಅಧಿನಿಯಮಗಳನ್ನು ಅಣ್ಣ ಹಾಗೂ ರೇಣುಕರು ಸಿದ್ಧಪಡಿಸುವವರಿದ್ದರು. ಅಷ್ಟರಲ್ಲಿ ಕಲ್ಯಾಣದ ಕ್ರಾಂತಿ ಆಗಿ, ಅಣ್ಣನನ್ನು ಮುಗಿಸಿಬಿಟ್ಟರು.

23. ಸಿದ್ಧಾಂತ ಶಿಖಾಮಣಿಯ ಕರ್ತೃ ಶಿವಯೋಗಿ ಶಿವಾಚಾರ್ಯರು 12–13ನೆಯ ಶತಮಾನದವರು. ಇವರು ವೀರಶೈವ ಸಿದ್ಧಾಂತವನ್ನು ರಚಿಸಿದರು. ಚೆನ್ನಬಸವಣ್ಣ ವೀರಶೈವದ ಅನುಭಾವವನ್ನು ರೂಪಿಸಿಕೊಟ್ಟ. ಇವೆರಡೂ ಸೇರಿ ವೀರಶೈವ ಆದುವು.

24. ಶಂಕರಾಚಾರ್ಯರ ಪೀಠಾಧಿಪತಿಗಳು ರೇವಣಸಿದ್ಧ ಸಂಪ್ರದಾಯದವರು ಎಂದು ಶಿವತತ್ತ್ವ ರತ್ನಾಕರದ ಪ್ರಸ್ತಾವನೆಯಲ್ಲಿ ಎಚ್. ಕೃಷ್ಣಶಾಸ್ತ್ರಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಯವರು ಹೇಳಿದ್ದಾರೆ. ಅದನ್ನು ತಪ್ಪಾಗಿ ಅರ್ಥೈಸುವವರೂ ಇದ್ದಾರೆ. ಆದರೆ ರೇವಣಸಿದ್ಧ ಸಂಪ್ರದಾಯದ ಜಗದ್ಗುರು ರೇಣುಕಾಚಾರ್ಯರೇ ವೀರಶೈವ ಧರ್ಮ ಸಂಸ್ಥಾಪಕರು ಎಂಬುದು ಇತಿಹಾಸ ಸತ್ಯ.

25. ಅಗಸ್ತ್ಯ ಒಬ್ಬನಲ್ಲ. ಅವರೆಷ್ಟು ಜನರೊ ತಿಳಿಯದು. ರೇವಣರು ಉಪದೇಶಿಸಿದ್ದು ಪರಂಪರೆಯ ಮೂರನೆಯ ಅಗಸ್ತ್ಯರಿಗೆ.

26. ವಿಭೀಷಣ ರಾಮಾಯಣದ ವಿಭೀಷಣ ಅಲ್ಲ. ಬಹುಶಃ ಶ್ರೀಲಂಕಾದಿಂದ ಬಂದ ಯಾವನೋ ಶಿವಭಕ್ತ. ಅವನೇ ರೇವಣರನ್ನು ಅಲ್ಲಿಗೆ ಕರೆದೊಯ್ದು ಮೂರು ಕೋಟಿ ಲಿಂಗಗಳ ಪ್ರತಿಷ್ಠೆ ಮಾಡಿಸಿರಬಹುದು.

27. ಮೂರು ಕೋಟಿ ಲಿಂಗ ಸ್ಥಾಪನೆ ಸ್ಥಾವರ ಸ್ಥಾಪನೆ ಆಗಿರಲಾರದು. ಅಲ್ಲಿನ ಜನತೆಗೆ ಇಷ್ಟಲಿಂಗಧಾರಣ ಮಾಡಿಸಿ, ಅವರಿಗೊಂದು ಬದುಕು ನೀಡಿರಬಹುದು. ಸಂಖ್ಯೆಯಲ್ಲಿ ಉತ್ಪ್ರೇಕ್ಷೆ ಇದೆ ಎಂದು ಬೇರೆ ಹೇಳಬೇಕಾಗಿಲ್ಲ. ಅಣ್ಣ ಲಕ್ಷದ ಮೇಲೆ ತೊಂಬತ್ತಾರು ಸಾವಿರ ಜನ ಜಂಗಮರಿಗೆ ದಾಸೋಹ ನಡೆಸಿದ ಅಂದರೆ ಅವರನ್ನು ಉಂಡಾಡಿಗಳನ್ನಾಗಿ ಮಾಡಲಿಲ್ಲ, ದುಡಿಯಲು ಹಚ್ಚಿದ; ಸೋಮಾರಿಗಳಾಗಿದ್ದವರನ್ನು ಕಾಯಕನಿರತರಾಗುವಂತೆ ಮಾಡಿದ. ಅದೇ ಅರ್ಥ, ಮುಕ್ಕೋಟಿ ಲಿಂಗ ಸ್ಥಾಪನೆಗೆ.

28. ರುದ್ರಮುನಿ ಶಿವಾಚಾರ್ಯ ರೇವಣಸಿದ್ಧನ ಔರಸಪುತ್ರ. ಕೊಲ್ಲೀಪಾಕಿ ಶಿವಲಿಂಗದಲ್ಲಿ ರೇವಣ ಹುಟ್ಟಲಿಲ್ಲ. ಅದು ಅವನು ಶಿವೈಕ್ಯನಾದ ಮೇಲೆ ಗದ್ದುಗೆಯ ಮೇಲೆ ಸ್ಥಾಪಿಸಿದ ಶಿವಲಿಂಗ.

29. ಎಲ್ಲೆಲ್ಲಿ ಶೈವ ಮಠಗಳಿವೆಯೊ ಅಲ್ಲಲ್ಲಿ ವೀರಶೈವ ಮಹಾಮಠಗಳಿವೆ. ಉದಾಹರಣೆಗೆ ಶೃಂಗೇರಿ ಬಳಿಯ ಬಾಳೆಹೊನ್ನೂರು. ಇದೇ ರೀತಿ ಇವೆ ಕಾಶಿ, ಕಾಶ್ಮೀರ, ಕೇದಾರ, ಉಜ್ಜಯಿನಿ, ವಿಶಾಖಪಟ್ಟಣ. ಶಿವಗಂಗೆ ಮೊದಲಾದೆಡೆಗಳಲ್ಲಿ.

30. ಏಕೋರಾಮ, ವಿಶ್ವಾರಾಧ್ಯ, ದಾರುಕಾಚಾರ್ಯ—ಇವರು ಆರ್ಯ ಪ್ರತಿನಿಧಿಗಳು, ರೇಣುಕಾಚಾರ್ಯ, ಪಂಡಿತಾರಾಧ್ಯ—ಇವರು ದ್ರಾವಿಡ ಪ್ರತಿನಿಧಿಗಳು. ಆರ್ಯ—ದ್ರಾವಿಡ ಸಮ್ಮಿಲನವೇ ವೀರಶೈವ.

31. ಶೃಂಗೇರಿ ಮೊದಲಾದ ಶೈವಪೀಠಗಳ ಹಾಗೂ ರಂಭಾಪುರೀ ಮೊದಲಾದ ವೀರಶೈವ ಪೀಠಗಳ ಗುರುಗಳು ಹಿಡಿಯುವ ದಂಡ ಕಮಂಡಲ ಮೊದಲಾದ ಲಾಂಛನಗಳು ಒಂದೇ ರೀತಿಯಾಗಿವೆ.

32. ವೀರಶೈವ ಒಂದು ಜಾತಿ ಅಲ್ಲ, ಅದೊಂದು ಧರ್ಮ, ಪಂಥ ಅಲ್ಲ, ಅದೊಂದು ವಿಶ್ವಮಾನವ ಧರ್ಮ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಈ ದಿಸೆಯಲ್ಲಿ ವಿವೇಚನೆ ನಡೆಯಲಿ.

—ನಮಸ್ಕಾರ.

ಉಪನ್ಯಾಸಕರು ವಂದಿಸಿ ಕುಳಿತುಕೊಂಡರು.

ಷಟ್‌ಸ್ಥಲಬ್ರಹ್ಮಿ ಶ್ರೀ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ಶ್ರೀ ಗುರುಮರುಳುಸಿದ್ಧೇಶ್ವರರನ್ನೂ, ಹಾನಗಲ್ಲ ಕುಮಾರ ಶಿವಯೋಗಿಗಳನ್ನೂ ಮನಸಾ ಸ್ಮರಿಸಿ ಅಧ್ಯಕ್ಷೀಯ ಭಾಷಣ ಮಾಡಿದರು :

"ವೀರಶೈವಕ್ಕೊಂದು ಇತಿಹಾಸವಿದೆ, ಅಧ್ಯಯನವಿಲ್ಲ; ಅದರದೇ ಆದ ಒಂದು ಸಂಹಿತೆ ಇದೆ, ವ್ಯವಸ್ಥೆ ಇಲ್ಲ ; ಸಂಸ್ಕೃತಿ ಇದೆ, ಸಂವಹನ ಸಾಧ್ಯತೆಗಳು ಸಾಕಷ್ಟು ಇಲ್ಲ ; ದರ್ಶನವಿದೆ, ಮಾರ್ಗದರ್ಶನ ಇಲ್ಲ ; ಪರಂಪರೆ ಇದೆ, ಪರಿಣಾಮ ಇಲ್ಲ; ಅನುಭಾವ ಇದೆ, ಅನುಷ್ಠಾನ ಇಲ್ಲ; ಸಿದ್ಧಾಂತವಿದೆ, ಸಾಧನೆ ಸಿದ್ಧಿಗಳಿಲ್ಲ ; ಸಮಾಜ ಇದೆ, ಸಂಘಟನೆ ಇಲ್ಲ.

ಈ ಎಲ್ಲ 'ಇಲ್ಲ' ಗಳನ್ನು 'ಉಂಟು' ಎಂದಾಗಿಸಬೇಕೆಂಬ ಹಂಬಲ ಇಂದಿನ ಈ ವಿಚಾರ ಸಂಕಿರಣಕ್ಕಿದೆ. ವೀರಶೈವರಾದ ನಾವೆಲ್ಲರೂ ಒಂದು, ಒಂದು ಧರ್ಮದ ನೆರಳಿನಲ್ಲಿ ಬದುಕು ಮಾಡುತ್ತಿರುವವರು. ಒಬ್ಬಳೇ ತಾಯಿಯ ಮಕ್ಕಳು. ಇಂತಹ ಸದ್ಭಾವನೆಯನ್ನು ಬೆಳೆಸಿಕೊಂಡು, ವ್ಯಕ್ತಿಗತ ಕುಂದುಗಳನ್ನು ಕಡೆಗಣಿಸಿ ಸಮಾಜದ ಏಳಿಗೆಗಾಗಿ, ಸಮುದಾಯದ ಪ್ರಗತಿಗಾಗಿ ದುಡಿಯುವಂತೆ ಶ್ರೀ ಮಹಾಸನ್ನಿಧಿಯ ಸಮ್ಮುಖದಲ್ಲಿ ಸಮಾಜ ಬಾಂಧವರಾದ ತಮಗೆ ಅತ್ಯಂತ ಕಳಕಳಿಯಿಂದ ಅರಿಕೆ ಮಾಡಿಕೊಳ್ಳುವುದು ಈ ವಿಚಾರ ಸಂಕಿರಣದ ಮುಖ್ಯ ಉದ್ದೇಶವಾಗಿದೆ.

ಮಾನವ ಹೃದಯದಲ್ಲಿ ಮಹಾದೇವನನ್ನು ಕಂಡು ಗುರುತಿಸಿದ, ಗೌರವಿಸಿದ, ಪೂಜಿಸಿದ ಪುಣ್ಯ ಪುನೀತ ಸಂಸ್ಕೃತಿ, ವೀರಶೈವ ಸಂಸ್ಕೃತಿ. "ಏನಾದರೂ ಆಗು ಮೊದಲು ಮಾನವನಾಗು" ಎಂದು ಸಾರಿದ ವಿಶ್ವಮಾನವ ಧರ್ಮ ವೀರಶೈವ ಧರ್ಮ. ಅದು ಸಮಾನತೆಯನ್ನು ಸ್ವಾಗತಿಸಿದೆ, ಕಾಯಕದ ಮಹತ್ವವನ್ನು ಎತ್ತಿಹಿಡಿದಿದೆ ; ಭಕ್ತಿಯ ವ್ಯಾಜದಲ್ಲಿ ಮಾನವ ಕೋಟಿಯ ಬಾಂಧವ್ಯವನ್ನು ಬೆಸೆದಿದೆ, ಮಾನವತೆ ಎಂಬ ಮಹಾ ಮೌಲ್ಯವನ್ನು ಬೆಳಗಿಸಿದೆ ; ಸ್ತ್ರೀಗೆ ನಿಜವಾದ ಅರ್ಥದಲ್ಲಿ ಸ್ವಾತಂತ್ರ್ಯವನ್ನು ತಂದು ಕೊಟ್ಟಿದೆ, ಜಾತಿಮತ ಭೇದವಿಲ್ಲದೆ ದೀನದಲಿತರಿಗೆ ಬದುಕು ನೀಡಿದೆ. ಅಂತ್ಯಜರನ್ನು ಅಗ್ರಸ್ಥಾನದಲ್ಲಿರಿಸಿ ಶರಣ ಶ್ರೇಷ್ಠರೆಂದು ಪೂಜಿಸಿದೆ. ಇದು ವಿಶ್ವಧರ್ಮಕ್ಕಿತ್ತ ಸಂಸ್ಕೃತಿ ಸೂತ್ರಗಳು ಬರಿಯ ಬೋಧನೆಗಳಲ್ಲ, ಮನುಕುಲದ ನಿತ್ಯಾನುಷ್ಠಾನ ಯೋಗ್ಯವಾದವುಗಳು. ಹಲವು ಧರ್ಮಗಳು ಮೋಕ್ಷವನ್ನು ಪರಮ ಪುರುಷಾರ್ಥವೆಂದೂ ಅದರ ಗಳಿಕೆಯೇ ಮುಖ್ಯ ಗುರಿ ಎಂದೂ ಸಾರಿದರೆ ವೀರಶೈವ ಮೋಕ್ಷವನ್ನು ದೂರ ಇರಿಸಿತು. ಅನ್ಯಧರ್ಮಗಳಿಗೆ ಯಾವ ಮೋಕ್ಷ ಸರ್ವೋತ್ಕೃಷ್ಟವೊ ಅದು ವೀರಶೈವಕ್ಕೆ ಗೌಣ ಮೋಕ್ಷಾಪೇಕ್ಷೆಯೂ ಒಂದು ಬಗೆಯ ಸಕಾಮ ಭಕ್ತಿಯೆಂಬುದೆ ಅದರ ಭಾವನೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆ ಕಾರಣ ಮೋಕ್ಷ ವೀರಶೈವದ ಕಕ್ಷೆಯಲ್ಲಿ ಬರುವುದೇ ಇಲ್ಲ. ಧರ್ಮ ಎಂದರೆ ಮಾನವ ಧರ್ಮ; ಮಾನವೀಯ ಮೌಲ್ಯಗಳನ್ನು ಗರ್ಭೀಕರಿಸಿಕೊಂಡ ಧರ್ಮ; ಸಕಲ ಜೀವಾತ್ಮರಿಗೆ ಲೇಸನೆ ಬಯಸುವ ಸಾತ್ವಿಕ ಧರ್ಮ. ಅರ್ಥವೆಂಬುದು ಕಾಯಕ ದಿಂದ ಪ್ರಾಪ್ತವಾದ ಫಲ. 'ಕಾರೆಯ ಸೊಪ್ಪಾದರೂ ಕಾಯಕದಿಂದಲೇ ಬಂದುದಾಗ ಬೇಕು' ಎಂಬ ನಿಷ್ಠೆ ಅದರದು. ಆಧುನಿಕ ಅರ್ಥಶಾಸ್ತ್ರದ ಸೂತ್ರ ವೀರಶೈವದ್ದು. ಮೊದಲನೆಯದು ಅರ್ಥದ ಆರ್ಜನೆ (production of wealth) ಅದು ಕಾಯಕದಿಂದ ಪ್ರಾಪ್ತವಾದುದು; ಎರಡನೆಯದು ಅರ್ಥವಿತರಣೆ (distribution of wealth) ಅದು 'ದಾಸೋಹ'ದ ಮೂಲಕ ಆಗತಕ್ಕದು. ಅರ್ಥ ವ್ಯರ್ಥ ವಿನಿಯೋಗವಾಗ ಬಾರದು, ಇಲ್ಲವೇ ಒಂದೆಡೆ ಮಲೆತು ಕೂರಬಾರದು. ಸಮಾನ ಪಾಲುಗಾರಿಕೆ (co-sharing) ಸರ್ವಮಾನ್ಯ.

ಇಂತಹ ಅತ್ಯಮೂಲ್ಯ ಸಾಮಾಜಿಕ ಮೌಲ್ಯಗಳನ್ನು ಜಗತ್ತಿಗೇ ನೀಡಬಲ್ಲ ವೀರಶೈವ ಸಮಾಜ ಛಿದ್ರ ಛಿದ್ರವಾಗಿ ತನ್ನ ಗೋರಿಯನ್ನು ತಾನೇ ತೋಡಿಕೊಳ್ಳು ತ್ತಿದೆ. ಜಂಗಮ, ಬಣಜಿಗ, ಒಕ್ಕಲಿಗ, ಸಾದ, ಗೌಡ, ಕುಂಬಾರ, ಮಡಿವಾಳಿ, ನಾಯಿಂದ—ಏನೇನೋ ನೂರೊಂದು ಒಂದ ಇದರದು. ಅಣ್ಣ ಯಾವುದನ್ನು ಆಗಬಾರದು ಎಂದು ನುಡಿದನೋ ಅದನ್ನು ಅವನ ಅನುಯಾಯಿಗಳು ಎನ್ನಿಸಿಕೊಂಡ ನಾವು ಆಗುವಮಾಡಿ ಮುಗಿಸಿದ್ದೇವೆ. ಯಾವನೋ ಪುಣ್ಯಾತ್ಮ ಎಂದೋ ಒಂದು ವಿಷಬೀಜವನ್ನು ಬಿತ್ತಿದ. ಅದು ಗುರು-ವಿರಕ್ತ ಎಂಬ ಕಲಹದ ವಿಷಫಲವನ್ನು ಕೊಟ್ಟು, ಸಮಾಜದ ಸರ್ವನಾಶಕ್ಕೆ ನಾಂದಿ ಹಾಡಿತು. ಜಗದ್ಗುರು ರೇಣುಕಾದಿ ಪಂಚಾಚಾರ್ಯರಿಲ್ಲದ ವೀರಶೈವವಿಲ್ಲ, ಬಸವಣ್ಣನ ಉಸಿರಿಲ್ಲದ ವೀರಶೈವವನ್ನು ಊಹಿಸಿಕೊಳ್ಳಲು ಸಾಧ್ಯವಿಲ್ಲ. ಆಚಾರ್ಯರು ವೀರಶೈವಕ್ಕೆ ಜನ್ಮ ಕೊಟ್ಟ ತಂದೆ, ಬಸವಣ್ಣ ಲಾಲಿಸಿ ಪಾಲಿಸಿ ಪೋಷಿಸಿಕೊಂಡು ಬಂದ ತಾಯಿ; ಎಡೆಯೂರು ತೋಂಟದ ಸಿದ್ಧಲಿಂಗರು ರಕ್ಷಿಸಿದ ಹಿರಿಯ ಅಣ್ಣ. ವಸ್ತುಸ್ಥಿತಿ ಹೀಗಿರುವುದರಿಂದ ತಂದೆ ತಾಯಿಯರನ್ನು ಮರೆತು ಕಿತ್ತಾಡುವುದು ಮಕ್ಕಳಿಗೆ ಶೋಭೆ ತರುವುದಿಲ್ಲ. ಮಕ್ಕಳ ಕಿತ್ತಾಟ ಹತ್ತವಳ ಮುತ್ತೈದತನದ ನಾಶಕ್ಕೆ ಹೇತುವಾಗದಿರಲಿ; ತಂದೆಯನ್ನೇ ತಿಂದು ಸಹದೇವರಾಗುವುದು ಬೇಡ.

ವೀರಶೈವ ಮಠಗಳು ನಮ್ಮ ಸಂಸ್ಕೃತಿಯ ನೆಲೆಗಳು, ನಮ್ಮ ವಿಶಿಷ್ಟ ವಿದ್ಯಾ ಕೇಂದ್ರಗಳು, ಸೇವೆಯ ತರಬೇತಿ ತಾಣಗಳು. ಜಾತಿ ಮತ ಭೇದವಿಲ್ಲದೆ ಎಲ್ಲರಿಗೂ ಅನ್ನದಾನ ಮಾಡಿ ಎಲ್ಲ ಧರ್ಮೀಯರೂ ವಿದ್ಯಾವಂತರಾಗುವಂತೆ ಶ್ರಮಿಸಿದ, ಶ್ರಮಿಸುತ್ತಿರುವ ಪವಿತ್ರ ಕ್ಷೇತ್ರಗಳು. ಅನ್ನದಾಸೋಹ, ಜ್ಞಾನ ದಾಸೋಹ—ಇವುಗಳ ಬಗ್ಗೆ ಭಾರತದಲ್ಲಿ ಅಷ್ಟೇಕೆ ವಿಶ್ವದಲ್ಲೇ—ವೀರಶೈವ ಮಠಗಳಿಗೆ ಸರಿಗಟ್ಟುವ ಸಂಸ್ಥೆ ಇನ್ನೊಂದು ಹುಟ್ಟಿಲ್ಲ; ಇಂತಹ ಮಠಗಳನ್ನು ಪುನರುಜ್ಜೀವಗೊಳಿಸುವ ಹಿರಿಯ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಉದ್ದೇಶ ಈ ವಿಚಾರ ಸಂಕಿರಣಕ್ಕಿದೆ. ವೀರಶೈವ ಯುವಕರು ಹೇಡಿಗಳಲ್ಲ, ಅವರು ತೇಜಸ್ವಿಗಳು, ಓಜಸ್ವಿಗಳು. ಅವರ ಬಲವನ್ನು ಸಂವರ್ಧಿಸುವ ಮೂಲಕ ಸಮಾಜ ಪ್ರಗತಿ, ರಾಷ್ಟ್ರಹಿತ ಹಾಗೂ ಸಮುದಾಯದ ಶ್ರೇಯಸ್ಸಿನ ಕಡೆಗೆ ಅವರ ಗಮನ ಹರಿಸುವ ಸ್ತುತ್ಯ ಪ್ರಯತ್ನ ಈ ವಿಚಾರ ಸಂಕಿರಣದ್ದು.

ಸಮಾಜ ಒಂದು ಸಮುದ್ರವಿದ್ದ ಹಾಗೆ. ಯಾವನೇ ವ್ಯಕ್ತಿ ಅದಕ್ಕೆ ನೂರು ಕೊಡ ನೀರು ಹಾಕಿದರಾಗಲಿ ಅದರಿಂದ ನೂರು ಕೊಡ ನೀರು ತೆಗೆದರಾಗಲಿ ಅದು ಹೆಚ್ಚುವುದೂ ಇಲ್ಲ, ಕಡಿಮೆಯಾಗುವುದೂ ಇಲ್ಲ. ಆದರೆ ಸಮಾಜದಲ್ಲಿ ಹುಟ್ಟಿ ಬೆಳೆಯುತ್ತಿರುವುದರಿಂದ ಎಲ್ಲ ವ್ಯಕ್ತಿಯ ಕರ್ತವ್ಯ ಇದೆ. ಸನ್ಯಾಸಿಯಾಗಿರಲಿ, ಸಂಸಾರಿಯಾಗಿರಲಿ ನಿಷ್ಠೆಯಿಂದ ನಿರ್ವಹಿಸಲೇಬೇಕು ವ್ಯಕ್ತಿ. ಆ ಕಾರಣ ಪ್ರತಿಯೊಬ್ಬ ವೀರಶೈವನೂ ತನ್ನ ಧರ್ಮಸ್ವರೂಪವನ್ನು ಮೊದಲು ತಿಳಿಯಲು ಯತ್ನಿಸಬೇಕು. ಜಗದ್ಗುರು ರೇಣುಕ ಭಗವತ್ಪಾದರದು ಉಗಮಕಾಲ, ಬಸವಾದಿ ಪ್ರಮಥರದು ಉಚ್ಛ್ರಾಯ ಕಾಲ. ಎಡೆಯೂರು ಸಿದ್ಧಲಿಂಗೇಶ್ವರರದು ಪುನರುತ್ಥಾನ ಕಾಲ, ನಮ್ಮ ನಿಮ್ಮ ಈ ದಿನಗಳದ್ದು ವೀರಶೈವದ ಅವನತಿ ಇಲ್ಲವೇ ಅಧೋಗತಿಯ ಕಾಲ. ಇಂದಾದರೂ ನಾವು ಅರಿತು ಬಾಳದಿದ್ದರೆ ವೀರಶೈವ ಪತನ ಪದವಿಯನ್ನು ಪಡೆಯುವುದು ನಿಶ್ಚಿತ. ಧರ್ಮದ ನಾಶ, ಸಮಾಜದ ನಾಶ; ತನ್ಮೂಲಕ ಮನುಕುಲದ ಸರ್ವನಾಶ. ಆದ್ದರಿಂದ ನಾವು ಮೊದಲು ಒಂದಾಗಿ ಚೆಂದಾಗಿ ಬಾಳೋಣ. ನಾವು ಬದುಕಿ ಅನ್ಯಧರ್ಮದವರಿಗೂ ಬದುಕು ಕೊಡೋಣ."

ಅಂತ್ಯದಲ್ಲಿ ಎಲ್ಲರಿಗೂ ವಂದಿಸಿ ಕುಳಿತರು.

ಕಡೆಯಲ್ಲಿ, ಶಿವರುದ್ರಯ್ಯ ವಂದನಾರ್ಪಣೆ ಮಾಡುತ್ತಾ, ವೀರಶೈವ ಸಮಾಜದ ಸಂಘಟನೆಯು ಕಾರ್ಯ ಮಠಾಧಿಪತಿಗಳೊಬ್ಬರಿಂದಲೇ ಆಗುವಂತಹುದಲ್ಲ. ಎಲ್ಲ ಭಕ್ತರೂ ಶ್ರಮಿಸಬೇಕು. ಈ ಅರಿವು ಮತ್ತು ಮುನ್ನೋಟ ಹಾನಗಲ್ ಕುಮಾರ ಸ್ವಾಮಿಗಳವರಿಗೆ ಇದ್ದುದರಿಂದಲೇ ಅವರು ಅಖಿಲ ಭಾರತ ವೀರಶೈವ ಮಹಾಸಭೆ ಯನ್ನು ಸ್ಥಾಪಿಸಿದರು. ಸ್ವಾಮಿಗಳು ಒಂದು ಕಡೆ, ಸಮಾಜ ಬಾಂಧವರು ಮತ್ತೊಂದು ಕಡೆ ಸಂಘಟನೆಗಾಗಿ ದುಡಿಯಲಿ ಎಂಬುದು ಅವರ ಹಿರಿಯ ಆಸೆ. ಸಾಮಾಜಿಕರಾದ ನಾವು ವೀರಶೈವ ಪಂಗಡ, ಒಳಪಂಗಡಗಳ ನಡುವೆ ವಿವಾಹ ಸಂಬಂಧಗಳನ್ನು ಏರ್ಪಡಿಸುವ ಒಂದೇ ಒಂದು ಮಹತ್ ಕಾರ್ಯದ ಮೂಲಕ ಭಾವೈಕ್ಯವನ್ನು ಸಾಧಿಸಬಹುದು. ಅದನ್ನು ಬಿಟ್ಟರೆ ಬೇರೆ ಯಾವುದರಿಂದಲೂ ವೀರಶೈವ ಸಮಾಜದ ಸಂಘಟನೆ, ಸಮನ್ವಯ, ಭಾವೈಕ್ಯತೆ ಸಾಧ್ಯವಿಲ್ಲ ಎಂದು ಒತ್ತಿ ಹೇಳಿದರು.

ಮಂಗಳದೊಡನೆ ಸಭೆ ಮುಕ್ತಾಯಗೊಂಡಿತು.

—✶—

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆರು

ಮರುದಿನ ಮಧ್ಯಾಹ್ನ
ಶಿವಾನುಭವ ಸಮ್ಮೇಳನದ ಅಂಗವಾಗಿ
ಧಾರ್ಮಿಕ ಗೋಷ್ಠಿ.

ಗೋಷ್ಠಿಯ ಅಧ್ಯಕ್ಷರು ನಾಗನೂರು ರುದ್ರಾಕ್ಷಿಮಠದ ನಿಯೋಜಿತಾಧ್ಯಕ್ಷರಾದ ಶ್ರೀ ರಾಜಶೇಖರ ಸ್ವಾಮಿಗಳು.

ಮಂದಿರದ ಮುಂದೆ ನಿಂತಿದ್ದ ಪ್ರಕಟಣಾ ಫಲಕವು ಮೇಲಿನ ಒಕ್ಕಣಿಕೆಯನ್ನು ಪ್ರಸಿದ್ಧಪಡಿಸಿತ್ತು. ಪ್ರಾತರ್ವಿಧಿಗಳೆಲ್ಲಾ ಮುಗಿದಮೇಲೆ ಶ್ರೀ ಕುಮಾರೇಶ್ವರನ ಗುಡಿಯ ಮುಂದೆ ನಿರ್ಮಿಸಿದ ಸಭಾಂಗಣದಲ್ಲಿ ಸಭೆ ಸಮಾವೇಶಗೊಂಡಿತು.

ಸಾಂಪ್ರದಾಯಿಕವಾಗಿ ಸ್ವಾಗತ ಇತ್ಯಾದಿಗಳು ಆಗಿ ಮುಗಿದವು. ಒಬ್ಬಿಬ್ಬರು ಸ್ವಾಮಿಗಳು ಧಾರ್ಮಿಕ ವಿಷಯ ಕುರಿತು ಮಾತನಾಡಿದರು. ಅನಂತರ ಶಿವರುದ್ರಯ್ಯ ಎದ್ದುನಿಂತು ಶ್ರೀ ರಾಜಶೇಖರಸ್ವಾಮಿಗಳನ್ನು ಶಿವಾನುಭವ ನಡೆಸಿ ಕೊಡಬೇಕೆಂದು ಪ್ರಾರ್ಥಿಸಿಕೊಂಡನು. ಆದಕ್ಕೆ ಮೊದಲು ಅವರ ಪರಿಚಯನ್ನು ಸಭೆಗೆ ಮಾಡಿ ಕೊಟ್ಟನು.

'ಹಸಿದ ಹೊಟ್ಟೆಗಳಿಗೆ ಅನ್ನವಾಗುತ್ತೇನೆ ; ಶಿವನ ಸೇವೆಗೆ ನಾನು ಅರ್ಪಿತ ವಸ್ತುವಾಗುತ್ತೇನೆ' ಎಂದು ತನ್ನನ್ನೇ ತಾನು ಅರ್ಪಿಸಿಕೊಂಡಿರುವ 'ಮಹಾಪ್ರಸಾದಿ' ನಾಗನೂರ ಶ್ರೀ ಶಿವಬಸವ ಸ್ವಾಮಿಗಳ ಕರಕಮಲ ಸಂಜಾತರೂ, ಅವರ ಕಾರುಣ್ಯದ ಶಿಶುವೂ ಆದ ಶ್ರೀ ರಾಜಶೇಖರ ಸ್ವಾಮಿಗಳನ್ನು ಭಕ್ತಿಪೂರ್ವಕವಾಗಿ ಸ್ವಾಗತಿಸುತ್ತಾ, ಅವರ ಕಿರು ಪರಿಚಯನ್ನು ಸಭೆಗೆ ಮಾಡಿಕೊಡಲು ಆಜ್ಞಾಪ್ತನಾಗಿ ನಿಂತಿದ್ದೇನೆ.

ಪೂಜ್ಯರೇ,

ಬೆಳುವಲದ ನಾಡಿನ ಧವಳಮಯ ಬೆಳೆಸೊ ಎನ್ನುವಂತೆ ಬೆಳಗುತ್ತಿರುವ ನಾಗನೂರಿನಲ್ಲಿ ಏಳು ವೀರಶೈವ ಮಠಗಳಿವೆ. ಅವುಗಳಲ್ಲಿ ಐದು ಗುರುಮಠಗಳು, ಎರಡು ವಿರಕ್ತಮಠಗಳು. ಈ ವಿರಕ್ತ ಮಠಗಳಲ್ಲಿ ರುದ್ರಾಕ್ಷಿ ಮಠವೂ ಒಂದು. ಇದರ ಮೂಲ ಸಂಸ್ಥಾಪಕರು ಶ್ರೀ ಅಲ್ಲಮಪ್ರಭುಗಳು ಮತ್ತು ಶ್ರೀ ಸಿದ್ಧರಾಮ ಸ್ವಾಮಿಗಳು. ಇವರಿಬ್ಬರೂ ಅನುಪಮ ವಿರಕ್ತರೂ, ಅದ್ವಿತೀಯ ಸಿದ್ಧಿಪುರುಷರೂ ಆದ ಗರಗದ ಶ್ರೀ ಮಡಿವಾಳ ಮಹಾಸ್ವಾಮಿಗಳ ಸಹಪಾಠಿಗಳು. ಒಮ್ಮೆ ಕಿತ್ತೂರ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅರಸು ಶಿವಲಿಂಗರುದ್ರಸರ್ಜನು ಸ್ವಾಮಿಗಳ ಮನೋನಿಗ್ರಹವನ್ನು ಪರೀಕ್ಷಿಸಲು ಅವರ ಬಳಿ ರೂಪವತಿಯರನ್ನು ಕಳುಹಿಸಿದನಂತೆ. ತುಂಬು ಜವ್ವನೆಯರು ತಮ್ಮ ಹಾವ ಭಾವ ವಿಲಾಸಗಳಿಂದ ದೇಹ ಪ್ರದರ್ಶನ ಮಾಡಿದರಂತೆ! ಈ ಮೂವರು ಮಹನೀಯರನ್ನು ಬಿಟ್ಟು ಉಳಿದ ಎಲ್ಲ ಸ್ವಾಮಿಗಳು ಸ್ಖಲಿತವೀರ್ಯರಾಗಿದ್ದರಂತೆ ; ಈ ಮೂರು ಮೂರ್ತಿಗಳು ಮಾತ್ರ ವಿಚಲಿತರಾಗದೆ, ಸ್ಥಿತಪ್ರಜ್ಞರಾಗಿ ಕುಳಿತುಬಿಟ್ಟಿದ್ದರಂತೆ. ರಾಜನು ಮೂವರಿಗೂ ಶರಣು ಸಮರ್ಪಿಸಿ ಬೀಳ್ಕೊಟ್ಟನಂತೆ.

ಈ ಮೂವರಲ್ಲಿ ಮಡಿವಾಳಪ್ಪಗಳು ಗರಗದಲ್ಲಿ ನೆಲೆನಿಂತರು. ಶ್ರೀ ಪ್ರಭು ಸ್ವಾಮಿಗಳು ಮತ್ತು ಸಿದ್ಧರಾಮರು ಹಾದಿ ತುಳಿಯುತ್ತಾ ನಾಗನೂರಿಗೆ ಬಂದು ಒಂದು ಚಿಕ್ಕ ಮಠವನ್ನು ಸ್ಥಾಪಿಸಿ ಅದಕ್ಕೆ ರುದ್ರಾಕ್ಷಿಮಠ ಎಂದು ಹೆಸರಿಟ್ಟರು. ಸನಿಹದಲ್ಲಿ ಒಂದು ಕೊಳವನ್ನು ನಿರ್ಮಿಸಿ ಊರಿಗೆ ಆಸರೆ ಏರ್ಪಡಿಸಿದರು. ಇವರ ಸಮಾಧಿ ಸ್ಥಳವೇ ಇಂದು ಚೌಕಿಮಠವೆಂದು ಪ್ರಸಿದ್ಧವಾಗಿದೆ.

ಈ ಗುರುದ್ವಯರ ಅನಂತರ ಮೂರನೆಯವರಾಗಿ ಮತ್ತೊಬ್ಬರು ಶ್ರೀ ಸಿದ್ಧ ರಾಮೇಶ್ವರರು ಅಧಿಕಾರಕ್ಕೆ ಬಂದರು. ಅವರ ಕಾಲದಲ್ಲಿ ಶ್ರೀಮಠವು ಅತ್ಯಂತ ಪ್ರಸಿದ್ಧಿಗೆ ಬಂತು. ಶ್ರೀಗಳವರು ಲಿಂಗಪೂಜಾ ಪಾರಾಯಣರು, ವ್ರತನಿಷ್ಠರು, ಒಂದೇ ಒಂದು ಕೌಪೀನ, ಒಂದು ಉತ್ತರೀಯ ಇವು ಹೊರತು ಬೇರಾವ ಸಂಪತ್ತೂ ಅವರಲ್ಲಿರಲಿಲ್ಲ. ಅವರು ತಮ್ಮ ಶಿವಾನುಷ್ಠಾನದ ಮೂಲಕ ಊರಿನ ಮನೆ ಹೊಕ್ಕಿದ್ದ ಬ್ರಹ್ಮಪಿಶಾಚವನ್ನು ಓಡಿಸಿದರಂತೆ! ಅವರ ಕಾಲದಲ್ಲಿ ನಾಗನೂರಮಠ ದಾಸೋಹದಮಠ ಎನಿಸಿಕೊಂಡಿತು. ಅವರಾದ ಮೇಲೆ ನಾಲ್ಕನೆಯವರಾಗಿ ಶ್ರೀ ಗುರುಸಿದ್ಧ ಸ್ವಾಮಿಗಳು, ಐದನೆಯವರಾಗಿ ಶ್ರೀ ಗುರುಲಿಂಗ ಸ್ವಾಮಿಗಳು ಆರನೆಯವರಾಗಿ ಶ್ರೀ ವೀರಭದ್ರಸ್ವಾಮಿಗಳು ರುದ್ರಾಕ್ಷಿ ಮಠದ ಅಧಿಪತಿಗಳಾಗಿ ಬಂದರು. ಅವರನಂತರ ಏಳನೆಯವರಾಗಿ ಬಂದವರೇ ಮಹಾಪ್ರಸಾದಿ ಶ್ರೀ ಶಿವಬಸವ ಸ್ವಾಮಿಗಳು.

ಶಿವಬಸವಜ್ಜನವರನ್ನು ನಿನ್ನೆಯೇ ಪರಿಚಯಿಸಲಾಗಿದೆ. ಇಂದು ನಾಗನೂರು ಶ್ರೀ ರುದ್ರಾಕ್ಷಿಮಠದ ಎಂಟನೆಯ ಉತ್ತರಾಧಿಕಾರಿಗಳಾಗಿ ನಿಯೋಜಿತರಾಗಿರುವ ಶ್ರೀ ರಾಜಶೇಖರಸ್ವಾಮಿಗಳನ್ನು ಪರಿಚಯಿಸಲು ಯತ್ನಿಸುತ್ತೇನೆ.

ಮಹಾರಾಷ್ಟ್ರ ರಾಜ್ಯಕ್ಕೆ ಸೇರಿದ ಕೋವಾಡ ಒಂದು ಚಿಕ್ಕ ಗ್ರಾಮ. ಇದು ತಾಮ್ರಪರ್ಣಿ ನದೀ ತೀರದಲ್ಲಿದೆ. ಕೋವಾಡ ಶಿವಶರಣ ಶರಣೆಯರ ಆವಾಸಸ್ಥಾನ. ಅಲ್ಲಿರುವ ಹತ್ತಾರು ಜನ ಜಂಗಮ ಜ್ಯೋತಿಗಳಲ್ಲಿ ಶ್ರೀ ಬಸವಯ್ಯನವರು ಒಬ್ಬರು. ಗಿರಿಜವ್ವ ಅವರ ಪುಣ್ಯಪತ್ನಿ. ಆ ತಾಯಿಯ ಗರ್ಭದಲ್ಲಿ ಶಿವಾನಂದ, ಮಲ್ಲಿಕಾರ್ಜುನ, ಅಂಬವ್ವ, ಮಾರ್ಕಂಡೇಯ ಮತ್ತು ರಾಜಶೇಖರ ಎಂಬ ಐದು ಮಕ್ಕಳು ಜನಿಸಿದರು. ನಮ್ಮ ನಿಯೋಜಿತಾಧಿಕಾರಿಗಳೇ ಐದನೆಯ ಹಾಗೂ ಕಿರಿಯ ಸುಪುತ್ರರು. ಇವರು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹುಟ್ಟಿದು ಕ್ರಿ. ಶ. 1929 ಅಕ್ಟೋಬರ್ 15 ಸೋಮವಾರ, ಅಂದಿದದ್ದು ಪೂರ್ವಾ ಭಾದ್ರ ನಕ್ಷತ್ರ.

ಯಾರ ಶಾಪವೂ ಅಥವಾ ಶಿವಸಂಕಲ್ಪವೊ ಕಾಣೆ ಇಂತಹ ಕಾರಣಪುರುಷರು ಬಹುಬೇಗ ತಮ್ಮ ತಂದೆಗಳನ್ನು ಕಳೆದುಕೊಳ್ಳುತ್ತಾರೆ. ಆ ಸಂಬಂಧದಲ್ಲಿ ನಮ್ಮ ರಾಜಶೇಖರ ಸ್ವಾಮಿಗಳು ಹೊರತಲ್ಲ. ಅವರಿನ್ನೂ ಒಂದು ವರ್ಷದ ಮಗುವಾಗಿ ದ್ದಾಗಲೇ ತಂದೆ ಬಸವಯ್ಯನವರು ಶಿವನಪಾದ ಸೇರಿದರು. ತಾಯಿಗೆ ಕಿರಿಯ ಮಗನ ವಿದ್ಯಾಪ್ರಗತಿಯ ಬಗೆಗೆ ವಿಶೇಷ ಕಾಳಜಿ. ಅದಕ್ಕಾಗಿ ತಮ್ಮ ಸೋದರರ ಮಡಿಲಲ್ಲಿ ಹಾಕಿದಳು. ಆ ಸೋದರರೇ ನಮ್ಮ ಇಂದಿನ ಯಮಕನ ಮರಡಿಯ ಹುಣಸೇಕೊಳ್ಳ ಮಠದ ಅಧಿಪತಿಗಳಾದ ಶ್ರೀ ನಿ. ಪ್ರ. ಶ್ರೀ ಗುರುಸಿದ್ಧಸ್ವಾಮಿಗಳು. ಶ್ರೀಗಳವರು ಎಳೆಯ ರಾಜಶೇಖರನನ್ನು ಹಾಲೂಡಿ, ತಮ್ಮ ಮಗ್ಗುಲಲ್ಲೇ ಮಲಗಿಸಿಕೊಂಡು ತಾಯಿಯಂತೆ ಜೋಪಾನ ಮಾಡಿದರು. ಅವರ ವಾತ್ಸಲ್ಯದ ವಕ್ಷದಲ್ಲಿ ಬೆಳೆದ ಶಿಶು ಮೆಟ್ರಿಕ್‌ವರೆಗೆ ಓದಿತು. ಅನಂತರ ಬೆಂಗಳೂರಲ್ಲಿ ಉಚ್ಚ ಶಿಕ್ಷಣ.

ಶಿಕ್ಷಣ ಇನ್ನೂ ಮುಗಿದಿರಲಿಲ್ಲ, ಆಗಲೇ ನಾಗನೂರಜ್ಜನವರಿಗೆ ಈ ವಟುವಿನ ಮೇಲೆ ಇಷ್ಟವಾಯಿತು. ಆಡಳಿತದಲ್ಲಿ, ಅನುಷ್ಠಾನದಲ್ಲಿ, ದಾಸೋಹ ಭಾವದಲ್ಲಿ, ದಯಾಗುಣದಲ್ಲಿ ಅದ್ವಿತೀಯನೆನಿಸಿದ ರಾಜಶೇಖರನನ್ನು ಸುಮಾರು ಹದಿನೆಂಟು ವರ್ಷಗಳವರೆಗೆ ಪರೀಕ್ಷಿಸಿದರು. ಅವನ ತ್ರಿಕರಣ ಶುದ್ಧಿಯನ್ನು ಕಂಡು ಅವನೇ ತಮ್ಮ ಮಠದ ಉತ್ತರಾಧಿಕಾರಿಯಾಗಲು ಅರ್ಹ ಎಂದು ನಿರ್ಧರಿಸಿದರು. ಆದರೆ ಯಮಕನ ಮರಡಿಯ ಹುಣಸೇಕೊಳ್ಳದ ಮಠದ ಸ್ವಾಮಿಗಳು ಚಿಕ್ಕಂದಿನಿಂದಲೂ ಪ್ರೇಮದಿಂದ ಬೆಳೆಸಿ, ಅವನಿಗೆ ಶಿಕ್ಷಣ ಕೊಡಿಸಿದ್ದು ತಮ್ಮ ಮಠಕ್ಕೆ ಉತ್ತರಾಧಿಕಾರಿ ಯನ್ನಾಗಿಸಲು. ಇದನ್ನು ಚೆನ್ನಾಗಿ ತಿಳಿದಿದ್ದ ನಾಗನೂರ ಶ್ರೀಗಳು ಘೋಡಗೇರಿ ಸ್ವಾಮಿಗಳೊಂದಿಗೆ ಒಂದುದಿನ ರಾತ್ರಿ ನೇರವಾಗಿ ಹುಣಸೇಕೊಳ್ಳ ಮಠಕ್ಕೆ ದಯಮಾಡಿ ಸಿದರು. ಶ್ರೀ ಗುರುಸಿದ್ಧಸ್ವಾಮಿಗಳಿಗೆ ಆಶ್ಚರ್ಯ.

'ಏನು ಬುದ್ಧಿ ಅನಿರೀಕ್ಷಿತ !'

'ಅಂತಹ ಒಂದು ಮಹತ್ವದ ಕಾರ್ಯ ಇತ್ತು, ಆದಕ್ಕಾಗಿ ಬಂದೆ,'

'ಅಪ್ಪಣೆಯಾಗಲಿ ಬುದ್ಧೀ'

'ಮೊದಲು ನನ್ನ ಕೋರಿಕೆಯನ್ನು ನೆರವೇರಿಸಿಕೊಡುತ್ತೇನೆ ಅನ್ನುವುದಾದರೆ ಮಾತ್ರ'

'ಈ ಶಿರಸ್ಸನ್ನು ತೆಗೆದಿಡು ಎಂದರೆ ಈ ಕೂಡಲೇ ಅದನ್ನು ತಮಗೆ ಅರ್ಪಿಸಲು ಸಿದ್ಧ; ಅಪ್ಪಣೆಯಾಗಲಿ.'

'ಒಂದು ವೇಳೆ ಬೇಡಿಕೆ ಮುಂದಿಟ್ಟರೆ, ಬೇಸರಪಟ್ಟುಕೊಂಡರ ?'

'ಎಂದಿಗೂ ಸಾಧ್ಯವಿಲ್ಲ ಅಪ್ಪಣೆಯಾಗಲಿ'

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

'ನನ್ನ ಪ್ರಾರ್ಥನೆ ಇಷ್ಟೆ.'

'ಅದು ಪ್ರಾರ್ಥನೆ ಅಲ್ಲ, ಆಜ್ಞೆ! ಹೂಂ...ಆಗಲಿ'

'ಆಜ್ಞೆಯೋ ಅನುಗ್ರಹವೋ ಅಂತೂ ನನಗೆ ವಚನ ಕೊಡಿರಿ'

'ಕೊಟ್ಟೆ ಬುದ್ಧಿ....ತಾವು ಕೇಳಿದ್ದು ನನ್ನಲ್ಲಿದ್ದರೆ ಅದನ್ನು ಈ ಕ್ಷಣವೇ ಅರ್ಪಿಸುತ್ತೇನೆ. ಇದಕ್ಕೆ ತಮ್ಮ ಪಾದವೇ ಸಾಕ್ಷಿ!'

'ನಾಗನೂರು ಮಠಕ್ಕೆ ನಿಮ್ಮಲ್ಲಿರುವ ಮರಿದೇವರನ್ನು ಕೊಡಬೇಕು'

'ಹ್ಞಾ!'

'ಬೇಸರವಾಯಿತ'

'ಹಾಗಲ್ಲ...ಇದರಲ್ಲಿ ನನ್ನ ಸ್ವಾರ್ಥವೇನೇ ಇದ್ದರೂ ದೂರ ಇರಿಸುತ್ತೇನೆ. ಆದರ ಅವನ ತಾಯಿ ಇದ್ದಾರೆ ಅವರನ್ನು ಒಂದು ಮಾತು ಕೇಳ್ತೇನೆ,'

'ಕೇಳಿ'

ಕೇಳಿದ್ದಾಯಿತು; ತಾಯಿ ಒಪ್ಪಿದ್ದೂ ಆಯಿತು.

'ಬುದ್ಧಿ ತಾಯಿ ಒಪ್ಪಿದ್ದಾರೆ'

'ಹಾಗಾದರೆ ನಮಸ್ಕಾರ ಹಾಕಿ'

ತಾಯಿ ಗಿರಿಜವ್ವೆ ಮತ್ತು ಹುಣಸೇಕೊಳ್ಳ ಮಠದ ಶ್ರೀ ಗುರುಸಿದ್ಧಸ್ವಾಮಿಗಳು ಸಾಷ್ಟಾಂಗ ನಮಸ್ಕಾರ ಮಾಡಿದರು.

ಹೀಗೆ ಗುರುಗಳೇ ಮನಸಾ ಮೆಚ್ಚಿ ಸ್ವೀಕರಿಸಿದ ಅನರ್ಘ್ಯರತ್ನ ಈ ನಮ್ಮ ರಾಜಶೇಖರಸ್ವಾಮಿಗಳು. ಬಹುಶ್ರುತರೂ, ಬಹುಭಾಷಾ ವಿಶಾರದರೂ ಆದ ಶ್ರೀ ರಾಜಶೇಖರಸ್ವಾಮಿಗಳು ಇಂದಿನ ಶಿವಾನುಭವವನ್ನು ನಡೆಸಿಕೊಡಲಿದ್ದಾರೆ. ಮೊದಲು ಡಾ|| ಶಿವಪ್ರಸಾದ್‌ರವರು ತಮ್ಮ ಪ್ರಬಂಧವನ್ನು ಮಂಡಿಸುತ್ತಾರೆ.

ತರುಣ ತೇಜಸ್ವಿ ಡಾ|| ಶಿವಪ್ರಸಾದ್ ಎದ್ದುನಿಂತರು; ಭಾಷಣ ಆರಂಭಿಸಿದರು.

"ಬಳಸಿದಿರದ್ವೈತವನು ಬಾಹ್ಯದೊಳು'

ಎಂದು ನಿಜಗುಣರು ಹೇಳಿದ ಮಾತು ಬಾಹ್ಯ ಜಗತ್ತಿನ ಎಲ್ಲ ಕ್ಷೇತ್ರಗಳಲ್ಲೂ ಸತ್ಯ ಎನ್ನಿಸುತ್ತದೆ. ಏಕೆಂದರೆ ಬಾಹ್ಯ ಪ್ರಪಂಚದಲ್ಲಿ ನಾವು ಅದ್ವೈತವನ್ನು ಬಳಸಿದ್ದಾದರೆ ಲೋಕದ ರಥ ಸುಗಮವಾಗಿ ಸಾಗಲಾರದು ಎಂಬುದು ಎಲ್ಲರ ಅನುಭವಕ್ಕೆ ಬಂದ ವಿಷಯ. ಕಛೇರಿಯ ಜವಾನನಿಗೆ ಅಧಿಕಾರಿ ಕುರ್ಚಿಕೊಟ್ಟು ಎದುರಿನಲ್ಲಿ ಕೂರಿಸಿಕೊಂಡರೆ ಜವಾನನಿಗೆ ಅಧಿಕಾರಿಯ ಬಗ್ಗೆ ಗೌರವ ಮಾಯವಾಗಿ ಕಡೆಗೆ ಅಧಿಕಾರಿ ಹಗುರಾಗ ಬೇಕಾಗುತ್ತದೆ. ಹೆಣ್ಣು ಎಷ್ಟೇ ಭೋಗಭಾಗಿನಿಯಾಗಿದ್ದರೂ ಗಂಡನಲ್ಲಿ ಕೆಲವಂಶಗಳ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಿಷಯದಲ್ಲಿ ಮುಚ್ಚುಮರೆ ಮಾಡಿಯೇ ಮಾಡುತ್ತಾಳೆ. ತಾಯಿ ಮಕ್ಕಳ ವಿಷಯ ದಲ್ಲಿ, ಗುರು ಶಿಷ್ಯನ ವಿಷಯದಲ್ಲಿ ದ್ವೈತ ಭಾವನೆ ಸಹಜ. ಅದೇ ರೀತಿಯಿಂದಲೂ ತೋರುತ್ತದೆ ಧರ್ಮ—ದರ್ಶನಗಳದ್ದು. ಬೌದ್ಧರಲ್ಲಿ ಮಹಾಯಾನ ಮತ್ತು ಹೀನಾಯಾನ, ಕ್ರೈಸ್ತಧರ್ಮದಲ್ಲಿ ರೋಮನ್ ಕ್ಯಾಥೋಲಿಕ್ ಮತ್ತು ಪ್ರಾಟೆಸ್ಟೆಂಟ್, ಇಸ್ಲಾಂನಲ್ಲಿ ಷಿಯಾ ಮತ್ತು ಸುನ್ನಿ, ಶ್ರೀವೈಷ್ಣವರಲ್ಲಿ ವಡಗಲೆ ಮತ್ತು ತೆಂಕಲೆ, ಅದ್ವೈತದಲ್ಲಿ ಕಾಶ್ಮೀರ ಮತ್ತು ದಕ್ಷಿಣಾಮ್ನಾಯ, ವೀರಶೈವರಲ್ಲಿ ಗುರುವರ್ಗ ಮತ್ತು ವಿರಕ್ತವರ್ಗ ಇವು ಹಗಲು ಮತ್ತು ಇರುಳು, ದ್ಯಾವಾ ಮತ್ತು ಪೃಥ್ವಿ ಇದ್ದಂತೆ ಪ್ರಕೃತಿ ಸಹಜವೋ ಎನ್ನುವಂತೆ ಜೊತೆ ಜೊತೆಯಾಗಿ ಬೆಳೆದುಬಂದಿವೆ. ಹೆಣ್ಣು-ಗಂಡು ಎಂಬ ಲಿಂಗಭೇದ, ಕರಿಯ ಬಿಳಿಯ ಎಂಬ ವರ್ಣಭೇದ, ಧನಿಕ-ದರಿದ್ರ ಎಂಬ ಅರ್ಥಭೇದ ಇವು ಎಂದಿನಿಂದಲೂ ಇದ್ದವುಗಳು. ಶೋಷಕ ಮತ್ತು ಶೋಷಿತ ವರ್ಗಗಳಂತೂ ಮಾನವೇತಿಹಾಸದ ಪುಟಪುಟದಲ್ಲೂ ಸಿಗುತ್ತವೆ. ಈ ತಾರತಮ್ಯದ ನಿವಾರಣೆಗಾಗಿ ಅನೇಕ ಜನ ಸಾಧುಸಂತರು ತಮ್ಮ ಬೆವರಿನ ಹಳ್ಳ ಹರಿಸಿದ್ದಾರೆ, ಮತ್ತೆ ಅನೇಕರು ಅದಕ್ಕೆ ಬಲಿಯಾಗಿರುವುದೂ ಉಂಟು. ಸೈಂಟ್ ಜೋನ್ ನಾಟಕದ ಕಡೆಯಲ್ಲಿ ಜೋನಳ ಆತ್ಮ ಹೇಳುವಂತೆ,

> 'Oh lord thou hast made this beautiful earth,
> When will it be ready to receive thy saints
> How long oh lord how long ?'

ಎಂಬ ಮಹಾವಾಕ್ಯ ಯಾವ ಕಾಲಕ್ಕೂ ಸತ್ಯ ಎನ್ನಿಸುತ್ತದೆ.

ಮನುಕುಲದ ಬಾಹ್ಯ ಬದುಕಿನಲ್ಲಿ ಭೇದವೇನೇ ಇರಲಿ, ಆಂತರಿಕವಾಗಿ ಅವನು ಒಂದೇ ಒಂದು ಜೀವದ್ರವ್ಯದಿಂದ ಆದವನು. ಅದೇ ಮಾನವತೆ ! ಆ ಮಾನವತೆಯ ಮಹಾಮೌಲ್ಯವನ್ನು ಎತ್ತಿ ಹಿಡಿದರೆ ಲೋಕಕಲ್ಯಾಣವಾಗುತ್ತದೆ. Unity in Variety is the plan of creation ಅಂದರೆ ಅನೇಕತೆಯಲ್ಲಿ ಏಕತೆಯನ್ನು ಅಡಗಿಸಿಟ್ಟಿರುವುದೇ ಸೃಷ್ಟಿಯ ರಹಸ್ಯ ! ನಾವೆಲ್ಲರೂ ಮುತ್ತೈದೆಯ ಕೊರಳಲ್ಲಿರುವ ಮಾಂಗಲ್ಯವಿದ್ದ ಹಾಗೆ. ಅದರಲ್ಲಿ ಕರಿಮಣಿ, ಹವಳ, ಬಂಗಾರದ ಗುಂಡು, ಚಿನ್ನದ ತಾಳಿ ಅವೆಲ್ಲವನ್ನೂ ಒಂದೆಡೆ ಸೂತ್ರೀಕರಿಸಿರುವ, ಹೊರಗಿನ ಕಣ್ಣಿಗೆ ಕಾಣದ ದಾರ ಒಂದೇ. ಅದು ಹರಿದರೆ ಮಾಂಗಲ್ಯವೇ ಹಾಳಾದಂತೆ ! ಅದು ಉಳಿಯಬೇಕಾದರೆ ಒಳಗಿನ ತಂತು ಭದ್ರವಿರಬೇಕು. ಆದ್ದರಿಂದ ನಾವು ಯಾವುದೇ ಪಕ್ಷ, ಪಂಗಡ, ಪಂಥ, ಧೋರಣೆ, ವರ್ಗ, ವಿಚಾರಗಳಿಗೆ ಸೇರಿರಲಿ, ಮಾನವತೆ ಎಂಬ ಧರ್ಮಸೂತ್ರಕ್ಕೆ ಬದ್ಧರಾಗಿದ್ದರೆ ಸಾಕು.

ಈಗಾಗಲೇ ಕುರುಬರು, ಕುಂಬಾರರು, ಗಾಣಿಗರು, ಮಾದಾರರು, ಡೋಹಾರರು ತಮ್ಮ ಇಷ್ಟಲಿಂಗಗಳನ್ನು ಬಿಚ್ಚಿ, ಅವುಗಳನ್ನು ಕಟ್ಟಿದ ತಮ್ಮ ತಮ್ಮ ಗುರುಗಳಿಗೆ ಒಪ್ಪಿಸಿ,

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮತ್ತೆ ಕುರುಬರಾಗಿ, ಕುಂಬಾರರಾಗಿ, ಗಾಣಿಗರಾಗಿ, ಮಾದಾರರಾಗಿ, ಡೋಹಾರರಾಗಿ ಉಳಿಯ ಹತ್ತಿದ್ದಾರೆ. ಬುದ್ಧಿಜೀವಿಗಳು ಎನ್ನಿಸಿಕೊಂಡ ನೀವು ಗುರು, ವಿರಕ್ತ, ಮೇಲೆ ಕೆಳಗೆ ಅಂತಾ ಕಿತ್ತಾಡುತ್ತಾ ಇದ್ದರೆ ಇದ್ದ ಕೆಲವರೂ ನಿಮ್ಮ ಪಾಲಿಗಿಲ್ಲವಾಗುತ್ತಾರೆ. ನಿಮ್ಮ ಹಗರಣ ಕಂಡು ನನಗೇ ರೇಸಿಕೆಯಾಗಿದೆ. ಎಷ್ಟು ದಿನಕ್ಕೆ ಈ ಧರ್ಮದ ಸಂಕೋಲೆಯಿಂದ ದೂರವಾದೇನೋ ಅನ್ನಿಸುತ್ತಿದೆ. ಆತ್ಮೋದ್ಧಾರಕ್ಕಾಗಿ ಅನುವಾಗ ಬೇಕಾಗಿದ್ದ ಧರ್ಮ ಇಂದು ಆತ್ಮವಿನಾಶಕ್ಕೆ ಹೇತುವಾಗುತ್ತಿದೆ. ಇದರ ಉಸಾಬರಿಯೇ ನನಗೆ ಸಲ್ಲ! ನೀವು ಯಾರಾದರೂ ಗುರುಗಳಾಗಿ, ಯಾರಾದರೂ ವಿರಕ್ತರಾಗಿ ನೀವು ಏನೇ ಆಗಿ ಹಾಳು ಬಾವಿಗೆ ಬೀಳಿ; ಆದರೆ ನಮ್ಮಂಥಪ ಮುಗ್ಧರನ್ನು ಬಲಿತೆಗೆದು ಕೊಳ್ಳದೆ ಬದುಕಲು ಬಿಡಿ. ಅಷ್ಟುಮಾಡಿದರೆ ನೀವು ಮತ್ತು ನಿಮ್ಮ ಸನಾತನ ಧರ್ಮ ಮಹದುಪಕಾರಮಾಡಿದಂತೆ!

ಕಡೆಯದಾಗಿ, ನನ್ನ ಸ್ಪಷ್ಟ ಅಭಿಪ್ರಾಯ ತಿಳಿಸುತ್ತೇನೆ. ಹಸಿದ ಹಾರುವ, ಉಂಡ ಒಕ್ಕಲಿಗ—ಇವರನ್ನು ಕೆಣಕಬಾರದು ಎಂಬ ಗಾದೆ ಇದೆ. ಅದೇ ರೀತಿ, ಅರೆ ತಿಳಿದ ಲಿಂಗಾಯತನನ್ನು ಯಾವಾಗಲೂ ಕೆಣಕಬಾರದು. ತಲೆತಲೆಗೂ ಪಟ್ಟ, ಹೊಟ್ಟೆಗಿಲ್ಲದೆ ಕೆಟ್ಟ! ಅನ್ನುವಂತೆ ವೀರಶೈವರಲ್ಲಿ ಸ್ವೇಚ್ಛಾಚಾರ ವಿಪುಲವಾಗಿದೆ. ಅವರಲ್ಲಿ ಹೇಳುವವರೂ ಇಲ್ಲ; ಕೇಳುವವರೂ ಇಲ್ಲ; ಲೀಡರ್‌ಷಿಪ್ ಇಲ್ಲದೆ ಅಧ್ವಾನವಾಗಿದೆ. ಇರುವ ಲೀಡರ್‌ಗಳೂ ಸ್ವಾರ್ಥಪಶುಗಳು. ನಾಯಿ–ಕರುಗಳು ಪುಂಡರು, ಧರ್ಮ ಗುರುಗಳು ಅನ್ನಿಸಿಕೊಂಡ ಕೆಲವರು ಭೋಗಾಸಕ್ತರು; ಭಕ್ತರು ಆಲಿಸಿಗಳು ಇಲ್ಲವೇ ಸಂಕುಚಿತ ಬುದ್ಧಿಯ ಕೂಪಮಂಡೂಕಗಳು. ಇವರು ಸುಟ್ಟ ಬಟ್ಟೆಯಂಥವರು. ಹತ್ತು ಕಾಸಿದ್ದರೆ, ಕೈಲಾಸವನ್ನೇ ಕೊಂಡುಕೊಳ್ಳುವೆವೆಂಬ ಒಣಜಂಬ; ಎರಡಕ್ಷರ ಕಲಿತರೆ ಬೃಹಸ್ಪತಿಯ ತುಂಡು ತಾನು ಎಂಬ ಅಹಂಕಾರ ಇವಕ್ಕೆ. ಇವರ ಸಂಘಟನೆ ನಿಜಕ್ಕೂ ಒಂದು ವಿಪರ್ಯಾಸ; ಅದಕ್ಕಾಗಿ ಪ್ರಯತ್ನಿಸಿದವರ ಶ್ರಮ ವ್ಯರ್ಥ! ಆದ್ದರಿಂದ ನನ್ನ ಮನವಿ ಇಷ್ಟೆ: ದಯವಿಟ್ಟು ಬೆಟ್ಟಕ್ಕೆ ಕಲ್ಲುಹೊರುವ, ಸಮುದ್ರಕ್ಕೆ ನೀರು ತುಂಬುವ ನ್ಯೂಕ್ಯಾಸಲ್‌ಗೆ ಕಲ್ಲಿದ್ದಲು ಸಾಗಿಸುವ ವ್ಯರ್ಥ ಸಾಹಸಕ್ಕೆ ಯಾರೂ ಕೈಹಾಕಬೇಡಿ. ಚೋರ ಗುರು, ಚಂಡಾಲ ಶಿಷ್ಯರು ಇರುವವರೆಗೂ ಇದರ ಶುದ್ಧೀಕರಣ ಸಾಧ್ಯವೇ ಇಲ್ಲ. ಇದು ರಿಪೇರಿ ಆಗದಷ್ಟು ಕೆಟ್ಟುಹೋಗಿದೆ. ಲೋಹವನ್ನೆಲ್ಲಾ ಕರಗಿಸಿ ಮತ್ತೆ ರಿಕ್ಯಾಸ್ಟ್ ಮಾಡಿದರೂ ಅದರ ಹೊಲಸು ನಾತ ನಿವಾರಣೆ ಆಗುವುದಿಲ್ಲ.'

ನಮಸ್ಕಾರ.

ಡಾ॥ ಶಿವಪ್ರಸಾದರ ಮಾತು ಮುಗಿದಾಗ ಎಲ್ಲರಿಗೂ ಉಸಿರು ನಿಂತು ಹೋಗಿತ್ತು! ಚಪ್ಪಾಳೆ ತಟ್ಟುವುದಕ್ಕೆ ಒಬ್ಬರೂ ಬದುಕಿರಲಿಲ್ಲ,

ಸಭೆಯಲ್ಲಿ ಮೌನವೇ ತುಸು ಹೊತ್ತು ರಾಜ್ಯಭಾರ ಮಾಡಿತು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಷ್ಟರಲ್ಲಿ ಚೇತರಿಸಿಕೊಂಡು ಒಬ್ಬ ಯುವಕ ಮೇಲೆದ್ದ,

ಆ ತೇಜಸ್ವಿ ತರುಣನ ಹೆಸರು ಮಲ್ಲಿಕಾರ್ಜುನಯ್ಯ ನಿಡುವಳ್ಳಿಮಠ!.

'ಪೂಜ್ಯರೇ ಹಾಗೂ ನನ್ನ ಸಮಾಜ ಬಾಂಧವರೆ, ಡಾ|| ಶಿವಪ್ರಸಾದ್‌ರವರ ಮಾತುಗಳನ್ನು ಕೇಳಿ ನನ್ನ ರಕ್ತ ಕುದಿಯಿತು, ಕಣ್ಣೀರು ಬಂದಿತು. ಅವರ ಆಕ್ರೋಶ, ದುಃಖ ಸಹಜವಾದವುಗಳೇ. ಈ ನತದೃಷ್ಟ ಸಮಾಜದಲ್ಲಿ ಹುಟ್ಟಿದೆನಲ್ಲಾ ಎಂದು ನಮಗೆ ನಾವೇ ಹಳಿದುಕೊಂಡರೆ ಆಶ್ಚರ್ಯವೇನಿಲ್ಲ. ಆದರೆ ಕಟ್ಟಿಸಿಕೊಂಡ ತಾಳಿಯನ್ನು ಕಿತ್ತುಹಾಕ ಬರುವುದಿಲ್ಲ; ತೊಟ್ಟುಕೊಂಡ ಬಳೆ ಕೈಕೊಡವಿದರೆ ಬೀಳುವುದಿಲ್ಲ; ಆಗುವುದನ್ನು ಅನುಭವಿಸಲೇ ಬೇಕು. ಇದು ನಮ್ಮ ಕರ್ಮ!

ಇಂತಹ ನೈರಾಶ್ಯದಾಕಳಿಕೆ ಸಹಜವಾಗಿ ಮೂಡುತ್ತದೆ. ಆದರೆ ಗತ ಇತಿಹಾಸದ ಸಂಪುಟವನ್ನು ತೆರೆದರೆ ವೀರಶೈವನ ಮೈ ನವಿರೇಳುತ್ತದೆ. ಏನೆಂತಹ ಭವ್ಯ ಸಂಸ್ಕೃತಿ ಅವನದು!. ಮಾನವ ಹೃದಯದಲ್ಲಿ ಮಹಾದೇವನನ್ನು ಕಂಡು ಗುರುತಿಸಿದ, ಗೌರವಿಸಿದ, ಪೂಜಿಸಿದ ಪುಣ್ಯಪುನೀತ ಸಂಸ್ಕೃತಿ ವೀರಶೈವ ಸಂಸ್ಕೃತಿ! ಮಾನವನನ್ನು ಮಾನವನನ್ನಾಗಿ ಗುರುತಿಸಿದ ಏಕೈಕ ವಿಶ್ವಮಾನವ ಧರ್ಮ ವೀರಶೈವ ಧರ್ಮ. ಇದರ ಅರಿವು ಎಲ್ಲ ವೀರಶೈವನಲ್ಲಾಗಬೇಕಾದ ಅಗತ್ಯ ಇದೆ ಇಂದು; ಇದು ಅನಿವಾರ್ಯವೂ ಹೌದು.

ಪ್ರಾಗಿತಿಹಾಸಕ್ಕೆ ಕಾಲಿರಿಸಿದರೆ ಸಾಕು ಎಲ್ಲೆಡೆಯೂ ಕಾಣಸಿಗುವುದು ಶಿವ ಸಂಬಂಧವಾದ ಸಂಸ್ಕೃತಿ. ಮೆಕ್ಕಾದಲ್ಲಿ ಮಕ್ಕೇಶ್ವರ, ಗ್ರೀಸ್ ದೇಶದ ಶಿವಲಿಂಗರೂಪಿ ಡಯೋನಿಸಸ್ ದೇವತೆ ಇದಕ್ಕೆ ಸಾಕ್ಷಿ. ಬ್ಯಾಬಿಲೋನಿಯಾ—ಅಸ್ಸೀರಿಯಾ ಸಂಸ್ಕೃತಿ ದ್ರಾವಿಡ ಸಂಸ್ಕೃತಿ; ಅಲ್ಲಿನ ಧರ್ಮ ಶಿವಧರ್ಮ. ಭಾರತದಲ್ಲಿ ಆಸೇತು ಹಿಮಾಚಲ ದವರೆಗೆ ವ್ಯಾಪಕವಾಗಿದ್ದದ್ದು ಶಿವೋಪಾಸನೆ. ಅಲ್ಲಿನ ಮೂಲನಿವಾಸಿಗಳು ದ್ರಾವಿಡರು. ದ್ರಾವಿಡರ ದೇವತೆ ಶಿವ. ಪಾಕೀಸ್ಥಾನಕ್ಕೆ ಸೇರಿರುವ ಹರಪ್ಪಾ—ಮೊಹೆಂಜದಾರೊಗಳಲ್ಲಿ, ಗುಜರಾತಿನ ಲೋಥೆಲ್‌ನಲ್ಲಿ ಭಾರತದ ಇತರ ಕಡೆಗಳಲ್ಲಿ ಅಂದರೆ ಚನ್ನುಹಾರೋ, ರಂಗಪುರ, ರೂಪರ, ಕಾಲಿಬಂಗನ್‌ಮೊದಲಾದೆಡೆಗಳಲ್ಲಿನ ಉತ್ಖನನಗಳಲ್ಲಿ ಸಿಕ್ಕ ಮುದ್ರಿಕೆ ಗಳು ನಂದಿ ಮತ್ತು ಶಿವಲಿಂಗಗಳು. ಹರಪ್ಪಾ—ಮೊಹೆಂಜದಾರೊಗಳ ಚಿತ್ರ ಲಿಪಿಗಳನ್ನು ಓದಿದ ಫಾದರ್ ಹೆರಾಸ್‌ರವರು ಹೇಳಿದರು 'ಕನ್ನಡ ನಾಡು' ಕಳ್ಳರ ನಾಡು ಎಂದು. ಕಳ್ಳರು—ಅರ್ಥ 'ಕಳ್' (ಹಾಲನ್ನು) ಉತ್ಪಾದಿಸುವವರು ಎಂದು. ಅಂದರೆ ಪಶುಪಾಲನೆಯಿಂದ ಬದುಕುಮಾಡುವ ಜನಾಂಗ. ಇವರ ಆರಾಧ್ಯ ದೇವತೆ ಶಿವ. ಅನಂತರ ಏಷ್ಯಾ ಮೈನರ್‌ನಿಂದ ವಲಸೆ ಬಂದ ಆರ್ಯರು 'ಕಳ್ಳರು' ಎಂಬುದನ್ನು ತಪ್ಪಾಗಿ ಅರ್ಥಮಾಡಿಕೊಂಡು, ಕಳ್ಳತನ ಮಾಡುವವರು (The Thieves) ಎಂಬ ಅರ್ಥದಲ್ಲೇ ಪರಿಗಣಿಸಿ, ತಮ್ಮ ಋಗ್ವೇದದ ರುದ್ರಾಧ್ಯಾಯದಲ್ಲಿ, ನಮಕ—ಚಮಕ ವಿಭಾಗದಲ್ಲಿ 'ಕಳ್' ಅರ ಕುಲದೇವತೆಯಾದ ಶಿವನನ್ನು 'ಕಳ್ಳರ' ಒಡೆಯನೇ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಿನಗೆ ನಮಸ್ಕಾರ' ಎಂದು ಧ್ಯಾನಿಸಿದರು. ವೇದ ಋಷಿಗಳಿಂದ ಶಿವನಿಗೆ ಸಂದ ಗೌರವ ಎಂಥದು ಎಂಬ ಅರಿವು ಶಿವನಿಗೂ ಇಲ್ಲ, ಶಿವಭಕ್ತರಿಗೂ ಇಲ್ಲ ಇಂದು!

ಇತಿಹಾಸ ಕಾಲದಲ್ಲಿ ಆರ್ಯರು ಉತ್ತರಾಪಥವನ್ನೆಲ್ಲಾ ಆಕ್ರಮಿಸಿಕೊಂಡಮೇಲೆ ಶಿವಸಂಸ್ಕೃತಿಯ ದ್ರಾವಿಡರು ದಕ್ಷಿಣಕ್ಕೆ ತಳ್ಳಲ್ಪಟ್ಟರು. ಇಲ್ಲಿ ನೆಲೆನಿಂತ ಆ ಜನಾಂಗ ರಾಜ್ಯ-ಸಾಮ್ರಾಜ್ಯಗಳನ್ನು ಕಟ್ಟಿ ಆಳಿತು. ಶಿವದೇಗುಲಗಳನ್ನು ನಿರ್ಮಾಣ ಮಾಡಿತು. ತಾಳಗುಂದದ ಬಳಿ ಇರುವ ಪ್ರಣವೇಶ್ವರ ದೇವಾಲಯವೇ ಇಡೀ ದಕ್ಷಿಣ ಭಾರತದ ಮೊತ್ತಮೊದಲ ದೇವಾಲಯ. ಅಲ್ಲಿರುವ ಶಿವಲಿಂಗ 5-6 ಮೀಟರು ಎತ್ತರ ಇದೆ. ಅದನ್ನು ಪ್ರತಿಷ್ಠಿಸಿದವರು ಯಾರೋ ತಿಳಿಯದು ; ಆದರೆ ಶಾತವಾಹನರ ಅರಸ ಶಾತಕರ್ಣಿ ಎಂಬವನು ಆ ಶಿವಲಿಂಗವನ್ನು ಪೂಜಿಸಿದನೆಂದು ಕದಂಬ ಶಾಂತಿವರ್ಮನ ಶಾಸನ ಸಾರಿ ಹೇಳುತ್ತದೆ. ಶಾತವಾಹನರ ಹಾಲ ಮೊದಲಾದ ಅರಸರು ಶಿವೋಪಾಸಕ ರಾಗಿದ್ದರು ಎಂಬುದಕ್ಕೆ ಸಾಕಷ್ಟು ಆಧಾರಗಳಿವೆ. ಅನಂತರದ ಚಾಲುಕ್ಯರ ಶಿವಭಕ್ತಿಗೆ ನಿಂತ ಸಾಕ್ಷಿಯೋ ಎಂಬಂತೆ ಐಹೊಳೆ, ಪಟ್ಟದಕಲ್ಲು, ಬಾದಾಮಿ, ಬನಶಂಕರಿ ಮಹಾಕೂಟ, ಮುಂಬಯಿನ ಎಲಿಫೆಂಟಾಕೇವ್ಸ್, ಅಜಂತಾ, ಎಲ್ಲೋರಗಳ ಅಮರ ಕಲೆ ಮೌನ ತಳೆದು ನಿಂತಿದೆ. ಕಲ್ಯಾಣದ ಚಾಲುಕ್ಯರು, ನೊಳಂಬರು ಮೊದಲಾದವ ರಂತೂ ಸಾಕ್ಷಾತ್ ಶರಣ ಜೀವಿಗಳು. ವಿಜಯನಗರ ಸಂಸ್ಥಾಪಕ ವಂಶವಾದ 'ಸಂಗಂ' ಶಿವಭಕ್ತ ವಂಶ, ಮೈಸೂರ ಅರಸರು ಶಿವಭಕ್ತರು, ಕಿತ್ತೂರು, ಕೆಳದಿ, ಕೊಡಗು, ಹಾಗಲ್ವಾಡಿ, ಬಿಜ್ಜಾವರ, ಮತ್ತೋಡು, ಸ್ವಾದಿ, ಬೀಳಗಿ, ನರಗುಂದ, ಹಾನಗಲ್ಲು ಯಾವುದೇ ಸಾಮ್ರಾಜ್ಯ, ಯಾವುದೇ ಪಾಳೇಪಟ್ಟು ನೋಡಿದರೂ ಅದನ್ನಾಳಿದವರು ಶಿವಭಕ್ತರು. ಬ್ರಿಟಿಷರ ವಿರುದ್ಧ ಯುದ್ಧ ಘೋಷಿಸಿ, ಸ್ವಾತಂತ್ರ್ಯ ಹೋರಾಟದ ಮೊದಲ ಕೂಗು ಹಾಕಿದ ಕಿತ್ತೂರಿನ ವೀರರಾಣಿ ಚೆನ್ನಮ್ಮ ಶ್ರೇಷ್ಠ ವೀರಶೈವಳು, ಔರಂಗಜೇಬನಿಗೆ ಸೋಲಿನ ಸವಿಯುಣಿಸಿದ ವೀರವನಿತೆ ಕೆಳದಿ ರಾಣಿ ಚೆನ್ನಮ್ಮ ವೀರಶೈವಳು ; ಬೆಳವಡಿ ಮಲ್ಲಮ್ಮನನ್ನು ಮರೆಯಲು ಸಾಧ್ಯವೇ ? ಭಾರತದ ಸ್ವಾತಂತ್ರ್ಯೇತಿಹಾಸದ ಹೋರಾಟದಲ್ಲಿ ಈ ವೀರಶೈವ ವಿಧವೆಯರದು ಸಿಂಹಪಾಲಿದೆ. ಇಂದು ಇಷ್ಟನ್ನೇ ಹೇಳಿಕೊಂಡು ತೃಪ್ತಿಪಟ್ಟುಕೊಳ್ಳಬೇಕಾಗಿದೆ.

ಅಂದು ಸಾಮ್ರಾಜ್ಯವಾಳಿದ ಜನ ಇಂದು ಅನ್ಯಜನರ ಅವಹೇಳನದ ವಸ್ತು! ಕರ್ನಾಟಕದಲ್ಲಿ ಲೆಕ್ಕಕ್ಕೆ ಒಂದೂಕಾಲು ಕೋಟಿ ಜನ; ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಮೂರನೇ ಒಂದು ಭಾಗ ವೀರಶೈವರದು. ಆದರೆ 'ಆಟಕ್ಕುಂಟು ಲೆಕ್ಕಕ್ಕಿಲ್ಲ' ಎಂಬಂತಹ ಅನಾಥ ಜನಾಂಗ-ಅಲ್ಲ-ನಪುಂಸಕರು ಇವರು! ಯಾವುದೇ ಸರಕಾರಿ ಅಥವಾ ಖಾಸಗೀ ಕಚೇರಿಗೆ ಹೋಗಿ 'ಏನು ಸ್ವಾಮಿ, ನೀವು ಲಿಂಗಾಯತರ, ಅನ್ನಿ, ಅವರು ಷ್ ! ಷ್ !' ಎಂದು ನಿಮ್ಮನ್ನು ಆಚೆಗೆ ಕರೆದುಕೊಂಡು ಹೋಗಿ ಬಯ್ಯುತ್ತಾರೆ. ಇಲ್ಲವೇ ನಿಮ್ಮ ಮಾತು ಕೇಳಲೇ ಇಲ್ಲವೇನೋ ಎಂಬಂತೆ ಮೌನ ತಾಳುತ್ತಾರೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮತ್ತೆ ಕೇಳಿದರೆ ಸಿಕ್ಕಾಬಟ್ಟೆ ಸಿಟ್ಟಾಗುವುದೂ ಉಂಟು. ಅವರಿಗೆ ಅವರ ತಾಯಿಯ ಹೆಸರು ಹೇಳಲು ನಾಚಿಕೆ, ಅವಮಾನ! ಅಂತಹ ವ್ಯಕ್ತಿ ವೀರನೂ ಅಲ್ಲ, ಶೈವನೂ ಅಲ್ಲ, ಒಂದುವೇಳೆ ಕುಲದಲ್ಲಿ ಹುಟ್ಟಿದ್ದರೆ ಅವನು ಷಂಡಶೈವ! ಈ ಹೇಡಿತನಕ್ಕೆ ನಾಚಬೇಕು ಅಲ್ಲವೆ!

ಧಾರ್ಮಿಕ ಸಂದರ್ಭವನ್ನು ಕುರಿತು ಹೇಳುವುದಾದರೆ ವೀರಶೈವರು ಹಿಂದೂಗಳೆ ಅಥವಾ ಅಲ್ಲವೆ? ಇದು ಕಿತ್ತಾಟದ ವಸ್ತು. ಜಾತಿ ಹೇಳಿದರೆ ವೀರಶೈವ, ಲಿಂಗಾಯತ, ಬಸವಾಯತ ಇನ್ನೂ ಏನೇನೋ ಆಯತಗಳು. ದರ್ಶನ ನೋಡಿದರೆ ಒಂದು ಕಡೆ ಶಕ್ತಿವಿಶಿಷ್ಟಾದ್ವೈತ, ಮತ್ತೊಂದು ಕಡೆ ಶಿವಾದ್ವೈತ, ಮಗದೊಂದು ಕಡೆ ದ್ವೈತಾದ್ವೈತ! ಶುಭಾಶುಭ ಸಂದರ್ಭಗಳ ವಿಧಿ ವಿಧಾನಗಳಲ್ಲಿ ಏಕತೆ ಇಲ್ಲ. ವೀರಶೈವರು ವೈದಿಕ ಸಂಪ್ರದಾಯ ಬಿಟ್ಟಿಲ್ಲ. ಅಣ್ಣನ ತತ್ವಗಳನ್ನು ಅರ್ಥಮಾಡಿಕೊಂಡಿಲ್ಲ. ಗೃಹಪ್ರವೇಶದಲ್ಲಿ ಹೋಮ ಹವನಮಾಡಿಸಿ ತುಪ್ಪವನ್ನು ಬೆಂಕಿಗೆ ಸುರಿಯುವುದು, ಮದುವೆಗಳಲ್ಲಿ ವರನನ್ನು ಕಾಶೀಯಾತ್ರೆಗೆ ಕಳುಹಿಸುವುದು, ಸಪ್ತಪದಿ ನಡೆಸುವುದು ಇನ್ನೂ ತಪ್ಪಿಲ್ಲ!

ಮಠಮಠಗಳಿಗೆ ವೈಷಮ್ಯ, ಕುಲಕುಲಗಳಿಗೆ ಕಿತ್ತಾಟ! ತಾನು ವೀರಶೈವ, ತನ್ನ ದರ್ಶನ ಒಂದು ಎಂಬ ತಿಳಿವು ಇಲ್ಲ; ಒಂದೆಂಬ ಭಾವನೆ ಮೊದಲೇ ಇಲ್ಲ. ತಾನು ಮೇಲು, ನೀನು ಕೀಳು ಎಂಬ ವಾದ, ಸ್ವಪ್ರತಿಷ್ಠೆ, ಸಲ್ಲದ ದುರಭಿಮಾನ! ಆಯೋಗಗಳ ಮೇಲೆ ಆಯೋಗಗಳು ಬಂದಿವೆ, ಬರುತ್ತಿವೆ. ಆದರೆ ಪಾಪ! ಆ ಆಯೋಗಗಳು ಕುಲಬಾಂಧವರ ಮಠ ಅಥವಾ ಪೀಠಾಧಿಪತಿಗಳ ಆದೇಶ ಆಶಯಗಳೇನು ಎಂಬುದನ್ನು ತಿಳಿಯಲು ಎದುರುನೋಡಿದವು. ಆದರೆ ಮಠಾಧಿಪತಿಗಳು ಕಿತ್ತಾಡುತ್ತಿದ್ದರು, ಅವರ ಅನುಯಾ(ಯಿಶಾ)ಯಿಗಳು ಕಚ್ಚಾಡುತ್ತಿದ್ದುವು. ಉಳಿದವರಿಗೆ ಉಸಿರೇ ಇರಲಿಲ್ಲ ಕೂಗಲು. ವರ್ತಕರಿಗೆ ದುಡ್ಡುಬಡ್ಡಿ ಲೆಕ್ಕಚಾರಕ್ಕೆ ಪುರಸೊತ್ತಿರಲಿಲ್ಲ. ಹೀಗಾಗಿ ಸಮಾಜ ತಬ್ಬಲಿಯಾಗಿ ತಲೆಗುಂತ್ತಿ ಬದುಕಬೇಕಾಯಿತು.

ಆದದ್ದು ಆಯಿತು:
ಮುಂದೇನು?

ಇಂದು ನಮ್ಮ ಯುವಜನದಿಂದ ಮಾತ್ರ ಸಮಾಜ ಸುಧಾರಣೆ, ಸಂಘಟನೆ ಸಾಧ್ಯ. ಇದು ನನ್ನ ನಂಬುಗೆಯ ಹೈಮಾಚಲ. ಇದನ್ನು ಇಂದಿನ ಹಾಗೂ ಮುಂದಿನ ಯುವ ಪೀಳಿಗೆಯ ಮುಂದೆ ನಿವೇದಿಸಿಕೊಳ್ಳುತ್ತಿದ್ದೇನೆ. ಯುವಕರು ಯಾವುದೇ ಕಂದಾಚಾರಕ್ಕೆ ಬಲಿಯಾಗದೆ ಸಮಾಜ ಸುಧಾರಣೆಗಾಗಿ ತಮ್ಮೆಲ್ಲ ಸ್ವಾರ್ಥವನ್ನೂ ಬದಿಗಿರಿಸಿ ಪ್ರಾಂಜಲ ಮನಸ್ಸಿನಿಂದ ದುಡಿಯುವ ಮನೋಧರ್ಮದ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನೈಷ್ಠಿಕ ಪಟುಗಳಾಗಬೇಕು. ಆದರೆ ಒಂದು ಟನ್ ಮಾತಿಗಿಂತ ಒಂದು ಔನ್ಸ್ ಕೃತಿ ಲೇಸು ಎಂಬುದನ್ನು ಚೆನ್ನಾಗಿ ಅರಿತು ಆಚರಿಸಬೇಕು.

ಬಸವಣ್ಣನಂತಹ ಶ್ರೇಷ್ಠ ಸಮಾಜ ಸುಧಾರಕ ದಾರ್ಶನಿಕನನ್ನು ವಿಶ್ವೇತಿಹಾಸ ಹಿಂದೆ ಕಾಣಲಿಲ್ಲ, ಮುಂದೆ ಕಾಣುತ್ತದೆಂಬ ನಂಬುಗೆ ಇಲ್ಲ. ಅವನ ಮಕ್ಕಳು ನಾವು. ಅವನ ಕೋಟಿ ಕನಸುಗಳಲ್ಲಿ ಒಂದೆರಡನ್ನಾದರೂ ನನಸಾಗಿಸಿದರೆ ನಮ್ಮ ಜನ್ಮ ಸಾರ್ಥಕ. ಆ ಕಾರಣ ಅವನ ತತ್ತ್ವಗಳನ್ನು ಅನುಮೋದಿಸುವಲ್ಲಿ, ಅನುಷ್ಠಾನಕ್ಕೆ ತರುವಲ್ಲಿ ತರುಣ ಜನಾಂಗ ಕಂಕಣಕಟ್ಟಿ ನಿಲ್ಲಬೇಕು. ಸಮಾಜದ ಮೇಲು ಕೀಳು ಅಳಿಯ ಬೇಕಾಗಿದ್ದಲ್ಲಿ ಒಳ ಪಂಗಡಗಳಲ್ಲಿ ಪರಸ್ಪರ ವಿವಾಹಗಳೇರ್ಪಡಬೇಕು. ಯಾವ ಬಣಕ್ಕೇ ಸೇರಿರಲಿ ಲಿಂಗಧಾರಿ ವೀರಶೈವನಾಗಿದ್ದರೆ ಸಾಕು, ಲಾಂಛನಕ್ಕೆ ಶರಣೆಂದು ಹೆಣ್ಣು ಕೊಡುವ, ಗಂಡಿಗೆ ತರುವ ಕಾರ್ಯ ಆರಂಭವಾಗಬೇಕು. ಈ ಕೊಳ್–ಕೊಡುಗೆ ಸಮಾನತೆಯ ಮೊದಲ ಪಾಠ.

ಅಣ್ಣನಿಗೆ ಈ ಗುಟ್ಟು ಚೆನ್ನಾಗಿ ಗೊತ್ತಿತ್ತು. ವೀರಶೈವರಲ್ಲಿನ ಅಂತರ್ವರ್ಗಗಳಲ್ಲಿ ವಿವಾಹಗಳಾದರೆ, ರಕ್ತ ರಕ್ತದಲ್ಲಿ ಬೆರೆತರೆ ಈ ಜನ ಒಂದಾಗುತ್ತೆ. ಆದ್ದರಿಂದ ಮೇಲು–ಕೀಳು ಎಂದೆಣಿಸದೆ ವೀರಶೈವರೆಲ್ಲರೂ ಒಂದು. ಅವರಲ್ಲಿ ರಕ್ತಸಂಬಂಧ ವೇರ್ಪಟ್ಟರೆ, ಅಂತರ ಅಳಿಯುತ್ತದೆ ಎಂದರಿತ ಅಣ್ಣ ಹರಳಯ್ಯ ಮಧುವರಸರ ಮಕ್ಕಳಿಗೆ ಮದುವೆ ಮಾಡಿಸಿದ. ವಿಶ್ವದ ಇತಿಹಾಸದಲ್ಲಿ ಅಣ್ಣನ ಆ ಸಾಧನೆ ಒಂದು ಹೊಸ ದಾಖಲೆಯಾಗಿ ಉಳಿಯಿತು. ನಮ್ಮ ಯುವಜನ ವೀರಶೈವದ ವರ್ಗಭೇದ ವನ್ನು ತುಳಿದು ಮುನ್ನುಗ್ಗಲಿ! ಅಂತೆಯೇ, ವಿಧವಾ ವಿವಾಹ ವೀರಶೈವರಲ್ಲಿ ನಿಷಿದ್ಧ ಅಲ್ಲ. ಅರವತ್ತಮೂರು ಪುರಾತನರಲ್ಲಿ ಒಬ್ಬನಾದ ನಂಬಿಯಣ್ಣ ಮದುವೆ ಯಾದದ್ದು ಒಬ್ಬಳು ವೇಶ್ಯೆ, ಅವಳೇ ಪರವೆ ; ಮತ್ತೊಬ್ಬಳು ಬಾಲವಿಧವೆ, ಅವಳೇ ಸಂಕಿಲಿ! ಹೆಣ್ಣಿನ ಕುಲಕ್ಕೇ ಒಂದು ಹೊಸ ಬೆಳಕು ನೀಡಿದ ಮಹಾತ್ಮ ಬಸವೇಶ್ವರ ಅವಳು ವಿಧವೆಯಾದರೆ ಮತ್ತೊಬ್ಬನನ್ನು ಲಗ್ನಮಾಡಿಕೊಳ್ಳಲು ಖಂಡಿತ ಅಡ್ಡಿಪಡಿ ಸಿರಲಾರ. ತಾನೇ ಅದರ ಪ್ರಯೋಗವನ್ನು ಮಾಡಿ ಮುಗಿಸಿದ್ದರೂ ಆಶ್ಚರ್ಯವಿಲ್ಲ, ವಿಧವಾ ವಿವಾಹ ಈಗಲೂ ವೀರಶೈವರಲ್ಲಿ ಆಚರಣೆಯಲ್ಲಿದೆ, 'ಸೀರುಡುಕೆ' ಎಂಬ ಜಾನಪದೀಯ ಪದ್ಧತಿ ಕಣ್ಮರೆಯಾಗಿಲ್ಲ. ಸೀರುಡಿಕೆಯಂತಹ' ಪ್ರಾಕೃತ ಪದ್ಧತಿಗೆ ಆಧುನಿಕ ವಿವಾಹ ಸಂಸ್ಕಾರ ಕೊಡೋಣ. ವೀರಶೈವ ವಿಧವೆಯನ್ನು ವಿಧುರನಿರಲಿ, ಅವಿವಾಹಿತ ತರುಣನಿರಲಿ ಕೈ ಹಿಡಿದು ಕಾಪಾಡಲಿ. ತನ್ಮೂಲಕ ಅಣ್ಣನ ಸಾಮಾಜಿಕ ಕ್ರಾಂತಿಯನ್ನು ಮುಂದುವರಿಸಿದ ಕೀರ್ತಿಗೆ ಕಾರಣನಾಗಲಿ.

ವೀರಶೈವಮಠ ಮಠಗಳಲ್ಲಿ ಸೌಹಾರ್ದವೇರ್ಪಡಬೇಕಾದರೆ ಅಥವಾ ನನ್ನ ಕೋಡು ದೊಡ್ಡದೆಂಬ ಭ್ರಮೆ ನಿರಸನಗೊಳ್ಳಬೇಕಾದರೆ ಮಠಾಧಿಪತಿಗಳನ್ನು ಕಡೆಯ ಪಕ್ಷಮೂರು ವರ್ಷಕ್ಕೊಮ್ಮೆಯಾದರೂ ಒಂದು ಮಠದಿಂದ ಮತ್ತೊಂದು ಮಠಕ್ಕೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವರ್ಗ ಮಾಡಬೇಕು. ಯಾರೂ ಯಾವ ಮಠದಲ್ಲೂ ನಿಂತ ನೀರಿನಂತೆ ನಿಲ್ಲಬಾರದು! ಸದಾ ಸಂಚಲನ ಶೀಲರಾಗಿ ಪರಿವ್ರಾಜಕರಾಗಿ ಮಠಗಳ ಪುರೋಭಿವೃದ್ಧಿ, ಭಕ್ತರ ಶ್ರೇಯಸ್ಸು ಮುಂದುವರಿಸಬೇಕು.

ಮಠಗಳಿಗೆ ವಟುಗಳನ್ನು ಆರಿಸುವಾಗ ವಿಶ್ವವಿದ್ಯಾಲಯಗಳ ಪದವೀಧರ, ಸ್ನಾತಕೋತ್ತರ ಪದವೀಧರ ಆಗಿರಬೇಕು. ಸಂಸ್ಕೃತ ಸಾಹಿತ್ಯದ ಹಿನ್ನೆಲೆ ಅವನಿಗಿರ ಬೇಕು. ಅಂತೆಯೇ ಈ ಶಿವಯೋಗ ಮಂದಿರದಂತಹ ಕೇಂದ್ರಗಳಲ್ಲಿ ಶಿಕ್ಷಣ ಪಡೆದವನೇ ಆಗಿರಬೇಕು. ಯೋಗ, ಧ್ಯಾನ, ನಿಧಿಧ್ಯಾಸನ ಇತ್ಯಾದಿಗಳಲ್ಲಿ ನಿಷ್ಣಾತನಿರಬೇಕು. ಹಗಲು ನಿದ್ದೆ ಮಾಡದ, ಇರುಳು ಶಿವಯೋಗರತನಾದ ತೇಜಸ್ವಿಯನ್ನು ಸಮಾಜ ಕೈಗೆತ್ತಿಕೊಂಡು ತನ್ನ ಮಾರ್ಗದರ್ಶನದ ದೀವಿಗೆಯನ್ನಾಗಿ ಮಾಡಿಕೊಳ್ಳಬೇಕು

ವೀರಶೈವ ಮಠಾಧಿಪತಿಗಳು ಯಾರೇ ಆಗಿರಲಿ, ಭಕ್ತ ಯುವಕರು ಭೇದಭಾವ ತೋರದೆ, ಗುರು–ಜಗದ್ಗುರು, ಸ್ವಾಮಿ–ಮಹಾಸ್ವಾಮಿ, ಶಿವಯೋಗಿ–ಶಿವಾಚಾರ್ಯ ಎಲ್ಲರಲ್ಲೂ, ಭಕ್ತಿ ಗೌರವಗಳನ್ನು ಸಮರ್ಪಿಸಬೇಕು. ಮಠಗಳಿಗೆ, ಪೀಠಗಳಿಗೆ ಶೀಲ ಸಂಪನ್ನ ವಟುಗಳನ್ನು ಮುಂದಿನ ಅಧಿಪತಿಗಳಾಗಿ ಆಯಲು ನೆರವಾಗಬೇಕು. ಪ್ರತಿ ಮಠವೂ ಒಂದೊಂದು ವೀರಶೈವ ಸಾಂಸ್ಕೃತಿಕ ಹಾಗೂ ವಿದ್ಯಾಕೇಂದ್ರವಾಗಬೇಕು.

ವೀರಶೈವರೆಂದು ಗುರುತಿಸಲು ಒಂದು ಸಣ್ಣ ಬಿಲ್ಲೆ (ಬ್ಯಾಡ್ಜ್)ಯನ್ನು ಎಲ್ಲ ವೀರಶೈವರೂ ಧರಿಸುವಂತಾಗಬೇಕು. ಉದಾಹರಣೆಗೆ ರೋಟರಿ, ಲಯನ್ಸ್, ಜೈಂಟ್ಸ್, ಜೂನಿಯರ್ ಛೇಂಬರ್ಸ್ ಇತ್ಯಾದಿ ಸಂಸ್ಥೆಗಳ ಲಾಂಛನ ಇದ್ದಂತೆ. ಶಿವಲಾಂಛನ ಧಾರಿ ಗಳಾದವರನ್ನು ಕಂಡೊಡನೆಯೇ ಗೌರವಿಸಬೇಕು, ತಮ್ಮ ಕೈಲಾದ ಮಟ್ಟಿಗೆ ಸಹಾಯ ಮಾಡಬೇಕು. ಕಚೇರಿಯೊಂದಕ್ಕೆ ಲಾಂಛನಧಾರಿ ಬಂದರೆ ಗುರುತಿಸಿದ ಅಧಿಕಾರಿ ತಾನೇ ಮುಂದೆ ಬಂದು ತನ್ನ ವ್ಯಾಪ್ತಿಯಲ್ಲಿದ್ದರೆ ಬಂದವನ ಕಾರ್ಯವನ್ನು ಮಾಡಿ ಕೊಡಬೇಕು ; ಇಲ್ಲವೇ ತನ್ನ ಸಹೋದ್ಯೋಗಿಗಳ ಬಳಿ ಇದ್ದರೆ ಹೋಗಿ ಮಾಡಿಸಿ ಕೊಡಬೇಕು.

ಒಂದು ಹೆಮ್ಮೆಯ ವಿಚಾರವೆಂದರೆ ವೀರಶೈವರು ಸ್ವತಂತ್ರ ಧೀರರು. ಅವರಿಗೆ ಜ್ಞಾನದ ವಿಷಯದಲ್ಲೂ ಅನ್ಯಾಯವಾಗಿದೆ. ಅವರು ಬುದ್ಧಿಯಲ್ಲಿ ಬ್ರಾಹ್ಮಣರನ್ನು ಸರಿಗಟ್ಟಲಾರರು. ಆದರೆ ಬದುಕಿಗಾಗಿ ಹೀನ ವೃತ್ತಿಗೆ ಇಳಿಯಲೂ ಆರರು. ಅವರು ಎಲ್ಲಿರಲಿ, ಹೇಗೇ ಇರಲಿ ಧೀರರಂತೆ ತಲೆ ಎತ್ತಿ ಬಾಳುತ್ತಾರೆ. ಆರ್ಥಿಕವಾಗಿ ಅವರು ಬೆಳೆಯಬೇಕು. ಸರ್ಕಾರದ ಭಿಕ್ಷೆಗೆ ಪಾತ್ರ ಕೈಚಾಚಬಾರದು. ಸ್ವಾವಲಂಬನೆ ಅವರ ದ್ದಾಗಬೇಕು. ಮುಖ್ಯವಾಗಿ ವೀರಶೈವ ಸಿರಿವಂತರು ತಮ್ಮ ಹಣವನ್ನು ಮಹೋದ್ಯಮ ಗಳಲ್ಲಿ ಮೊದಲು ತೊಡಗಿಸಲಿ. ಮಠ ಮಾನ್ಯಗಳು ತಮ್ಮ ಸಂಕುಚಿತತೆಯನ್ನು ಬಿಟ್ಟು ಸರ್ವತೋಮುಖ ಪ್ರಗತಿಗಾಗಿ ಅಹರ್ನಿಶಿ ದುಡಿಯಲಿ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಮಾಜಕ್ಕೆ ಅನ್ಯಧರ್ಮೀಯರಿಗಿಂತ ಸ್ವಧರ್ಮೀಯರಿಂದಲೇ ಅಪಾಯ ಹೆಚ್ಚು. ಅಂತಹ ಸಮಾಜಘಾತಕ ವ್ಯಕ್ತಿಗಳನ್ನು ಮೊಳಕೆಯಲ್ಲೇ ಮುರಿಯಬೇಕು. ಹೀಗೆ ಮಾಡುವಲ್ಲಿ ಮಾರ್ಗಗಳು ನೂರೆಂಟು. ಹೆತ್ತತಾಯನ್ನು ಪ್ರೀತಿಸುವ ಹಕ್ಕು ಎಲ್ಲ ಮಕ್ಕಳಿಗೂ ಇದೆ. ತಾಯಿಯಷ್ಟೇ ಸಮಾನವಾದ ಸಮಾಜವನ್ನು ಒಲಿಯುವುದು ಧರ್ಮಾಂಧತೆ ಎನಿಸದು. ಬೇರೊಬ್ಬನ ತಾಯಿಯನ್ನು ತೆಗಳುವುದು ದ್ರೋಹ; ಅಥವಾ ಬೇರೆಯವನು ಇವನನ್ನು ತೆಗಳುವುದು ದ್ರೋಹ.

ಪ್ರಿಯ ಬಂಧುಗಳೆ, ಹಾಗೂ ಗುರುಗಳೆ.
ನಿಮ್ಮ ತಾಯಿಯನ್ನು ಪ್ರೀತಿಸಿ:
ನಿಮ್ಮ ಧರ್ಮವನ್ನು ರಕ್ಷಿಸಿ:
ಇದು ನನ್ನ ಪ್ರಾರ್ಥನೆ;

ಮಲ್ಲಿಕಾರ್ಜುನಯ್ಯ ನಿಡುವಳ್ಳಿಮಠ ನಮಸ್ಕರಿಸಿ ಕುಳಿತಾಯಿತು.

ಶಿವರುದ್ರಯ್ಯನ ಪ್ರಾರ್ಥನೆಯ ಮೇರೆಗೆ ಶ್ರೀ ರಾಜಶೇಖರ ಸ್ವಾಮಿಗಳ ಅಧ್ಯಕ್ಷ ಭಾಷಣ ಆರಂಭವಾಯಿತು.

ಪೂಜ್ಯರೇ ಹಾಗೂ ನನ್ನ ಬಂಧುಗಳೇ—
ಸಮಾಜ ಬಾಂಧವರಿಬ್ಬರ ಕಳಕಳಿಯಿಂದ ಕೂಡಿದ ನುಡಿಗಳನ್ನು ಕೇಳಿ ಪರ ಮತ್ತು ವಿರೋಧ ವಿಚಾರ ಕಲ್ಲೋಲಗಳು ನಮ್ಮ ಹೃದಯಗಳಲ್ಲಿ ಎದ್ದಿರುವುದು ಸಹಜ. ಅವರ ಮಾತುಗಳು ಎಂಥವರ ಕರುಳನ್ನೂ ಹಿಂಡುವಂಥವು; ಆ ಬಗ್ಗೆ ವಿಚಾರವಂತ ಸಮಾಜವೇ ಇಂದು ಗಂಭೀರವಾಗಿ ಆಲೋಚಿಸಬೇಕಾಗಿದೆ. ಅವರ ಆವೇಶಪೂರ್ಣ ಮಾತುಗಳು ಕೆಲವರಿಗೆ ಬೇಸರ ತಂದಿರಬಹುದು. ಆದರೆ ದಯವಿಟ್ಟು ತಪ್ಪು ತಿಳಿಯಬೇಡಿ. ನಿಜವಾದ ಸಮಾಜ ಚಿಂತಕನ ಕಳಕಳಿ ಅವುಗಳಲ್ಲಿತ್ತು. ಆದರೂ ಅವರಲ್ಲಿ ನನ್ನ ಕೋರಿಕೆ ಇಷ್ಟೆ; ದಯವಿಟ್ಟು ನಿಮ್ಮ ಆವೇಶದ ಕುದುರೆಗೆ ಸಂಯಮದ ಕಡಿವಾಣ ಹಾಕಿ, ಕುದುರೆ ನಿಮ್ಮ ಹತೋಟಿಯಲ್ಲಿರಲಿ; ಅದಕ್ಕೆ ನಿಮ್ಮನ್ನೇ ಒಪ್ಪಿಸಿಕೊಳ್ಳಬೇಡಿ.

ಇಂದು ಯಾರಿಗೂ ಯಾವ ಸಮಾಜಕ್ಕೂ ಆಗಬಾರದ್ದೇನೂ ನಮಗೆ ನಮ್ಮ ಸಮಾಜಕ್ಕೆ ಆಗಿಲ್ಲ. ಯಾರೋ ನನ್ನನ್ನು ನಿನ್ನೆ ಪ್ರಶ್ನಿಸಿದರು ನೀವು ಶುದ್ಧ ಬುದ್ಧ ವಿರಕ್ತರಾಗಿ ಗುರುವರ್ಗದವರಿಗೆ ಅವರ ಮಾತುಗಳಿಗೆ ಮಣಿಯುವಿರೇಕೆ? ಎಂದು. ನಾನು ಹೇಳಿದೆ ವಿಭೂತಿತ್ವವಿದ್ದೆಡೆಯಲ್ಲೆಲ್ಲಾ ಮಣಿಯುತ್ತೇನೆ. ಗುರುವರ್ಗದವರಲ್ಲೂ ಅದಿದೆ ಎಂಬುದನ್ನು ಗುರುತಿಸಿದ್ದೇನೆ; ಮಣಿಯುತ್ತೇನೆ.

ವಿಶ್ವವೇ ನನ್ನ ಮನೆ, ಜನರೆಲ್ಲರೂ ನನ್ನ ಬಂಧು ಭಗಿನಿಯರು ಎಂದು ಭಾವಿಸಿ ಪ್ರೀತಿಸುತ್ತಿರುವ ಯಾವ ವಿರಕ್ತ ಮಠದ ಶಿವಯೋಗಿಗಳಿಗೂ ಯಾರ ಬಗೆಗೂ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದ್ವೇಷವಿಲ್ಲ: ಯಾರ ಬಗೆಗೂ ತಿರಸ್ಕಾರವಿಲ್ಲ. ಜಗತ್ತನ್ನೇ ಪ್ರೀತಿಸುವ ನಮಗೆ ನಮ್ಮ ಮನೆಯವರೇ ಆದ ಗುರುವರ್ಗದವರ ಬಗ್ಗೆ ದ್ವೇಷವೆ ? ಎಂತಹ ವಿಚಿತ್ರ ಪ್ರಶ್ನೆ ನನ್ನ ಮಿತ್ರನದು ಎನ್ನಿಸಿತು. ಗುರುಗಳು ಯಾರು ? ವಿರಕ್ತರು ಯಾರು ? ನಮ್ಮಲ್ಲಿ ಈ ಭೇದ ಇದೆಯೆ ! ಇರುವುದು ಯೋಗ್ಯವೆ ? ಇದ್ದರೆ ಅದರಲ್ಲಿ ಏನಾದರೂ ಅರ್ಥವಿದೆಯೇ ? ಇದನ್ನು ಆಲೋಚಿಸುತ್ತಾ ಹೋದರೆ ಈರುಳ್ಳಿ ಸಿಪ್ಪೆಯನ್ನು ಬಿಚ್ಚುತ್ತಾ ಹೋದಂತೆ ! ಎಲ್ಲ ಪದರಗಳನ್ನೂ ತೆರೆದ ಮೇಲೆ ಕಡೆಯಲ್ಲಿ ಏನೇನೂ ಉಳಿಯುವುದಿಲ್ಲ. ಹಾಗೆ ನಮ್ಮ ಸಂದೇಹ ಅಥವಾ ಪೂರ್ವಭಾವಿ ಆಲೋಚನೆಗಳು ಅಲ್ಲಿ ಬಯಲಾಗುತ್ತವೆ. ನೀರಿನ ಪಾತ್ರೆಗೆ ಬೆರಳಿಟ್ಟು ಚೀಪಿದಂತೆ, ಬರೀ ಪೊದೆಯನ್ನು ಬಡಿಯುತ್ತಾ ಕೂರುವುದು ಬೇಡ. ವೀರಶೈವ ವಿಶ್ವಧರ್ಮ ಗಳಲ್ಲಿ ಒಂದು. ಆದರ ವೈಶಿಷ್ಟ್ಯಗಳನ್ನು ಮನುಕುಲದ ಉದ್ಧಾರಕ್ಕಾಗಿ ವಿನಿಯೋಗಿ ಸೋಣ. ನಮ್ಮಲ್ಲಿರುವ ಶಕ್ತಿ ವ್ಯರ್ಥವಾಗಿ ತನ್ನಲ್ಲೇ ಕಿತ್ತಾಡಲು ಬಳಕೆಯಾಗದೆ, ವಿಶ್ವಕಲ್ಯಾಣಕ್ಕಾಗಿ ವಿನಿಯೋಗವಾಗಲಿ.

ಇಷ್ಟಕ್ಕೂ ಗುರು—ವಿರಕ್ತ ಎಂಬ ಭಿನ್ನತೆ ವೀರಶೈವರಲ್ಲಿ ಇಲ್ಲವೇ ಇಲ್ಲ. ಗುರು ವಿರಕ್ತ ಭೇದ ಅಥವಾ ಭಿನ್ನಭಾವನೆ ವೀರಶೈವದಲ್ಲಿಲ್ಲ ಎಂಬುದಕ್ಕೆ ನಮ್ಮೆದುರಿರುವ ನಮ್ಮ ಆತಿಥೇಯರಾದ ಪೂಜ್ಯಶ್ರೀ ಹಾನಗಲ್ಲ ಸದಾಶಿವ ಮಹಾಸ್ವಾಮಿಗಳೇ ಪ್ರತ್ಯಕ್ಷ ಸಾಕ್ಷಿಯಾಗಿದ್ದಾರೆ. ಈ ವಿಷಯ ಅನೇಕರಿಗೆ ತಿಳಿದಿರಲಿಕ್ಕಿಲ್ಲ. ಕೇಳಿ—

ನಮ್ಮ ಪ್ರಾತಃಸ್ಮರಣೀಯರಾದ ಹಾನಗಲ್ಲ ಕುಮಾರಸ್ವಾಮಿಗಳು 1906ರಲ್ಲಿ ಧಾರವಾಡ ಜಿಲ್ಲೆಯ ಅರಳೀಕಟ್ಟೆ ಗ್ರಾಮಕ್ಕೆ ಹೋಗಿ ಅಲ್ಲಿದ್ದ ಪುಣ್ಯದಂಪತಿಗಳ ಕಾರಣಿಕ ಶಿಶುವಿಗೆ 'ಚಂದ್ರಶೇಖರ' ಎಂದು ನಾಮಕರಣ ಮಾಡಿದರು. ಅನಂತರ ಆ ಮಗು ಮಗನಾಗಿ ಶಿವಯೋಗಮಂದಿರದಲ್ಲಿ ಕಲಿಯುತ್ತಿದ್ದಾಗ 'ರೇಣುಕಾರ್ಯ' ಎಂದು ಪುನರ್ ನಾಮಕರಣ ಮಾಡಿದರು. ತದನಂತರ ಹಾನಗಲ್ಲು ಮಠಕ್ಕೆ ಅಧಿಕಾರ ವಾದಾಗ 'ಸದಾಶಿವ ಸ್ವಾಮಿಗಳು' ಎಂಬ ನೂತನ ಅಭಿಧಾನನ್ನೀಯಲಾಯಿತು. ಚಂದ್ರಶೇಖರ, ರೇಣುಕಾರ್ಯನಾಗಿ ಶ್ರೀಮದ್‌ರಂಭಾಪುರೀ ವೀರಸಿಂಹಾಸನದ ಅಧಿಪತಿಯಾಗಬೇಗಿತ್ತು. ಆದರೆ ಭಕ್ತಾದಿಗಳ ಅಪೇಕ್ಷೆಯ ಮೇರೆಗೆ 'ಸದಾಶಿವ'ನಾಗಿ ಹಾನಗಲ್ಲ ಮಠಕ್ಕಾದರು. ವೀರಶೈವವನ್ನೆ ತಮ್ಮಲ್ಲಿ ಧಾರಣ ಮಾಡಿಕೊಂಡು ಹುಟ್ಟಿರುವ ಶ್ರೀ ಸದಾಶಿವ ಮಹಾಸ್ವಾಮಿಗಳು ಗುರು ಮತ್ತು ವಿರಕ್ತ ಎಂಬ ಭೇದ ಎಣಿಸುತ್ತಾರೆಯೇ ವೀರಶೈವರಲ್ಲಿ ? ಎಂದಿಗೂ ಇಲ್ಲ. ಅದೇ ರೀತಿ ನಮ್ಮ ಕಪ್ಪೂರು ಗದ್ದಿಗೆ ಮಠದ ಷಟ್‌ಸ್ಥಲಬ್ರಹ್ಮಿ ಶ್ರೀ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿ ಗಳ ಜನನ, ಜಂಗಮತ್ವಗಳು, ಇವೆಲ್ಲ ನಿಮಗೆ ತಿಳಿದವುಗಳೇ ಆಗಿವೆ.

ನಮ್ಮ ಗುರುಗಳಾದ ಶ್ರೀ ಶಿವಬಸವ ಮಹಾಸ್ವಾಮಿಗಳನ್ನೇ ತೆಗೆದುಕೊಳ್ಳಿ : ತಾಯಿ ತಂದೆ ಇಲ್ಲದ ತಬ್ಬಲಿಯಾದ ಅವರನ್ನು ಚಿಕ್ಕಂದಿನಲ್ಲಿ ತಾಯಿಯಾಗಿ ಜೋಪಾನ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಾಡಿದವರು ಯಾರು ? ಹಣಬರಟ್ಟಿಪಟ್ಟದ ದೇವರು ! ಪಟ್ಟದಮಠದ ಸ್ವಾಮಿಗಳಾದ ಅವರು ಇವರು ವಿರಕ್ತರಾಗುತ್ತಾರೆ ಎಂದು ತಿರಸ್ಕರಿಸಲಿಲ್ಲ. ಇವರು ಸ್ವಾಮಿಗಳಾದ ಮೇಲೂ ನೋಡಿ ಆನಂದಿಸಿದರು ; ಹರಸಿ, ಆಶೀರ್ವದಿಸಿ, ಹಿತವಚನವಿತ್ತು ಕಳುಹಿಸಿದರು. ಅಂತಹ ಮಾತೃವಾತ್ಸಲ್ಯದ ಪಟ್ಟದದೇವರನ್ನು ನಮ್ಮ ಶಿವಬಸವ ಸ್ವಾಮಿಗಳು ಮರೆಯಲು ಸಾಧ್ಯವೆ ? ನಾಗನೂರಿನಲ್ಲಿರುವ ಐದು ಪಟ್ಟದ ಮಠಗಳ ಗುರುಗಳು ಇವರನ್ನು ಸೆರೆರಕ್ತವನ್ನು ಹಂಚಿಕೊಂಡು ಹುಟ್ಟಿದ ಸೋದರನಿಗಿಂತಲೂ ಮಿಗಿಲಾಗಿ ಕಾಣುತ್ತಿದ್ದಾರೆ. ಅವರ ಮಮತೆ ಪ್ರೀತಿಗಳನ್ನು ಇವರು ತಿರಸ್ಕರಿಸಲು ಸಾಧ್ಯವೆ ? ಯುಕ್ತವೆ ?

ಇವೇನೇ ಇರಲಿ, ಗುರುವಿರಕ್ತರಿಬ್ಬರೂ ಒಂದೇ ಬಳ್ಳಿಯ ಎರಡು ಹೂವುಗಳು. ಇಬ್ಬರೂ ಸೇರಿಯೇ ವೀರಶೈವವನ್ನು ಸ್ಥಾಪಿಸಿದ್ದಾರೆ ; ಅದೂ ಏಕಕಾಲದಲ್ಲಿ ಅವರಿಬ್ಬರ ಸಹಯೋಗದಿಂದ ಈ ಸಿದ್ಧಿ ಪ್ರಾಪ್ತವಾಗಿದೆ ಎಂಬುದು ನನ್ನ ಅನಿಸಿಕೆ. ಬಹಳ ದಿವಸಗಳಿಂದಲೂ ನಾನು ವೀರಶೈವದ ಮೂಲ ಕುರಿತು ಸಂಶೋಧನೆ ನಡೆಸುತ್ತಲೇ ಇದ್ದೆ. ಅಲ್ಲಿ, ಅನಾದಿ ಸಂದರ್ಭದಲ್ಲಿ ಓರ್ವ ನಿರಂಜನ ಜಂಗಮ ಸಿಕ್ಕಿದ. ಆ ನಿರಂಜನ ಜಂಗಮನಿಂದಲೇ ವೀರಶೈವ ಸಂಸ್ಥಾಪಿತವಾಗಿಲ್ಲವೇಕೆ ? ಎಂದು ಚರ್ಚಿಸುವ ವೇಳೆಗೆ ಸರಿಯಾಗಿ ಜಗದ್ಗುರು ಪಂಚಾಚಾರ್ಯರ ಪೂರ್ವೇತಿಹಾಸ ಸಿಕ್ಕಿತು. ಅದನ್ನೇ ನಿನ್ನೆ ಡಾ॥ಸ್ವಾಮಿಯವರು ತಮ್ಮ ಪ್ರಬಂಧವನ್ನು ಮಂಡಿಸುತ್ತಾ ವೀರಶೈವ ಕುರಿತ ಟಿಪ್ಪಣಿಯೊಂದನ್ನು ಕೊಟ್ಟರು. ಆದು ತುಂಬಾ ಮೌಲಿಕ ಸಂಶೋಧನೆಯ ಫಲ. ಪ್ರಾಚೀನ ಶೃಂಗೇರಿಯ ರೇವಣಸಿದ್ಧ ಸಂಪ್ರದಾಯದಿಂದ ಹೊರಬಂದ ರೇಣುಕರು, ಬಾಳೇಹಳ್ಳಿಯಲ್ಲಿ ಬೇರೊಂದು ವೀರಪೀಠವನ್ನು ಸ್ಥಾಪಿಸಿಕೊಂಡರಷ್ಟೆ. ಅವರಂತೆಯೇ ನಿರಂಜನ ಜಂಗಮನೆನ್ನುವವನು ತಾನೊಂದು ನಿರಂಜನ ಪೀಠವನ್ನು ಆ ಕಾಲಕ್ಕಾಗಲೇ ಸಂಸ್ಥಾಪಿಸಿಕೊಂಡಿದ್ದನು. ಆದರೆ ಜಂಗಮನೆನಿಸಿದ್ದ ಆತ ಸದಾ ದೇಶ ಸಂಚಾರದಲ್ಲಿ ನಿರತನಾಗಿರುತ್ತಿದ್ದ. ಅಂತಹ ಸಂಚಾರ ಸಂದರ್ಭದಲ್ಲಿ ಒಮ್ಮೆ ಆದಿ ಜಗದ್ಗುರು ರೇಣುಕರನ್ನು ಸಂದರ್ಶಿಸಿದ್ದಾನೆ ; ವೀರಶೈವ ಕುರಿತು ಪ್ರಸ್ತಾಪಿಸಿ, ವಿಚಾರ ಮಂಥನಮಾಡಿ, ಅದರದೇ ಆದ ಒಂದು ನೀಲ ನಕ್ಷೆಯನ್ನು ತಯಾರಿಸಿ, ಅದಕ್ಕೊಂದು ಸಂಹಿತೆಯನ್ನು ಸೃಷ್ಟಿಸಿಕೊಟ್ಟನು. ಆಚಾರ್ಯರು ಷಟ್‌ಸ್ಥಲ, ಅಷ್ಟಾವರಣ, ಪಂಚಾಚಾರ ಮೊದಲಾದ ವೀರಶೈವ ಸಿದ್ಧಾಂತಗಳನ್ನು ರೂಪಿಸಿಕೊಟ್ಟರೆ, ನಿರಂಜನ ಜಂಗಮಮೂರ್ತಿಯು ಸ್ಥಾವರವನ್ನು ತೊರೆದ ಇಷ್ಟಲಿಂಗವನ್ನು ಪ್ರಾಚುರ್ಯಕ್ಕೆ ತಂದನು. ಇವರಿಬ್ಬರೂ ದೀರ್ಘಕಾಲ ಚಿಂತಿಸಿ, ತಮ್ಮ ತಪೋಬಲದಿಂದ ನೂತನ ಧರ್ಮ–ದರ್ಶನಗಳನ್ನು ಸಾಕ್ಷಾತ್ಕರಿಸಿಕೊಂಡು, ಅದನ್ನು 'ಶಿವಾದ್ವೈತ' ಎಂದು ಕರೆದರು. ಹಾಗೆ ಕರೆದದ್ದರಲ್ಲಿ ಅರ್ಥವೂ ಇದೆ. ಅದು ಅದ್ವೈತ ಅಲ್ಲ, ಅದರಿಂದ ಭಿನ್ನವಾದ, ಆದರೆ ವಿಶಿಷ್ಟವೆನಿಸಿದ 'ಶಿವಾದ್ವೈತ'. ಅದರಲ್ಲಿ ಅದ್ವೈತದಂತೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜೀವನೇ ದೇವನಾಗಿ 'ಅಹಂ ಬ್ರಹ್ಮಾಸ್ಮಿ' ಎನ್ನುವುದಿಲ್ಲ. ಜೀವ-ದೇವ ಸೇರಿ 'ಶಿವ' ಎಂಬ ಪರಿಣಾಮ ಪಡೆದ ವಿಶಿಷ್ಟ ತತ್ತ್ವ ಅಡಗಿದೆ. ಹನ್ನೆರಡನೆಯ ಶತಮಾನದ ಅನಂತರದಲ್ಲಿ ದ್ವೈತ, ವಿಶಿಷ್ಟಾದ್ವೈತ ದರ್ಶನಗಳು ಹುಟ್ಟಿಕೊಂಡಮೇಲೆ ಶಕ್ತಿ ವಿಶಿಷ್ಟಾದ್ವೈತ, ದ್ವೈತಾದ್ವೈತ ಎಂಬ ಪರ್ಯಾಯ ನಾಮಗಳನ್ನು ಅದು ಪಡೆದಿದ್ದಿರ ಬೇಕು.

ವೀರಶೈವ ಮಹಾಮತ ಸ್ಥಾಪಕರಾದ ರೇಣುಕರು ಮತ್ತು ನಿರಂಜನ ಜಂಗಮ ಮೂರ್ತಿಗಳಿಬ್ಬರೂ ಬಹುಶಃ ಕ್ರಿ. ಶ. 8ನೆಯ ಶತಮಾನದವರು. ಅದಕ್ಕಿಂತಲೂ ಹಿಂದಿದ್ದಿರಬೇಕೆಂದು ನನಗನ್ನಿಸುವುದಿಲ್ಲ. ನಾವು ಪ್ರಾಚೀನರು ಎಂದು ಹೇಳಿಕೊಂಡ ಮಾತ್ರಕ್ಕೆ ನಮ್ಮ ಕಿಮ್ಮತ್ತು ಹೆಚ್ಚುವುದಿಲ್ಲ; ನಾವು ಅರ್ವಾಚೀನರು ಎಂದು ಕರೆದಾಕ್ಷಣಕ್ಕೇ ಅದು ಕಡಿಮೆ ಆಗುವುದಿಲ್ಲ. ನಮಗೆ ಬೆಲೆ ಬರುವುದು ನಮ್ಮ ನಮ್ಮ ಯೋಗ್ಯತೆ, ಅರ್ಹತೆ, ಅಂತಸ್ಸತ್ವಗಳಿಂದ, ನಮ್ಮ ಧರ್ಮದರ್ಶನಗಳಲ್ಲಿರುವ ಶ್ರೇಷ್ಠ ಮೌಲ್ಯ ಗಳಿಂದ. ಅವುಗಳಲ್ಲಿನ ವಿಶ್ವ ವಿಶಾಲ ಭಾವನೆಗಳಿಂದ, ಅವುಗಳ ತತ್ತ್ವ ಸಿದ್ಧಾಂತಗಳು ಮಾನವೋದ್ಧಾರಕ್ಕೆ, ಅವನ ಬದುಕಿನ ಒಳಿತಿಗೆ ಎಷ್ಟರಮಟ್ಟಿಗೆ ಸಹಾಯಕವಾಗುತ್ತವೆ ಎನ್ನುವ ಮಾಪನದಿಂದ, ಪುರಾತನ ಯುಗಗಳದ್ದೆಂದು ಹೇಳಿಕೊಂಡದ್ದರಿಂದಲ್ಲ. ಆದ್ದರಿಂದ ತಾವುಗಳೆಲ್ಲರೂ ಸಹನೆಯಿಂದಿರುವುದಾದರೆ ಸ್ಪಷ್ಟ ಹೇಳುತ್ತೇನೆ. ಈ ಧರ್ಮದ ಸಂಸ್ಥಾಪಕದ್ವಯರ ಕಾಲ ಕ್ರಿ. ಶ. 8ನೇ ಶತಮಾನಕ್ಕಿಂತ ಹಿಂದಿನದ್ದಲ್ಲ ಎಂದು. ಇದನ್ನು ವಚನಗಳ ಆಧಾರದ ಮೇಲೆ ಸಾಬೀತುಪಡಿಸಿ ತೋರಿಸುತ್ತೇನೆ. ನಮ್ಮ ವಚನಕಾರರ ಅನೇಕ ವಚನಗಳಲ್ಲಿ ನಿರಂಜನಮೂರ್ತಿಯ ಬಣ್ಣನೆ ಬರುತ್ತದೆ. ಉದಾಹರಣೆಗೆ ಎಡೆಯೂರು ಶ್ರೀ ಸಿದ್ಧಲಿಂಗೇಶ್ವರರು ತಮ್ಮ ಷಟಸ್ಥಲ ಜ್ಞಾನ ಸಾರಾಮೃತದ ಮೊದಲ ವಚನಗಳಲ್ಲಿ 'ನಿರವಯ ನಿರಾಮಯ ನಿರಾಕುಳಂ, ನಿರ್ದ್ವಂದ್ವಂ, ನಿರ್ಮಳ ನಿಜಸ್ವರೂಪಂ, ನಿರ್ಭಾವ ನಿಃಪುರುಷ ನಿರಂಜನ ನಿರಾಕಾರಂ, ನಿರಾವರಣ ನಿರುಪಮ ನಿರ್ಗುಣ ನಿರಾಧಾರ ನಿರಾಲಂಬಂ' ಎಂದೆಲ್ಲ ಸಂಬೋಧಿಸಲ್ಪಟ್ಟಿರುವ ವ್ಯಕ್ತಿ ಯಾರು ? ಅವನೇ ನಿರಂಜನ ಜಂಗಮಮೂರ್ತಿ! ಆ ನಿರಂಜನ ಜಂಗಮನಿಂದಾ ರಂಭವಾದ ಗುರುಪರಂಪರೆ ಹೀಗಿದೆ:

ಅನಾದಿ ಗಣೇಶ್ವರನ ಶಿಷ್ಯ ಆದಿಗಣೇಶ್ವರ ;
ಆದಿಗಣೇಶ್ವರನ ಶಿಷ್ಯ ನಿರ್ಮಾಯನೆಂಬ ಗಣೇಶ್ವರ ;
ನಿರ್ಮಾಯನೆಂಬ ಗಣೇಶ್ವರನ ಶಿಷ್ಯರು ನಿರಂಜನನೆಂಬ ಗಣೇಶ್ವರ ;
ನಿರಂಜನನೆಂಬ ಗಣೇಶ್ವರನ ಶಿಷ್ಯರು ಜ್ಞಾನಾನಂದನೆಂಬ ಗಣೇಶ್ವರನು ;
ಜ್ಞಾನಾನಂದನೆಂಬ ಗಣೇಶ್ವರನ ಶಿಷ್ಯರು ಆತ್ಮಗಣೇಶ್ವರನು ;
ಆತ್ಮಗಣೇಶ್ವರನ ಶಿಷ್ಯರು ಅಧ್ಯಾತ್ಮಗಣೇಶ್ವರ ;
ಅಧ್ಯಾತ್ಮಗಣೇಶ್ವರನ ಶಿಷ್ಯರು ರುದ್ರನೆಂಬ ಗಣೇಶ್ವರ:

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ರುದ್ರನೆಂಬ ಗಣೇಶ್ವರನ ಶಿಷ್ಯರು ಬಸವಪ್ರಭುದೇವರು ;
ಬಸವಪ್ರಭುದೇವರ ಶಿಷ್ಯರು ಆದಿಲಿಂಗದೇವರು ;
ಆದಿಲಿಂಗದೇವರ ಶಿಷ್ಯರು ಚೆನ್ನವೀರೇಶ್ವರದೇವರು ;
ಚೆನ್ನವೀರೇಶ್ವರದೇವರ ಶಿಷ್ಯರು ಹರದನಹಳ್ಳಿಯ ಗೋಸಲದೇವರು ;
ಹರದನಹಳ್ಳಿಯ ಗೋಸಲದೇವರ ಶಿಷ್ಯರು ಶಂಕರದೇವರು ;
ಶಂಕರದೇವರ ಶಿಷ್ಯರು ದಿವ್ಯಲಿಂಗದೇವರು ;
ದಿವ್ಯಲಿಂಗದೇವರ ಶಿಷ್ಯರು ಚೆನ್ನಬಸವೇಶ್ವರದೇವರು ;
ಚೆನ್ನಬಸವೇಶ್ವರ ದೇವರ ಕರಕಮಲದಲ್ಲಿ ಉತ್ಪತ್ತಿಯಾದ
ಶಿಶು ಸಿದ್ಧಲಿಂಗ ನಾನಯ್ಯ.

ಈ ವಚನದ ಪ್ರಕಾರ ಅವರೇ ಹೇಳಿಕೊಳ್ಳುವಂತೆ ಗುರುಪರಂಪರೆಯಲ್ಲಿ ಸಿದ್ಧಲಿಂಗೇಶ್ವರರು 16ನೆಯವರು. ಅವರಿಂದ ಹಿಂದಕ್ಕೆ 50 ವರ್ಷಗಳಿಗೊಬ್ಬ ಗುರುವೆಂದು ಲೆಕ್ಕಹಾಕಿದರೆ ಎಂಟುನೂರು ವರ್ಷಗಳ ಹಿಂದೆ ಹೋಗುತ್ತದೆ. ಅಂದರೆ ಕ್ರಿ. ಶ. 7–8ರ ಶತಮಾನಕ್ಕೆ ಹೋಗಿ ನಿಲ್ಲುತ್ತದೆ. ಅದು ಜಗದ್ಗುರು ಶಂಕರಾಚಾರ್ಯರು ಆಗಿ ಹೋಗಿದ ಕಾಲ, ಜಗದ್ಗುರು ರೇಣುಕರು ಆಚಾರ್ಯಪೀಠವನ್ನು ಸಂಸ್ಥಾಪಿಸಿದ ಕಾಲ, ಅನಾದಿ ಗಣೇಶ್ವರನ ಗುರು ಶ್ರೀ ನಿರಂಜನ ಜಂಗಮಮೂರ್ತಿಯು ನಿರಂಜನ ಪೀಠವನ್ನು ಪ್ರತಿಷ್ಠಾಪಿಸಿದ ಯುಗ ಅದೇ ಆಗಿದ್ದಿರಬಹುದು.

ಹೀಗೆ ಕ್ರಿ. ಶ. 7–8ನೆಯ ಶತಮಾನದಲ್ಲಿ ಮೊಳಕೆವೊಡೆದು ಚಿಗುರಿ ಚೆಲುವಾಗಿ, ಹೂತು ಹೊಲಬಾದ ವೀರಶೈವ ವೃಕ್ಷ ಸತ್‌ಫಲವನ್ನು ಕೊಟ್ಟದ್ದು 12ನೆಯ ಶತಮಾನದಲ್ಲಿ, ಬಸವಾದಿ ಪ್ರಮಥರ ಕೈಯಲ್ಲಿ. ಅಣ್ಣ ಅದಕ್ಕೆ ಸಮಾನತೆ, ಮಾನವ ಪ್ರೇಮ, ಕಾಯಕ, ದಾಸೋಹ ಮೊದಲಾದ ಸಾಮಾಜಿಕ ಚಳವಳಿಯ ಚಾಲನೆ ಕೊಟ್ಟರೆ, ಪ್ರಭುದೇವರು ಯೋಗದ, ಅದರಲ್ಲೂ 'ಶಿವಯೋಗ'ದ ಕಲ್ಪನೆ ತುಂಬಿದರು. ಚನ್ನಬಸವಣ್ಣನವರು ನೂತನ ನೇಮ, ನಿಯಮ, ಸಂಹಿತೆಗಳನ್ನು ರೂಪಿಸಿಕೊಟ್ಟರು. ಎಡೆಯೂರು ಶ್ರೀ ಸಿದ್ಧಲಿಂಗೇಶ್ವರರು ಸ್ಥಲವಿಸ್ತರಣೆ, ದರ್ಶನದ್ಯುತಿ ಪ್ರಾಚುರ್ಯ ಗಳನ್ನೂ ನೂರೊಂದು ವಿರಕ್ತರ ನೆರವಿನಿಂದ ಪ್ರಚಾರಕ್ಕೆ ತಂದರು. ಹೀಗೆ ವೀರಶೈವ ವಿಶ್ವಧರ್ಮವಾಗಿ, ವಿನೂತನ ದರ್ಶನವಾಗಿ ಅಸ್ತಿತ್ವಕ್ಕೆ ಬಂದು ಮಾನವ ಕುಲವನ್ನೇ ಉದ್ಧರಿಸುವ ಸಮರ್ಥ ಸಾಧನವಾಗಿದೆ. ಇದರ ಸೃಷ್ಟಿಗೆ ಕಾರಣರಾದ ಗುರು–ವಿರಕ್ತ ರಿಬ್ಬರೂ ತಮ್ಮ ತಮ್ಮ ಕರ್ತವ್ಯಗಳನ್ನು ಹಂಚಿಕೊಂಡು ಧರ್ಮಕ್ಕೆ ಸಂಬಂಧಿಸಿದ ಕಾರ್ಯಗಳನ್ನು ಅನಾದಿಕಾಲದಿಂದಲೂ ತಪ್ಪದೆ ಆಚರಿಸಿಕೊಂಡು ಬರುತ್ತಿದ್ದಾರೆ.

ಇಷ್ಟೇ ಅಲ್ಲದೆ ವೀರಶೈವ ಗುರು, ಲಿಂಗ, ಜಂಗಮ ಈ ಮೂವರನ್ನೂ ಒಂದೇ ಸ್ಥಾನದಲ್ಲಿಟ್ಟು ಗೌರವಿಸಿದೆ. ಗುರು ಬೇರೆ ಅಲ್ಲ, ಲಿಂಗ ಬೇರೆ ಅಲ್ಲ, ಅದೇ ರೀತಿ ಜಂಗಮ ಬೇರೆ ಅಲ್ಲ. ಆಚಾರ್ಯರು, ನಿರಾಭಾರಿ ಜಂಗಮರು ಸಕಲ, ಸಂಪೂಜ್ಯ ಇಷ್ಟಲಿಂಗ–ಈ ಮೂವರೂ ಶಿವನಲ್ಲದೆ ಬೇರೆ ಅಲ್ಲ ; ಇವರಲ್ಲಿ ಭೇದ ಸಲ್ಲ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಡೆಯಲ್ಲಿ ಒಂದು ಮಾತು :

ಇತ್ತೀಚೆಗೆ ಬಸವಣ್ಣನವರೇ ವೀರಶೈವ ಮಹಾಮತ ಸ್ಥಾಪಕರು ಎಂಬ ಕೂಗು ಕೇಳಿ ಬರುತ್ತಿದೆ. ಅದು ಸತ್ಯಕ್ಕೆ ದೂರವಾದದ್ದು. ವಿಶ್ವ ಮಾನವನಾದ ಅಣ್ಣ ಯಾವುದೇ ಧರ್ಮ ಅಥವಾ ಮತ ಸ್ಥಾಪಕನಲ್ಲ, ಜಗದ್ಗುರುವಲ್ಲ, ಪಲ್ಲಕ್ಕಿಯಲ್ಲಿ ಕುಳಿತು ಮೆರೆದವನಲ್ಲ, ಪ್ರವಾಗಿಯೂ ಅಲ್ಲ. ಆತ ತುಂಬು ವಾಸ್ತವವಾದಿ ; ಮಹಾ ಮಾನವ, ಆದಿ ಜಗದ್ಗುರು ರೇಣುಕಾಚಾರ್ಯರು ಮತ್ತು ಆದಿ ನಿರಂಜನ ಜಂಗಮ ಮೂರ್ತಿ—ಇವರು ಸಂಸ್ಥಾಪಿಸಿದ ವಿಶಿಷ್ಟ ಧರ್ಮವನ್ನು ವಿಶ್ವ ಧರ್ಮವನ್ನಾಗಿಸಿದ ಕೀರ್ತಿ ಅಣ್ಣನಿಗೆ ಸಲ್ಲುತ್ತದೆ. ಇದನ್ನರಿತು ವೀರಶೈವರು ಧರ್ಮದ ಅಪಾರ್ಥಕ್ಕೆಡೆ ಗೊಡದೆ ಒಂದಾಗಿ, ಚೆಂದಾಗಿ ಬದುಕುವಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮಹಾನ್ ವ್ಯಕ್ತಿಗಳ ತಪೋಬಲದಿಂದ ರೂಪಿತವಾದ ವಿಶ್ವಮಾನವ ಧರ್ಮವಾದ ವೀರಶೈವ ವನ್ನು ತಮ್ಮ ಸ್ವಾರ್ಥ ಸಾಧನೆಗಾಗಿ, ಹೊಟ್ಟೆಪಾಡಿಗಾಗಿ ದುಡಿಸಿಕೊಳ್ಳುವ, ದುರುಪಯೋಗ ಮಾಡಿಕೊಳ್ಳುವ ಹೇಯ ಕೃತ್ಯವನ್ನು ನಿಜವಾದ ವೀರಶೈವರು ಯಾರೂ ಮಾಡಬಾರದೆಂದು ಕಳಕಳಿಯಿಂದ ಮನವಿಮಾಡಿಕೊಳ್ಳುತ್ತೇನೆ.

ಸಭೆಸೇರಿದ ಸಮಾಜದ ಗಣ್ಯರನ್ನು ದೈವದವರು ಎಂದು ಕರೆಯುತ್ತಾರೆ. ನೀವೆಲ್ಲರೂ ದೇವ ದೇವನಿಗೆ ಸಮಾನರು. ದೇವರಿಂದ ಲೋಕಕ್ಕೆ ದ್ರೋಹ ಆಗಬಾರದು; ಧರ್ಮಕ್ಕೆ ದ್ರೋಹ ಆಗಬಾರದು; ದೇಶಕ್ಕೆ ದ್ರೋಹ ಆಗಬಾರದು. ಯಾವುದೇ ಒಂದು ಕ್ರಿಮಿಕೀಟಕ್ಕೂ ದ್ರೋಹ ಆಗಬಾರದು. ಅದೇ ರೀತಿ ನಿಮಗೇ ನೀವು ವಿಷಹಾಕಿಕೊಳ್ಳಲೂ ಬಾರದು! ಇದು ನನ್ನ ಪ್ರಾರ್ಥನೆ ಎಂದು ಭಾವಿಸಿ, ಈ ಮೂರೂ ದಿನಗಳಲ್ಲಿ ಶಿವಯೋಗ ಮಂದಿರದಲ್ಲಿ ನಡೆದ ಶಿವಾನುಭವ ಸಮ್ಮೇಳನದ ಬಗ್ಗೆ ಸದ್ಭಾವನೆಯನ್ನು ತುಂಬಿಕೊಂಡು ಹೋಗಬೇಕೆಂದು ನಮ್ಮ ಅಥಿತೇಯರಾದ ಪರಮಪೂಜ್ಯ ಶ್ರೀ ಹಾನಗಲ್ಲ ಸದಾಶಿವಸ್ವಾಮಿಗಳ ಪರವಾಗಿ ಕೇಳಿಕೊಳ್ಳುತ್ತೇನೆ.'

ವಂದನಾರ್ಪಣೆಯಾಯಿತು. ಆ ವೇಳೆಗೆ ಸರಿಯಾಗಿ ಮೇಲೆದ್ದ ಶ್ರೀ ಶಿವಬಸವ ಸ್ವಾಮಿಗಳು ಒಂದು ಪ್ರಕಟಣೆ ಹೊರಡಿಸಿದರು :

ಬರುವ ಶಿವರಾತ್ರಿಯಂದು ನಮ್ಮ ಶ್ರೀ ರಾಜಶೇಖರ ಸ್ವಾಮಿಗಳಿಗೆ ನಾಗನೂರು ರುದ್ರಾಕ್ಷಿ ಮಠದ ಪಟ್ಟಾಧಿಕಾರ! ಆಹ್ವಾನ ಪತ್ರಿಕೆಗಳನ್ನು ಕಳುಹಿಸುತ್ತೇನೆ ; ಬಿನ್ನಹವನ್ನು ಮಾಡಿಕೊಳ್ಳುತ್ತೇನೆ. ಇದು ಮುಂಗಡ ಆಹ್ವಾನ.' ಎಂದರು.

ಸಭೆ ಮುಗಿಯಿತು.

ಸಮಸ್ಯೆ ಉತ್ತರ ಕಂಡುಕೊಂಡಿತು!

ಬಿಕ್ಕಟ್ಟು ಸಡಿಲವಾಯಿತು!

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಏಳು

ಮೂರನೆಯ ದಿನಕ್ಕೆ ಶಿವಾನುಭವ ಸಮ್ಮೇಳನ ಕಾರ್ಯಕ್ರಮ ಮುಗಿಯಿತು. ನಾಲ್ಕನೆಯ ದಿನವು ಎಚ್ಚೆತ್ತಾಗ ಶಿವಯೋಗ ಮಂದಿರ ಹಿಂದಿನ ಗದ್ದಲವನ್ನೆಲ್ಲಾ ನೀಗಿಕೊಂಡು ಪ್ರಶಾಂತವಾಗಿತ್ತು. ಸಮ್ಮೇಳನಕ್ಕಾಗಿ ಬಂದಿದ್ದ ಭಕ್ತರುಗಳು ತಮ್ಮ ತಮ್ಮ ಊರುಗಳಿಗೆ ಹಿಂದಿನ ರಾತ್ರಿಯೇ ಹೋಗಿದ್ದರು. ಆದರೆ ಎಲ್ಲ ಮಠಾಧಿಪತಿಗಳೂ, ಕೆಲವರು ವಿಚಾರಶೀಲ ವಿದ್ವಾಂಸರೂ, ಸಮಾಜದ ನೇತಾರರೂ ಉಳಿದುಕೊಂಡಿದ್ದರು.

ನಾಲ್ಕನೆಯ ದಿನದ ಬೆಳಗಿನ ಕರ್ಮಗಳು ಮುಗಿದ ಮೇಲೆ ಗಣ್ಯರುಗಳ ವಿಚಾರ ಸಭೆ ಆರಂಭವಾಯಿತು. ವೀರಶೈವದ ಸಂಘಟನೆ ಬಗ್ಗೆ, ವೀರಶೈವ ಸಮನ್ವಯದ ಬಗ್ಗೆ, ಸಮಾನ ಹಾಗೂ ಶ್ರೇಷ್ಠ ಸಂಹಿತೆಯ ಸೃಷ್ಟಿಯ ಬಗ್ಗೆ ಸ್ಪಷ್ಟ ಅಭಿಪ್ರಾಯಗಳು ಮೂಡಿಬಂದುವು. ವಿಷಯಗಳು ಕೂಲಂಕಶವಾಗಿ ಚರ್ಚಿತವಾಗಿ ಸಭೆಯ ಸಮ್ಮತಿ ಪಡೆದುವು.

ಪರಮಪೂಜ್ಯ ಶ್ರೀ ಶಿವಬಸವಸ್ವಾಮಿಗಳು ಕಡೆಯಲ್ಲಿ ಆಶ್ರಮದ ವಟುಗಳನ್ನು ಉದ್ದೇಶಿಸಿ ಎರಡು ಮಾತುಗಳನ್ನಾಡಿದರು;

"ಶಿವಸ್ವರೂಪಿಗಳಾದ ವಟುಗಳೆ"

ಸಂಬೋಧನೆಯನ್ನು ಕೇಳಿದ ಕೂಡಲೇ ಎಲ್ಲ ವಟುಗಳೂ ವಟಗುಟ್ಟತೊಡಗಿದರು. ತಮ್ಮ ತಮ್ಮಲ್ಲಿ ಪಿಸುಗುಟ್ಟ ಹತ್ತಿದರು. ಇಷ್ಟು ದೊಡ್ಡ ಮಹಾನುಭಾವರು ನಮ್ಮನ್ನು ಶಿವಸ್ವರೂಪಿಗಳು ಎನ್ನುವರಲ್ಲಾ ಎಂದುಕೊಳ್ಳುತ್ತಿದ್ದರು.

ಅದನ್ನು ಗಮನಿಸಿದ ಶ್ರೀ ಶ್ರೀಗಳವರು—

"ನಿಮ್ಮ ಗೊಣಗಿಗೆ ಕಾರಣ ತಿಳಿಯಿತು—ಕೇಳಿ :

ಒಮ್ಮೆ ಅಣ್ಣನ ಬಳಿಗೆ ಸಂಗಮನಾಥ ಬಂದನಂತೆ ! ಬಂದು;

> ಬಸವ ಬಾರಯ್ಯ, ಮರ್ತ್ಯಲೋಕದೊಳಗೆ
> ಭಕ್ತರುಂಟೆ ಹೇಳಯ್ಯಾ

ಎಂದು ಪ್ರಶ್ನಿಸಿದನಂತೆ.

> ಮತ್ತಾರೂ ಇಲ್ಲವಯ್ಯಾ, ಮತ್ತಾರೂ ಇಲ್ಲವಯ್ಯಾ,
> ಮತ್ತಾರೂ ಇಲ್ಲವಯ್ಯಾ ನಾನೊಬ್ಬನೇ ಭಕ್ತ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಈ ಮಾತು ಕೇಳಿ ಸಂಗಮನಾಥನಿಗೇ ಆಶ್ಚರ್ಯವಾಗಿರಬೇಕು. ಏನಿದು ತಾನೊಬ್ಬನೇ ಭಕ್ತ ಎಂದು ಜಂಬಕೊಚ್ಚಿಕೊಳ್ಳುತ್ತಿದ್ದಾನೆ ಬಸವಣ್ಣ ಅನ್ನಿಸಿದ್ದಿರಬೇಕು.

ಅನಂತರ ಕೇಳಿದ ಸಂಗಮನಾಥ—ಉಳಿದವರು ? ಎಂದು

ಅದಕ್ಕೆ ಬಸವಣ್ಣ ಉತ್ತರವಿತ್ತನಂತೆ :

ಮರ್ತ್ಯಲೋಕದೊಳಗಣ ಭಕ್ತರಲ್ಲರೂ
ಜಂಗಮ ಲಿಂಗ !
ನೀನೇ ಅಯ್ಯಾ !!
ಕೂಡಲ ಸಂಗಮದೇವಾ.

—ಅಣ್ಣನ ಕಣ್ಣಿಗೆ ಸರ್ವರೂ ಶಿವಸ್ವರೂಪಿಗಳೇ ಆಗಿ ಗೋಚರಿಸಿದರು. ನನ್ನ ಕಣ್ಣಿಗೂ ನೀವು ಸಾಕ್ಷಾತ್ ಪರಶಿವ ಪರಂಜ್ಯೋತಿಗಳೇ !

ಮಕ್ಕಳು ದೇವರಿಗೆ ಸಮಾನ ತಂದೆ ತಾಯಿಗಳಿಗೆ. ಅದೇ ರೀತಿ ವೀರ ವಿರಾಗಿಗಳಾದ ನಮ್ಮಂಥವರಿಗೆ ನಿಮ್ಮಂತಹ ವಿದ್ಯಾರ್ಥಿಗಳೇ ದೇವರುಗಳು. ನಾನು ನಿತ್ಯವೂ ಒಂದು ಕೈಯಲ್ಲಿ ಇಷ್ಟಲಿಂಗವನ್ನು ಪೂಜಿಸಿದರೆ, ಮತ್ತೊಂದರಲ್ಲಿ ನಿಮ್ಮಂತಹ ವಟು ಪಟುಗಳನ್ನು, ತೇಜಸ್ವಿಗಳನ್ನು ಪೂಜಿಸುತ್ತೇನೆ. ನಾಡಿನ ಅದೃಷ್ಟದೇವತೆ ತನ್ನ ಭಾಗ್ಯದ ಕೀಲಿಯನ್ನು ನಿಮ್ಮ ಕೈಯಲ್ಲಿರಿಸಿದ್ದಾಳೆ. ಅದನ್ನು ಜೋಪಾನಮಾಡುವುದು ನಿಮ್ಮ ಕರ್ತವ್ಯ. ಸಮಾಜ ನಿಮ್ಮಿಂದ ಬಹಳಷ್ಟು ನಿರೀಕ್ಷಿಸುತ್ತಿದೆ. ಅದರ ನಿರೀಕ್ಷೆಯನ್ನು ಹುಸಿಮಾಡಬೇಡಿ.

ಮೊನ್ನೆ ನನ್ನ ಬಗ್ಗೆ ಹೇಳಿದ್ದು ವ್ಯಕ್ತಿಯನ್ನು ಕುರಿತ ಪ್ರಶಂಸಾ ಸಾಹಿತ್ಯ ಅಲ್ಲ. ಸತ್‌ಸಂಕಲ್ಪವಿದ್ದರೆ, ಸ್ವಪ್ರಯತ್ನ ಸಂಯಮ ಶೀಲ ಸಂಪನ್ನತೆಗಳಿದ್ದರೆ ಹೇಗೆ ಒಬ್ಬ ಸಾಧಕನಾಗಬಲ್ಲ ; ಸಾಧಕ ಹೇಗೆ ಸಿದ್ಧನಾಗಬಲ್ಲ ಎಂಬುದಕ್ಕಿತ್ತ ನಿದರ್ಶನ. ಅಲ್ಲಿ ವ್ಯಕ್ತಿ ಮುಖ್ಯ ಅಲ್ಲ. ಅವನು ಶಿವಬಸವನಾಗಬಹುದು, ಮತ್ತಾವನೇ ಆಗಬಹುದು. ಆದರೆ ಆ ವ್ಯಕ್ತಿಯ ಬೆನ್ನೆಲುಬಾಗಿ ನಿಂತ ಶಿವಶಕ್ತಿಯ ಪ್ರೇರಣೆ, ಪ್ರೋತ್ಸಾಹ, ಸಮಾಜಸದಾಶಿವನ ಸದಾಶಯ ಹಾರೈಕೆ ಇವು ಎಷ್ಟರಮಟ್ಟಿಗೆ ಕ್ರಿಯಾಶೀಲವಾಗಿವೆ ಎಂಬುದು ಗಮನಾರ್ಹ.

ಕಟ್ಟಿಕೊಳ್ಳುವ ಕೌಪೀನಕ್ಕೂ ಗತಿ ಇಲ್ಲದಿದ್ದ ಓರ್ವ ದರಿದ್ರ ಬಾಲಕ ಸ್ವರ್ಣ ಸೌಧದ ಕನಸುಕಟ್ಟಿಕೊಳ್ಳುವುದು, ಕಟ್ಟಿಕೊಂಡದ್ದನ್ನು ಮುಟ್ಟುವುದು ಒಂದು ಸಾಹಸದ ಕಥೆಯೇ ! ಆದರೆ ಅದಕ್ಕೆ ಮೂಲಬಿಂದು ಸತ್‌ಸಂಕಲ್ಪ, ಪ್ರಾಂಜಲವಾದ ಮನಸ್ಸು, ನಿಷ್ಠೆ, ತ್ಯಾಗಶೀಲ ಬುದ್ಧಿ, ಸಂಯಮ, ಉದಾರ ಮನೋಭಾವ ಇವೇ ಮೊದಲಾದ ಸದ್ಗುಣಗಳಿರಬೇಕು. ಅವೆಲ್ಲವೂ ಇದ್ದು ಒಂದೇ ಒಂದು ಅವಗುಣ ಸೇರಿದರೆ, ಕೊಡ ಹಾಲಿಗೆ ಹನಿ ಹುಳಿ ಹಿಂಡಿದಂತಾಗುತ್ತದೆ. ವ್ಯಕ್ತಿ ಮೇಲೇರುವುದು ಬಹಳ ಕಷ್ಟ, ಏರಿದವನು ಕೆಳಗೆ ಬೀಳುವುದು ಬಹಳ ಸುಲಭ. ಕಲ್ಲನ್ನು ಮೇಲೆಸೆದರೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅದು ಮೇಲೆ ಹೋಗುವ ವೇಗ ತುಂಬಾ ವಿಳಂಬ. ಆದರೆ ಅದು ತಾನೇರಿದ ಬಿಂದುವಿನಿಂದ ಕೆಳಗೆ ಬೀಳತೊಡಗಿದರೆ ಅದರ ವೇಗ ಮೊದಲ ವೇಗಕ್ಕಿಂತ ಹತ್ತುಪಟ್ಟು, ನೂರುಪಟ್ಟು ಜಾಸ್ತಿ ಇರುತ್ತೆ. ಹಾಗೆ ಮೇಲೇರುವ ವ್ಯಕ್ತಿಗೆ ಕೆಳಗಿಳಿದೇನೆಂಬ ಎಚ್ಚರ ಇರಬೇಕು. ನನ್ನ ಆಚರಣೆ ನಿಮ್ಮ ಅರಿವಿಗೆ ಬಂದಿದ್ದರೆ ನನ್ನ ಬದುಕು ಸಾರ್ಥಕ. ಸೇವೆಗೆಂದೇ ಹುಟ್ಟಿದ ನಾನು ಇದಕ್ಕಿಂತಲೂ ಹೆಚ್ಚು ಏನನ್ನೂ ಹೇಳಲಾರೆ.

ಎರಡನೆಯದಾಗಿ, ನಾನು ಮಾಡಿದೆನೆಂಬ ಹಮ್ಮು ನನ್ನದಲ್ಲ. ಅಣ್ಣ ಹೇಳುವಂತೆ—

ಮಾಡಿದೆನೆಂಬುದು ಮನದಲ್ಲಿ ಹೊಳೆದರೆ
ಏಡಿಸಿ ಕಾಡಿತ್ತು ಶಿವನ ಡಂಗುರ !
ಮಾಡಿದೆನೆನ್ನದಿರಾ ಲಿಂಗಕ್ಕೆ, ಮಾಡಿದೆನೆನ್ನದಿರಾ ಜಂಗಮಕ್ಕೆ
ಮಾಡಿದನೆಂಬುದು ಮನದಲ್ಲಿಲ್ಲದಿದ್ದರೆ
ಬೇಡಿತ್ತನೀವ, ಕೂಡಲಸಂಗಮದೇವ.

ಆದ್ದರಿಂದ ನಾನು ಮಾಡಿದೆ ಎಂಬ ಸೊಕ್ಕು ನನಗಿಲ್ಲ. ನಾನೇನನ್ನೂ ಮಾಡಿಲ್ಲ. ಶಿವನ ಕೈಯ ಕೈದು ನಾನು. ಅದನ್ನು ಹದ ತುಂಬಿದ ಆಯುಧವನ್ನಾಗಿ, ಸತ್ ಕಾರ್ಯದ ಸಲಕರಣೆಯನ್ನಾಗಿ ಮಾಡಿಕೊಂಡಿದ್ದಾನೆ. ಆ ಶಿವ ತನಗೆ ಏನು ಬೇಕು ಅನ್ನಿಸಿತ್ತೋ ಅದನ್ನು ಈ ಶಿವಬಸವನಿಂದ ಮಾಡಿಸಿಕೊಂಡಿದ್ದಾನೆ. ತನ್ನ ಸೇವೆಗೆ, ತನ್ನ ಅಂಶಸಂಭೂತ ಮನುಕುಲದಸೇವೆಗೆ ನನ್ನನ್ನೊಂದು ಕರಣವಾಗಿ ಮಾರ್ಪಡಿಸಿ ಬಳಸಿಕೊಂಡಿದ್ದಾನೆ. ಆದರೆ ಆ ಮಹಾಮಣಿಹಕ್ಕೆ ಈ ಜೀವವನ್ನೇ ಆರಿಸಿಕೊಂಡನಲ್ಲಾ, ಅದು ಈ ಶಿವಬಸವನ ಭಾಗ್ಯ ವಿಶೇಷ.

ತೇನವಿನಾ ತೃಣಮಪಿ ನ ಚಲತಿ ತೇನವಿನಾ

ಅಂದರೆ, ಅವನಾಜ್ಞೆ ಇಲ್ಲದೆ ಒಂದು ಹುಲ್ಲುಕಡ್ಡಿಯೂ ಚಲಿಸದು; ಅಲ್ಲವೆ. ಆದ್ದರಿಂದ ನಾನೇನೂ ಮಾಡಿಲ್ಲ, ಮಾಡಿದ್ದೂ ನನ್ನದಲ್ಲ—ಅದು ಅವನದು, ಅದೇ ಅವನು.

ಮೂರನೆಯದಾಗಿ, ನನ್ನ ಪರಮಾರಾಧ್ಯದೈವ ಹಾನಗಲ್ಲ ಕುಮಾರಪ್ಪಗಳು ಹೇಳುತ್ತಿದ್ದರು: ವಿರಕ್ತಾಶ್ರಮ ಸ್ವೀಕರಿಸಿದವರು ತಮ್ಮ ತಮ್ಮ ಪೂರ್ವಾಶ್ರಮಗಳನ್ನು ಮರೆಯಬೇಕು, ಅದರ ಹಂಗು ಹಂಬಲ ಇಟ್ಟುಕೊಳ್ಳಬಾರದು ಎಂದು.

ನಾನು ಅವರ ನುಡಿಯನ್ನು ಅನುಮೋದಿಸುತ್ತೇನೆ. ಸನ್ಯಾಸಾಶ್ರಮ ಸ್ವೀಕರಿಸಿದ ವಿರಕ್ತನಿಗೆ ಪೂರ್ವಾಶ್ರಮ, ಹೆಣ್ಣಿಗೆ ತೌರಿದ್ದಂತೆ; ವಿರಕ್ತಾಶ್ರಮ ಗಂಡನ ಮನೆ ಇದ್ದಂತೆ. ಹೆಣ್ಣಿಗೆ ಗಂಡನ ಮನೆಯೇ ಶಾಶ್ವತ. ಅವಳ ಸದ್ಗತಿಯ ತಾಣವೂ ಹೌದು; ಮುಕ್ತಿಯ ಮಹಾಮನೆಯೂ ಹೌದು. ಅವಳು ಗಂಡನ ಮನೆಯಲ್ಲಿದ್ದೂ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತೌರನ್ನೇ ಹಂಬಲಿಸುತ್ತಿದ್ದರೆ, ಎರಡು ದೋಣಿಗಳಲ್ಲಿ ಕಾಲುಗಳನ್ನು ಇಟ್ಟುಕೊಂಡು ಸಮುದ್ರಯಾನ ಕೈಗೊಂಡಂತಾಗುತ್ತದೆ. ಅವಳ ಪ್ರಯಾಣ ಯಶಸ್ವಿಯಾಗುವುದಿಲ್ಲ. ಇತ್ತ ಇಹವೂ ಇಲ್ಲ, ಅತ್ತ ಪರವೂ ಇಲ್ಲ. ಅಲ್ಲದೆ ಗಂಡನ ಮನೆಗೆ ಬಂದ ಹೆಣ್ಣು ತೌರನ್ನು ಮರೆಯುವಷ್ಟು ಸಖ್ಯವನ್ನು, ಸುಖ ಸಂತೋಷಗಳನ್ನು, ಹರ್ಷ ಆನಂದ ಗಳನ್ನು ಗಂಡನ ಮನೆಯಲ್ಲಿ ಪಡೆಯಬೇಕು. ಆ ಸೌಭಾಗ್ಯ ಸಂಪದವನ್ನೂ ವಿರಕ್ತನಾದ ವನು ಸಂಪಾದಿಸಿಕೊಳ್ಳಬೇಕು ತನ್ನ ಆತ್ಮ ಬಲದಿಂದ. ಸ್ವಲ್ಪ ಒರಟಾಗಿ ಹೇಳುವು ದಾದರೆ ವಿರಕ್ತನಿಗೆ ಪೂರ್ವಾಶ್ರಮ ತಂಬುಲು ಜಗಿದು ಉಗಿದ ಹಾಗೆ! ವಾಂತಿ ಮಾಡಿದ್ದನ್ನು ಮತ್ತೆ ಹೇಗೆ ಪಡೆಯಲಾಗದೊ, ಪಡೆಯಬಾರದೊ ಹಾಗೆ ಅಲ್ಲಿಂದ ಹೊರಬಂದ ಮೇಲೆ ಅಲ್ಲಿಯ ಯಾವುದೇ ನೆನಪನ್ನು ಅವನು ಇಟ್ಟುಕೊಳ್ಳಬಾರದು.

ಆಶ್ರಮದ ವಟುಗಳಾದ ನೀವು ನಾಳಿನ ಸ್ವಾಮಿಗಳು, ಗುರುಗಳು, ಜಗದ್ಗುರು ಗಳು. ಆದ್ದರಿಂದ ನನ್ನದೇ ನಿದರ್ಶನದ ಮೂಲಕ ನಿಮ್ಮ ಕರ್ತವ್ಯಗಳ ಬಗ್ಗೆ ಎಚ್ಚರಿಕೆ ನೀಡಿದೆ ಅಷ್ಟೆ.

ಇಷ್ಟು ಅಂಶಗಳನ್ನು ನೀವೇದಿಸಿಕೊಂಡಿದ್ದಕ್ಕೆ ಹಿನ್ನೆಲೆ ಇಷ್ಟೆ:

ನಮ್ಮ ಸುಕ್ಕುಲಪುಟ್ಟ ಶಿವರುದ್ರಯ್ಯ ಸಂಗ್ರಹಿಸಿದಷ್ಟು ವಿಷಯಗಳು ನನಗೆ ಗೊತ್ತಿಲ್ಲ. ಕಾರಣ ಚಿಕ್ಕಂದಿನಲ್ಲೇ ಮನೆಬಿಟ್ಟು ಎತ್ತಿದವರ ಕೂಸಾಗಿ ಬೆಳೆದವನು, ಮುದ್ದಿಸಿದವರ ಮಗನಾಗಿ ಬೆಳೆದವನು. ನನಗೆ ತಂದೆ ಯಾರೊ, ತಾಯಿ ಯಾರೊ, ಬಂಧು ಯಾರೊ ಒಬ್ಬರೂತಿಳಿಯದು.

ತಂದೆ ನೀನು ತಾಯಿ ನೀನು ;
ಬಂಧು ನೀನು ಬಳಗ ನೀನು
ನೀನಲ್ಲದೆ ಮತ್ತಾರೂ ಇಲ್ಲಯ್ಯಾ
ಕೂಡಲ ಸಂಗಮದೇವಾ,
ಹಾಲಲದ್ದು, ನೀರಲದ್ದು.

ಎಂದು ಅವನಿಗೆ ಶರಣಾದವನು ನಾನು. ನನ್ನ ಹುಟ್ಟೂರು ಹಿರೇಕೊಪ್ಪ ಎಂಬುದೇ ಗೊತ್ತಿರಲಿಲ್ಲ. ಈಗ ತಿಳಿಯಿತು. ಇದರರ್ಥ ಪೂರ್ವಾಶ್ರಮದ ಸೋಂಕು ನಿಮಗೆ, ನಮಗೆ, ಸ್ವಾಮಿಗಳು, ಮಠಾಧಿಪತಿಗಳು, ಪೀಠಾಧಿಕಾರಿಗಳು ಆಗುವ ಯಾರಿಗೂ ಬೇಡ. ಅದು ಇತ್ತೆಂದರೆ ಅದು ಖಂಡಿತ ಅವರಿಗೊಂದು ಶಾಪವೆಂದೇ ನನ್ನ ಭಾವನೆ!

ನಾಲ್ಕನೆಯದಾಗಿ,

ಸ್ವಾಮಿಗಳಾಗುವ, ಆಗಿರುವ ನಿಮಗೆಲ್ಲರಿಗೂ ನಾನೊಂದು ಗುಟ್ಟು ಹೇಳುತ್ತೇನೆ; ದಯವಿಟ್ಟು ಯಾರೂ ಸಿಟ್ಟಾಗಬೇಡಿ:

ಹುಟ್ಟು ಭವಿಯನ್ನು ನಂಬಿ
ಆದರೆ ಕೆಟ್ಟ ಭಕ್ತನನ್ನು ನಂಬಬೇಡಿ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಿಮ್ಮ ಅರಿವೇ ನಿಮಗೆ ಗುರು. ಯಾರೇ ಸಲಹೆ ಕೊಡಲಿ, ಅವುಗಳನ್ನು ಬದಿಗಿರಿಸಿ ನಿಮ್ಮ ಆತ್ಮಸಾಕ್ಷಿ ಹೇಳಿದಂತೆ ನಡೆಯಿರಿ. ಬೇರೆಯವರು ನಿಮ್ಮ ಸಲಹೆ ಕೇಳಿದಾಗ ದುಡುಕಬೇಡಿ. ಆದಷ್ಟು ಮೀಸಲಿರಿಸಿಕೊಂಡಿರಿ. ಔಚಿತ್ಯವರಿತು ಪ್ರಯೋಗಿಸೀ. ನಿಮಗೆ ತಿಳಿದಿರಲಿ:

'ಮಾತೆಂಬುದು ಜ್ಯೋತಿರ್ಲಿಂಗ !'

ಅಲ್ಲದೆ ಮರೆಯಬೇಡಿ, ಮಣದಷ್ಟು ಮಾತಿಗಿಂತ, ಕಣದಷ್ಟು ಕೆಲಸ ಶ್ರೇಷ್ಠ. ಆಡುವುದು ಕಡಿಮೆ ಇರಲಿ, ಮಾಡುವುದು ಬಹಳವಿರಲಿ. ಆಡದಲೆ ಮಾಡುವನು ರೂಢಿಯೊಳಗುತ್ತಮನು! ಆ ಕಾರಣ ಗುರುವಾದವನು ಮೊದಲು ತಾನು ಬೆಳೆಯ ಬೇಕು. ತಾನೇರಿದೆತ್ತರಕ್ಕೆ ತನ್ನಾಶ್ರಯದ ಭಕ್ತರನ್ನೂ ಎತ್ತಿಕೊಳ್ಳುವ ಸಾಹಸಮಾಡ ಬೇಕು. ಇದು ಆಡಿದಷ್ಟು ಸುಲಭವಲ್ಲ. ಸನ್ಯಾಸಿಯದು ಅಸಿಧಾರಾವ್ರತ! ಮೈಯೆಲ್ಲ ಕಣ್ಣಾಗಿ, ಮನವೆಲ್ಲಾ ಹಣ್ಣಾಗಿ ನಡೆಯಬೇಕು.

ಐದನೆಯದಾಗಿ,

ವಿರಕ್ತ ಅನ್ಯರನ್ನು ಬೇಡಬಾರದು. ಬೇಡುವುದು ತುಂಬಾ ಹೀನ. ಅವನಿಗೇನೆ, ಕಷ್ಟವಿರಲಿ ಬೇಡುವ ಮಟ್ಟಕ್ಕೆ ಇಳಿಯಬಾರದು. ಭಿಕ್ಷುಕ ತುಂಬಾ ತಿರಸ್ಕೃತ ಜಂತು. ಸಮಾಜದಲ್ಲಿ; ಹತ್ತಿಗಿಂತ ಹಗುರ, ಹುಲ್ಲಿಗಿಂತ ಕಡೆ. ಹತ್ತಿ ಮತ್ತು ಹುಲ್ಲುಗಳನ್ನು ಹೊತ್ತುಕೊಂಡು ಹೋಗಬಲ್ಲ ಗಾಳಿ ಭಿಕ್ಷುಕನ ಹೊತ್ತೊಯ್ಯುವುದಿಲ್ಲವಂತೆ. ಕಾರಣ ಅವನ ಬಳಿ ಹೋದರೆ ಎಲ್ಲಿ ಏನನ್ನು ಬೇಡಿಬಿಡುತ್ತಾನೋ ಎಂಬ ಭೀತಿ ಅದಕ್ಕೆ. ಈ ಸುಭಾಷಿತ ಅನೇಕರಿಗೆ ತಿಳಿದಿಲ್ಲ. ತಿಳಿದವರೂ ಅರಿತು ನಡೆದುಕೊಳ್ಳುವುದಿಲ್ಲ. ಸ್ವಾಮಿ ಆದಕೂಡಲೆ ತನ್ನದಾವುದೋ ತೀಟೆಯನ್ನು ತಣಿಸುವುದಕ್ಕಾಗಿ ಭಕ್ತರಲ್ಲಿ ಬೇಡತೊಡಗುತ್ತಾನೆ. ಅದು ತಪ್ಪು. ನಿಮ್ಮ ಗುರಿ ಒಳ್ಳೆಯದಿದ್ದರೆ ನೀವು ಬೇಡು ವುದೇ ಬೇಡ; ತಾನಾಗಿಯೇ ಬಂದು ಬೀಳುತ್ತೆ. ಆದರೆ ಉದ್ದೇಶ ಒಳ್ಳೆಯದಿರ ಬೇಕು. ಎಲ್ಲವನ್ನೂ ದೇವರು ನಡೆಸಿಕೊಡುತ್ತಾನೆ. ಈ ಸಿದ್ಧಾಂತದಲ್ಲಿ ನನಗೆ ಪೂರ್ಣ ವಿಶ್ವಾಸವಿದೆ.

ಆರನೆಯದಾಗಿ,

ಸ್ವಾಮಿಯಾದವನು ಮೂಲತಃ ಸಮಾಜದ ಸೇವಕ. ಸೇವೆಯೇ ಗುರುವಾದ ವನ ಮೂಲ ಸೂತ್ರ. ಇಷ್ಟ ಲಿಂಗಪೂಜೆಯಷ್ಟೇ ಮುಖ್ಯ ದೀನ ದಲಿತರ ಸೇವೆ. ಶಿವಯೋಗಿಯಾದವನು ಸಮಾಜದ ಹಿತಕ್ಕಾಗಿ ಕಾಯಕಯೋಗಿಯಾಗಬೇಕು. ಜಾತಿಯ ಜಾಡ್ಯ ಅವನ ಬಳಿ ಸುಳಿಯಬಾರದು. ಯಾವ ಧರ್ಮವನ್ನೂ ಅಲ್ಲಗಳೆಯಬಾರದು. ಅವನವನ ಧರ್ಮ ಅವನವನಿಗೆ ದೊಡ್ಡದು. ಎಲ್ಲರನ್ನೂ ಪ್ರೀತಿಯಿಂದ ಕಾಣುವ ಮನೋಧರ್ಮ ಬೆಳೆಸಿಕೊಳ್ಳಬೇಕು,

ಇವನಾರವ ಇವನಾರವ ಇವನಾರವನೆಂದೆನಿಸದಿರಯ್ಯಾ
ಇವ ನಮ್ಮವ ಇವ ನಮ್ಮವ ಇವ ನಮ್ಮವನೆಂದೆನಿಸಯ್ಯಾ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಂತಿರಬೇಕು, ಅಂತಾಗಬೇಕು. 'ಮಾನವ ಜಾತಿ ತಾನೊಂದೆ ವಲಂ' ಎಂಬುದು ಮೂಲ ಮಂತ್ರವಾಗಬೇಕು. ಕೊಲ್ಲುವವನಿಗಿಂತ ಕಾಯುವವನು ದೊಡ್ಡವನು. ಹೊಡೆಯು ವುದಕ್ಕೆ ಹೆಚ್ಚು ಶಕ್ತಿಬೇಡ ; ಆದರೆ ತಡೆಯುವುದಕ್ಕೆ ಅಂದರೆ ಸಹಿಸಿಕೊಳ್ಳುವುದಕ್ಕೆ ತುಂಬಾ ಶಕ್ತಿ ಬೇಕು.

ಏಳನೆಯದಾಗಿ,

ಶಿವಯೋಗಿಯಾದವನಿಗೆ ಪರಿಸರಪ್ರಜ್ಞೆ ಇರಬೇಕು ; ರಾಷ್ಟ್ರ ಪ್ರಗತಿಯ ಬಗೆಗೆ ಅವನ ಕುಂಡಲಿನಿ ಸದಾ ಜಾಗೃತವಾಗಿರಬೇಕು. ಇದರರ್ಥ ರಾಜಕೀಯ ಮಾಡಬೇಕು ಎಂದಲ್ಲ. ಎಂದು ರಾಷ್ಟ್ರಪ್ರಜ್ಞೆಯನ್ನು ಮೂಡಿಸಿಕೊಂಡಿರಬೇಕು. ಹೊತ್ತ ಭೂಮಿ ಹೆತ್ತ ತಾಯಿಯಷ್ಟೇ ಪವಿತ್ರ, ಪೂಜ್ಯ. ಅದರ ಒಳಿತಿಗಾಗಿ ತನ್ನ ಸೇವೆ, ತಪಸ್ಸು, ಸಾಧನೆ, ಸಿದ್ಧಿ. ಅದನ್ನು ಮರೆತರೆ ಅವನು ಶಿವಯೋಗಿಯಲ್ಲ, ಶವಯೋಗಿ ಆಗುತ್ತಾನೆ. ರಾಷ್ಟ್ರಪ್ರೇಮ ನಮ್ಮಲ್ಲಿ ಜಾಗ್ರತವಾಗಿರಲೆಂದೇ ಹಿಂದೊಮ್ಮೆ 'ವೀರಭಾರತಿ' ನಾಟಕ ಆಡಿಸಿದ್ದೆವು. ಅದು ಈ ದಿನ ಸಂಜೆ ಮತ್ತೆ ಅಭಿನಯಿಸಲ್ಪಡು ತ್ತಿರುವುದು ಹರ್ಷದ ಸಂಗತಿ. ನಮ್ಮ ರಾಜಶೇಖರ ಅದನ್ನು ನೋಡುತ್ತಿರುವುದು ಇದೇ ಮೊದಲ ಬಾರಿ.

ಇರಲಿ.

ನನ್ನ ಗುರು ಬಂಧುಗಳೇ, ಏಳು ಸೂತ್ರಗಳನ್ನು ತಮ್ಮ ಮುಂದಿರಿಸಿದ್ದೇನೆ, ಸ್ವೀಕರಿಸಿ. ಆದಷ್ಟು ಮಟ್ಟಿಗೆ ಅನುಷ್ಠಾನಕ್ಕೆ ತನ್ನಿ. ನಿಮ್ಮಷ್ಟು ಓದಿದವನಲ್ಲ ನಾನು. ಆದರೆ ಜೀವನವೆಂಬ ಶಾಲೆ ನನಗೆ ಸಾಕಷ್ಟು ಕಲಿಸಿದೆ. ನಾನು ಕಲಿತದ್ದನ್ನಷ್ಟೇ ಹೇಳು ತ್ತಿದ್ದೇನೆ. ಇದು ಸ್ವಾನುಭವದ ಮಾತು. ನೀವು ಇಲ್ಲಿ ಕಲಿತ ವಿದ್ಯೆ ನಿಮ್ಮ ಜೀವನ ರಂಗದಲ್ಲಿ ಅಥವಾ ನಿಮ್ಮ ನಿಮ್ಮ ಧಾರ್ಮಿಕ ಕ್ಷೇತ್ರಗಳಲ್ಲಿ ಫಲಕೊಡಲಿ, ತಿಂದ ಅನ್ನ ರಕ್ತವಾಗಬೇಕು, ಓದಿದ ಓದು ಜ್ಞಾನವಾಗಬೇಕು. ಅಂತಾಗಿಸಲು ನೀವೆಲ್ಲರೂ ಶ್ರಮಿಸಬೇಕು.

ಶಿವಾನುಭವ ಎಂದರೆ ಜೀವಾತ್ಮ ಪರಮಾತ್ಮರ ಐಕ್ಯಾನುಸಂಧಾನವಷ್ಟೇ ಅಲ್ಲ, ಲೋಕಜೀವನದ ನಿತ್ಯಾನುಷ್ಠಾನವೂ ಹೌದು. ನಾನಿತ್ತ ವ್ಯಕ್ತಿಗತ ಶಿಕ್ಷಣವೂ ಶಿವಾನುಭವ. ಇದು ನನ್ನ ಭಾವನೆ.

ನಿಮಗೆ ಮಂಗಳವಾಗಲಿ, ಕುಮಾರೇಶನ ಕೃಪೆ ಇರಲಿ, ಆ ನನ್ನ ಹೃದಯಸ್ಥ ಪರಮೇಷ್ಠಿ ಸಿದ್ಧರಾಮ ನಿಮ್ಮನ್ನು ಸದಾ ಅನುಗ್ರಹಿಸಲಿ.

ಶಿವಂಭೂಯಾತ್

ಚಪ್ಪಾಳೆಗಳ ಸುರಿಮಳೆ ಆಯಿತು.

ಸಂಚಾಲಕ ಶಿವರುದ್ರಯ್ಯ ಗುರುಗಳಿಗೆ ಶರಣು ಸಮರ್ಪಿಸಿದ. ಆಭಾರ ಮನ್ನಣೆ ಹಾನಗಲ್ಲ ಶ್ರೀ ಸದಾಶಿವಸ್ವಾಮಿಗಳಿಂದ ನೆರವೇರಿತು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಂಟು

ಅದು ಸುವರ್ಣ ಸಂಜೆ !

ಮೇಲೆ ಆಗಸಕ್ಕೆ ಕಾವಿ ಬಣ್ಣದ ಮುಗಿಲೋಳಿಯ ಉಡುಗೆ. ಕೆಳಗೆ ಓಡುವ ಗಾಡಿಯಲ್ಲಿ ಕುಳಿತಿದ್ದ ಗುರುಶಿಷ್ಯರಿಬ್ಬರಿಗೂ ಕಾವಿಯ ಕಪಿನಿ !

ಗಾಡಿ ಸಂಧ್ಯಾ ಸಮೀರಣನೊಡನೆ ಸರಸವಾಡುತ್ತಾ ಬೆಳಗಾವಿಯ ಹೆದ್ದಾರಿ ಹಿಡಿದು ಓಡುತ್ತಲೇ ಇತ್ತು.

'ಗುರುಗಳೆ........'

'ಹೂಂ'

'ಮಹಾಕೂಟದಲ್ಲಿ ತಾವು ಅಪ್ಪಣೆ ಕೊಡಿಸಿದಿರಿ—ನದೀಮೂಲ ಗುರುಮೂಲ ಎರಡೂ ಒಂದೇ. ಮಹಾತ್ಮರ ಹುಟ್ಟು ಬಹು ಮಹತ್ವದ್ದಿರುವುದಿಲ್ಲ ; ಬೆಳೆಯುತ್ತಾ ಅದು ವಿಶ್ವಜ್ಯೋತಿಯಾಗಿ ಬೆಳಗುತ್ತದೆ—ಎಂದು,

'ಹೌದು'

'ಅದನ್ನೇ ಕುರಿತು ಇಂದು ಮಧ್ಯಾಹ್ನ ಬಹಳ ಹೊತ್ತು ಆಲೋಚಿಸಿದೆ. ತಮ್ಮ ನುಡಿಗೆ ನಿದರ್ಶನಗಳನ್ನು ಹುಡುಕಿದೆ.'

'ಸಿಕ್ಕಿದುವೇನು ?'

'ಸಿಕ್ಕಿದುವು ಗುರುದೇವ, ಜಗದಣ್ಣ ಬಸವಣ್ಣ ಬಡ ಬ್ರಾಹ್ಮಣ, ವ್ಯೋಮ ಮೂರುತಿ ಅಲ್ಲಮಪ್ರಭು ನಾಗವಾಸದವನು, ಅಕ್ಕ ಬಡ ಜಂಗಮ ದಂಪತಿಗಳ ಮಗಳು, ಸಿದ್ಧರಾಮ ಕುಡು ಒಕ್ಕಲಿಗ, ಅಣ್ಣ ಶರಣಶ್ರೇಷ್ಠರೆಂದು ಸಾರಿ ಪೂಜಿಸಿ ತಲೆಯ ಮೇಲೆ ಹೊತ್ತು ಕೊಂಡಾಡಿದ ಮಾದಾರ ಚನ್ನಯ್ಯ, ಡೋಹರ ಕಕ್ಕಯ್ಯ, ಅಂಬಿಗರ ಚೌಡಯ್ಯ, ಕುಂಬಾರ ಗುಂಡಯ್ಯ, ಮೇದಾರ ಕೇತಯ್ಯ, ಕಂಬಳಿ ನಾಗಿದೇವ, ಹರಭಕ್ತ ಹರಳಯ್ಯ ಇವರೆಲ್ಲರೂ ಹುಟ್ಟಿದ್ದು ಬಡ ಕುಟೀರಗಳಲ್ಲೇ. ಯಾರೂ ಕೈಲಾಸದಿಂದ ಕೆಳಗಿಳಿದವರಲ್ಲ.'

'ಅದರಲ್ಲಿ ಅರ್ಥವೂ ಇಲ್ಲ ರಾಜಶೇಖರ. ಕೆಳಗಿಳಿಯುವುದು ಎಂದರೇನು ? ಕೆಳಗೆ ಬೀಳುವುದು! ದೇವರು ಮನುಷ್ಯನಾಗಿ ಕೆಳಗಿಳಿದ ಎನ್ನುವುದಕ್ಕಿಂತ, ಮನುಷ್ಯನೇ ದೇವನ ಮಟ್ಟಕ್ಕೇರಿದ ಎನ್ನುವುದು ದೊಡ್ಡದು. ತನ್ನ ನಿರಂತರ ಸೇವೆ, ತ್ಯಾಗಗಳಿಂದ ಮಾನವ ಮಹಾದೇವನಾಗಬೇಕು, ಸದ್ಗುಣ ಸದಾಚಾರಗಳಿಂದ ಅವನ ಮಾತಿನ ಪಿಂಡ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಂತ್ರಪಿಂಡವಾಗಿ ಮಾರ್ಪಡಬೇಕು. ಆ ಆತ್ಮವಿಕಾಸದ ಹಾದಿ ನನಗೆ ತುಂಬ ಮೆಚ್ಚು.'

'ತಾವು ಆ ಹಾದಿಯಲ್ಲಿ ಸಾಕಷ್ಟು ದೂರವನ್ನು ಕ್ರಮಿಸಿದ್ದೀರಿ ಎಂಬುದು ನನ್ನ ಅನಿಸಿಕೆ'

'ಆ ಅನಿಸಿಕೆ ತಪ್ಪಿರಬಹುದು ರಾಜಶೇಖರ.'

'ತಪ್ಪಿದ್ದರೆ ಆ ದೋಷ ಗುರುವಿನದು ಶಿಷ್ಯನದಲ್ಲ. ನಾನು ನಿಮ್ಮ ಶಿಷ್ಯ, ನಿಮ್ಮ ವಾತ್ಸಲ್ಯದ ಗರಡಿಯಲ್ಲಿ ತಯಾರಾದವನು. ಆದ್ದರಿಂದ ನನ್ನ ದೋಷವೇನೇ ಇದ್ದರೂ ಅದು ನಿಮ್ಮದೇ !' ಭಾಸ ತನ್ನ ಪಂಚರಾತ್ರ ನಾಟಕದಲ್ಲಿ ಹೇಳೊಲ್ವೆ—

ಅತೀತ್ಯ ಬಂಧೂನ್, ಅವಲಂಘ್ಯ ಮಿತ್ರಾಣಿ
ಆಚಾರ್ಯಮಾಗಚ್ಛತಿ ಶಿಷ್ಯದೋಷಃ

ಅಂತ.

ಅಂದರೆ ಶಿಷ್ಯನ ದೋಷ, ಅವನ ಬಂಧುಗಳಿಗಲ್ಲ, ಮಿತ್ರರಿಗಲ್ಲ ಗುರುವಿಗೆ ತಟ್ಟುತ್ತದೆ. ಎರಡೆರಡಲಿ ಎಂಟು ಎಂದು ಮಗು ಮಗ್ಗಿ ಹೇಳಿದರೆ, ಮನೆಯ ಹಿರಿಯರು, 'ಯಾವನೋ ನಿನಗೆ ಮಗ್ಗಿ ಹೇಳಿಕೊಟ್ಟೋನು' ಅಂತಾರೆ. ಆದ್ದರಿಂದ ಶಿಷ್ಯನ ದೋಷಕ್ಕೆ ಗುರುವೇ ಗುರಿ, ಕಾರಣ'.

'ಭೇಷ್, ನಿನಗೆ ಗುರು ಆದ ತಪ್ಪಿಗೆ ನಾನು ದೋಷಿಯಾಗಬೇಕೇನು ? ಆಗಲಯ್ಯ, ಆ ದೋಷಕ್ಕೆ ಶಿಕ್ಷೆ ಏನು ಹೇಳಿ ಬಿಡು !'

'ಏನಿಲ್ಲ ಗುರುಗಳೆ, ಕೋಗಿಲೆಗೆ ಮೊಟ್ಟೆ ಹಾಕೋದು ಬರುತ್ತೆ. ಆದರೆ ಕಾವು ಕೊಟ್ಟು ಮರಿ ಮಾಡೋದು ಗೊತ್ತಿಲ್ಲ. ಮರಿ ಆದ ಮೇಲೂ ಅವುಗಳಿಗೆ ಗುಟುಕು ಕೊಡೋದು ತಿಳಿದಿಲ್ಲ. ಕುಡಿಸೋಕೆ ಮೊಲೆಗಳೇ ಇಲ್ಲ. ಆದ್ದರಿಂದ ತನ್ನ ಸಂತಾನಾಭಿವೃದ್ಧಿ ವಿಷಯದಲ್ಲಿ ತಾನೊಂದು ಉಪಾಯ ಕಂಡುಕೊಂಡಿದೆ. ಮೊಟ್ಟೆ ಹಾಕಿದ ಕೂಡಲೇ ಅವುಗಳನ್ನು ಕಾಗೆಯ ಗೂಡಿನಲ್ಲಿರಿಸಿ ತೆಪ್ಪಗೆ ಬಂದು ಬಿಡುತ್ತೆ. ಕಾಗೆ ತನ್ನ ಗೂಡಿನಲ್ಲಿರೊ ಮೊಟ್ಟೆಗಳು ತನ್ನವೇ ಅಂತ ಭ್ರಮಿಸುತ್ತೆ, ಚೆನ್ನಾಗಿ ಕಾವು ಕೊಡುತ್ತೆ. ಮರಿ ಮಾಡುತ್ತೆ. ಮರಿಗಳ ರೆಕ್ಕೆ ಬಲಿತಿರೊಲ್ಲ. ಹಾರಾಡುವುದನ್ನು ಕಲಿಸೋಕೆ ಪ್ರಯತ್ನ ಪಡುತ್ತೆ ಕಾಗೆ. ಆಮೇಲೆ ಅದನ್ನು 'ಕಾಕಾ' ಎಂದು ಕೂಗಿ ಕರೆಯುತ್ತೆ. ಕೋಗಿಲೆ ಮರೀಗೆ ಆ ಕೂಗು ತಿಳಿದಿಲ್ಲ. ತಿಳಿದರೂ ಹಾಗೆ ಕೂಗೋಕೆ ಬರೊಲ್ಲ. ಒಂದು ದಿನ ಎರಡು ದಿನ ಮೌನವಾಗಿ ಆ ಕಾಗೆ ಕೂಗನ್ನು ಆಲಿಸುತ್ತೆ. ಅನಂತರ ರೆಕ್ಕೆ ಬಲಿತ ಮೇಲೆ 'ಕಾಕಾ' ಅಂದ ಕಾಗೆಗೆ 'ಕುಹೂ ಕುಹೂ' ಅಂತಾ ಉತ್ತರ ಕೊಡುತ್ತೆ. ಆಗ ಕಾಗೆಗೆ ಅರ್ಥವಾಗುತ್ತೆ, ನಾನು ಬೆಳೆಸಿದ್ದು ನನ್ನ ವಂಶದ ಮರಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಲ್ಲ ಅಂತಾ. ಕೂಡಲೇ ಅದನ್ನು ಅಟ್ಟಿಸಿಕೊಂಡು ಓಡುತ್ತೆ. ಕೋಗಿಲೆ ತನ್ನ ಹಾದಿ ಹಿಡಿದು ಓಡುತ್ತೆ.

ಈ ನಿದರ್ಶನವನ್ನು ಏಕೆ ಪ್ರದರ್ಶಿಸಿದೆ ಅಂದರೆ ಮನುಷ್ಯರು ಕಾಗೆಗಳಿದ್ದ ಹಾಗೆ; ಮಹಾತ್ಮರು ಮರಿಕೋಗಿಲೆ ಇದ್ದ ಹಾಗೆ; ದೇವರು ತಾಯಿ ಕೋಗಿಲೆ ಇದ್ದ ಹಾಗೆ. ತಾಯಿ ಕೋಗಿಲೆಗೆ ಹೇಗೆ ಮೊಟ್ಟೆಗಳಿಗೆ ಕಾವು ಕೊಡೋಕೆ, ಮರಿಜೋಪಾನ ಮಾಡೋಕೆ ಬರೊಲ್ಲವೊ, ದೇವರಿಗೂ ಹಾಗೆ ತನ್ನ ಚಿದಂಶವನ್ನು ನೇರವಾಗಿ ಭೂಮಿಗೆ ಕಳುಹಿಸೊ ಕ್ಕಾಗೋದಿಲ್ಲ. ಅದಕ್ಕೆ ತನ್ನಂಶಸಂಭೂತರಾದ ಮಹಾತ್ಮರನ್ನು ತನ್ನ ಪ್ರತಿನಿಧಿಗಳಾಗಿ ಕಳುಹಿಸುತ್ತಾನೆ. ಅವರು ಸಾಮಾನ್ಯ ಮಾನವರಂತೆ ಹುಟ್ಟಿ ಬೆಳೀತಾರೆ. ಅಪ್ಪ ಅಮ್ಮಗಳು ಅವರು ದೇವರ ಮಕ್ಕಳು ಎಂದು ತಿಳಿಯದೆ, ತಮ್ಮ ಹೊಟ್ಟೆಯಲ್ಲಿ ಹುಟ್ಟಿದವೇ ಎಂದು ಭ್ರಮಿಸಿ ಬೆಳೆಸುತ್ತಾರೆ. ಆ ಕೋಗಿಲೆ ಮರಿಗಳು ಬೆಳೆದು ಮೇಲೆ ಕುಹೂ ಕುಹೂ ಕೂಜನ ಮಾಡಿಕೊಂಡು ಹಾರಿಹೋಗುವಂತೆ ಇವೂ ತಮ್ಮ ಇಂಪಾದ, ತಂಪಾದ, ಕಂಪಾದ ಸಂದೇಶಗಳನ್ನಿತ್ತು ಒಂದು ದಿನ ಹಾರಿ ತಾವು ಬಂದೆಡೆಗೆ ಹೊರಟು ಹೋಗುತ್ತವೆ.'

'ನಿನಗೆ ಗುರುವಾದದ್ದರ ದೋಷದ ಶಿಕ್ಷೆಗೂ ಈ ನಿನ್ನ ಕಾಗೆ—ಕೋಗಿಲೆ ಕಥೆಗೂ ಏನಯ್ಯಾ ಸಂಬಂಧ ?'

'ಸಂಬಂಧ ಇದೆ ಗುರುಗಳೆ, ತಾವು ಶಿವಾಂಶ ಸಂಭೂತರಾದ ಮಹಾಮಾನವರು.'

'ಮುಖಸ್ತುತಿ ಒಳ್ಳೆಯದಲ್ಲ, ರಾಜಶೇಖರ'

'ಒಣಸ್ತುತಿ ಒಳ್ಳೆಯದಲ್ಲ, ಗುರುವೆ, ಆದರೆ ಸತ್ಯ ಸ್ಥಿತಿಯ ಪ್ರಕಟಣೆ ಪ್ರಾಚುರ್ಯಗಳಿಂದ ಜಗತ್ಕಲ್ಯಾಣವಾಗುತ್ತೆ.'

'ರಾಜಶೇಖರ ಅಂತಹ ಸತ್ಯದ ಜಾಹೀರಿಗೆ ನಾನು ಬಾಧ್ಯನಲ್ಲ.'

'ಮಹಾಪ್ರಸಾದಿ ಎಂದು ಇಡೀ ಜಗತ್ತೇ ಹೊಗಳುತ್ತಿದೆ. ಅದು ಸುಳ್ಳೆ'

'ಅದು ನನ್ನವರ ಅಭಿಮಾನ !'

'ಅಭಿಮಾನ ಅರ್ಥವಿಲ್ಲದೆ ಮೂಡುವುದಿಲ್ಲ ಗುರುವೆ. ತಾವು ನಿಜವಾಗಿಯೂ ಸಮಾಜಕ್ಕಾಗಿ, ರಾಷ್ಟ್ರಕ್ಕಾಗಿ, ವ್ಯಾಪಕಾರ್ಥದಲ್ಲಿ ಹೇಳುವುದಾದರೆ, ಇಡೀ ಮನುಕುಲದ ಒಳಿತಿಗಾಗಿ ತಮ್ಮನ್ನೇ ತಾವು ಪ್ರಸಾದವಾಗಿ ಅರ್ಪಿಸಿಕೊಂಡಿದ್ದೀರಿ. ತಾವು ನಿಜವಾದ ಮಹಾಪ್ರಸಾದಿಗಳು. ಅಥವಾ ತಾವಲ್ಲದೆ ಬೇರೆ ಯಾರಿದ್ದಾರೆ ಹೇಳಿ ?

'ಆತ್ಮಪ್ರಶಂಸೆ ಆತ್ಮನಿಂದನೆಯಷ್ಟೇ ಅಪಾಯಕಾರಿ, ರಾಜಶೇಖರ. ನಾನು ಮಾಡಿದೆನೆಂಬುದು ನನ್ನೆದೆಯಲ್ಲಿ ಎಂದಿಗೂ ಸುಳಿಯದಿರಲಿ. ನೀನು ಸುಮ್ಮನೆ ನನ್ನನ್ನು ಹೊಗಳಿ ಹೊಗಳಿ ಹೊನ್ನ ಶೂಲಕ್ಕೇರಿಸಬೇಡ.'

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

'ಸತ್ಯಕ್ಕೆ ಎಂದಿಗೂ ಅಪಚಾರ ಆಗದಂತೆ ಎಚ್ಚರವಹಿಸಿ ಮಾತನಾಡುತ್ತಿದ್ದೇನೆ ಗುರುದೇವ. ತಾವು ಕೊಟ್ಟದ್ದನ್ನು ತಮಗೇ ಮುಟ್ಟಿಸಿ ಮುಕ್ತನಾಗುತ್ತಿದ್ದೇನೆ. ಈ ಜೀವ ತಮ್ಮ ಕರುಣ ಪ್ರಸಾದ. ಇದನ್ನು ಸಾರ್ಥಕಪಡಿಸಿಕೊಳ್ಳಬೇಕೆಂಬ ಹಂಬಲ ಈ ಮೃಣ್ಮಯ ಮೂರ್ತಿಯಲ್ಲಿದೆ. ತಮ್ಮ ಅನುಗ್ರಹ ಆಶೀರ್ವಾದಗಳಿರಲಿ. ನನಗೆ ತಾವು ಎಂದಿಗೂ ಸುಳಿದಾಡುವ ಶಿವ, ನಡೆದಾಡುವ ನಟರಾಜ, ನುಡಿ ಕಲಿಸಿದ ಗುರು, ತಂದೆ, ಮಾರ್ಗದರ್ಶಕ, ಈ ಕರುಣೆಯನ್ನು ಕಡೆಯತನಕ ಇಟ್ಟಲ್ಲಿ ನಾನು ಧನ್ಯ, ಮಾನ್ಯ ! ಇದೇ ನಾನು ನನ್ನ ಗುರುಗಳಾದ ತಪ್ಪಿಗೆ ತಮಗೆ ಕೊಡುವ ಶಿಕ್ಷೆ.'

'ಇರಲಿ ಶಿಷ್ಯಾದಿಚ್ಛೇತ್ ಪರಾಜಯಂ ; ಅಲ್ಲವೇ ?'

'ಅಂದರೆ'

'ಗುರುವಾದವನು ತನ್ನ ಶಿಷ್ಯನಿಂದ ಸೋಲಬೇಕಂತೆ ! ಆಗ ಗುರುವಿನ ಕೀರ್ತಿ ಹೆಚ್ಚುತ್ತದಂತೆ !'

'ಅಂದರೆ ಶಿಷ್ಯನಿಂದ ಪಡೆಯುವ ಪರಾಜಯದಲ್ಲೇ ಗುರುವಿನ ವಿಜಯ ಅಡಗಿದೆ ಅಲ್ಲವೇ ಗುರುಗಳೇ !'

'ಹೌದು'

'ಪ್ರಭು ಹೇಳುವ ಅರ್ಥದಲ್ಲಿ ?'

'ಏನು ಹೇಳಿದ್ದಾನೆ ಅಲ್ಲಮಪ್ರಭು ?'

> 'ಕೃತ ಯುಗದಲ್ಲಿ ಶ್ರೀ ಗುರು ಶಿಷ್ಯಂಗೆ ಬಡಿದು ಬುದ್ಧಿಯ ಕಲಿಸಿದರೆ
> ಆಗಲಿ ಮಹಾಪ್ರಸಾದನೆಂದೆನಯ್ಯ ;
> ತ್ರೇತಾಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬಯ್ದು ಬುದ್ಧಿಯ ಕಲಿಸಿದರೆ
> ಆಗಲಿ ಮಹಾಪ್ರಸಾದವೆಂದೆನಯ್ಯ ;
> ದ್ವಾಪರದಲ್ಲಿ ಶ್ರೀಗುರು ಶಿಷ್ಯಂಗೆ ಝಂಕಿಸಿ ಬುದ್ಧಿಯ ಕಲಿಸಿದರೆ
> ಆಗಲಿ ಮಹಾಪ್ರಸಾದವೆಂದೆನಯ್ಯ ;
> ಕಲಿಯುಗದಲ್ಲಿ ಶ್ರೀಗುರು ಶಿಷ್ಯಂಗೆ ವಂದಿಸಿ ಬುದ್ಧಿಯ ಕಲಿಸಿದರೆ
> ಆಗಲಿ ಮಹಾಪ್ರಸಾದವೆಂದೆನಯ್ಯ ;
> ಗುಹೇಶ್ವರಾ, ನಿಮ್ಮ ಕಾಲದ ಕಟ್ಟಳೆಯ ಕಲಿತನಕ್ಕೆ ನಾನು ಬೆರಗಾದೆನು !'

'ಚೆನ್ನಾಗಿದೆ ಪ್ರಭುವಿನ ವಚನ. ಅಂದರೆ ಕೃತಯುಗದಿಂದ ಕಲಿಯುಗದವರೆಗೆ ಶಿಷ್ಯನ ಜ್ಞಾನದ ಮಟ್ಟ ಇಳೀತಾ ಇದೆ—ಅಂತಲೇ ಇದರ ಅರ್ಥ ?'

'ಅಲ್ಲ ಗುರುಗಳೆ, ಶಿಷ್ಯನ ಮಾನಸಿಕ ವಿಕಾಸವಾಗಿದೆ ಎಂದು'

'ಹೇಗೆ ?'

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

'ಕೇಳೋಣವಾಗಲಿ,

ಮಹಾಲಿಂಗದೇವ ಎಂಬುವನು ಪ್ರಭುದೇವರ ವಚನವನ್ನು ಅರ್ಥಪೂರ್ಣವಾಗಿ ವ್ಯಾಖ್ಯಾನಿಸಿದ್ದಾನೆ. ಅವನ ಮಾತುಗಳನ್ನೇ ನಾನಿಲ್ಲಿ ಪುನರುಚ್ಚರಿಸುತ್ತಿದ್ದೇನೆ. ದಯಮಾಡಿ ಕೇಳೋಣವಾಗಲಿ :

ಕೃತ, ತ್ರೇತ, ದ್ವಾಪರ, ಕಲಿ—ಇವು ಬೇರೆ ಬೇರೆ ಯುಗಗಳಲ್ಲ; ಒಬ್ಬನೇ ವ್ಯಕ್ತಿಯ ಬದುಕಿನ ಬೆಳವಣಿಗೆಯ ಬೇರೆ ಬೇರೆ ಸ್ತರಗಳು. ಅವನು ಬೌದ್ಧಿಕವಾದ ಬಾಲ್ಯದಿಂದ ಹಿಡಿದು ಆಧ್ಯಾತ್ಮಿಕ ಸಿದ್ಧಿಯವರೆಗೂ ಇರುವ ಬೇರೆ ಬೇರೆ ಮಜಲುಗಳು.

ಅವನು ಹೇಳುತ್ತಾನೆ :

ಚತುರ್ಥದಲ್ಲಿ ಗುರು ಶಿಷ್ಯ ಸಂಬಂಧವೆಂಬ ಭಿನ್ನ ಭಾವವಳಿದು ಸೋಹಂಭಾವ ಸ್ವರೂಪನಾಗಿ ಸೇವ್ಯ ಸ್ಥಲವನಿಂಬುಗೊಂಡಿದ್ದನೆಂಬುದೀಗ ಕಲಿಯುಗದಲ್ಲಿ ಶ್ರೀಗುರು ಶಿಷ್ಯಂಗೆ ವಂದಿಸಿ ಬುದ್ಧಿಯ ಕಲಿಸಿದರೆ ಆಗಲಿ ಮಹಾಪ್ರಸಾದವೆಂದೆನಯ್ಯ ಎಂಬ ಶಬ್ದಕ್ಕರ್ಥ—ಎಂದು. ವ್ಯಕ್ತಿ ಗುರುವಿಗೆ ಶಿಷ್ಯನಾಗುವುದು ಒಂದು ಹಂತದವರಿಗೆ ಮಾತ್ರ. ಅವನು ಬೆಳೆದ ಮೇಲೆ ಗುರು ಶಿಷ್ಯರಿಬ್ಬರೂ ಒಂದೇ ಆಗುತ್ತಾರೆ. ಒಂದೇ ಸ್ತರದಲ್ಲಿ ಸ್ಥಿತರಾಗುತ್ತಾರೆ. ಅಲ್ಲಿ ಗುರು ಗುರುವಲ್ಲ, ಶಿಷ್ಯ ಶಿಷ್ಯನಲ್ಲ. ಇಬ್ಬರೂ ಸಮಾನರು.

ಎರಡನೆಯದಾಗಿ, ಗುರುವಾದವನು ತನ್ನ ನಿರಂತರ ಆರ್ಜನೆಯಿಂದ ಜ್ಞಾನದ ಒಂದು ಘಟ್ಟವನ್ನು ಮುಟ್ಟಿರುತ್ತಾನೆ. ಅವನು ತನ್ನೆಲ್ಲ ಜ್ಞಾನ ಸಂಪದವನ್ನು ಶಿಷ್ಯನಿಗೆ ಧಾರೆ ಎರೆದಿರುತ್ತಾನೆ. ಅವನ ಸಂಪತ್ತನ್ನೆಲ್ಲಾ ಸೂರೆಗೊಂಡ ಶಿಷ್ಯ ಪುಷ್ಟವಾಗಿ ಬೆಳೆಯುತ್ತಾನೆ. ಚೆನ್ನಾಗಿ ಬೆಳೆದ ಮೇಲೆ, ಗುರುವು ಕಂಡದ್ದಕ್ಕಿಂತಲೂ ಹೆಚ್ಚು ಕಾಣುತ್ತಾನೆ, ಅಜ್ಜನ ಹೆಗಲೇರಿದ ಮೊಮ್ಮಗನಂತೆ. ಗುರುವಿನ ಜ್ಞಾನ ಅವನಿಗೆ ಹಿನ್ನೆಲೆಯಲ್ಲಿ ನಿಂತಿರುತ್ತದೆ. ಆದರ ನೆರವಿನಿಂದ ಅವನಿಗಿಂತಲೂ ಜ್ಞಾನದ ಸ್ತರವನ್ನು ವಿಸ್ತರಿಸಿಕೊಳ್ಳುತ್ತಾನೆ. ಮೊದಲ ಹಂತದಲ್ಲಿ ಬಡಿದು ಬುದ್ಧಿ ಕಲಿಸಿದ ಗುರು, ಎರಡನೆಯ ಹಂತದಲ್ಲಿ ಬಯ್ದು ಬುದ್ಧಿ ಕಲಿಸುತ್ತಾನೆ, ಮೂರನೆ ಹಂತದಲ್ಲಿ ಗದರಿಸಿ ಬುದ್ಧಿ ಕಲಿಸುತ್ತಾನೆ; ನಾಲ್ಕನೆಯ ಹಂತದಲ್ಲಿ ಜ್ಞಾನವೇ ಮೂರ್ತೀಭವಿಸಿದಂತಿರುವ ಶಿಷ್ಯನಿಗೆ ಗುರು ವಂದಿಸುತ್ತಾನೆ. ಇದು ಮಹಾಲಿಂಗದೇವನು ನೀಡುವ ಅರ್ಥ'.

'ಅರ್ಥ ತುಂಬಾ ಚೆನ್ನಾಗಿದೆ. ರಾಜಶೇಖರ ನೀನು ಅಂತಾಗಬೇಕು; ಜ್ಞಾನದ ಮಹಾ ಜ್ಯೋತಿ ಆಗಬೇಕು. ನನ್ನಿಂದಲೂ ನೀನು ವಂದನೀಯನಾಗಬೇಕು!'

'ಹ್ಹಾ! ಇದೇನು ಗುರುದೇವ, ಈ ನುಡಿ ನನಗೆ ಶ್ರೇಯಸ್ಸಲ್ಲ. ದಯವಿಟ್ಟು...!

"ಏನು ನಿನ್ನ ಅರ್ಥವಿಲ್ಲದ ವರ್ತನೆ ರಾಜಶೇಖರ. ನೀನೇ ಈಗತಾನೆ ಅಲ್ಲಮಪ್ರಭುವಿನ ವಚನ ಹಾಗೂ ಮಹಾಲಿಂಗ ದೇವರ ವ್ಯಾಖ್ಯಾನ ಹೇಳಿದೆ. ಜ್ಞಾನಿಯಾದ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನೀನು ಈ ಭ್ರಮೆಗೆ ಪಕ್ಕಾಗುವುದೇ? ಬೇಡ; ಕೇಳು: ನೀನೇ ಉತ್ತಾರಾಧಿಕಾರಿ; ಧರ್ಮದೇವತೆ.'

'ಆ ಹೊಣೆ ಹೊರೆ ನನಗೆ ಈಗಲೇ ಬೇಡ ತಂದೆ.'

'ಹಾಗಲ್ಲ ರಾಜಶೇಖರ, ಪಲಾಯನ ವಾದ ಯಾರಿಗೂ ಸರಿಯಲ್ಲ, ಹಣ್ಣೆಲೆ ಉದುರಲೇಬೇಕು ಚಿಗುರಿಗಾಸ್ಪದ ಕೊಟ್ಟು. ಇಲ್ಲವಾದರೆ ವೃಕ್ಷ ಬೆಳೆಯುವುದಾದರೂ ಎಲ್ಲಿ? ಆದ್ದರಿಂದ ನನ್ನ ಸ್ವಾಮಿ ಕುಮಾರೇಶ ನನಗೆ ಕೊಟ್ಟದ್ದನ್ನು ನಾನು ನಿನಗೆ ಕೊಡುತ್ತಿದ್ದೇನೆ. ನೀನಾದ ಮೇಲೆ ಮತ್ತೊಬ್ಬನಿಗೆ ಇದು ಪರಂಪರಾಗತ ಹೊಣೆಗಾರಿಕೆ.'

'ಆದರೂ ನೂರ್ಕಾಲ, ತಾವು ಬದುಕಿ, ನಮಗೆ ಮಾರ್ಗದರ್ಶನ ಮಾಡಬೇಕೆಂಬ ಇಚ್ಛೆ.'

'ಇದೂ ಭ್ರಮೆಯೆ ! ಅಲ್ಲವಪ್ಪಾ, ನಶ್ವರರಾದ ಶರೀರ ಎಂದಾದರೂ ಬಿದ್ದು ಹೋಗಬೇಕಲ್ಲವೆ?'

"ಸತ್ಯವನ್ನು ವಿರೋಧಿಸುವ ಹಕ್ಕು, ಅಧಿಕಾರ, ಅರ್ಹತೆ ನನಗಿಲ್ಲ ಗುರುದೇವ ಅಂತೆಯೇ ಶರಣರ ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ ಎಂಬ ನುಡಿಯ ಸಾಕ್ಷಾತ್ಕಾರ ನನಗೀಗಾಯಿತು.'

'ಅಂದರೆ'

'ಅಂದರೆ ತಮ್ಮ ನುಡಿಗಳನ್ನು ಆಲಿಸುತ್ತಲೇ ಆ ಶರಣರ ನುಡಿಗಳ ಅರ್ಥವನ್ನು ಕಂಡುಕೊಂಡೆ.'

'ಏನದು ? "ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ" ಮಾತಿನ ಅರ್ಥ ಏನು? ಸ್ಥಾವರ ಯಾವುದು? ಜಂಗಮ ಯಾವುದು? ವಿವರಣೆ ಕೊಡುವೆಯಾ?'

'ಅಪ್ಪಣೆ ಗುರುದೇವ' ಕೇಳಿ:

ಸೃಷ್ಟಿಯ ಸ್ಥೂಲ ವಿಭಜನೆ ಎರಡು ಬಗೆಯದು: ಒಂದು ಸ್ಥಾವರ, ಮತ್ತೊಂದು ಜಂಗಮ; ಒಂದು ಜಡ, ಮತ್ತೊಂದು ಚೇತನ; ಒಂದು ನಶ್ವರ ಮತ್ತೊಂದು ಶಾಶ್ವತ; ಒಂದು ಮೃಣ್ಮಯದ ಮೂರ್ತಿ, ಮತ್ತೊಂದು ಚಿನ್ಮಯದ ಚೇತನ; ಒಂದು ಸಗುಣ ಸಾಕಾರ, ಮತ್ತೊಂದು ನಿರ್ಗುಣ ನಿರಾಕಾರ; ಒಂದು ಸಕಲ, ಮತ್ತೊಂದು ನಿಃಕಲ; ಒಂದು ಆಲಯ, ಮತ್ತೊಂದು ಬಯಲು; ಒಂದು ಅಂಗ, ಮತ್ತೊಂದು ಲಿಂಗ; ಒಂದರದು ಮೂರ್ತ ರೂಪ; ಮತ್ತೊಂದರದು ಅಮೂರ್ತ ಸ್ವರೂಪ; ಒಂದರ ಸ್ಥಿತಿ ಬದ್ಧ, ಮತ್ತೊಂದರ ಗತಿ ಮುಕ್ತ; ಒಂದು ಶಬ್ದ ಗಂಭೀರವಾದರೆ, ಮತ್ತೊಂದು ವಾಙ್ಮನಕ್ಕೆ ಅಗೋಚರವಾಗಿದೆ; ಒಂದು ಜಡಜಲಾತ್ಮಕ ಸ್ಪರ್ಶಪರಿತೋಷಕಾರಿ, ಮತ್ತೊಂದು ಸಚ್ಚಿದಾನಂದ ನಿತ್ಯ ಪರಿಪೂರ್ಣ ಚೇತೋಹಾರಿ: ಒಂದರದು ಪ್ರಣಯ ಲೀಲೆ, ಮತ್ತೊಂದರದು ಪ್ರಣವ ಜ್ವಾಲೆ; ಒಂದು ಪೃಥಿವ್ಯಾದಿ ಪಂಚಭೂತ ಸೃಷ್ಟಿ, ಮತ್ತೊಂದು ಸದ್ಯೋಜಾತಾದಿ ಪಂಚಬ್ರಹ್ಮ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದೃಷ್ಟಿ; ಒಂದು ಕಾಯದಿಚ್ಛೆಗೆ ಸುಳಿದು ಕಳವಳಗೊಂಡ ತ್ರಿವಿಧಕ್ಕೆ ಬದ್ಧವಾಗಿ ಧೃತಿ ನೀಗಿಕೊಂಡ ಅನಿಮಿಷಾವಳಿಯು, ಮತ್ತೊಂದು ನಿತ್ಯ ನಿರ್ಮಳ, ನಿಶ್ಚಿಂತ ನಿರಂಜನ, ನಿರ್ಮಾಯ, ನಿರ್ವ್ಯಸನಿ, ನಿರ್ಲೇಪವೆನಿಸಿದ ಅನಿಮಿಷ ಪ್ರಭಾವಲಯು; ಒಂದು ಶಬ್ದ ಸ್ಪರ್ಶ ರೂಪ ರುಚಿ ರಸ ಗಂಧಾದಿಗಳ ಆರಾಮು, ಮತ್ತೊಂದು ನಾದ ಬಿಂದು ಕ್ರೀ ಕಳಾಪ ವಿರಾಮು; ಒಂದರ ಡಿಂಬಕ್ಕೆ ಬಿಂಬವುಂಟು, ಬಿಂಬಕ್ಕೆ ಪ್ರತಿಬಿಂಬವುಂಟು, ಆದರೆ ಮತ್ತೊಂದು ನಿಂದರೆ ನೆರಳಿಲ್ಲ, ಸುಳಿದರೆ ಹೆಜ್ಜೆಯಿಲ್ಲ; ಅಂತೆಯೇ ಕಾಲಿಲ್ಲದೆ ನಡೆವ, ಕೈಯಿಲ್ಲದೆ ಹಿಡಿವ, ಕಣ್ಣಿಲ್ಲದೆ ನೋಡುವ...ಮೈಯಿಲ್ಲದ ಬಣ್ಣ, ಮಂಥನ ವಿಲ್ಲದ ಕೂಟ...ಕುಳ್ಳಿತ್ತೆಡೆಯಲ್ಲಿ ಕುಂಟು, ನಿಂದಿದ್ದೆಡೆಯಲ್ಲಿ ಹೆಳವು...ಎಲ್ಲಿ ನೋಡಿಡದಲ್ಲಿ ಪರಿಪೂರ್ಣವಾಗಿದೆ; ಒಂದರದು ವ್ಯವಹಾರ ಪೂಜೆ, ಪ್ರಾಕೃತ ಪೂಜೆ, ದ್ವೈತ ಜಡ ಮೋಹ ಅಜ್ಞಾನ ಮಾಯಾ ಪೂಜೆ, ಮತ್ತೊಂದರದು ಸುಜ್ಞಾನ ಚೈತನ್ಯವಾದ ಜಂಗಮವು ಆಚರಿಸುವ ನಿತ್ಯ ನಿರಂತರ ಪೂಜೆ, ಸಹಜ ಸಮರಸಾನಂದ ಪೂಜೆ, ಜೀವ ದೇವನಿಗಾಗಿ ದಿವಕ್ಕೆತ್ತಿದ ದಿವ್ಯ ಕಲ್ಯಾಣದಾರತಿ. ಒಂದರ್ಥದಲ್ಲಿ ತನ್ನ ತಾನರ್ಚಿಸಿಕೊಳ್ಳುವ ವಿಧಾನ, ಸ್ವಾಹಾರಾಧನೆ; ಬಾನು–ಬಯಲು ತೊರೆ–ತೆರೆ, ಹೂವು–ಹುಲ್ಲು, ದೀಪ–ದೀಪ್ತಿ ಇತ್ಯಾದಿ ನೆಲದ ಪ್ರಜ್ಞೆಗಂಟಿದ ಖಂಡದೃಷ್ಟಿ ಒಂದರದು, "ಸರ್ವಂ ಖಲ್ವಿದಂ ಬ್ರಹ್ಮ" ಎಂಬ ಸ್ವಾನುಭವಗಮ್ಯ ಗೋಚರ ಸ್ವಯಂಜ್ಯೋತಿ ಪ್ರಜ್ಞೆಯ ವಿಶ್ವವಿಶಾಲ ಪ್ರಭಾವಲಯದ ಅಖಂಡ ವೃಷ್ಟಿ ಮತ್ತೊಂದರದು. ಗುರುತಿಸುವಷ್ಟು ಸ್ಪಷ್ಟವಿರುವ ಮೇಲೆ ತಿಳಿಸಿದ ಸ್ಥಾವರ ಜಂಗಮ ಪ್ರಭೇದಗಳನ್ನು ಕುರಿತು ಬಸವಣ್ಣ ಹೇಳುತ್ತಾನೆ—

ಉಳ್ಳವರು ಶಿವಾಲಯವ ಮಾಡುವರು:
    ನಾನೇನ ಮಾಡುವೆ ಬಡವನಯ್ಯ,
ಎನ್ನ ಕಾಲೇ ಕಂಬ ದೇಹವೇ ದೇಗುಲ,
    ಸಿರ ಹೊನ್ನ ಕಳಸವಯ್ಯಾ,
ಕೂಡಲ ಸಂಗಮದೇವ, ಕೇಳಯ್ಯಾ
    ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ.

ಅಂದರೆ ಒಂದು ನಶ್ವರ, ಮತ್ತೊಂದು ಶಾಶ್ವತ, ಮೊದಲನೆಯದು ಜಡ; ಅದು ಮಡಿಯುತ್ತದೆ, ಎರಡನೆಯದು ಚೈತನ್ಯ: ಅದು ಉಳಿಯುತ್ತದೆ.

ಹಾಗಾದರೆ ಜಡ ಯಾವುದು? ಚೈತನ್ಯ ಯಾವುದು? ಉಳ್ಳವರು ಕಲ್ಲು, ಕಳಸ ಗಳಿಂದ ನಿರ್ಮಿಸಿದ ಕಲಾಪೂರ್ಣ ಕಟ್ಟಡ ಸ್ಥಾವರ. ಅದು ಮೊದಲ ಹೇಳಿಕೆಯಂತೆ ನಶ್ವರ; ನಿಜ. ಆದರೆ ಕಾಲು ಕಂಠ ಶಿರ ಸೊಂಟಗಳನ್ನುಳ್ಳ ಮಜ್ಜೆ ಮಾಂಸಗಳ ಅಸ್ಥಿ ನೆತ್ತರಿನ ಈ ದೇಹವೆಂಬ ದೇಗುಲ ಒಂದೆಡೆಯಿಂದ ಮತ್ತೊಂದಡೆಗೆ ಅಲೆದಾಡು– ವುದೇನೊ ಸತ್ಯ; ಅದು ಜಂಗಮವೇ. ಅಂದಾಕ್ಷಣಕ್ಕೇ ಅದು ಅಳಿವು ಕಾಣದ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಚಿರನೂತನ ಚೆಲುವು ತುಂಬಿದ ಚೈತನ್ಯವೇ? ಅಲ್ಲ. ಅದೆಷ್ಟೇ ಚೆಲುವಿದ್ದರೂ, ಶುದ್ಧವೆನಿಸಿದರೂ ಅದು ನಶ್ವರವೇ. ಕಾರಣ ಅದು ಪಂಚಭೂತಗಳಿಂದಾದ್ದು; ಒಂದಲ್ಲ ಒಂದು ದಿನ ಪಂಚಭೂತಗಳಲ್ಲೇ ಲಯ ಹೊಂದುವ ಕಾಯ ಕರ್ಪೂರ; ಹೀಗಿರುವಲ್ಲಿ ಅಣ್ಣ "ಉಳ್ಳವರ ಶಿವಾಲಯ"ಕ್ಕಿಂತ ತನ್ನ "ದೇಹ ದೇಗುಲ" ಚಿರಂತನ ಎಂದು ನುಡಿದ ಮಾತು ಅವಜ್ಞೆಯಿಂದ ಮೂಡಿ ಬಂದುದೇ? ಅಥವಾ ವಿರೋಧಾಭಾಸ ಪ್ರಯೋಗವೇ? ಎನ್ನಿಸದಿರದು, ಆದರೆ ಅಣ್ಣನ ಅರಿವು ವಿಶಿಷ್ಟವಾದುದು—ಚೇತನ ಇರುವವರೆಗೊ ವಸ್ತು ನೂತನ, ಚೇತನ ತುಂಬಿರುವವರೆಗೂ ದೇಹ ಜಡವಲ್ಲ; ಅದು ಜಂಗಮ. ಅದು ಬೀಸುವ ಗಾಳಿಯಂತೆ, ಹರಿಯುವ ನೀರಿನಂತೆ, ಉರಿಯುವ ಜ್ಯೋತಿಯಂತೆ. ನಿಂತ ನೀರು ಕೆಸರು, ಹರಿವ ನೀರು ತೀರ್ಥ: ಆದ್ದರಿಂದ ಕಟ್ಟಿದ ಕಟ್ಟಡ ಇಂದಿದ್ದು ನಾಳೆ ಅಳಿದು,ತನ್ನ ಅವಶೇಷವನ್ನೂ ಕಳೆದುಕೊಳ್ಳಬಹುದು. ಆದರೆ ಜಗತ್ತಿನ ಲೀಲೆಗಾಗಿ ಬುದ್ಧನೋ, ಬಸವನೋ, ಶಂಕರನೋ, ಮಧ್ವನೋ, ರಾಮಾನುಜನೊ, ಮಹಾ ವೀರನೊ ರಾಮಕೃಷ್ಣನೊ, ವಿವೇಕಾನಂದನೊ, ಗಾಂಧಿಯೊ ಯಾವುದೋ ಒಂದು ಅಭಿಧಾನದಿಂದ ಅವತರಿಸಿ, ಆತ್ಮಕಲ್ಯಾಣ, ವಿಶ್ವಕಲ್ಯಾಣವನ್ನು ಏಕಕಾಲದಲ್ಲಿ ಸಾಧಿಸಿ ತೋರಿಸಿದ ಚಿದ್ವಿಲಾಸದ ಚೈತನ್ಯವೊಂದು ನಶ್ವರವೇ? ಎಂದಿಗೂ ಅಲ್ಲ ಪ್ರಭುವೇ ಮುಕ್ತಾಯಿಗೆ ಉಪದೇಶಿಸಿದಂತೆ---

ಕಾರಣವ ಕಾಣಿಸದ ಮನದ ವಿ
ಕಾರಿಗಳಿಗೂ ಶರಣರೊಂದು ಶ
ರೀರವನು ತೋರಿದಡೆ ನಿನ್ನವರೆಂದು ನಂಬದಿರು.
ಹಾರವಿಸದಿರು ತಿಳಿದು ನೋಡು ವಿ
ಚಾರಿಸುವಡಜಗಣ್ಣನೆಂಬನ
ಪಾರ ಮಹಿಮನು ನಿತ್ಯನೌ ಮುಕ್ತಾಯಿ ಕೇಳೆಂದ.

ಅಂತೆಯೇ ಭೌತಿಕ ಶರೀರ ಮರೆಯಾದರೂ ಅವರ ಆತ್ಮಶ್ರೀ ಅವಿನಾಶಿ. ಹೂವು ಬಾಡಿದರೂ ಅದರ ಪರಿಮಳವು ಉಳಿಯುವಂತೆ, ವಿಶ್ವಾಂತರಾಳದ ಅನಾದಿಶಕ್ತಿ ಅನವರತವೂ ಉಳಿದು ನಿಲ್ಲುತ್ತದೆ. ಕಲ್ಲು ಕರಗಬಹುದು. ಶಶಿ ಬಿಸುಪಾಗಬಹುದು. ಆದರೆ ನೀರಿನಲ್ಲಿ ತಂಪಾಗಿ, ಗಾಳಿಯಲ್ಲಿ ವೇಗವಾಗಿ, ಸೂರ್ಯನಲ್ಲಿ ತೇಜಸ್ಸಾಗಿ, ಚಂದ್ರನಲ್ಲಿ ಕಾಂತಿಯಾಗಿ, ಹಕ್ಕಿಯ ಕಂಠದಲ್ಲಿ ಹಾಡಾಗಿ, ಹೂವಿನಲ್ಲಿ ಪರಿಮಳ ವಾಗಿ, ಕಲ್ಲಿನಲ್ಲಿ ಘನೀಭೂತವಾಗಿ, ಮಾನವನ ಹೃನ್ಮಂದಿರದಲ್ಲಿ ಆತ್ಮಜ್ಯೋತಿಯಾಗಿ ಅಣುರೇಣು ತೃಣಕಾಷ್ಠದಲ್ಲೂ ಅಗೋಚರವಾಗಿ ಪ್ರವಹಿಸುತ್ತಿರುವ ಕ್ರತುಶಕ್ತಿ, ಕ್ರಿಯಾಶಕ್ತಿ, ಕುಂಡಲಿನೀಶಕ್ತಿ ಎಂದೆಂದಿಗೂ ಅವಿನಾಶಿ. ಕಣ್ಣಿಗೆ ಗೋಚರಿಸಿದ ದೃಶ್ಯವೊಂದು ಮಾಯವಾದರೂ ಅದರ ಅಚ್ಚಳಿಯದ ಸ್ಮೃತಿ ಚಿತ್ರವೊಂದು ಚಿತ್ತ ಫಲಕದಲ್ಲಿ ಸದಾ ಸುಳಿಯುವಂತೆ ಬಾಹ್ಯ ಜಗತ್ತಿನ ಭೌತವಸ್ತು ನಾಶವಾಗುತ್ತದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬಯಲು ದೇಹ :

ಸ್ಥೂಲ ಶರೀರ ಸ್ಥಾವರತೆಯನ್ನು ಪಡೆಯಿತು. ಸ್ಥಾವರಕ್ಕೆ ಅಳಿವು ಅನಿವಾರ್ಯವಷ್ಟೆ. ಅದನ್ನೇ ಮತ್ತೊಂದೆಡೆಯಲ್ಲಿ ಅರಿವು ಮಾಡಿಕೊಡುತ್ತಾನೆ ಅಲ್ಲಮ ಪ್ರಭು, ಶ್ರೀಗಿರಿಯ ಸಾಧಕ. ಸ್ಥೂಲ ಶರೀರದ ಸಿದ್ಧ, ಗೋರಕ್ಷ ವಜ್ರದೇಹಿಯಾದರೆ, ಅವನ ಅಜ್ಞಾನವನ್ನು ಹರಿಸಿದ ಅಲ್ಲಮ ಪ್ರಭು 'ಬಯಲು ದೇಹಿ' ಯಾಗಿರುತ್ತಾನೆ. ಗೋರಕ್ಷ ಬೀಸಿದ ಖಂಡೆಯ ಖಣಿಲೆಂದಾಗ, ಪ್ರಭು ನುಡಿಯುತ್ತಾನೆ—

ಕಾಯ ಬಲಿದಡೆ ಮಾಯೆ ಬಲಿವುದು
ಮಾಯೆ ಬಲಿದಡೆ ಛಾಯೆ ಬಲಿವುದು
ಕಾಯ ಮಾಯಾ ಛಾಯೆ ಬಲಿದಡೆ ಸಿದ್ಧನವನಲ್ಲ ।
ಕಾಯ ಮಾಯಾ ಛಾಯದಾಗಿನ
ದಾಯವನು ನೆರೆ ಕಳೆದನಾದಡೆ
ರಾಯನಾತನು ಸಿದ್ಧರಲಿ ಗೋರಕ್ಷ ಕೇಳೆಂದ ॥

—ಇಂತಹ ಅಕಾಯವಾದ 'ಅರಿವರಿತು ಮರವು ನಷ್ಟವಾದ' ಮಹಾನವ ಚೇತನ ಮಹದ್ವಿಭೂತಿಯೇ ಅಲ್ಲವೆ ? ಅಂದ ಮೇಲೆ ಅದಕ್ಕೆಲ್ಲಿ ಬಂತು ಅಳಿವು. ಗೋರಕ್ಷನದು ವಜ್ರದೇಹ ; ಅದು ಸ್ಥಾವರ. ಅದು ಒಡೆದು ಚೂರಾಗಿ, ಮಣ್ಣಿನಲ್ಲಿ ಮಣ್ಣಾಗಿ, ಧೂಳಿನಲ್ಲಿ ಧೂಳಾಗಿ ಹೋದೀತು. ಆದರೆ 'ಸಾಕ್ಷಾತುವವನಿಜಲಾನಿಲ ಭೂತತ್ತ್ವ ವಿದೂರ ಪರಮಾನಂದ ರಸಭರಿತ' ನಾದ ಅಲ್ಲಮನ ಕಾರಣ ದೇಹ ? ಅದು ಜಂಗಮ, ಅದು ಅಲ್ಪನಂತೆ ಅಳಿವ ಮೃತ್ತಿಕೆಯ ಮೂರ್ತಿಯಲ್ಲ, ಕದಳಿಯಲ್ಲಿ ಬಯಲಾದ ಬೆಳಕು ;

'ಗೋರಕ್ಷನ ದೇಹ ಸ್ಥಾವರ, ಅದಕ್ಕಳಿವುಂಟು;
ಅಲ್ಲಮನ ದೇಹ ಜಂಗಮ, ಅದಕ್ಕಳಿವಿಲ್ಲ.'

ಲಿಂಗ-ಜಂಗಮ :

ಲಿಂಗ ಜಂಗಮರಲ್ಲಿ ಲಿಂಗ ಏನು ? ಜಂಗಮ ಯಾರು ? ಉಭಯವೂ ಸ್ಥಾವರಗಳೇ ? ಅಥವಾ ಜಂಗಮಗಳೇ ? ಅಳಿವು ಉಳಿವುಗಳು ಅವುಗಳಿಗೂ ಉಂಟೋ ? ಇಲ್ಲವೊ ? ಎಂಬಿವೇ ಪ್ರಶ್ನೆಗಳು ಉದ್ಭವಿಸುತ್ತವೆ. ಆದರೆ ಲಿಂಗವೆಂದಾಗ ಕೇವಲ ಕಲ್ಲುಗುಡಿಯ ಗುಂಡಪ್ಪನಾಗಲೀ ಅಥವಾ ಸಾಕ್ಷಾತ್ ಶಿವಲಿಂಗವನ್ನೇ ಕಲ್ಲೆಂದು ಭಾವಿಸಿ ಕಾಟಾಚಾರಕ್ಕೆ ಕೊರಳಲ್ಲಿ ಧರಿಸಿರುವವರ ಇಷ್ಟಲಿಂಗವಾಗಲೀ ಅಲ್ಲ. ಅದು ನಿಜ ವಸ್ತುವಿನ ನಿರಾಕಾರ ಚಿತ್ರಣಕ್ಕೆ ಎತ್ತಿ ನಿಲ್ಲಿಸಿದ ನಿರ್ವಿಕಾರ ಮೂಲ ಭಿತ್ತಿ, ಸಾಧಕನಿಗಾಗಿ ನಿಜೈಕ್ಯದ ಕಡೆಗೆ ಸವೆಂದ ಸೋಪಾನ ; ಕರಿಯು ಕನ್ನಡಿಯಲ್ಲಡಗಿದಂತೆ :

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ :
ಪಾತಾಳದಿಂದತ್ತತ್ತ ನಿಮ್ಮ ಶ್ರೀ ಚರಣ
ಬ್ರಹ್ಮಾಂಡದಿಂದತ್ತತ್ತ ನಿಮ್ಮ ಶ್ರೀ ಮಕುಟ ;
ಅಗಮ್ಯ ಅಗೋಚರ ಅಪ್ರತಿಮ ಲಿಂಗವೇ, ಕೂಡಲ ಸಂಗಮ ದೇವಯ್ಯಾ,
ಎನ್ನ ಕರಸ್ಥಳಕ್ಕೆ ಬಂದು ಚುಳುಕಾದಿರಯ್ಯಾ ! !

—ಹೌದು ಅದೇ ವಿಶ್ವಾತ್ಮನ ವಿಶಿಷ್ಟ ರೂಹು.

ಜಂಗಮ ವೀರಶೈವರಲ್ಲಿರುವ ಒಂದು ವರ್ಗದಲ್ಲಿ ಹುಟ್ಟಿದ ನಾಮ ಮಾತ್ರ ಜಂಗಮನಲ್ಲ ; ಅವನು ಸಾಕ್ಷಾತ್ ಪರಿಶಿವ ಸ್ವರೂಪಿ ; ಜಂಗಮಾಕಾರ ತಳೆದ ಲಿಂಗದ ಲೀಲಾವಿಲಾಸ. ವಿಶ್ವಾತ್ಮನಿಂದ ಬೇರಾದ, ಆದರೆ ಅವನ ಅಸ್ತಿತ್ವದ ಪ್ರತಿನಿಧಿಯಾದ ದೇವಾತ್ಮ. ಈ ಲಿಂಗ ಜಂಗಮಗಳು ಬೇರೆ ಬೇರೆ ಅಲ್ಲ. ಅವೆರಡೂ ಒಂದರಿಂದಾದ ಎರಡು ರೂಹುಗಳು. ಕಣ್ಣೆರಡಾದರೂ ಕಾಣ್ಕೆ ಎರಡಲ್ಲ. ಕುರುಹು ಬೇರಾದರೂ ಇರುವು ಬೇರಲ್ಲ. ಅದು—

ಓಂ ಪೂರ್ಣಮದಃ ಪೂರ್ಣಮಿದಂ ಪೂರ್ಣಾತ್ ಪೂರ್ಣಮುದಚ್ಯತೇ
ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇವಾವಶಿಷ್ಯತೇ

—ಹೀಗೆ ಪೂರ್ಣದಿಂದ ಬೇರಾದ, ಆದರೂ ಸ್ವಯಂ ಪೂರ್ಣವಾದ ಚಿದ್ಬಿಂದು.

ಸಾಗರದ ನೀರು ಪೂರ್ಣ, ಕೊಳದ ನೀರು ಪೂರ್ಣ, ಪಾತ್ರೆಯೊಳಗಿನ ನೀರು ಪೂರ್ಣ. ಮೇಜಿನ ಮೇಲೆ ಹಾಕಿದ ಹನಿ ನೀರು ತನಗೆ ತಾನೇ ಪೂರ್ಣ ; ಅದು ಸಾಗರದ ನೀರಿನ ಹೋಳಲ್ಲ, ಚೂರಲ್ಲ, ತುಣುಕಲ್ಲ. ಆದರೆ ಅದು ಪ್ರತ್ಯೇಕವಿದ್ದಾಗ ವ್ಯಕ್ತಿತ್ವವಿಲ್ಲ; ಅಸ್ತಿತ್ವವೂ ಇಲ್ಲ. ಅದು ವಿಶ್ವಾತ್ಮನೊಡನೆ ಏಕೀಭವಿಸಿದಾಗ ಮಾತ್ರ, ಲಿಂಗಾಂಗಗಳಲ್ಲಿ ಸಮರಸ ಸಿದ್ಧಿಸಿಕೊಂಡಾಗ ಮಾತ್ರ ಅದು ವಿಶ್ವಚೈತನ್ಯವೇ ಆಗಿ ಬಿಡುತ್ತದೆ.

ಲಿಂಗ ಮುಖ ಜಂಗಮವಾದ್ದರಿಂದ—ಜಂಗಮಕ್ಕೆರೆದರೆ ಸ್ಥಾವರವು ನೆನೆಯಿತು! ಬೇರಿಗೆ ನೀರೆರೆದರೆ ವೃಕ್ಷದ ಶಾಖೋಪಶಾಖೆಗಳು ತಣಿಯುವಂತೆ, ತಾಯಿ ಉಂಡು ತಣಿದರೆ ತನ್ನ ಗರ್ಭದಲ್ಲಿರುವ ಶಿಶು ತಣಿಯುವಂತೆ—

ಶಿವಯೋಗಿನಿ ಸಂತೃಪ್ತೇ ತೃಪ್ತೋ ಭವತಿ ಶಂಕರಃ
ತತ್ತೃಪ್ತ್ಯಾ ತನ್ಮಯಂ ವಿಶ್ವಂ ತೃಪ್ತಿಮೇತಿ ಚರಾಚರಮ್

ಒಟ್ಟಿನಲ್ಲಿ, ಲಿಂಗ–ಜಂಗಮ ಒಂದೇ. ಎರಡೂ ವಿಶ್ವಾತ್ಮನ ಅಂತರಾತ್ಮಗಳೇ, ನಿರ್ವಿಕಾರ ಚೈತನ್ಯಗಳೇ. ಆದ್ದರಿಂದ ಅವಕ್ಕಿಲ್ಲಿ ಬಂತು ಅಳಿವು?

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಗುರು ಶರಣ :

ಲಿಂಗ ಜಂಗಮಕ್ಕೆ ಮೊದಲು ಸ್ಮರಿಸಬೇಕಾದ ಚೈತನ್ಯವೆಂದರೆ ಗುರು. ವೀರಶೈವದಲ್ಲಿ ಗುರುವಿಗೆ ಒಂದು ಗುರುತರವಾದ ಸ್ಥಾನವಿದೆ. ಗುರು ಸೃಷ್ಟಿ ಸ್ಥಿತಿ ಲಯ ಕರ್ತರ ತ್ರೈಗುಣ್ಯವನ್ನು ಪಡೆದವನು. ಆದರೆ ತ್ರಿಗುಣಾತೀತನು, ಮಲತ್ರಯ ನಿವಾರಕನು, ಮಂಗಳ ಪ್ರದಾಯಕನು. ಗುರುವೇ ಆದಿ ಅನಾದಿ ಅನಂತ. 'ಶಿವಪಥವನರಿವರೆ ಗುರುಪಥವೇ ಮೊದಲು' ಅಂದಮೇಲೆ ಗುರುವಿನ ಮಹತ್ವದ ಬಗೆಗೆ ಬೇರೆ ಹೇಳಬೇಕಾಗಿಲ್ಲ. ಶಿವದೀಕ್ಷೆ ಪಡೆದ ಶಿಷ್ಯ ಸ್ಮರಿಸುವುದು ಗುರುವಿನ ಗೋತ್ರವನ್ನೇ. ಜನ್ಮ ಕೊಟ್ಟ ತಂದೆಗಿಂತ, ಜ್ಞಾನದಾನ ಮಾಡಿದ ಗುರುವೇ ದೊಡ್ಡವನು. 'ಗುರು ಮುಟ್ಟಿ ತಾನೆ ಗುರುವಾಗುತ್ತಾನೆ ಶಿಷ್ಯ ! ಹೌದು—

ಸಕಲ ವಿಸ್ತಾರದೊಳಗೆಲ್ಲ ಲಿಂಗವ ತೋರಿದ
ಆ ಲಿಂಗದೊಳಗೆ ಎನ್ನ ತೋರಿದ,
ಎನ್ನೊಳಗೆ ತನ್ನ ತೋರಿದ,
ಮಹಾಗುರುವಿಗೆ ನಮೋ ನಮಃ ಎಂಬೆನಯ್ಯಾ ಅಖಂಡೇಶ್ವರಾ.

ಇಂತಹ ಗುರು ಬೇರೆ ಅಲ್ಲ, ಶಿವ ಬೇರೆ ಅಲ್ಲ. ಶಿವನಿಗಿಂತಲೂ ಜ್ಯೇಷ್ಠವೆನಿಸಿದ ಚೇತನ ಅದು.

ಹೇಗೆಂದರೆ—

ಕಾಳಿಯ ಕಣ್ ಕಾಣದಿಂದ ಮುನ್ನ,
ತ್ರಿಪುರ ಸಂಹಾರದಿಂದ ಮುನ್ನ,
ಹರಿವಿರಂಚಿಗಳಿಂದ ಮುನ್ನ, ಉಮೆಯ ಕಲ್ಯಾಣದಿಂದ ಮುನ್ನ
ಮುನ್ನ, ಮುನ್ನ, ಮುನ್ನ
ಅಂದಿಂಗೆಳೆಯ ನೀನು, ಹಳೆಯ ನಾನು,
ಮಹಾದಾನಿ ಕೂಡಲ ಸಂಗಮದೇವಾ.

ಅಂದರೆ ಅವನು ಎಳೆಯನಿದ್ದಾಗ ಇವನು ಹಳೆಯವನಾಗಿದ್ದಾನೆ ; ಅಷ್ಟು ಪ್ರಾಚೀನ, ಪ್ರಸಿದ್ಧ, ಪ್ರಬುದ್ಧ ಪೂರ್ಣ ಪ್ರಜ್ಞೆಯ ಮಹಾ ಚೇತನ ಅದು. ಅಂತೆಯೇ ನಿರ್ಗುಣ ನಿರಾಕಾರವನ್ನು ಸಗುಣ ಸಾಕಾರವನ್ನಾಗಿಯೂ, ಸಗುಣ ಸಾಕಾರವನ್ನು ನಿರ್ಗುಣ ನಿರಾಕಾರವನ್ನಾಗಿಯೂ ಮಾಡುವ ಸಾಮರ್ಥ್ಯ ಅದಕ್ಕಿದೆ—

ಬಯಲ ರೂಪ ಮಾಡಬಲ್ಲಾತನೆ ಶರಣನು ;
ಆ ರೂಪ ಬಯಲ ಮಾಡಬಲ್ಲಾತನೆ ಲಿಂಗಾನುಭಾವಿ.

ಶೂನ್ಯದಲ್ಲಿ ಸೃಷ್ಟಿಯನ್ನು ಕಾಣುವ, ಸೃಷ್ಟಿಯಲ್ಲಿ ಶೂನ್ಯವನ್ನು ದರ್ಶಿಸುವ ದಿವ್ಯದ್ಯುತಿ ಆ ಪರಂಜ್ಯೋತಿ. ಲಿಂಗಾಂಗ ಸಾಮರಸ್ಯಕ್ಕೆ ಈ ಗುರುವೇ ಪರಮಾಧಿಕಾರಿ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಿಶ್ವ ಜಗತ್ತಿನ ಉದಯಾಸ್ತಮಾನಗಳ ವಿಶಾಲ ವ್ಯಾಪ್ತಿಯನ್ನುಳ್ಳ ಶ್ರೀ ಮಹಾಲಿಂಗ ದಲ್ಲಡಗಿದ ಅಖಂಡಜ್ಯೋತಿ, ಪರಿಶುದ್ಧ ಪರಾತ್ಪರ ತೇಜವೇ ಶ್ರೀಗುರು ಜಗದ್ಗುರು. ಇಂತಹ ಬೆಳಗಿನೊಳಗಣ ಬೆಳಗು, ಜಗದಾದಿ ಮುಂಬೆಳಗು ಇಳೆಯೊಳವತರಿಸಿದೀ ಬೆಳಗುಗಳ ಒಳ ಬೆಳಗು, ಮಂಗಳದ ಮಹಾ ಬೆಳಗು ಶ್ರೀ ಗುರುಲಿಂಗ ತೇಜಕ್ಕೆ ಉದಯಾಸ್ತಮಾನಗಳುಂಟೇ ?

ಆತ್ಮತೇಜಸ್ಸಿನಿಂದ ಪ್ರಜ್ವಲಿಸುತ್ತಿರುವ ಸ್ವಪ್ರಕಾಶಿತ ವಸ್ತುವಾದ ಶ್ರೀಗುರು ವಿನ ಕರಸಂಜಾತ ಶಿಶುವೇ ಶಿಷ್ಯ. ಅವನೇ ಶಿಷ್ಯ, ಅವನೇ ಶರಣ, ಪರುಶ ಮುಟ್ಟಿದ ಓಡು; ಚಿಂಬೊನ್ನ, ಹೊಂಬಣ್ಣದ ಹೊನ್ನು ತಾನಾದಂತೆ ತಾನೇ ಶಿವವಾದ, ಗುರುವಾದ ಘನವಾದ ದಿವ್ಯ ಮಹಾತೇಜ! ಗುರು ಜ್ಯೇಷ್ಠನಾದರೆ, ಶರಣ ಶ್ರೇಷ್ಠನೆನಿಸಿದ್ದಾನೆ.

> ಸಮುದ್ರ ಘನವೆಂಬೆನೆ ? ಧರೆಯ ಮೇಲಡಗಿತ್ತು.
> ಧರೆ ಘನವೆಂಬೆನೆ ? ನಾಗೇಂದ್ರನ ಫಣಾಮಣಿಯ ಮೇಲಡಗಿತ್ತು.
> 'ನಾಗೇಂದ್ರ ಘನವೆಂಬೆನೆ ?
> ಪಾರ್ವತಿಯ ಕಿರುಕುಣಿಕೆಯ ಮುದ್ರಿಕೆಯಾಯಿತ್ತು.
> ಅಂತಹ ಪಾರ್ವತಿ ಘನವೆಂಬೆನೆ ? ಪರಮೇಶ್ವರನ ಅರ್ಧಾಂಗಿಯಾದಳು.
> ಅಂತಹ ಪರಮೇಶ್ವರ ಘನವೆಂಬೆನೆ ? ನಮ್ಮ ಕೂಡಲ ಸಂಗನ ಶರಣರ
> ಮನದ ಕೊನೆಯ ಮೊನೆಯ ಮೇಲಡಗಿದನು ;

—ಹೀಗಿರುವ ಶರಣ ತೇಜವನ್ನು ಮುಚ್ಚಿಡುವ ಸಾಮರ್ಥ್ಯ ಯಾವ ಸೆರಗಿಗಿದೆ ?

ಲಿಂಗ—ಜಂಗಮಗಳಂತೆ, ಗುರು-ಶಿಷ್ಯ ಬಾಂಧವ್ಯ ಅವಿನಾಭಾವವುಳ್ಳದ್ದು ! 'ದರ್ಪಣಕ್ಕೆ ದರ್ಪಣವ ಹಿಡಿದಂತೆ' ಒಂದು ಮತ್ತೊಂದರಲ್ಲಿ ಪ್ರತಿಬಿಂಬಿತವಾಗುವ ಪ್ರಾತಿಭಜ್ಯೋತಿಗಳು. ಚೆನ್ನಬಸವನಂತಹ ಗುರು, ಸಿದ್ಧರಾಮನಂತಹ ಶಿಷ್ಯರನ್ನು, ಪ್ರಭುವಿನಂತಹ ಗುರು, ಬಸವಣ್ಣನಂತಹ ಶಿಷ್ಯರನ್ನು ಆವ ಸಾವಿನ ಸೆರಗು ಸೋಂಕ ಬಲ್ಲುದು ? ವಿಶ್ವಾಂತರಾಳದ ಈ ವಿಶುದ್ಧ ತೇಜಃಪುಂಜಗಳಿಗೆ ವಿನಾಶದ ನೆರಳು ಸುಳಿಯಲು ಸಾಧ್ಯವೇ ?

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

॥ ಶ್ರೀ ಸಿದ್ಧರಾಮಾಯ ನಮಃ ॥

ಜಂಗಮದೀಕ್ಷಾ ಪ್ರದಾನ

ಹಾಗೂ

ನೂತನ ಪಟ್ಟಾಧಿಕಾರಿ ಮಹೋತ್ಸವ ಆಹ್ವಾನ ಪತ್ರಿಕಾ

ಸ್ವಸ್ತಿ,

ಆಸ್ತಿಕ ಮಹಾಶಯರಲ್ಲಿ ಆತ್ಮೀಯ ವಿಜ್ಞಾಪನೆಗಳು

ಅದಾಗಿ,

ಇದೇ ಶ್ರೀಮನ್ನೃಪಶಾಲಿವಾಹನ ಶಕ ವರ್ಷಂಗಳು, ಅಕ್ಷಯ ತೃತೀಯಾದಿನ ಅಂದರೆ ಶ್ರೀ ಬಸವ ಜಯಂತಿಯ ಶುಭದಿನದಂದು ಬೆಳಗಾವಿ ಜಿಲ್ಲಾ ಬೈಲಹೊಂಗಲ ತಾಲೂಕಿನ ನಾಗನೂರ ಗ್ರಾಮದಲ್ಲಿರುವ ಸನಾತನ ಸಂಸ್ಕೃತಿಯ ಕೇಂದ್ರವೆನಿಸಿದ ಶ್ರೀ ರುದ್ರಾಕ್ಷಿ ಮಠದಲ್ಲಿ ಧಾರ್ಮಿಕ ಸಾಂಸ್ಕೃತಿಕ ಕಾರ್ಯಕ್ರಮವೊಂದನ್ನು ಹಮ್ಮಿಕೊಳ್ಳಲಾಗಿದೆ. ಶ್ರೀ ಮಠದ ಅಧಿಪತಿಗಳಾದ ಶ್ರೀ ಮನ್ನಿರಂಜನ ಪ್ರಣವ ಸ್ವರೂಪಿ ಶ್ರೀ ಶ್ರೀ ಶ್ರೀ ಶಿವಬಸವ ಮಹಾಸ್ವಾಮಿಗಳು ತಮ್ಮ ಒಂಬತ್ತು ದಶಕಗಳ ಸಾರ್ಥಕ ಬಾಳು ಬಾಳಿ, ಲೋಕ ಕಲ್ಯಾಣಕ್ಕಾಗಿ ಅಹರ್ನಿಶಿ ಶ್ರಮಿಸಿ, ಗಂಧವಾಗಿ ತೆಯ್ದುಕೊಂಡ, ಕರ್ಪೂರವಾಗಿ ಉರಿದುಕೊಂಡ, ಪ್ರಸಾದವಾಗಿ ತಮ್ಮನ್ನೇ ತಾವು ಅರ್ಪಿಸಿಕೊಂಡಿರುವ ವಿಷಯ ಲೋಕವಿದಿತ. ಶ್ರೀ ಶ್ರೀಗಳವರ ಕೃಪೆಯಿಂದಾಗಿ ಸಹಸ್ರಾರು ಜನರು ವಿದ್ಯಾಬುದ್ಧಿ ಕಲಿತರು. ತಮ್ಮ ತಮ್ಮ ಬದುಕುಗಳನ್ನು ರೂಪಿಸಿ ಕೊಂಡರು. ಅಂತಹ ಸಹಸ್ರಾರು ಜೀವ ಜ್ಯೋತಿಗಳನ್ನು ಬೆಳಗಿಸಿದ ಈ ಮಹಾ ಜ್ಯೋತಿಯು ತನ್ನ ಹೊಣೆಯನ್ನು ಮತ್ತೊಂದು ಕಾಯಕಯೋಗಿ ಚೈತನ್ಯಕ್ಕೆ ವಹಿಸಿ ಕೊಡಲಿದೆ! ಆ ಮಹಾ ಚೈತನ್ಯರೂಪಿ ಬೇರೆ ಯಾರೂ ಅಲ್ಲ, ಇಂದು ಮಹಾರಾಷ್ಟ್ರಕ್ಕೆ ಸೇರಿರುವ ಚಂದಗಡ ತಾಲೂಕಿನ ಕೋವಾಡ ಗ್ರಾಮದ ಶಿವೈಕ್ಯರಾದ ಬಸವಯ್ಯ ಮತ್ತು ಗಿರಿಜವ್ವ ಎಂಬ ಶಿವದಂಪತಿಗಳ ಸುಪುತ್ರರಾದ ಶ್ರೀ ರಾಜಶೇಖರಸ್ವಾಮಿ ಎಂಬುವರು. ಇದೇ 3 ನೇ ಮೇ 1979 ರ ಗುರುವಾರದ ಶುಭ ಮುಹೂರ್ತದಲ್ಲಿ ಶಿವಾಂಶ ಸಂಭೂತರಾದ ಶ್ರೀ ರಾಜಶೇಖರಸ್ವಾಮಿಯವರಿಗೆ ಶ್ರೀ ಪ್ರಭುಮಹಾಸ್ವಾಮಿಗಳು ಎಂಬ ನೂತನಾಭಿಧಾನವಿತ್ತು, ನಾಗನೂರ ಶ್ರೀ ರುದ್ರಾಕ್ಷಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಠದ ಅಧಿಕಾರವನ್ನು ಸ್ಥಲ ಮತ್ತು ಅನುಗ್ರಹಗಳನ್ನು ಜಂಗಮದೀಕ್ಷಾ ಪುರಸ್ಸರವಾಗಿ ಒಪ್ಪಿಸಲಾಗುವುದು.

ಹುಬ್ಬಳ್ಳಿಯ ಮೂರು ಸಾವಿರ ಮಠದ ಅಧಿಪತಿಗಳಾದ ಶ್ರೀ ಮನ್ನಿರಂಜನ ಜಗದ್ಗುರು ಶ್ರೀ ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳವರು ಸಮಾರಂಭದ ಅಧ್ಯಕ್ಷತೆ ವಹಿಸುವರು.

ತಾವು ಆಗಮಿಸಿ ಉತ್ತರಾಧಿಕಾರದ ಮಹಾಮಣಿಹವನ್ನು ಚಂದ ಮಾಡಬೇಕೆಂದು ವಿನಂತಿಸಿಕೊಳ್ಳುತ್ತೇವೆ.

ಇಂತು ತಮ್ಮ ಆಗಮನಾಕಾಂಕ್ಷಿಗಳು

ಸ್ವಾಗತ ಸಮಿತಿಯ ಸರ್ವಸದಸ್ಯರು
ಸದ್ಭಕ್ತ ಮಂಡಲಿ, ನಾಗನೂರು.

ಆಹ್ವಾನ ಪತ್ರಿಕೆಗಳು ನಾಡಿನಾದ್ಯಂತ ವಿತರಣೆಯಾದವು. ಎಲ್ಲ ಮಠದ ಮಠಾಧಿಪತಿಗಳನ್ನೂ ಶ್ರೀ ಶಿವಬಸವ ಸ್ವಾಮಿಗಳೇ ಖುದ್ದು ಭೇಟಿ ಮಾಡಿ, ಪ್ರಣಾಮ ಪೂರ್ವಕವಾಗಿ ಸ್ವಾಗತಿಸಿ, ಬಿನ್ನಹ ಮಾಡಿ ಬಂದರು.

ನಾಗನೂರಿನಲ್ಲಿ ಇತರ ಸಿದ್ಧತೆಗಳು ಆಗುತ್ತಿದ್ದುವು. ರುದ್ರಾಕ್ಷಿ ಮಠದ ಸನಿಹದಲ್ಲೇ ವಿಶಾಲವಾದ ಹೊಲವಹಾಳದಲ್ಲಿ ಬಹುದೊಡ್ಡ ಚಪ್ಪರವನ್ನು ಹಾಕಲಾಯಿತು. ಹಿಂಭಾಗದಲ್ಲಿ ಒಂದು ಎತ್ತರವಾದ ವೇದಿಕೆಯನ್ನು ನಿರ್ಮಿಸ ಲಾಯಿತು. ಸುಮಾರು ಇಪ್ಪತ್ತೈದು ಸಹಸ್ರ ಜನರು ಕೂರುವಷ್ಟು ವಿಶಾಲವಿದ್ದ ಆ ಮಂಟಪಕ್ಕೆ ರುದ್ರಾಕ್ಷಿ ಮಠದ ಸಂಸ್ಥಾಪಕರಾದ ಶ್ರೀ ಸಿದ್ಧರಾಮೇಶ್ವರ ಸ್ವಾಮಿಗಳ ಹೆಸರನ್ನೂ, ವೇದಿಕೆಗೆ ಮತ್ತೊಬ್ಬ ಮೂಲ ಸಂಸ್ಥಾಪಕ ಶ್ರೀ ಪ್ರಭುಸ್ವಾಮಿಗಳ ಹೆಸರನ್ನೂ ಇಡಲಾಯಿತು. ಸಹಸ್ರ ಕಂಬಗಳ ಮಹಾಮಂಟಪ ಅದಾಗಿತ್ತು. ಮಹಾ ದ್ವಾರದ ನೆತ್ತಿಯ ಮೇಲೆ ದೊಡ್ಡ ಪ್ರಮಾಣದ 'ಶ್ರೀ ಸಿದ್ಧರಾಮ ಶಿವಯೋಗಿ ಮಹಾಮಂಟಪ' ಎಂಬ ನಾಮಫಲಕ ಎದ್ದು ನಿಂತಿತು. ವೇದಿಕೆಯ ಅಡಿಭಾಗದಲ್ಲಿ ದಪ್ಪ ಅಕ್ಷರದಲ್ಲಿ 'ಶ್ರೀ ಪ್ರಭುಸ್ವಾಮಿಗಳ ವೇದಿಕೆ' ಎಂದು ಬರೆಯಲಾಯಿತು. ಮಹಾ ದ್ವಾರದಿಂದ ವೇದಿಕೆಯವರೆಗೆ ಒಂದು ವಿಶಾಲವಾದ ದಾರಿ. ಈ ದಾರಿಯ ಉದ್ದಕ್ಕೂ ತೆಂಗಿನ ನಾರಿನ ನಡೆಮುಡಿ ಹಾಸು! ಅದರ ಇಕ್ಕೆಲಗಳಲ್ಲೂ ವಿಶಾಲವಾದ ಪ್ರಾಂಗಣ ಗಳು. ಒಂದು ಭಾಗ ಮಹಿಳೆಯರಿಗೆ, ಮತ್ತೊಂದು ಭಾಗ ಪುರುಷರಿಗೆ. ವೇದಿಕೆಯ ಎರಡೂ ಬದಿಗಳಲ್ಲಿ ನೂರಾರು ಜನ ಹರಗುರು ಚರಮೂರ್ತಿಗಳು ಆಸೀನರಾಗಲು ವ್ಯವಸ್ಥೆ ಮಾಡಲಾಗಿತ್ತು. ಕೆಳಗಿನ ಹಂತದಲ್ಲಿ ಮತ್ತೊಂದು ಅಟ್ಟಣೆ. ಅದರ ಮೇಲೆ ಸಂಗೀತಾದಿ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ವ್ಯವಸ್ಥೆ. ಇಡೀ ಮಂಟಪಕ್ಕೆ ಶುಭ್ರವಾದ ಬಿಳೀ ಬಟ್ಟೆಯನ್ನು ಉಡಿಸಲಾಗಿತ್ತು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಂತರಂಗ ಬಹಿರಂಗ ಶುದ್ಧಿಯ ಸಂಕೇತವೊ ಅಥವಾ ನಾಗನೂರಿನ ಪುಣ್ಯ ಪುರುಷರ ಮನಸ್ಸಿನ ಶುದ್ಧ ಸತ್ತ್ವಕ್ಕೆ ಸಾಕ್ಷಿಯೊ ಎನ್ನುವಂತಿತ್ತು ಆ ಮಹಾಮಂಟಪ. ಅದರ ಎಲ್ಲ ಕಂಬಗಳ ಮೇಲೂ ಒಂದೊಂದು ಶರಣ ವಚನದ ಫಲಕ ತೂಗಾಡುತ್ತಿತ್ತು! ಒಳ ಹೊರಗೆ ಸಹಸ್ರಾರು ವಿದ್ಯುದ್ದೀಪಗಳು ಝಗಝಗಿಸುತ್ತಿದ್ದವು. ಮಹಾದ್ವಾರದ ಎದುರಿನಲ್ಲಿ ತುಸು ದೂರದಲ್ಲಿ ಷಟ್‌ಸ್ಥಲ ಲಾಂಛನವುಳ್ಳ ಒಂದು ಧ್ವಜಸ್ತಂಭ.

ಅಕ್ಷಯ ತೃತೀಯ ಬಹುಬೇಗ ಸಮೀಪಿಸಿತು. ಕೆಲಸ ಕಾರ್ಯಗಳೂ ಅಷ್ಟೇ ಚುರುಕಾಗಿ ಸಾಗಿದುವು. ಶ್ರೀ ಪ್ರಭುಸ್ವಾಮಿಗಳ ಪಟ್ಟಾಧಿಕಾರದ ದಿನವೇ ಅನೇಕ ವಟುಗಳಿಗೆ ಶಿವದೀಕ್ಷಾ ಸಂಸ್ಕಾರದ ವ್ಯವಸ್ಥೆಯನ್ನು ಮಾಡಲಾಗಿತ್ತು. ಅದರಿಂದಾಗಿ ನೂರಾರು ವಟುಗಳು ಮೂರು ದಿವಸಗಳ ಮುಂಚೆಯೇ ಆಗಮಿಸಿ ತಮ್ಮ ತಮ್ಮ ಹೆಸರುಗಳನ್ನು ನೋಂದಾಯಿಸಿಕೊಂಡಿದ್ದರು. ಮಠದ ವತಿಯಿಂದಲೇ ವಟುಗಳಿಗೆ ಹೊಸ ಕಾವಿ ಪಂಚೆ, ಲಿಂಗು, ವಸ್ತ್ರ, ಉತ್ತರೀಯ, ಜಂಗು, ಜೋಳಿಗೆ ಇತ್ಯಾದಿ ಉಪಕರಣಗಳನ್ನು ಕೊಡುವ ವ್ಯವಸ್ಥೆ ಇತ್ತು. ಹತ್ತಾರು ಜನ ಪುರೋಹಿತರು, ಜಂಗಮ ಜ್ಯೋತಿಗಳು, ಗುರುಗಳು, ಮಹಾಗುರುಗಳು, ಮಠಾಧಿಪತಿಗಳು, ಪೀಠಾಧಿಪತಿಗಳು ಸಹಸ್ರ ಸಂಖ್ಯೆಯಲ್ಲಿ ಆಗಮಿಸಿದ್ದರು. ಪ್ರಭುಸ್ವಾಮಿಗಳಿಗೆ ಜಂಗಮ ದೀಕ್ಷೆ ಶ್ರೀ ಶಿವಬಸವ ಸ್ವಾಮಿಗಳಿಂದ, ವಿರಕ್ತೋಪದೇಶ ಗದಗಿನ ಜಗದ್ಗುರು ಶ್ರೀ ತೋಂಟದಾರ್ಯ ಮಹಾಸ್ವಾಮಿಗಳವರಿಂದ, ಸಭಾ ಕಾರ್ಯಕ್ರಮದ ಅಧ್ಯಕ್ಷತೆ ಹುಬ್ಬಳ್ಳಿಯ ಮೂರು ಸಾವಿರ ಮಠದ ಜಗದ್ಗುರುಗಳವರಿಂದ. ದೀಕ್ಷಾ ವಟುಗಳಿಗೆ ಶಿವದೀಕ್ಷೆಯ ಸಂಸ್ಕಾರ ಕುಪ್ಪೂರು ಗದ್ದಿಗೆ ಮಠಾಧ್ಯಕ್ಷರಾದ ಷಟ್‌ಸ್ಥಲ ಬ್ರಹ್ಮ ಶ್ರೀ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳವರಿಂದ. ಮಂತ್ರೋಪದೇಶ ಮುಂಡರಗಿ ತೊರೆ ತೋಪಿನ ಮಠದ ಷಟ್‌ಸ್ಥಲ ಬ್ರಹ್ಮ ಶ್ರೀ ಮಹಾಲಿಂಗ ಶಿವಾಚಾರ್ಯ ಸ್ವಾಮಿಗಳಿಂದ. ಪೌರೋಹಿತ್ಯ ಬಸವರಾಜ ಭಿಷಗ್ಮಿಮಠರವರಿಂದ. ಉತ್ಸವ ಮೂರ್ತಿ ಶ್ರೀ ಪ್ರಭುಮಹಾಸ್ವಾಮಿಗಳಿಗೆ ಮುಂಡನ, ಮಾರ್ಜನ ಹಿಂದಿನ ದಿನವೇ ನಡೆದು ದೀಕ್ಷಿತರನ್ನಾಗಿಸಿ ದರ್ಭೆ ಏರಿಸಿ ಕುಳ್ಳಿರಿಸಲಾಗಿತ್ತು. ಎಲ್ಲ ಶಿವದೀಕ್ಷಾ ವಟುಗಳನ್ನೂ ಅದೇ ರೀತಿ ಸ್ವಚ್ಛಗೊಳಿಸಲಾಗಿತ್ತು.

ಶ್ರೀ ಮಠದ ಕೈಸಾಲೆಯಲ್ಲಿ ನೂರಾರು ಜನ ಸ್ವಾಮಿಗಳೂ ಜಗದ್ಗುರುಗಳೂ ನಾಡಿನ ಅನೇಕ ಜನ ಗಣ್ಯ ಪುಣ್ಯ ವ್ಯಕ್ತಿಗಳೂ ಕುಳಿತಿದ್ದರು. ಹಿರಿಯರು 'ಸಂಪುಟ' ರಚನೆ ಮಾಡಿದರು. ಶ್ರೀ ಶಿವಬಸವ ಸ್ವಾಮಿಗಳು ಮತ್ತು ಶ್ರೀ ಪ್ರಭುಸ್ವಾಮಿಗಳು— ಇಬ್ಬರೂ ಅಲ್ಲಿಗೆ ದಯಮಾಡಿಸಿ ಪೀಠಗಳ ಮೇಲೆ ಮಂಡಿಸಿದರು. ಶರಣಕವಿ ಹೂಗಾರ ಪ್ರತಿ ಮಾಡಿದ್ದ ಸಂಪುಟವನ್ನು ಓದಿ ಹೇಳಿದರು. ಉಭಯ ಶ್ರೀಗಳವರೂ ಸಹಿ ಮಾಡಿದರು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಂದು ಸಂಜೆ ಸಂಗೀತ ಕಾರ್ಯಕ್ರಮ. ಅದಾದನಂತರ ಶ್ರೀರುದ್ರ, ಒಂದು ನೃತ್ಯ ರೂಪಕ.

ಮಾರನೆಯ ದಿನ ಅರುಣೋದಯಕ್ಕೆ ಮುನ್ನವೆ ಮುಂಡರಗಿ ಜಗದ್ಗುರುಗಳವರ ಅಮೃತ ಹಸ್ತದಿಂದ ಷಟ್‌ಸ್ಥಲ ಧ್ವಜಾರೋಹಣ. ಶ್ರೀ ಮಠದಲ್ಲಿ ಸಮಸ್ತ ಹರಗುರು ಚರಮೂರ್ತಿಗಳ ಸಮ್ಮುಖದಲ್ಲಿ ಶ್ರೀ ಶಿವಬಸವ ಶಿವಯೋಗಿಗಳು ಪಟ್ಟಾಧಿಕಾರದ ಆಚರಣೆಗಳನ್ನು ವಿಧ್ಯುಕ್ತವಾಗಿ ನೆರವೇರಿಸಿದರು. ಇಟ್ಟ ಲಗ್ನಕ್ಕೆ ಸರಿಯಾಗಿ ಶ್ರೀ ಪ್ರಭುಮಹಾಸ್ವಾಮಿಗಳನ್ನು ಮಂಗಳಸ್ನಾನ ಮಾಡಿಸಿ ಕರೆತರಲಾಯಿತು. ಅವರನ್ನು ಪೀಠದ ಮೇಲೆ ಕೂರಿಸಿ ಸಮಸ್ತ ಪುಣ್ಯನದಿಗಳಿಂದ ತಂದಿದ್ದ ಪುಣ್ಯೋದಕವನ್ನು ಪ್ರೋಕ್ಷಿಸಿ, ಹಾಲು, ನೀರು, ಎಳನೀರು ಇತ್ಯಾದಿ ಬಗೆಬಗೆಯ ಅಭಿಷೇಕ ದ್ರವ್ಯಗಳನ್ನು ಸಿಂಪಡಿಸಿ, ಅವರ ಶಿರಸ್ಸನ್ನು ಪೂಜಿಸಲಾಯಿತು. ಒಳಗೆ ವೇದಘೋಷ ಮೊಳಗುತ್ತಿದ್ದರೆ, ಹೊರಗೆ ಮಂಗಳವಾದ್ಯಗಳು ಮೊಳಗುತ್ತಿದ್ದುವು. ಎಲ್ಲ ಪೂಜ್ಯರುಗಳೂ ಬಿಲ್ವದಳವನ್ನು ಹಿಡಿದು ಶ್ರೀ ರುದ್ರುವನ್ನು ಪಠಿಸುತ್ತಾ ನಿಂತರು. ಶ್ರೀ ಶಿವಬಸವಸ್ವಾಮಿಗಳು ಕೆಳಗೆ ಮಣೆಯ ಮೇಲೆ ಪದ್ಮಾಸನಾಸೀನರಾಗಿ ಕುಳಿತಿದ್ದ ಪ್ರಭುಸ್ವಾಮಿಗಳ ಮಸ್ತಕದ ಮೇಲೆ ಕೈಯೂರಿ ಬಿಗಿಹಿಡಿದು, ಅವರ ಮಂಡೆಯ ಮೇಲೆ ತಮ್ಮ ಬಲಪಾದವನ್ನಿರಿಸಿ ದಿವ್ಯಬೋಧನೆಯೊಡನೆ ದೈವತ್ವವನ್ನು ಅವರಾಂತರ್ಯಕ್ಕೆ ಅವತರಿಸುವಂತೆ ಮಾಡಿದರು. ಅವರ ಶ್ರೀಪಾದದಿಂದ ಜ್ಯೋತಿರ್ಮಯ ತೇಜಸ್ಸೊಂದು ಆವಿರ್ಭವಿಸಿ, ಪ್ರಭು ಮಹಾಗುರುವಿನ ಬ್ರಹ್ಮಚಕ್ರದ ಮೂಲಕ ಅವರ ಹೃನ್ಮಂದಿರಕ್ಕೆ ಇಳಿಯುವುದನ್ನು ಎಲ್ಲ ಪೂಜ್ಯರೂ, ಪರಿಸರದ ಭಕ್ತವೃಂದವೂ ಕಂಡು ಅಚ್ಚರಿಗೊಂಡಿತು. 'ರಾಜಶೇಖರ ಸ್ವಾಮಿಗಳೇ ಇಂದಿನಿಂದ ತಾವು ಶ್ರೀ ಪ್ರಭು ಮಹಾಸ್ವಾಮಿಗಳು ! ವಿಶ್ವ ಕಲ್ಯಾಣಕಾರಕ ಕೆಲಸಗಳಿಂದ ಜಗತ್ತಿಗೆ ಆದರ್ಶಪ್ರಾಯರಾಗಿ ಬೆಳಗಿ. ನಿಮಗೆ ಜಗನ್ನಿಯಾಮಕನೂ ಶಿವಯೋಗಿಗಳೂ ಸನ್ಮಂಗಲಗಳನ್ನುಂಟು ಮಾಡಲಿ, ಎಂದು ಹರಸಿದರು.

ಅಂತೆಯೇ,

'ಪಟ್ಟ ಎಂದರೆ ಸಾಧಕನಾದವನು ಸಿದ್ಧನಾಗುವತನಕ ಹಿಡಿದ ವ್ರತವನ್ನು ದಿಟ್ಟತನದಿಂದ ನಡೆಸುವುದು. ಕೆಟ್ಟ ಕಾಮ, ಕ್ರೋಧಾದಿ ಅರಿಷಡ್ವರ್ಗಗಳಿಂದ ವಿಮುಕ್ತನಾಗುವುದು, ಇಲ್ಲವೇ ಅವುಗಳ ಮೇಲೆ ತನ್ನ ಮಾನಸಿಕ ದಿಗ್ವಿಜಯ ಸಾಧಿಸುವುದು. ಹುಟ್ಟು ಸಾವು ಎಂಬ ಬೆಟ್ಟಗಳನ್ನು, ಶಿವನಿಷ್ಠೆ ಎಂಬ ವಜ್ರಾಯುಧದಿಂದ ಕುಟ್ಟಿ ಪುಡಿಮಾಡುವುದು. ತಾನಾಡುವುದನ್ನು ತಾನೇ ಮೊದಲು ಮಾಡಿ ತೋರುವುದು. ತಾನೇರಿದೆತ್ತರಕ್ಕೆ ತನ್ನಾಶ್ರಯದ ಭಕ್ತರನ್ನೂ ಎತ್ತಿಕೊಳ್ಳುವ ಸಾಹಸ ಮಾಡಬೇಕು. ಇದು ಆಡಿದಷ್ಟು ಸುಲಭವಲ್ಲ. ಸನ್ಯಾಸಿಯದು ಅಸಿಧಾರಾವ್ರತ. ಮೈಯೆಲ್ಲಾ ಕಣ್ಣಾಗಿ, ಮನವೆಲ್ಲಾ ಹಣ್ಣಾಗಿ, ನಡೆಯಬೇಕು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಮ್ಮೆಲ್ಲರ ನೂತನ ಗುರು ಶ್ರೀ ಪ್ರಭು ಮಹಾಸ್ವಾಮಿಗಳು ಅಂತಾಗಲಿ. ಅವರಿಂದ ಜಗತ್ ಕಲ್ಯಾಣವಾಗಲಿ, ಧರ್ಮ ವೃದ್ಧಿಯಾಗಲಿ, ಸತ್ಯ ನಿಲ್ಲಲಿ, ಮುಕ್ತಿ ನೆಲೆಗೊಳ್ಳಲಿ. ಈ ಶುಭ ಕಾರ್ಯಕೆಗಳೊಂದಿಗೆ ನಮ್ಮ ನಾಗನೂರ ಶ್ರೀರುದ್ರಾಕ್ಷಿಮಠದ ಅಧಿಕಾರವನ್ನೂ, ಧರ್ಮಾಧಿಕಾರವನ್ನೂ, ಲೋಕಸಂಗ್ರಹಕಾರ್ಯದ ದೊಡ್ಡ ಹೊಣೆಗಾರಿಕೆಯನ್ನೂ ಇವರ ಹೆಗಲ ಮೇಲಿರಿಸಿ ವಿರಮಿಸುತ್ತೇನೆ. ನೂತನ ಗುರು ಶ್ರೀ ಪ್ರಭುದೇವರ ಮೇಲೆ ಎಲ್ಲ ಪೂಜ್ಯರ ಆಶೀರ್ವಾದಗಳಿರಲಿ, ಎಲ್ಲ ಭಕ್ತರ ಅಭಿಮಾನ ಅನವರತವಿರಲಿ,' ಎಂದರು.

ಅತ್ತ ಶ್ರೀ ಮಠದ ಮತ್ತೊಂದು ಬದಿಯಲ್ಲಿ ವಟುಗಳಿಗೆ ಶಿವದೀಕ್ಷಾ ಕಾರ್ಯಕ್ರಮ ಜೊತೆ ಜೊತೆಯಲ್ಲೇ ನಡೆಯುತ್ತಿತ್ತು. ನೂರಾರು ಅರಣಿ, ಪಾತ್ರೆ, ಕುಂಭಗಳಲ್ಲಿ ಅಭಿಷೇಕ ದ್ರವ್ಯವನ್ನಿಡಲಾಗಿತ್ತು. ರಾಶಿ ರಾಶಿಯಾಗಿ ಪತ್ರೆ–ಪುಷ್ಪಗಳು, ಗಂಧ, ವಿಭೂತಿ, ಅಕ್ಷತೆ ಎಳನೀರು, ಫಲ ತಾಂಬೂಲಗಳು ಲೆಕ್ಕವಿಲ್ಲದಷ್ಟು ಸಂಖ್ಯೆಯಲ್ಲಿ ಅಣಿಗೊಂಡಿದ್ದವು. ಶ್ರೀ ಗುರು ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳ ನಿರ್ದೇಶನದಂತೆ ವಿಶಾಲ ಪ್ರಾಂಗಣದಲ್ಲಿ ಅಗ್ರದ ಬಾಳೆ ಎಲೆ ಹಾಸಿ, ಅದರ ಮೇಲೆ ಅಕ್ಕಿಯನ್ನು ಹರಡಿ, ಅದರಲ್ಲಿ ಪ್ರಣವ ಪಂಚಾಕ್ಷರಿಗಳನ್ನೊಳಗೊಂಡ ಪಂಚಕೋನಗಳನ್ನು ನಿರ್ಮಿಸಿ ಪ್ರತಿಕೋನದಲ್ಲೂ ಪುಣ್ಯತೀರ್ಥ, ತೆಂಗಿನಕಾಯಿ, ವೀಳೆದೆಲೆಗಳಿಂದಲಂಕೃತವಾದ ಪಂಚಕಲಶಗಳನ್ನು ಸ್ಥಾಪಿಸಿ, ಅವುಗಳಿಗೆ ವಸ್ತ್ರ, ಪತ್ರ, ಪುಷ್ಪ, ವಿಭೂತಿ, ಅಕ್ಷತೆ ಮೊದಲಾದುವನ್ನು ಧರಿಸಿ, ಹಸಿನೂಲಿನ ಸೂತ್ರಬಂಧನ, ಶುದ್ಧೋದಕ, ದಕ್ಷಿಣಧಾರಣ, ಫಲ ತಾಂಬೂಲ ನಿವೇದನ, ಧೂಪದೀಪ ನೀರಾಜನ ಮುಂತಾದವುಗಳಿಂದ ವಿಧ್ಯುಕ್ತವಾಗಿ, ಮಂತ್ರಯುತವಾಗಿ ಪೂಜಿಸಲಾಯಿತು. ಗಣಪತಿ ಪೂಜಾ, ಧ್ಯಾನ, ಸ್ವಸ್ತಿವಾಚನ, ಪುಣ್ಯಾಹ, ನಾಂದೀ, ಸಮಾರಾಧನ, ಅಂಕುರಾರ್ಪಣ, ಮಂಟಪ ದೇವತಾ ಪ್ರತಿಷ್ಠೆಗಳನ್ನು ನೆರವೇರಿಸಿ, ಶಿವಭಕ್ತರಿಗೆ, ವೀರ ಮಾಹೇಶ್ವರರಿಗೆ ವಿಭೂತಿ ತಾಂಬೂಲಗಳನ್ನು ಆಹ್ವಾನ ಚಿಹ್ನೆಯಾಗಿ ಕೊಡಲ್ಪಟ್ಟಿತು. ವಸನ, ದಂತ ಧಾವನಾದಿಗಳನ್ನು ತೀರಿಸಿ, ಮಿಂದು ಮಡಿಯುಟ್ಟು ಕೈಯಲ್ಲಿ ಹಣ್ಣುಕಾಯಿ, ವಿಭೂತಿ, ವೀಳ್ಯ, ಕಾಣಿಕೆಗಳುಳ್ಳ ತಳಿಗಗಳನ್ನು ಹಿಡಿದು ಬಂದ ವಟುಗಳನ್ನು ಮಂಟಪಕ್ಕೆ ಶ್ರೀಗುರುವು ಬರಮಾಡಿಕೊಂಡರು. ಅನಂತರ ವಟುಗಳು ಶ್ರೀಗುರುವಿಗೆ ಸಾಷ್ಟಾಂಗ ನಮಸ್ಕಾರವೆಸಗಿದ ಮೇಲೆ ಅವರೆಲ್ಲರನ್ನೂ ಸ್ವಸ್ತಿಕ ಮಂಡಲದಲ್ಲಿ ಪೂರ್ವಾಭಿಮುಖಿಗಳಾಗಿ ಕೂರಿಸಲಾಯಿತು. ಎಲ್ಲರ ಬಲಗೈಗಳಿಗೆ ಕಂಕಣಕಟ್ಟಿ, ಶಿವಧ್ಯಾನ ಮಾಡಿಸಿ, ತದನಂತರ ಆಜ್ಞಾ, ಉಪಮಾ, ಸ್ವಸ್ತಿಕಾರೋಹಣ, ಕಲಶಾಭಿಷೇಕ, ವಿಭೂತಿಪಟ್ಟ, ಆಯತ್ತ, ಸ್ವಾಯತ್ತ ಎಂಬ ಏಳು ಬಗೆಯ ಕ್ರಿಯಾದೀಕ್ಷೆಯನ್ನು ಕ್ರಮವಿಡಿದು ಶ್ರೀ ಗುರುವು ಕರುಣಿಸಿದರು. 'ಓಂ ನಮಃ ಶಿವಾಯ' ಎಂಬ ಪ್ರಣವ ಪಂಚಾಕ್ಷರಿಯ ಉಪದೇಶವು ಆಗಿ ಮುಗಿಯಿತು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಧಾರ್ಮಿಕ ಕಾರ್ಯಕ್ರಮಗಳೆರಡೂ ಶ್ರೀ ಮಠದಲ್ಲಿ ಆಗಿ ಮುಗಿದ ಮೇಲೆ ಸರ್ವರೂ ಬಹಿರ್ವಲಯದಲ್ಲಿ ನಿರ್ಮಿಸಿದ ಶ್ರೀ ಸಿದ್ಧರಾಮಸ್ವಾಮಿ ಮಹಾಮಂಟಪಕ್ಕೆ ದಯಮಾಡಿಸಿದರು. ಮೊದಲೇ ಮಹಾಮಂಟಪದಲ್ಲಿ ಸಮಾವೇಶಗೊಂಡಿದ್ದ ಜನತೆ ಎದ್ದುನಿಂತು ನೂತನ ಗುರುಗಳನ್ನು, ಎಲ್ಲ ಜಗದ್ಗುರುಗಳು, ಪೂಜ್ಯರುಗಳನ್ನೂ ಚಪ್ಪಾಳೆ ತಟ್ಟುವ ಮೂಲಕ, ಜೈಕಾರದ ಮೂಲಕ ಸ್ವಾಗತಿಸಿತು. ಮಹಾಮಂಟಪದ ಮಹಾದ್ವಾರದಲ್ಲಿ ಒಂದು ಕಡೆ ಪುರುಷರು, ಮತ್ತೊಂದು ಕಡೆ ಸುವಾಸಿನಿಯರು ನಿಂತು ಆಗಮಿಸುವ ಅತಿಥಿ ಅಭ್ಯಾಗತರುಗಳಿಗೆ, ಭಕ್ತಾದಿಗಳಿಗೆ ಸುಗಂಧ ನೀಡಿ ಸ್ವಾಗತಿಸುತ್ತಿದ್ದರು. ಎಲ್ಲ ಗುರುಗಳೂ ವೇದಿಕೆಯನ್ನೇರಿದ ಮೇಲೆ ಸಭೆ ಗಂಭೀರವಾಗಿ ಕುಳಿತುಕೊಂಡಿತು. ಅಲ್ಲಲ್ಲಿ ಸಮವಸ್ತ್ರ ಧರಿಸಿದ ಸ್ವಯಂ ಸೇವಕರುಗಳು ನಿಂತಿದ್ದರು. ಸಮವಸ್ತ್ರಧಾರಿಣಿಯರಾದ ಸ್ವಯಂ ಸೇವಕಿಯರು ಕೇಳಿದವರಿಗೆ ನೀರು, ಬೇಡಿದ ಮಕ್ಕಳಿಗೆ ಹಾಲು ಇತ್ಯಾದಿಗಳನ್ನು ಅವರು ಕುಳಿತೆಡೆಗೇ ಒದಗಿಸುತ್ತಿದ್ದರು.

'ನಾಗನೂರ ಪ್ರಭುದೇವರ ವೇದಿಕೆ'ಯ ಮೇಲೆ ಶೂನ್ಯಪೀಠವನ್ನಿರಿಸಲಾಗಿತ್ತು. ಮೊದಲೇ ಅದನ್ನೇರಿ ಕುಳಿತಿದ್ದ ಶ್ರೀ ಶಿವಬಸವ ಸ್ವಾಮಿಗಳಿಗೆ, ಕಡೆಯಲ್ಲಿ ಬಂದ ಶ್ರೀ ಪ್ರಭು ಮಹಾಸ್ವಾಮಿಗಳು ದೀರ್ಘದಂಡ ಪ್ರಣಾಮ ಮಾಡಿದರು ಶ್ರೀ ಗುರುವಿನ ಪವಿತ್ರ ಪಾದದ್ವಯಗಳಿಗೆ ಹಣೆ ಹಚ್ಚಿ, ಅವರ ಪಾದಧೂಳಿಯನ್ನು ತಮ್ಮ ನೆತ್ತಿಯ ಮೇಲೆ ಮಿಡಿದರು. ಕೂಡಲೇ ಶ್ರೀ ಶಿವಬಸವ ಸ್ವಾಮಿಗಳು ನೂತನ ಗುರು ಶ್ರೀ ಪ್ರಭುಸ್ವಾಮಿಗಳ ಭುಜಗಳನ್ನು ಹಿಡಿದು ಮೇಲೆತ್ತಿ, ಆತ್ಮೀಯತೆಯಿಂದ ಆಲಿಂಗಿಸಿ ಕೊಂಡರು. ಮೇಲೆ ಪುಷ್ಪವೃಷ್ಟಿಯಾಯಿತು. ಜಯಘೋಷ ಮೊಳಗಿತು. ಅನಂತರ ಶ್ರೀ ಶಿವಬಸವಸ್ವಾಮಿಗಳು ಶೂನ್ಯಪೀಠದಿಂದ ಕೆಳಗಿಳಿದು ಬಂದು ಶ್ರೀ ಪ್ರಭು ಸ್ವಾಮಿಗಳಿಗೆ ತೋರಹಾರ ಹಾಕಿ ಅವರನ್ನು ಶೂನ್ಯಪೀಠದ ಮೇಲೆ ಕೈಹಿಡಿದು ಕೂರಿಸಿ, ದೂರ ಸರಿದು ಬಂದು ಅವರಿಗೆ ಉದ್ದಕ್ಕೆ ಅಡ್ಡಬಿದ್ದರು.

ಮತ್ತೆ ವೇದಿಕೆಯ ಮೇಲೆ ಪುಷ್ಪವೃಷ್ಟಿಯಾಯಿತು.
ಸಭೆಯಲ್ಲಿ ಜಯಘೋಷ ಮುಗಿಲು ಮುಟ್ಟಿತು.
ವಾದ್ಯ ವಿಶೇಷಗಳು ಬಹಳವಾಗಿ ಮೊಳಗಿದವು !
ಚಪ್ಪಾಳೆಗಳು ತಪ್ಪದೇ ಸಾಗಿದುವು.
ಮಹಾ ಮಂಟಪದ ಹೊರಗಡೆಯಲ್ಲಿ ಬಾಣ, ಬಿರುಸು,
ಮದ್ದು ಮತಾಪುಗಳು ಹಾರಾಡಿದುವು !!

ನಾಗನೂರು ರುದ್ರಾಕ್ಷಿ ಮಠದ ನೂತನಾಧ್ಯಕ್ಷರು ಗುರುಗಳಿಗೆ ತಮ್ಮ ಕೃತಜ್ಞತೆ ಗಳನ್ನೂ, ಭಕ್ತರಿಗೆ ತಮ್ಮ ಆಶೀರ್ವಚನವನ್ನೂ ದಯಪಾಲಿಸಿದರು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹತ್ತು

'ಹೆತ್ತ ತಾಯಿಯಷ್ಟೇ ಶ್ರೇಷ್ಠಳು ಹೊತ್ತ ತಾಯಿ ಎಂಬ ಮಾತನ್ನು ನಾನು ಒಪ್ತೇನಮ್ಮಾ—ಆದರೆ ಆ ಮಗುವೇ ಇಲ್ಲ ಈ ಹೊತ್ತು. ಅದು ಸತ್ತು ಅರವತ್ತು ದಿನಗಳಾದವು. ಮಗುವೇ ಬದುಕಿಲ್ಲ ಎಂದ ಮೇಲೆ ಯಾವ ತಾಯಿ ತನ್ನ ಹಕ್ಕು ಸ್ಥಾಪಿಸಲು ಸಾಧ್ಯ ಹೇಳು ?

'ಶಿವ ಶಿವಾ ! ಎಂಥಾ ಮಾತು !! ಸ್ವಾಮಿಗಳೇ, ನಿಮ್ಮಂಥವರ ಬಾಯಲ್ಲಿ ಈ ಮಾತು ಬರಬಾರದಿತ್ತು !

'ಏಕೆ'

'ಅಲ್ರೀ ಸ್ವಾಮೇರೆ, ನಾನು ಬಲಗಾಲ ಮುಂದಿಟ್ಟುಕೊಂಡು ಕೋವಾಡದ ಬಸವಯ್ಯನವರ ಮನೆಗೆ ಸೊಸೆಯಾಗಿ ಬಂದಾಗಿನಿಂದ ಚಿಕ್ಕವರಿದ್ದ ನಿಮ್ಮನ್ನು ನಾನು ಸೊಂಟದ ಮೇಲೇರಿಸಿಕೊಂಡು ಊಟ ಮಾಡಿಸಿದ್ದೀನಿ ; ಆಟ ಆಡಿಸಿದ್ದೀನಿ. ಅತ್ತೆಯವರಿಗೆ ಯಾವ ನೋವೂ ಕೊಡದಂತೆ ನಿಮ್ಮನ್ನು ಜೋಪಾನ ಮಾಡಿದ್ದೀನಿ. ನೀವಿನ್ನೂ ಬದುಕಿದ್ದೀರಿ ನನ್ನೆದುರು. ನಿಮ್ಮನ್ನು ತಾಯಿ ಹಾಗೆ ಸಾಕಿ ಸಲಹಿದ ಅತ್ತಿಗೆ ಎದುರು 'ಸತ್ತಿದ್ದೀನಿ' ಅಂತೀರಲ್ರೀ ? ಇದು ಯಾವ ನ್ಯಾಯಾರೀ ?'

'ಅಮ್ಮ, ನೀವು ತುತ್ತಿಟ್ಟು ಬೆಳೆಸಿದ್ದು ಯಾರನ್ನು ?'

'ನಿಮ್ಮನ್ನ ?'

'ಅಂದರೆ ?'

'ಅಂದರೆ....ನಿಮ್ಮನ್ನರೀ....ಈ ರಾಜಶೇಖರಸ್ವಾಮಿಗಳನ್ನ'

'ಈಗ ನಾನ್ಯಾರು ?'

'ನೀವು ನಾಗನೂರ ರುದ್ರಾಕ್ಷಿಮಠದ ಸ್ವಾಮೇರು'

'ಹೆಸರು'

'ಅದೆಂಥದೋ ಪ್ರಭುಸ್ವಾಮಿಗಳು ಅಂತಾ!'

'ಅದೆಂಥದೂ ಅಲ್ಲ, ಇದ್ದದ್ದೇ, ಗುರು ಅನುಗ್ರಹಿಸಿದ್ದೇ; ಆಶೀರ್ವದಿಸಿ ಇಟ್ಟದ್ದೇ ಹೆಸರು 'ಪ್ರಭುಸ್ವಾಮಿ' ಅಲ್ಲವೆ ?'

'ಇರಬಹುದು'

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

'ಇರಬಹುದೇನು ಇದ್ದದ್ದೇ........ನೋಡು ತಾಯಿ, ನೀವು ಸಾಕಿದ ಮಗು ರಾಜಶೇಖರ ಇಂದಿಲ್ಲ. ಇದ್ದರೂ ಅವನು ನಿಮ್ಮ ಮನೆಯ ಮಗನಾಗಿ ಉಳಿದಿಲ್ಲ, ಅವನು ದೇಶದ ಮಗನಾಗಿದ್ದಾನೆ. ದಟ್ಟಿಕಟ್ಟಿ ನಿಮ್ಮ ಹೊಲದಲ್ಲಿ ದಗದ ಮಾಡುವ ಮಗನಾಗಿಲ್ಲ; ಜಗತ್ತಿನ ಜನಮನವನ್ನು ಹಸಮಾಡುವ ದೀಕ್ಷೆ ಸ್ವೀಕರಿಸಿದ ಯೋಗಿ ಯಾಗಿದ್ದಾನೆ. ಹೆತ್ತ ತಾಯಿ ಗಿರಿಜವ್ವೆಯ ಕಂದ ಈ ದಿನ ಶ್ರೀ ಶಿವಬಸವ ಶಿವಯೋಗಿಗಳ ಕರಸಂಜಾತ ಶಿಶುವಾಗಿದ್ದಾನೆ. ಆ ನಿಮ್ಮ ರಾಜಶೇಖರನಿಗೂ ಶ್ರೀ ಶಿವಬಸವಸ್ವಾಮಿಗಳ ಈ ಪ್ರಭುಸ್ವಾಮಿಗೂ ಯಾವ ಸಂಬಂಧವೂ ಇಲ್ಲ. ಅವನ ಸಂಬಂಧಿಗಳಾದ ನಿಮಗೆ ಇಲ್ಲಿ ಯಾರೂ ನೆಂಟರಿಷ್ಟರಿಲ್ಲ. ಎಲ್ಲರ್ಹಾಂಗ ನೀವೂ ನಮಗ ಮಂದೀನೇ. ಇದು ಮಠ, ಶಿವಯೋಗಿಗಳ ಆಶ್ರಮ ಎಲ್ಲರಂತೆ ನೀವೂ ಬನ್ನಿ ಶಿವಯೋಗಿಗಳ ಆಶೀರ್ವಾದ ಪಡೆದು, ಆಶ್ರಮದ ಪ್ರಸಾದ ಸ್ವೀಕರಿಸಿ ಹೋಗಿ.'

'ಏನ್ರೀ, ನೀವು ಸ್ವಾಮಿಗಳಾದಕ್ಷಣಕ್ಕೇ ಹೆತ್ತೋರು, ಹೊತ್ತೋರು ಎಲ್ಲರನ್ನೂ ಮರೀಬೇಕು ಅಂತ ಯಾವ ಶಾಸ್ತ್ರದಲ್ಲಿ ಹೇಳೈತಿ. ಅಲ್ರೀ ಸ್ವಾಮೇರೆ, ನಾವು ಹೊಟ್ಟೆ ಕಟ್ಟಿ, ಬಟ್ಟೇಕಟ್ಟಿ ನಿಮ್ಮನ್ನ ಬೆಳೆಸಿದ್ದು ಹತ್ತರಲ್ಲಿ ಹನ್ನೊಂದನೆಯವಳಾಗಿ ನಿಮ್ಮ ಮಠಕ್ಕೆ ಬಂದು ಹೋಗಾಕೇನು ?'

'ಮತ್ತೇನಾಗಬೇಕಮ್ಮ ?'

'ಕೋವಾಡದ ಮನೆ, ನಾಡಹೆಂಚಿನ ಮನೆ. ಮುರಿದುಬಿದ್ದು ಹೋಗ್ಯಾ ಐತಿ. ಮನೆ ತುಂಬ ಮಕ್ಕಳು ಮರಿ. ಅತ್ತೇರು, ಅದೇ ನಿಮ್ಮ ಅವ್ವಾರು, ಅವರೂ ಶಿವನ ಪಾದ ಸೇರಿದರು. ಅದಕ್ಕೆ ಬರ್ರೀ ಅಂದ್ರೇ ಆ ದಿನವೂ ಬರ್ಲಿಲ್ಲ ನೀವು. ಈಗ ತಿನ್ನಾಕ ಅಭಾವ ಆಗೈತಿ ಒಸಿ ಏನಾರಾ ಸಾಯಮಾಡ್ರೀ, ಹುಟ್ಟಿದ ಮನೆ ಬೆಳಗಿಸ್ರೀ ಅಂದ್ರೇ, ಕಣ್ಣೆತ್ತಿ ಕೂಡ ನೋಡುದುಲ್ಲ. ಏನೇನೋ ಅನ್ತೀರಿ ?'

'ಅಮ್ಮ ನಾನೀಗ ನಿಮ್ಮ ಮುದ್ದಿನ ಮೈದುನ ರಾಜಶೇಖರ ಅಲ್ಲ ಅಂತಾ ಆಗಲೇ ಹೇಳಿದೆ. ನನಗೆ ವಿಶ್ವವೇ ಬಂಧು ಬಳಗ. ಅವರಲ್ಲಿ ನೀವೂ ಇದ್ದೀರಿ. ಎಲ್ಲರ ಹಾಗೆ ಬರಲು ಮಾತ್ರ ನಿಮಗೆ ಪರವಾನಗಿ ಇದೆ. ಅದು ಬಿಟ್ಟು ನಾನು ನಿಮ್ಮ ಬಂಧು, ಬಳಗ, ನನಗೆ ಅದು ಕೊಡಿ ಇದು ಕೊಡಿ ಅಂತಾ ಬೇಡುವುದಾದರೆ, ಪೂರ್ವಾಶ್ರಮದ ಬಾಂಧವ್ಯವನ್ನೇ ಬಂಡವಾಳ ಮಾಡಿಕೊಂಡು ವ್ಯಾಪಾರ ಮಾಡಲು ಬರುವುದಾದರೆ ನೀವಿಲ್ಲಿ ಹೆಜ್ಜೆ ಇಡಬೇಡಿ. ನಿಮಗೂ ನಮಗೂ ಯಾವ ಸಂಬಂಧವೂ ಇಲ್ಲ. ಹೋಗಿ— ದಯವಿಟ್ಟು ಹೋಗಿ.'

'ಕೋಪಿಸ್ಕೋ ಬ್ಯಾಡಿ ಸ್ವಾಮೇರೆ, ನಾನೇನೂ ಬೇಡಿದೆ ಅಂತಾ ತಪ್ಪು ತಿಳೀಬೇಡ್ರಿ. ನನ್ನ ಕಷ್ಟ ನಿಮ್ಮ ಮುಂದೆ ಹೇಳ್ಕೊಂಡೆ ಅಷ್ಟೇ. ನಿಮಗೆ ಇಷ್ಟ ವಿಲ್ಲವಾದರೆ........'

'ಇಷ್ಟ ಅನಿಷ್ಟದ ಪ್ರಶ್ನೆ ಅಲ್ಲ ಇಲ್ಲಿರೋದು........'

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

'ಅದು ಬಿಟ್ಟು ಇನ್ನೇನೈತಿ ಮಣ್ಣು! ಅಲ್ರೀ, ಬೇರೆಯವರನ್ನು ಕಂಡ್ರೆ ಪ್ರೀತಿ ಮಾಡ್ತೀರಿ. ನಗ ನಗ್ತಾ ಗೌರವದಿಂದ ಒಳಗೆ ಕರೀತೀರಿ!'

'ಅವರ್‍ಯಾರೂ ನಿಮ್ಮ ಹಾಗೆ ಬೇಡೋಕೆ ಬರೋದಿಲ್ಲ ನಮ್ಮಲ್ಲಿಗೆ!'

'ಬೇಡೋಕೆ ಅವರಿಗೇನು ಹಕ್ಕೈತಿ. ಸಾಕಿ ಸಲಹಿದೋರಿಗೆ ನಮಗೆ ಹಕ್ಕೈತಿ. ಕೇಳ್ತೀವಿ. ಕೊಡೋ ಅಧಿಕಾರ ನಿಮಗ್ಯೆತಿ, ಕೊಡಬೇಕು! ಹೌದೊ, ಅಲ್ಲೊ?'

ಸ್ವಾಮಿಗಳು ಸುಮ್ಮನಾದರು.

ತಮ್ಮಲ್ಲೇ ಬಹಳ ಚಿಂತಿಸಿದರು.

ಬಾಯಿ ಜೋರುಮಾಡಿ ಬೇಡಲು ಬಂದಿರುವ ತಮ್ಮ ಪೂರ್ವಾಶ್ರಮದ ಅಣ್ಣನ ಹೆಂಡತಿಯನ್ನು ಬಯ್ದು ಕಳುಹಿಸಲೇ? ಅಥವಾ ಅವಳಿಗೆ ಸಮಾಧಾನ ವಾಗುವಂತೆ ತಿಳಿಯಹೇಳಿ ಕಳುಹಿಸಲೇ? ತಿಳಿಯಹೇಳಿದರೆ ಅವಳು ತಿಳಿದುಕೊಳ್ಳುವ ಮಟ್ಟದಲ್ಲಿಲ್ಲ. ಬಿರುನುಡಿಗಳಿಂದ ಹೇಳುವುದು ಸಭ್ಯತೆಯ ಲಕ್ಷಣ ಅಲ್ಲ; ಸಂಸ್ಕೃತಿಯೂ ಅಲ್ಲ. ಅದು ನನ್ನ ಸ್ವಭಾವವೂ ಅಲ್ಲ.......ಹಾಗಾದರೆ ಹೇಗೆ ಮಾಡುವುದು? ಹೇಗೆ ಈಕೆಯನ್ನು ಸಂತೈಸಿ ಕಳುಹಿಸುವುದು?

ತುಂಬಾ ಯೋಚನೆಗಿಟ್ಟುಕೊಂಡಿತು.

ಕೂಡಲೇ ಕಾವ್ಯದ ಒಂದು ಸಂದರ್ಭ ನೆನಪಿಗೆ ಬಂತು. ಬುದ್ಧದೇವ ಶ್ರಾವಸ್ತಿಯ ಜೇತವನದಲ್ಲಿದ್ದಾಗ ಕಿಸಾಗೋತಮಿ ಬರುತ್ತಾಳೆ. ತನ್ನ ಸತ್ತ ಮಗುವನ್ನು ಬದುಕಿಸಿಕೊಡು ಎಂದು ತಥಾಗತನನ್ನು ಬೇಡುತ್ತಾಳೆ. ಆದರೆ ಬುದ್ಧದೇವನು ಸತ್ತ ಮಗುವನ್ನು ಬದುಕಿಸುವ ಪವಾಡಗಾರನಾಗಿರಲಿಲ್ಲ; ಅಥವಾ ಮಗು ಸತ್ತಿದೆ ಎಂದು ಆ ಮುಗ್ಧೆಯ ಮನನೋಯಿಸುವ ಇಚ್ಛೆ ಉಳ್ಳವನೂ ಆಗಿರಲಿಲ್ಲ. ಆದ್ದರಿಂದ ಮರಣದ ಅನಿವಾರ್ಯತೆಯ ಅರಿವು ಅವಳಿಗೆ ಆಗಲೆಂದು ಆಲೋಚಿಸಿ 'ಸಾವು ಕಾಣದ ಮನೆಯ ಸಾಸಿವೆಯ ತಾರವ್ವಾ'ಎಂದು ಹೇಳಿ ಕಳುಹಿಸಿದ. ಕಿಸಾಗೋತಮಿ ಬೀದಿ ಬೀದಿ ಅಲೆದಳು. ಕೇರಿ ಕೇರಿ ತಿರುಗಿದಳು. ಎಲ್ಲರ ಮನೆಯಲ್ಲೂ ಸಾಸಿವೆಯ ಕಾಳಿತ್ತು. ಆದರೆ ಸಾವಿಲ್ಲದ ಮನೆ ಇರಲಿಲ್ಲ. ಸಾವು ಎಲ್ಲೆಡೆಯೂ ತನ್ನ ಕರಾಳ ಕೈವಾಡ ನಡೆಸಿತ್ತು. ಆಗ ಅವಳ ಅರಿವೆಗೆ ಬಂತು ಹುಟ್ಟು ಎಂಬುದರ ಜೊತೆಗೆ ಮರಣ ಎಂಬುದಿದೆ. ಮರಣ ಅನಿವಾರ್ಯ ಜೀವಿಗೆ. ನನ್ನ ಮಗುವೂ ಹಾಗೆ ಸತ್ತಿದೆ. ಸತ್ತದ್ದನ್ನು ಮತ್ತೆ ಬದುಕಿಸಲು ಸಾಧ್ಯವಿಲ್ಲ. ಆ ಪ್ರಯತ್ನ ಸಾಧುವೂ ಅಲ್ಲ. ಈ ಬಗೆಯ ಅರಿವನ್ನು ಈಗ ಬಂದಿರುವಾಕೆಯಲ್ಲಿ ಮೂಡಿಸಬೇಕು ಎಂದು ಯೋಚಿಸ ತೊಡಗಿದರು.

'ಸ್ವಾಮಿಗಳ ಮೌನ, ಬಂದಿದ್ದಾಕೆಗೆ ಮತ್ತೂ ಬೇಸರ ತಂದಿತ್ತು. ಇವರು ಬೇಕೆಂದೇ ನನ್ನನ್ನು ತಿರಸ್ಕರಿಸಿ, ನನಗೆ ಅವಮಾನ ಮಾಡಲು ಆಲೋಚಿಸುತ್ತಿದ್ದಾರೆಂದು ಬಗೆದು—

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

'ರ್ರೀ ಸ್ವಾಮೇರೆ, ಯಾಕ್ರೀ ಸುಮ್ಮಕಾದ್ರೀ........ನಾನೇನೂ ಮಾಡಬಾರದ್ದು ಮಾಡಿಲ್ಲ, ಕೇಳಬಾರದ್ದು ಕೇಳಿಲ್ಲ. ಶ್ರೀಮಂತ ಮಠಕ್ಕೆ ಒಡೆಯರಾಗಿದ್ದೀರಿ. ಸಾಕಿ ಸಲುಹಿದೋರ ಮೇಲೆ ಅಕ್ಕರೆ ಇಕ್ರಿ, ಇಷ್ಟು ಇತ್ತ ಒಗೀರಿ, ಇಲ್ಲಾಂದ್ರೆ ತೊಲಗು ಅನ್ರೀ. ಅದಕ್ಯಾಕೆ ಮನಸ್‌ನಲ್ಲೇ ಅಳೆದು ಮಗುಚಿ ಮಾಡ್ತೀರಿ!'

'ಅವಮ್ಮಾ ಈಗ ಒಂದು ಕೆಲಸ ಮಾಡೋಣ'

'ಏನು ಹೇಳ್ರೀ !'

'ನಾನು ನಿಮ್ಮ ಪ್ರೀತಿಯ ಮಗ, ಮೈದುನ ಅಲ್ವೇ !'

'ಹೌದು'

'ನನ್ನನ್ನು ನೀವು ಜೋಪಾನ ಮಾಡಿದ್ದು ಯಾಕೆ ?'

'ಏನಾದರೂ ಸಾಯ ಆದಾತು. ಮುಪ್ಪಿನಲ್ಲಾದ್ರೂ ಇಷ್ಟು ಹಿಟ್ಟೋ ಸೊಪ್ಪೋ ಕೊಟ್ಟಾನು ಅಂತಾ !'

'ಹಾಗೆ ಅವನು ಕೊಡೋದಾದ್ರೆ ಅವನು ಸ್ವಂತಃ ದುಡಿದು ಕೊಡಬೇಕು ಅಲ್ಲವೆ ?'

'ಹೌದು'

'ಅವನು ದುಡಿಯೋದಕ್ಕೆ ಅವನದೇ ಆದ ನೆಲಹೊಲ ಇರಬೇಕು ಅಲ್ಲವೆ ?'

'ಹೌದು'

'ಈಗ ನೋಡಮ್ಮ ಈ ಪ್ರಭುಸ್ವಾಮಿ ಇರೋದು ಕಂಡೋರ ಹೊಲದಲ್ಲಿ; ಕೂಲಿ ಆಳಾಗಿ. ಇದು ನಾಗನೂರ ರುದ್ರಾಕ್ಷಿ ಮಠದ ಆಸ್ತಿ. ಅದನ್ನು ಕಾಯೋ ಕಾವಲುಗಾರ ನಾನು. ನಾನು ಇದರಲ್ಲಿ ಏನಾದರೂ ತೆಗೆದು ನಿನಗೆ ಕೊಟ್ಟರೆ, ಅದು ಕಳ್ಳತನ ಆಗುತ್ತೆ. ಹೇಳು ತಾಯಿ, ನಿನ್ನ ಮುದ್ದಿನ ಮೈದುನನನ್ನು ಕಳ್ಳ ಅಂತಾ ಅನ್ನಿಸೋದು ನಿನಗೆ ಇಷ್ಟವಾ ?'

'ಕಳ್ಳ ಹೇಗಾಗ್ತಾರೆ ; ಕಳ್ಳ ಅಲ್ಲ'

'ಅಲ್ಲಮ್ಮಾ ಅದು ಕಂಡೋರ ಆಸ್ತಿ ; ಮಂದಿ ಸೊತ್ತು. ಅದರ ಅಪಹರಣ, ದುರುಪಯೋಗ ಕಳ್ಳತನ ಅಲ್ಲವೆ ?'

'ಅಲ್ಲ, ಅದು ಬೇರೆಯವರದ್ದಾಗಿದ್ದರೆ, ತೆಗೆದರೆ ಕಳ್ಳತನ. ಅದು ನಿಮ್ಮದೇ ಆಗಿರೋವಾಗ ಕಳ್ಳತನ ಅನ್ನಿಸೊಲ್ಲ'

'ನಾನಾಗಲೇ ಹೇಳಿದ್ದೇನೆ. ಅದು ನಾಗನೂರ ರುದ್ರಾಕ್ಷಿ ಮಠದ ಸ್ವತ್ತು, ನಾನು ಅದರ ಉಸ್ತುವಾರಿ ನೋಡೋ ಬಂಟ, ಸೇವಕ ಅಂತಾ. ಕಾವಲುಗಾರನೇ ಕಳ್ಳನಾದರೆ'.

'ಅಲ್ರಪ್ಪಾ....ಅದು ಕಳ್ಳತನ ಅಲ್ರೀ. ನಿಮ್ಮದೇ ಅದ. ಅದರಾಗ ಈಟು ಇತ್ತ ಒಗೀರಿ ! ಯಾರೂ ಕಾಣದ್ಹಾಂಗ ಕೊಡ್ರಿ, ನಾನು ಯಾರೂ ಕಾಣದ್ಹಾಂಗ ಒಯ್ತೀನಿ'.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

'ಎಂಥಾ ಸೋಜಿಗದ ಮಾತು ಆಡ್ತೀರಿ ತಾಯಿ. ಜಗದ ಕಣ್ಣು ಮುಚ್ಚ ಬಹುದು. ಆದರೆ ಜಗದೀಶ್ವರನ ಕಣ್ಣು ಮುಚ್ಚಲು ಸಾಧ್ಯವೇ. ಯಾರೂ ಕಾಣದೇ ಇದ್ದರೂ ನಮ್ಮ ಕೃತ್ಯವನ್ನು ನೋಡೋಕೆ ಒಬ್ಬ ವಿಶ್ವಸಾಕ್ಷಿ ಇದ್ದೇ ಇದ್ದಾನೆ. ಅವನ ಕಣ್ಣು ತಪ್ಪಿಸುವುದು ಯಾರಿಂದಲೂ ಸಾಧ್ಯ ಇಲ್ಲ. ಅಕ್ಕಮಹಾದೇವಿ ಹೇಳೊ ಹಾಗೆ:

'ನೆಲ ತಳವಾರನಾದರೆ, ಕಳ್ಳನೆಲ್ಲಿ ಹೋಗಬೇಕು ' ಹೇಳು.

'...............'

'ಏಕೆ ಸುಮ್ಮನಾದಿಯಲ್ಲಾ ಹೇಳು ತಾಯಿ, ಉತ್ತರಕೊಡು'.

'ನೆಲ....ತಳವಾರನಾದರೆ....ಕಳ್ಳನೆಲ್ಲಿ...ಹೋಗಬೇಕು !....ಸಾಧ್ಯವಿಲ್ಲ....!'

'ಅಂದಮೇಲೆ ಸಾವಾರೂ ಕಳ್ಳತನ ಮಾಡಬಾರದು; ಮಾಡಿಸಬಾರದು. ನಿಮಗೆ ನನ್ನ ದುಡಿಮೆಯ ಮೇಲೆ ಆಸೆ ಇರುವುದಾದರೆ, ನಾನು ಮತ್ತೆ ನಿಮ್ಮ ಮಗನಾಗಿ, ಪ್ರೈದುನನಾಗಿ ದುಡಿಮೆ ಮಾಡುತ್ತೇನೆ. ಬನ್ನಿ, ಈಗಲೇ ಇಬ್ಬರೂ ಪೂಜ್ಯರಾದ ಶ್ರೀ ಶಿವಬಸವ ಮಹಾಸ್ವಾಮಿಗಳ ಸನ್ನಿಧಿಗೆ ಹೋಗೋಣ. ಬುದ್ಧೀ, ನಾನು ಅತ್ತಿಗೆಯ ಮಾತು ಕೇಳದೆ, ಅವರ ಅಪ್ಪಣೆ ಪಡೆಯದೆ, ತಮ್ಮ ನಾಗನೂರ ರುದ್ರಾಕ್ಷಿಮಠಕ್ಕೆ ಸ್ವಾಮಿಯಾಗಲು ಒಪ್ಪಿದೆ. ನನ್ನದು ತಪ್ಪಾಯಿತು. ಈಗ ತಾವು ಕೊಟ್ಟ ಪಟ್ಟವನ್ನು ವಾಪಸು ತೆಗೆದುಕೊಂಡುಬಿಡಿ. ನಾನು ಪಟ್ಟ ಬಿಡಾಯಿಸಿ ಕೋವಾಡದ ಬಸವಯ್ಯನವರ ಮನೆಯ ಮಗನಾಗಿ ದುಡಿಯಲು ಹೋಗ್ತೇನೆ, ಅಂತೇನೆ. ನೀವು ಅದಕ್ಕೆ 'ಹೂಂ' ಅನ್ನಿ. ಇಬ್ಬರ ಒತ್ತಡ ಗುರುಗಳನ್ನು ಒಪ್ಪಿಸುತ್ತೆ. ಆದರಿಂದ ನಿಮ್ಮ ಇಚ್ಛೆಯೂ ಪೂರ್ಣವಾಗುತ್ತೆ, ನನ್ನ ಈ ಸಂಕಟವೂ ನಿವಾರಣೆ ಆಗುತ್ತೆ'.

'ಕ್ಷಮಿಸಿ...ನಾನು ಯಾವುದೋ ಆಸೆಗೆ ಬಲಿಬಿದ್ದು ಹಾಗೆಲ್ಲಾ ಮಾತನಾಡಿದೆ. ಈಗ ಅರ್ಥವಾಯಿತು ನೀವು ಬಹು ಎತ್ತರವನ್ನೇರಿದ್ದೀರಿ. ಲೋಕಗುರು ನೀವಾಗಿದ್ದೀರಿ. ಜಗತ್ತಿನ ಬೆಳಕನ್ನು ಹಿಡಿದು ನಾನು ನನ್ನ ಗೂಡಿನಲ್ಲಿ ಬಚ್ಚಿಡಲು ಯತ್ನಿಸುವುದು ಮೂರ್ಖತನವಾದೀತು. ನೀವು ಲೋಕದ ಕಣ್ಣಾಗಿ, ಬೆಳಕಾಗಿ!'

'ಹೋಗಲಿ ಈಗ ನಿನಗೇನು ಬೇಕು ತಾಯಿ ?'

'ನಿಮ್ಮ ಆಶೀರ್ವಾದ'

'ಶಿವನಿಚ್ಛೆ....!ಅಕ್ಕವ್ವ, ನೀನು ಹೋಗಿ ಬಾ. ಇಗೋ ಯಾರೋ ಭಕ್ತರು ಕೊಟ್ಟ ಹಣ್ಣು ಇಲ್ಲಿದೆ. ಇದು ನನಗೆ ಭಿಕ್ಷೆಯಾಗಿ ಬಂದ ವಸ್ತು. ಇದರ ಮೇಲೆ ನನ್ನ ಅಧಿಕಾರ ಇದೆ. ಇದನ್ನು ನಿನಗೆ ದಾನ ಕೊಡುತ್ತೇನೆ, ಮಡಿಲೊಡ್ಡು. ತಗೋ ತಾಯಿ ಇದು ಗುರುಕೊಟ್ಟ ಆಶೀರ್ವಾದ ಎಂದು ತಿಳಿದುಕೊ. ತೆಗೆದುಕೊಂಡು ಹಿಂತಿರುಗು. ಹೋಗು ಇದು ಪ್ರಸಾದದ ವೇಳೆ. ಪ್ರಸಾದ ಮುಗಿಸಿ ನಿಮ್ಮೂರಿಗೆ ಹೋಗಮ್ಮಾ, ನಿನಗೆ ಒಳ್ಳೆಯದಾಗಲಿ'.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆ ತಾಯಿ ತನ್ನ ಮಡಿಲೊಡ್ಡಿದಳು. ಗುರುಗಳು ಹಣ್ಣೊಂದನ್ನು ಅದರಲ್ಲಿ ಹಾಕಿದರು. ಆಕೆ ಪಾದ ಹಿಡಿದು ನಮಸ್ಕರಿಸಿದಳು. ಶಿವನು ನಿನಗೆ, ನಿನ್ನ ಕುಟುಂಬ ವರ್ಗಕ್ಕೆ ಒಳ್ಳೆಯದು ಮಾಡಲಿ ಎಂದು ಆಶೀರ್ವದಿಸಿದರು.

ಆ ತಾಯಿಯ ಕಣ್ಣು ಬಟ್ಟಲು ಒದ್ದೆಯಾಗಿತ್ತು. ಅವಳಿಗೆ ಪ್ರಸಾದ ವ್ಯವಸ್ಥೆ ಮಾಡಿಸಲೆಂದು ಗುರುಗಳೇ ಹೊರಗೆ ಬಂದರು. ಆಕೆಯನ್ನು ನಡೆಸಿಕೊಂಡು ಪ್ರಸಾದ ನಿಲಯದ ಕಡೆ ಹೊರಟು ಎರಡು ಹೆಜ್ಜೆ ಇರಿಸಿದರು. ಅಷ್ಟರಲ್ಲಿ—

'ಸ್ವಾಮಿಗಳೇ, ಪ್ರಭುಗಳೇ....' ಕೂಗು ಕೇಳಿ ಬಂತು.

'ಓಹ್ !'

'ದೊಡ್ಡಗುರುಗಳು ! ನಾಗನೂರಜ್ಜನವರು ಕರೆಯುತ್ತಿದ್ದಾರೆ. ಅಯ್ಯೋ ಏನು ಅಪಚಾರವಾಯಿತೋ ಏನೋ ! ಅವರು ಇಲ್ಲಿಗೆ ಬಂದದ್ದೇ ನನಗೆ ತಿಳಿಯ ಬಾರದೆ !' ಎಂದು ಎದ್ದುಬಿದ್ದು ಅವರ ಬಳಿ ಓಡಿದರು.

ಸಮಾಧಾನ ಪ್ರಭುಗಳೇ, ಸಮಾಧಾನ ಏಕಿಷ್ಟು ಧಾವಂತ !'

'ದಯಮಾಡಿಸಿದ್ದು ಗೊತ್ತೇ ಆಗಲಿಲ್ಲ !'

'ಚಿಂತೆ ಇಲ್ಲ, ನಾನು ಅತ್ತ ಎಲ್ಲೋ ಹೋಗಿದ್ದವನು ಇತ್ತ ಬಂದೆ. ನೀವು ನಿಮ್ಮ ಪೂರ್ವಾಶ್ರಮದ ಅತ್ತಿಗೆಯವರ ಸಂಗಡ ಮಾತನಾಡುತ್ತಿದ್ದಿರಿ. ಬೇಡ ಬೇಡ ವೆಂದರೂ ಕಡೆಯ ಎರಡು ನುಡಿಗಳನ್ನು ನನ್ನ ಕಿವಿ ಕೇಳಿಯೇ ಬಿಟ್ಟಿತು.'

'ಏನೋ ಲೌಕಿಕ ವ್ಯವಹರಣೆಯ ಬಗ್ಗೆ ಈ ತಾಯಿ ವಿಚಾರವೆತ್ತಿದಳು. ಮಾತ ನಾಡಿದೆ'

'ಒಳ್ಳೆಯದೇ ಆಯಿತು ಪ್ರಭುಗಳೇ. ನೀವು ನಿಜಕ್ಕೂ ಶರಣಸ್ಥಲದ ಸಿದ್ಧಪುರುಷರು ! ನಿಮ್ಮನ್ನು ಪ್ರಭುವಾಗಿ ಪಡೆದ ನಾಗನೂರ ರುದ್ರಾಕ್ಷಿಮಠ ಧನ್ಯ ! ನನಗೆ ಕೀರ್ತಿ ತಂದಿರಿ. ಈಗ ನಡೆದದ್ದು ನಿಮ್ಮ ಅಗ್ನಿಪರೀಕ್ಷೆ. ಈ ತಾಯಿ ನಿಮ್ಮ ಪೂರ್ವಾಶ್ರಮದ ಅತ್ತಿಗೆ ಅಲ್ಲ, ಸಾಕ್ಷಾತ್ ಆದಿಶಕ್ತಿ! ಆ ಜಗನ್ಮಾತೆಯೇ ಈ ಸ್ತ್ರೀ ರೂಪದಲ್ಲಿ ಬಂದು ನಿಮ್ಮ ಮನಸ್ಸನ್ನು ಪರೀಕ್ಷೆಗೆ ಒಳಗುಮಾಡಿದಳು. ನೀವು ಗೆದ್ದಿರಿ ; ನನಗೂ ಗೆಲವು ತಂದುಕೊಟ್ಟಿರಿ. ಅಮ್ಮಾ... !'

'ಕ್ಷಮಾ ಮಾಡಬೇಕು...ಅಪರಾಧ ಆಯ್ತು'

ಪಾದಗಳ ಮೇಲೆರಗಿದಳು.

'ಏನೂ ಅಪರಾಧ ಆಗಿಲ್ಲ. ಚಿಂತೆ ಮಾಡಬೇಡಿ. ಮನುಷ್ಯ ಸಹಜವಾದ ರೀತಿ ಯಲ್ಲಿ ನಿನ್ನ ಬೇಡಿಕೆಗಳಿದ್ದುವು. ಅದರಲ್ಲಿ ತಪ್ಪೇನೂ ಇಲ್ಲ. ಆದರೂ ಬೇಡಿಬಂದ ನೀನು ನಿರಾಶಳಾಗಿ ಬರಿಗೈಯಲ್ಲಿ ಹಿಂತಿರುಗಬಾರದು. ಹೋಗು ತಾಯಿ, ನಿಮ್ಮ ಊರಿಗೆ ಕೋವಾಡಕ್ಕೆ ಹೋಗು. ನಿನ್ನ ಮಕ್ಕಳೆಲ್ಲರನ್ನೂ ಇಲ್ಲಿಗೆ ಕಳುಹಿಸಿಕೊಡು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಾವು ಅವರಿಗೆ ನಮ್ಮ ಪ್ರಸಾದ ನಿಲಯದಲ್ಲಿ ಇರಿಸಿಕೊಂಡು ವಿದ್ಯಾಭ್ಯಾಸ ಮಾಡಿಸುತ್ತೇವೆ. ಅದಕ್ಕೆ ಎಷ್ಟೇ ಖರ್ಚು ಬರಲಿ ಅದನ್ನು ನಾವು ಭರಿಸುತ್ತೇವೆ. ನಿಮ್ಮ ಮಕ್ಕಳಿಗೆ ವಿದ್ಯೆಕೊಟ್ಟು ಅವರನ್ನು ಬುದ್ಧಿವಂತರನ್ನಾಗಿ ಮಾಡಿದರೆ ಅವರೇ ನಿನ್ನ ಸಂಪತ್ತಾಗುತ್ತಾರೆ. ಅವರ ಮೂಲಕ ನಿನ್ನ ಮನೆ ಬೆಳಗುತ್ತದೆ'.

'ಬುದ್ಧೀ, ಗಂಡು ಮಕ್ಕಳದೇನೊ ಸರಿ. ಆದರೆ ಹೆಣ್ಣುಮಕ್ಕಳಿಗೆ ?'

'ತುಂಬಾ ಒಳ್ಳೆಯ ಪ್ರಶ್ನೆ ಕೇಳಿದನೆ. ನನ್ನ ಮನಸ್ಸಿನಲ್ಲಿ ಬಹಳ ದಿನಗಳಿಂದಲೂ ಇತ್ತು, ಹೆಣ್ಣುಮಕ್ಕಳಿಗಾಗಿ ಒಂದು ಪ್ರಸಾದ ನಿಲಯವನ್ನು ತೆರೆಯಬೇಕು ಎಂದು. ಅದಕ್ಕೆ ನೀನು ಚಾಲನೆ ಕೊಟ್ಟೆ. ನಿನ್ನ ಹೆಣ್ಣುಮಕ್ಕಳು ಬರುವುದರೊಳಗಾಗಿ ನಾವು ಅವರಿಗೂ ಅಂದರೆ ಹೆಣ್ಣು ಮಕ್ಕಳಿಗೂ ಒಂದು ಪ್ರಸಾದ ನಿಲಯವನ್ನು ತೆರೆಯುತ್ತೇವೆ. ಚಿಂತೆ ಬೇಡ, ಕಳುಹಿಸಿಕೊಡು ತಾಯಿ. ಅವರೆಲ್ಲರ ವಿದ್ಯಾಭ್ಯಾಸದ ಹೊಣೆಗಾರಿಕೆ ನಮ್ಮದು. ಆಗಬಹುದ ?'

'ನಾನು ಬದುಕಿದೆ ಬುದ್ಧೀ'

'ಬದುಕಿದವಳು ನೀನಲ್ಲ. ಜಗದೀಶ್ವರಿಯ ರೂಪದಲ್ಲಿ ಬಂದು ನಮ್ಮ ಪ್ರಭು ಸ್ವಾಮಿಯವರನ್ನು ಪರೀಕ್ಷಿಸಿ, ಅವರನ್ನು ಗೆಲ್ಲಿಸಿದೆ. ವಾಗ್ದೇವಿಯ ರೂಪದಲ್ಲಿ ಬಂದು ನನ್ನನ್ನು ಮಹಿಳಾ ಶಿಕ್ಷಣದ ವ್ಯವಸ್ಥೆಗಾಗಿ ಎಚ್ಚರಿಕೆ ನೀಡಿದೆ. ನಿನಗಿಂತಲೂ ನಾವು ಹೆಚ್ಚು ಉಪಕೃತರಾಗಿದ್ದೇವೆ. ಹೋಗಿ ಬಾಮ್ಮ ಹೋಗಿ ಬಾ. ನಿನಗೆ ಮಂಗಳವಾಗಲಿ.'

ಗುರುಗಳಿಬ್ಬರಿಗೂ ಸಾಷ್ಟಾಂಗ ಮಾಡಿ ಹೊರಟು ಹೋದಳು.

'ಮಾನವತೆಯಂತಹ ಬಹು ಮೌಲ್ಯದ ವಸ್ತು ಜಗತ್ತಿನಲ್ಲಿ ಬೇರೊಂದಿಲ್ಲ, ಪ್ರಭುಗಳೆ !'

'ಹೌದು ಗುರುದೇವ'

'ದಯೆ ಅದರ ಮೂಲದ್ರವ್ಯ. ಸಕಲ ಜೀವಾತ್ಮರಿಗೆ ಲೇಸನೇ ಬಯಸುವುದು ಅದರ ಅಕಿಂಚನ ಆಚಾರ'.

'ಅಣ್ಣ, ಅಕ್ಕ, ಅಲ್ಲಮ ಮೊದಲಾದವರಂತೆ ಬುದ್ಧ, ಮಹಾವೀರ, ಶಂಕರ, ಮಧ್ವ, ರಾಮಾನುಜ ಮೊದಲಾದವರು ಇದೇ ಮೌಲ್ಯವನ್ನು ಎತ್ತಿ ಹಿಡಿದು ಮಹಾತ್ಮರಾಗಿದ್ದಾರೆ ಗುರುವೆ.'

'ಮಹಾ ಮಾನವನಾದ ಏಸುಕ್ರಿಸ್ತನು, ತನ್ನ ಪರ್ವತ ಪ್ರಸಂಗ (Sermon on the mount)ದಲ್ಲಿ ಉತ್ತುಂಗ ಶೃಂಗದ ಮೇಲೆ ನಿಂತು, 'ನೀವು ಈ ನೆಲದ ಉಪ್ಪಾಗಿದ್ದೀರಿ. ಉಪ್ಪೇ ಸಪ್ಪೆಯಾದರೆ ಉಪ್ಪಿನ ರುಚಿಯನ್ನು ಮತ್ತಾವ ವಸ್ತುವಿನಿಂದ ಕೊಡಲು ಸಾಧ್ಯ ?, ಎಂದು ಪ್ರಶ್ನಿಸಿದ್ದಾನೆ. ಇಲ್ಲಿ ಉಪ್ಪು ಮನುಷ್ಯತ್ವದ ಸಂಕೇತ. ಅದು ಮಾನವತೆಗಾಗಿ ನಿಂತ ಪ್ರತಿಮೆಯೂ ಹೌದು. ಎಷ್ಟು ಸರಳ, ಆದರೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಂತಹ ಪರಿಣಾಮಕಾರಿ ಪ್ರತಿಮೆ. 'ನೀವು ಈ ನೆಲದ ಉಪ್ಪಾಗಿದ್ದೀರಿ'—ಅಂದರೆ—ನೀವು ಮನುಷ್ಯರಾಗಿದ್ದೀರಿ. 'ಉಪ್ಪೆ ಸಪ್ಪೆಯಾದರೆ ಉಪ್ಪಿನ ರುಚಿಯನ್ನು ಮತ್ತಾವ ವಸ್ತುವಿನಿಂದ ಕೊಡಲು ಸಾಧ್ಯ ?'—ಅಂದರೆ—ಮಾನವತೆಯ ಮೌಲ್ಯವನ್ನು ಮನುಷ್ಯರಾದ ನೀವು ಕಳೆದುಕೊಂಡರೆ ಬೇರಾವ ದವ್ಯ ಬಂದು ನಿಮ್ಮಲ್ಲಿ ಆ ಮಹಾ ಮೌಲ್ಯವನ್ನು ತುಂಬಬೇಕು ! ಆದ್ದರಿಂದ ನೀವು ಮೊದಲು ಮಾನವರಾಗಿ-ಎಂಬ ಅಮರ ಸಂದೇಶ ಏಸುನಾಥನ ಆ ಘೋಷಣೆಯಲ್ಲಡಗಿದೆ ಅಲ್ಲವೆ ಗುರುದೇವ ?'

'ಹೌದು, ಹೇಗೆ ಉಪ್ಪಿಗೆ ಪರ್ಯಾಯ ಉತ್ಪಾದನಾವಸ್ತು ಇಲ್ಲವೊ, ಹಾಗೆ ಮನುಷ್ಯನ ಮಾನವತೆಗೆ ಪರ್ಯಾಯ ಪ್ರತಿನಿಧಿ ಇಲ್ಲ. ಮನುಷ್ಯನೇ ಅದನ್ನು ಮೆರೆಯಬೇಕು. ಅಂತಾದಾಗಲೇ ಮಾನವ ಮಹಾದೇವನಾಗುತ್ತಾನೆ'.

'ಪ್ರಸ್ತುತದಲ್ಲಿ ನಾನು ಮಾನವತೆಯನ್ನು ಮರೆತ ಸಂದರ್ಭವೇನಾದರೂ ಉಂಟೆ ಗುರುದೇವ ?'

'ಏನೂ ಇಲ್ಲ. ನಿಮ್ಮ ಈಗಿನ ವರ್ತನೆ ಲೋಕಕ್ಕೆ, ಅದರಲ್ಲೂ ವೀರ ವಿರಾಗಿಗಳ, ಸನ್ಯಾಸಿಗಳ, ವಿರಕ್ತರ ಲೋಕಕ್ಕೆ ತುಂಬಾ ಆದರ್ಶಪ್ರಾಯವಾಗಿತ್ತು. ಪೂರ್ವಾಶ್ರಮದ ಅತ್ತಿಗೆ ಹಲವು ವಿಧದಲ್ಲಿ ಹಂಬಲಿಸಿದಳು. ನಿಮ್ಮ ವಿಶ್ವವಿಶಾಲ ಹೃದಯ ಒಂದು ಕೂಪದ ದೀಪವಾಗಲು ಇಷ್ಟಪಡಲಿಲ್ಲ. ವಿಶ್ವವ್ಯಾಪಕ ಮನೋಧರ್ಮ ತಳೆಯಿತು. ತನ್ನವರೇನು ? ಅನ್ಯರೇನು ? ಯೋಗಿಗೆ ಎಲ್ಲರೂ ಒಂದೆ ! ನಿಮ್ಮ ಸಮದರ್ಶಿತ್ವ ತುಂಬಾ ಶ್ಲಾಘನೀಯ.'

'ಮನಸ್ಸು ಮಂಗನ ಹಾಗೆ, ಚಂಚಲ. ಅಷ್ಟೇ ಮಹತ್ವಾಕಾಂಕ್ಷಿ. ಯಾವಾಗಲೂ 'ಬೇಕುವಿನ' ಬಯಕೆ ಅದಕ್ಕೆ. ಸಿಕ್ಕವರನ್ನೂ ಸಿಕ್ಕಿದ್ದನ್ನೂ ದಕ್ಕಿಸಿಕೊಳ್ಳುವ ದುರಾಸೆ. ಯಾವಜ್ಜೀವವೂ ಯಾಚಿಸುವುದೇ ಅದರ ನೀಚ ಬುದ್ಧಿ. ಅದಕ್ಕೆ ಆತ್ಮಪ್ರತ್ಯಯ ವಾಗಲಿ, ಸ್ವಾಭಿಮಾನವಾಗಲಿ ಇರುವುದೇ ಇಲ್ಲ ಬೇಡುವ ಸಂದರ್ಭದಲ್ಲಿ.'

'ಏನು ಮಾಡಲು ಬರುತ್ತದೆ ಪ್ರಭುಗಳೆ, ಅವರು ಲೋಕಜೀವಿಗಳು ; ಲೌಕಿಕ ಕ್ಕಾಗಿ ಬದುಕಲೇ ಬೇಕಲ್ಲವೆ ? ಬದುಕಿರುವವರೆಗೂ ಅದರ ಅಗತ್ಯತೆಗಳನ್ನು ಅವರು ಪೂರೈಸಲೇ ಬೇಕಲ್ಲವೆ'.

'ಹೌದು ದೀಪ ಉರಿಯಲು ಗಾಳಿ ಬೇಕು ಎಂದು ಬಿರುಗಾಳಿಯ ಮುಂದಿಟ್ಟರೆ?'

'ಆರಿ ಹೋಗುತ್ತೆ, ಅನ್ಯಾಯ ಆಗುತ್ತೆ ನಿಜ. ಆದರೆ ಆರುವುದಕ್ಕೂ ಆರಿಸು ವುದಕ್ಕೂ ಬೇರೊಂದು ಪರವಸ್ತುವಿದೆ ಅಲ್ಲವೆ ಪ್ರಭುಗಳೆ ?'

'ಹೌದು—ಅದು ಸಕಲವನ್ನೂ ವೀಕ್ಷಿಸುವ ಸಾಕ್ಷಿ ; ಬತ್ತಲೆಯ ಬಯಲು ; ಎತ್ತಲೂ ಕತ್ತಲು. ಆ ಕತ್ತಲಿನ ಮೊತ್ತವನ್ನು ಹೊತ್ತು ಕುಣಿಯುತ್ತಿದೆ ಮನವೆಂಬ ಕುದುರೆ. ಅದಕ್ಕೆ ಲಂಗಿಲ್ಲ, ಲಗಾಮಿಲ್ಲ, ಅಂಕೆ ಇಲ್ಲ, ಸಂಕೆ ಇಲ್ಲ, ಒಡೆಯನಿದ್ದಾನೆಂಬ ಅರಿವೂ ಇಲ್ಲ. ಅದು ಒಂದು ಬಗೆಯ ಹುಚ್ಚು ಕುದುರೆ. ಅದಕ್ಕೆ ಕ್ಷಣ ಚಿತ್ತ, ಕ್ಷಣ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪಿತ್ಥ. ಬಣ್ಣಿಸನೆಗೂ ಮೀರಿದ ಚಪಲತೆ. ತನಗೆ ಅದು ಬೇಕು, ಇದು ಬೇಕು ಎಂಬ ಹಂಬಲ. ತಾನು ಆದಾಗಬೇಕು, ಇದಾಗಬೇಕು ಎಂಬ ಬಯಕೆ. ಯಾವುದೂ ಈಡೇರದಾಗ ಅವಿವೇಕಕ್ಕೆ ಆಹ್ವಾನವಿತ್ತು, ಅನ್ಯರನ್ನು ಬದುಕಬಿಡುವುದಿಲ್ಲ. ಚಾಂಚಲ್ಯದ ಪರಿಣಾಮವಾಗಿ ಮೋಹಮಯ ಕಾಂತಾರವನ್ನು ಹೊಕ್ಕು ನಿವಾರಿಸಿಕೊಳ್ಳಲಾಗದ ಆಯಾಸದಿಂದ ಧುತ್ತನೆ ನಿಲ್ಲುತ್ತದೆ. ಅದಕ್ಕೆ ಹೊರಟ ನೆಲೆ, ತುಳಿದ ಹಾದಿ ಯಾವುದೂ ಅದುವರೆಗೆ ತಿಳಿದಿರುವುದಿಲ್ಲ. ಆದರೆ ಕಗ್ಗಾಡಿನಲ್ಲಿ ಕಾಲು ಸೋತು ನಿಂತಾಗ ನೆನೆಯುತ್ತದೆ ತನ್ನ ಒಡೆಯ ಎಲ್ಲಿ ಎಂದು ! ಒಡೆಯ ಅಲ್ಲಿರಲು ಸಾಧ್ಯವೆ ? ಈ ಹುಚ್ಚು ಕುದುರೆಯ ಸವಾರನಾಗಲು ಅವನಿಗೇನು ಹುಚ್ಚೆ ! ದಿಕ್ಕು ಕಾಣದ ಕಂದುರೆ ಪದಕುಸಿದು, ನೆಲಕಚ್ಚಬೇಕಾಗುತ್ತದೆ. ಆಗ ಕಣ್ಣೀರೊಂದೇ ಅದರ ಪಾಲಿಗೆ ಉಳಿದ ಭಾಗ್ಯ.'

'ಆಮೇಲೆ ಕಣ್ಣೀರು ಬಂದು ಏನು ಪ್ರಯೋಜನ ಪ್ರಭುಗಳೇ ! ಕೆಟ್ಟ ಮೇಲೆ ಬುದ್ಧಿ ಬಂತು, ಅಟ್ಟ ಮೇಲೆ ಒಲೆ ಉರಿಯಿತು'— ಎಂಬ ಗಾದೆಯಂತಾದರೆ ಸುಖ ಏನು ? ಮೊದಲು ಕೆಟ್ಟು ಅನಂತರ ಕಲಿಯುವುದಕ್ಕಿಂತ, ಎಲ್ಲವನ್ನೂ ಎಲ್ಲರನ್ನೂ ಒಲಿದು ಬದುಕು ಮಾಡಬೇಕು ಮಾನವ. ರೋಗ ಬಂದ ಮೇಲೆ ಔಷಧ ಹುಡುಕುವುದಕ್ಕಿಂತ, ರೋಗ ಬರದಂತೆ ನೋಡಿಕೊಳ್ಳುವುದು ಜಾಣತನ.'

'ತಮ್ಮ ಮಾತು ತ್ರಿಕಾಲ ಸತ್ಯ ಗುರುದೇವ'

'ಹಾಗೆ ನೋಡಿದರೆ ಒಂದು ದೃಷ್ಟಿಯಲ್ಲಿ ನಾವು ಮಾಡಿದ್ದೂ ಸ್ವಾರ್ಥ ಮೂಲವುಳ್ಳ ಆಶಾವಾದಿತನದಿಂದಲೇ ಅಲ್ಲವೇ ?'

'ಯಾವುದು ಬುದ್ಧೀ ?'

'ಈ ವಿದ್ಯಾರ್ಥಿ ನಿಲಯ, ಆ ಪ್ರಸಾದ ನಿಲಯ, ಇಲ್ಲಿನ ಶಾಲೆ, ಅಲ್ಲಿಯ ಕಾಲೇಜು ಇವೆಲ್ಲಾ ಸ್ವಪ್ರತಿಷ್ಠೆಯ ಪ್ರತಿಷ್ಠಾಪನೆಯ ಪ್ರತ್ಯಕ್ಷ ಪ್ರತೀಕಗಳು ಅಲ್ಲವೆ ?'

'ಅಲ್ಲ; ಅವು ಸ್ವಾರ್ಥಕ್ಕಾಗಿ ಆಗಿದ್ದರೆ ಹಾಗೆಂದು ಹೇಳಬಹುದಿತ್ತು. ಆದರೆ ಅವು ಪರಹಿತಕ್ಕಾಗಿ ನಿರ್ಮಾಣವಾದಂಥವು. ಅವುಗಳ ನಿರ್ಮಿತಿಯಲ್ಲಿ ಯಾವುದೇ ರೀತಿಯಲ್ಲಿ ಹಣ ಗಳಿಸಬೇಕೆಂಬ ವ್ಯಾಪಾರೀ ಬುದ್ಧಿ ತಮಗಿರಲಿಲ್ಲ. ಆದ್ದರಿಂದ ಅವುಗಳಿಗೆ ಆ ದೋಷ ತಟ್ಟುವುದಿಲ್ಲ. ತಾವು ಮಾಡಿದ್ದು ಸೇವೆ, ಸ್ವಾರ್ಥ ಅಲ್ಲ ! ತಾವು ಲೋಕದಲ್ಲಿ ಹಸಿದ ಬಾಯಿಗಳಿಗೆ ಅನ್ನವಾದಿರಿ !

'ಮಹಾಪ್ರಸಾದಿ ಎಂಬ ಸಾರ್ಥಕ ನಾಮಕ್ಕೆ ತಾವು ಕಾರಣರಾದಿರಿ.'

'ಹೆಸರಿನ ವ್ಯಾಮೋಹವೂ ಒಂದು ಬಗೆಯ ಸ್ವಾರ್ಥವೆ ?'

'ಹಾಗಾದರೆ ಪ್ರಾಚೀನ ಋಷಿಮುನಿಗಳು ಮೋಕ್ಷಕ್ಕಾಗಿ ನಡೆಸುತ್ತಿದ್ದ, ತಪಸ್ಸೂ ಒಂದು ಬಗೆಯ ಸ್ವಾರ್ಥವೆ !'

'ಹೌದು, ಅದು ಆತ್ಮಕಲ್ಯಾಣದ ಸ್ವಾರ್ಥ'

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

'ಇದು ವಿಶ್ವ ಕಲ್ಯಾಣದ ಸ್ವಾರ್ಥ! ಅದಕ್ಕಿಂತ ಇದು ಮಹತ್ವದ್ದು ಗುರುದೇವ. ತಾವೇ ಹೇಳಿದಿರಿ ಮಾನವನದು ಮರ್ತ್ಯಕ್ಕಂಟಿದ ಜೀವ; ಬದುಕಿರುವವರೆಗೂ ಲೋಕಮೋಹ ಅದನ್ನು ಬಿಟ್ಟಿರುವುದಿಲ್ಲ; ಬಿಟ್ಟಿರಲೂ ಬಾರದು—ಎಂದು'

'ಹೌದು, ನಮ್ಮ ಶರಣರಿಗಂತೂ ಇಹವೇ ಸ್ವರ್ಗ; ಇಹವೇ ಎಲ್ಲ! ಇಹವಿಲ್ಲದ ಪರ ಇಲ್ಲ. ಅವರೆಂದಿಗೂ ಸತ್ತಮೇಲೆ ತೆರೆಯಬಹುದಾದ ಭಾವನಾ ಸ್ವರ್ಗಕ್ಕೆ ಕೈಚಾಚಿದವರಲ್ಲ.'

'ಸತ್ತು ಬೆರೆಸಿಹೆನೆಂದರೆ ಕಬ್ಬಿನ ತುದಿಯ ಮೆಲಿದಂತೆ!' ಎಂಬ ಭಾವನೆ ಅವರದು. ಕಬ್ಬಿನ ಸವಿ ಇರುವುದು ಅದರ ಕಾಂಡದಲ್ಲಿ ಮತ್ತು ಬುಡದಲ್ಲಿ, ತುದಿಯಲ್ಲಲ್ಲ; ತುದಿಯಲ್ಲಿ ಸೌಳುಸೌಳು; ಅರ್ಥಾತ್ ಉಪ್ಪುಪ್ಪು! ಆಕಾರಣ ಇಲ್ಲಿ ಸಲ್ಲುವರು, ಅಲ್ಲಿಯೂ ಸಲ್ಲುವರು ಎಂದರು.'

'ತಾವೂ ಶರಣರ ಹಾದಿಯಲ್ಲೇ, ಅವರ ಹೆಜ್ಜೆಗಳಲ್ಲೇ ಹೆಜ್ಜೆಯಿಟ್ಟು ನಡೆಯು ತ್ತಿರುವವರು. ಮೊದಲು ಇಲ್ಲಿ ಸಲ್ಲುವ ಕಾರ್ಯಮಾಡಿ ಕೃತಾರ್ಥರಾದವರು. ಕಾಣದ, ಕೇಳದ, ಪರದಗೊಡವೆಗೆ ಹೋದವರಲ್ಲ. ಕಲ್ಪನೆಯ ಸ್ವರ್ಗಕ್ಕೆ ಶರಣರಲ್ಲಿ ಹೇಗೆ ಕಾಸಿನ ಕಿಮ್ಮತ್ತು ಇಲ್ಲವೊ ತಮ್ಮಲ್ಲೂ ಅದಕ್ಕೆ ಬೆಲೆಯಿಲ್ಲ.'

'ಸರಿಯಾಗಿ ಹೇಳಿದಿರಿ ಪ್ರಭುಗಳೇ, ಸ್ವರ್ಗದ ಮೋಹ, ನರಕದ ಭೀತಿ— ಈ ಎರಡೂ ನಾಶವಾಗದ ಹೊರತು ಮಾನವನಿಗೆ ಏಳಿಗೆ ಇಲ್ಲ. ಅವನಲ್ಲಿ ಬೌದ್ಧಿಕ ವಿಕಾಸ ಆಗದು. ಅವನೊಂದು ಮೂರ್ಖಮಂಡೂಕವಾಗಿ ಬಾಳುತ್ತಿದ್ದಾನೆ. ಅದು ದೂರವಾಗಿ, ಅವನಲ್ಲಿ ವೈಚಾರಿಕತೆ ತಲೆದೋರಬೇಕಾದರೆ 'ಸ್ವರ್ಗ-ನರಕ'ಗಳ ಕೆಟ್ಟ ಕಲ್ಪನೆಯನ್ನೇ ದೂರಮಾಡಬೇಕು. ಮೈ ಹಾಸಿ ಮಲಗಿರುವ ಈ ನಿಸರ್ಗ ಮತ್ತು ಎಲ್ಲವನ್ನೂ ಕರುಣಿಸುತ್ತಿರುವ ಪರಶಿವನ ಒಲುಮೆ ಇವು ಯಾವುದರಲ್ಲಿ ಕಡಿಮೆ ಇವೆ ಆ ಹಾಳು ಕಲ್ಪನಾ ಸ್ವರ್ಗಕ್ಕಿಂತ, ಹೇಳಿ ? ಇಹದ ಬದುಕನ್ನು ಸೈತಾಗಿ, ಸುಂದರವಾಗಿ ಋಜುವಾಗಿ ಬದುಕಬೇಕು ಎಂಬುದು ಶರಣರ ಮನೀಷೆ; ನಡೆನುಡಿಯಲ್ಲಿ ಮುಡಿಯಶಾಗಿ ಬದುಕಬೇಕು ; ಸಕಲ ಜೀವಾತ್ಮರಿಗೆ ಲೇಸನೇ ಬಯಸಿ ಬಾಳಬೇಕು ; ಇದು ಅವರು ಸಾರಿದ ಜೀವನದರ್ಶನ ; ನನ್ನ ಬದುಕಿನ ಆದರ್ಶವೂ ಹೌದು.'

'ತಮ್ಮ ಆದರ್ಶ ಅಮರವಾಗಲಿ ಎಂದು ಪರಶಿವನನ್ನು ಪ್ರಾರ್ಥಿಸುತ್ತೇನೆ. ಅಲ್ಲದೆ ತಾವೇ ನಮಗೊಂದು ಸುಳಿದಾಡುವ ಆದರ್ಶ. ಜಗತ್ಕಲ್ಯಾಣಕ್ಕಾಗಿ ನಿಮ್ಮನ್ನೇ ನೀವು ಅರ್ಪಿಸಿಕೊಂಡ 'ಮಹಾಪ್ರಸಾದಿ' ಯಾಗಿದ್ದೀರಿ.'

'ಅವನ ಕೈಯಲ್ಲಿನ ಉಪಕರಣಗಳು ನಾವು. ತನಗೆ ಬೇಕಾದ ಕಾರ್ಯಕ್ಕಾಗಿ ನಮ್ಮನ್ನು ಬಳಸಿಕೊಂಡಿದ್ದಾನೆ! ಅದರಲ್ಲಿ ನಮ್ಮದೇನಿದೆ ಹೇಳಿ?,

'ಇಷ್ಟೆಲ್ಲಾ ದುಡಿಮೆ ಸಾಧಾರಣವಾದದ್ದಲ್ಲ ಗುರುದೇವ.'

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

'ಇದಾವುದೂ ನನ್ನದಲ್ಲ ಪ್ರಭುಗಳೇ, ಅವನು ಕೊಟ್ಟದ್ದನ್ನು ಅವನಿಗೇ ಮಂಟ್ಟಿಸಿದ್ದೇನೆ. ಸಕಲವೂ ಅವನ ಕರುಣಪ್ರಸಾದ. ಹರಿವ ನೀರು, ಉರಿವ ಸೂರ್ಯ, ಬೆಳೆವ ಬೆಳೆ, ಬೀಸುವ ಗಾಳಿ, ಬೆಳಗುವ ಜ್ಯೋತಿ, ಬೆಳದಿಂಗಳೀವ ಚಂದ್ರ, ಹಸಿರ ಬನ, ಉಸಿರ ಜೀವಜಾಲ ಎಲ್ಲವೂ ಅವನ ಅಮೂಲ್ಯ ಕೊಡುಗೆಗಳು.

ಇಳೆ ನಿಮ್ಮ ದಾನ, ಬೆಳೆ ನಿಮ್ಮ ದಾನ,
ಸುಳಿದು ಬೀಸುವ ವಾಯು ನಿಮ್ಮ ದಾನ!

ಆದರಿಂದ ಸಮಸ್ತವೂ ಅವನ ಅನುಗ್ರಹ, ದಾನ! ಮನುಷ್ಯ ಮಗುವಾಗಿ ಹುಟ್ಟುವ ಮುನ್ನವೆ ಅವನ ಅನ್ನ ತಾಯಿದೆಯಲ್ಲಿ ಹಾಲಾಗಿ ಹುಟ್ಟಿತ್ತು, ಅವನುಸಿರಾಗಿ ಗಾಳಿ ಮೊದಲೇ ಬೀಸಿತ್ತು, ಬಿಸಿಲು ಬೆಳಗಿತ್ತು. ಜಗದ್ಕರ್ತನು ತಂದೆ ಇದ್ದ ಹಾಗೆ, ತಾಯಿ ಇದ್ದ ಹಾಗೆ! ತಾಯಿಯಾದವಳಿಗೆ ಮಗುವಿನ ಅಗತ್ಯತೆಗಳು ತಿಳಿದಿವೆ, ಅವಳು ಅವನ್ನು ಮೊದಲೇ ಸಿದ್ಧಪಡಿಸಿಟ್ಟುಕೊಂಡಿರುತ್ತಾಳೆ. ಮಗುವಿನ ಬಗೆಗೆ ಅವಳಿಗೆ ವಿಶೇಷ ಕಾಳಜಿ. ಅದು ಮಲಗಿದ್ದಾಗ ಮುದ್ದಿಸುತ್ತಾಳೆ, ಎದ್ದು ಆಡುವಾಗ ಆಟವಾಡಿಸುತ್ತಾಳೆ, ಹಸಿದು ಅತ್ತಾಗ ಹಾಲೂಡುತ್ತಾಳೆ, ನಕ್ಕು ನಲಿದಾಗ ಕಚಗುಳಿ ಯಿಟ್ಟು ನಗಿಸುತ್ತಾಳೆ. ಬಿಸಿ ನೀರಿನ ಸ್ನಾನ ಮಾಡಿಸಿ, ಹಸನಾದ ಹಾಸಿನ ಮೇಲೆ ಮಲಗಿಸಿ ಜೋಗುಳ ಹಾಡುತ್ತಾಳೆ. ಇದ್ದ ಬಟ್ಟೆಗಳನ್ನೇ ಹಾಕಿ ಅಲಂಕರಿಸುತ್ತಾಳೆ. ಅವಳ ದಿನಚರಿಯಲ್ಲಿ ಮಗುವಿನ ಲಾಲನೆ-ಪಾಲನೆಯದು ಬಹುದೊಡ್ಡ ಸಂಪುಟ!

ಒಂದೊಂದು ವೇಳೆ ಮಗುವಿನ ವರ್ತನೆ ವಿಚಿತ್ರವೂ ಆಗಬಹುದು. ಏನನ್ನೇ ಹೊದಿಸಲಿ ಅದನ್ನು ತನ್ನ ಕೈಯಿಂದಲೂ ಕಾಲಿಂದಲೂ ಕಿತ್ತು ಬೀಸಾಡುತ್ತಿರುತ್ತದೆ. ಬೀಸಾಡಿದಂತೆಲ್ಲ ತಾಯಿ ಹೊದಿಸುತ್ತಲೇ ಇರುತ್ತಾಳೆ. ಅದೇ ರೀತಿ ಪರಶಿವನೆಂಬ ತಾಯಿಗೆ ನಾವೆಲ್ಲರೂ ಮಕ್ಕಳು; ಏನೂ ಅರಿಯದ ಮುಗ್ಧಮಕ್ಕಳು. ನಮ್ಮ ಆಗು-ಹೋಗಿನ ಬಗೆಗೆ ಆ ತಾಯಿಗೆ ಸಹಜ ಕಾಳಜಿ ಇದ್ದೇ ಇರುತ್ತದೆ, ಹಗಲೆನ್ನದೆ ಇರುಳೆನ್ನದೆ ತನ್ನ ಶಿಶುವಿನ ಸಂರಕ್ಷಣೆ ಮಾಡುತ್ತಲೇ ಇರುತ್ತಾಳೆ. ಮಕ್ಕಳು ಮಾಡಿದ ತಪ್ಪನ್ನು ಮನ್ನಿಸುವುದೂ ಅವಳ ಸಹಜ ಗುಣ. ಆದ್ದರಿಂದಲೆ ದೋಷಭರಿತನಾದ ಮಾನವನು ಅರಿತೊ ಅರಿಯದೆಯೊ ಮಾಡಿದ ಎಲ್ಲ ದೋಷಗಳನ್ನೂ ಪರಮ ಕರುಣಾಳುವಾದ ಪರಶಿವನು ಮನ್ನಿಸಿ ಮಾರ್ಗದರ್ಶನ ಮಾಡುತ್ತಾನೆ; ಅವನು ತೋರಿದ ಹಾದಿಯಲ್ಲಿ ನಾವು ನಡೆದರೆ ಸಾಕು, ಅದು ನಮ್ಮ ಧರ್ಮ!'

'ತಾವು ರಚಿಸಿದ ಧರ್ಮ ತಮ್ಮನ್ನು ರಕ್ಷಿಸುತ್ತಿದೆ ಗುರುದೇವ'!

'ಅದೇ ರೀತಿ ನಿಮ್ಮ ಧರ್ಮವೂ ನಿಮ್ಮನ್ನು ರಕ್ಷಿಸಬೇಕಲ್ಲವೇ?'

'ನಿಸ್ಸಂದೇಹವಾಗಿ'

'ಹಾಗಾದರೆ ಬನ್ನಿ ಹೋಗೋಣ. ನಿಮ್ಮ ಧರ್ಮವೇನೆಂದು ಮೊದಲು ತೋರಿ, ಅನಂತರ ನನ್ನ ಧರ್ಮದ ಹಾದಿಯನ್ನು ನಾನು ಹಿಡಿಯುತ್ತೇನೆ.'

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

'ಅಂದರೆ?'

'ಕೇಳಿ. ಈ ಮಾರುತಿಗಲ್ಲಿಯ ಈ ಪ್ರಸಾದ ನಿಲಯವನ್ನು ತೆರೆಯಲು ಯೋಚಿಸಿ ಅನೇಕ ಜನ ಆಸ್ತಿಕಮಹಾಯರ ನೆರವು ಪಡೆದೆ. ಗುರುಕೊಟ್ಟ ಜೋಳಿಗೆಯನ್ನು ಗೂಟದಲ್ಲಿ ನೇತುಹಾಕಲಿಲ್ಲ, ಹೆಗಲಿಗೇರಿಸಿದೆ. ಪುಟ್ಟ ಕೊಠಡಿ ಯಿಂದ ಆರಂಭಿಸಿದೆ. ಅದು ಬೃಹತ್ ಭವನವೇ ಆಗಿ ರೂಪುಗೊಂಡಿತು..'

'ಇದರ ನಿರ್ಮಾಣ ಸಂದರ್ಭದಲ್ಲಿ ಅನೇಕರು ಅಡ್ಡಿ ಮಾಡಿದರು ಎಂದು ಕೇಳಿದ್ದೆ ಗುರುಗಳೆ'

'ಹೌದು, ಅಂದು ಅವರಿಗೆ ಬುದ್ಧಿ ಇರಲಿಲ್ಲ. ಅವರಿಗೆ ಭಾಷಾದ್ವೇಷ; ಜಾತಿ ಮಾತ್ಸರ್ಯ. ಅದು ಮನುಜ ಸಹಜವಾದ ಗುಣ ಇದ್ದಿರಬಹುದು. ಅದನ್ನೇ ಮುಂದಿಟ್ಟುಕೊಂಡು ತಮ್ಮ ಕುಟಿಲತೆಯನ್ನು ಸಾಧಿಸಿದರು. ಕನ್ನಡಿಗರಿಗೆ ಬಾಡಿಗೆಗೆ ಮನೆ ಕೊಡುತ್ತಿರಲಿಲ್ಲ. ನಳದಲ್ಲಿ ನೀರು ಬರದಂತೆ ಮಾಡುತ್ತಿದ್ದರು. ಬಾವಿಗಳ ಬಳಿ ಸೇರಿಸುತ್ತಿರಲಿಲ್ಲ. ಮೊದಮೊದಲು ನನಗೆ ತುಂಬಾ ಕಷ್ಟವಾಯಿತು; ಬೇಸರವೂ ಬಂತು. ಆರಂಭಿಸಿದ ಪ್ರಸಾದ ನಿಲಯವನ್ನು ಮುಂದುವರಿಸಿಕೊಂಡು ಹೋಗುವುದು ಕಷ್ಟವೇ ಆಯಿತು.'

'ಏಕೆ ನೀವು ಸರ್ಕಾರದ ಅಥವಾ ಮುನಿಸಿಪಲ್ ಕಾರ್ಪೊರೇಷನ್ನಿನವರ ಸಹಾಯ ಪಡೆಯಬಹುದಿತ್ತಲ್ಲವೇ.?'

'ಅದೇ ತಪ್ಪು. ಹಾಗೆ ಅವರನ್ನು ಶಿಕ್ಷಿಸಲೆಂದೇ ಯೋಚಿಸಿದ್ದರೆ ಈಗಿರುವಂತೆ ಅವರು ನಮ್ಮ ಅಚ್ಚು ಮೆಚ್ಚಿನ ಭಕ್ತರಾಗಿರಲು ಸಾಧ್ಯವಿರುತ್ತಿರಲಿಲ್ಲ. 'ದೊರೆ ಕೆಡಿಸಿಕೊಂಡರೂ ನೆರೆ ಕೆಡಿಸಿಕೊಳ್ಳಬಾರದು'—ಎಂಬ ಗಾದೆ ಇದೆ ಕನ್ನಡದಲ್ಲಿ. ಅದರಂತೆ ನಾವು ಪರಿಸರಕ್ಕೆ ಹೊಂದಿಕೊಂಡು ಬದುಕುವುದನ್ನು ಕಲಿಯಬೇಕು. ಕೆಟ್ಟತನ ಬಹಳ ದಿನ ನಡೆಯುವುದಿಲ್ಲ; ಬದುಕುವುದೂ ಇಲ್ಲ. ಒಂದಲ್ಲ ಒಂದುದಿನ ಅದು ಒಳ್ಳೆಯತನಕ್ಕೆ ಮಣಿಯಲೇಬೇಕು; ಮಣಿಯುತ್ತದೆ. ಅದಕ್ಕೆ ನಮ್ಮ ಈ ಪ್ರಸಾದ ಸ್ವೀಕರಿಸಲೆಂದು ಒಂದು ವಿಶಾಲ ಕೊಠಡಿ ಕಟ್ಟಿದಾಗ ಅದರಲ್ಲಿ ಯಾವ ಜನ ಮಲ ತಂದು ಹಾಕಿ ಹೊಲಸು ಮಾಡಿತೊ, ಅದೇ ಜನ ಇಂದು ಆ ಸ್ಥಳವನ್ನು ತೀರ್ಥದಿಂದ ತೊಳೆದು ಸ್ವಚ್ಛಮಾಡುತ್ತಿದೆ.'

'ನಾನೊಂದು ಘಟನೆ ಕೇಳಿದ್ದೆ.'

'ಏನು ?'

'ತಾವು ಈಗಿನ ಹಾಗೆಯೇ ಮೊದಲಿನಿಂದಲೂ ಈ ಪ್ರಸಾದ ನಿಲಯವನ್ನು ಸಾರ್ವಜನಿಕ ವಿದ್ಯಾರ್ಥಿ ನಿಲಯವಾಗಿ ನಡೆಸಿಕೊಂಡು ಬಂದಿರಂತೆ. ಇಲ್ಲಿ ಬ್ರಾಹ್ಮಣರಿಂದ ಹಿಡಿದು ಹರಿಜನ ಗಿರಿಜನ ವಿದ್ಯಾರ್ಥಿಗಳವರೆಗೆ ಎಲ್ಲ ಜಾತಿ ಮತದ ವಿದ್ಯಾರ್ಥಿಗಳೂ ಅಂದೂ ಇದ್ದರಂತೆ. ಯಾರದೋ ಪ್ರಚೋದನೆಗೆ ಬಲಿಯಾದ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕೆಲವು ಜನ ವಿದ್ಯಾರ್ಥಿಗಳು ಪ್ರಸಾದ ನಿಲಯದಲ್ಲಿ ಊಟಕ್ಕಿಟ್ಟ ಎಡೆಯಿಂದ ಒಂದೊಂದು ಕಿತ್ತಳೆ ಹಣ್ಣಿನ ಗಾತ್ರದಷ್ಟು ಮುದ್ದೆಯನ್ನು ತೆಗೆದು ತಮ್ಮ ತಮ್ಮ ತಟ್ಟೆಗಳ ಕೆಳಗಿಟ್ಟು ಚರಂಡಿಗೆ ಎಸೆಯುತ್ತಿದ್ದರಂತೆ. ಇದನ್ನು ತಿಳಿದು ತಾವು ಆ ವಿದ್ಯಾರ್ಥಿಗಳಲ್ಲಿ ಮನವಿ ಮಾಡಿಕೊಂಡಿರಂತೆ. ಆದರೂ ಅನ್ಯರ ಪ್ರಲೋಭನಕ್ಕೆ ಬಲಿಯಾಗಿದ್ದ ಅವರು ಅದೇ ಕೆಟ್ಟ ಕೃತ್ಯವನ್ನು ಮುಂದುವರಿಸಿಕೊಂಡು ಹೋದ ರಂತೆ. ಆಗ ಒಂದು ದಿನ ತಾವು ಅವರೆಲ್ಲರೂ ಬಿಟ್ಟಿದ್ದ ಎಂಜಲು ಮುದ್ದೆಯನ್ನು ಒಂದೆಡೆ ಹಾಕಿಕೊಂಡು ಪ್ರಸಾದವೆಂಬ ಭಾವನೆಯಿಂದ ಊಟ ಮಾಡತೊಡಗಿದಿರಂತೆ. ಕೂಡಲೇ ಆ ಉದ್ಧಟ ವಿದ್ಯಾರ್ಥಿಗಳು ಓಡಿಬಂದು ತಮ್ಮ ಪಾದಗಳ ಮೇಲೆಬಿದ್ದು ಕ್ಷಮೆ ಬೇಡಿದರಂತೆ. ಕ್ಷುಲ್ಲಕ ವ್ಯಕ್ತಿಗಳ ಪ್ರೇರಣೆಯಿಂದ ಮಾಡಿದೆವೆಂದು ಸತ್ಯ ನುಡಿದರಂತೆ.'

'ಅದೆಲ್ಲಾ ಹಿಂದಿನ ವ್ಯಥೆಯ ಕಥೆ. ಅದರಲ್ಲಿ ನಮ್ಮ ದೋಷವೂ ಇದ್ದಿರ ಬಹುದು.'

'ತಮ್ಮ ದೋಷ ? ತಮ್ಮದೇನಿದೆ ಗುರುವೆ ದೋಷ ?'

'ನೇರವಾಗಿ ನಾವು ಕಾರಣರಿಲ್ಲದಿರಬಹುದು. ಆದರೆ ನಾವು ನೀಡಿದ ಪ್ರಸಾದ ದಲ್ಲಿ ಏನೋ ದೋಷವಿದ್ದಿರಬಹುದು. ಪ್ರಸಾದದ ಪ್ರಭಾವ ಒಳಿತಿನ ಕಡೆಗೆ ಮನುಷ್ಯನನ್ನು ನಡೆಸಬೇಕು. ಅದು ಬಿಟ್ಟು ಕೆಟ್ಟತನಕ್ಕೆ ಕೈಹಾಕಿಸಿದರೆ ಅದು ಪ್ರಸಾದದ ದೋಷ. ಅದನ್ನು ತಂದ ನಮ್ಮಲ್ಲಿ, ಇಲ್ಲವೇ ಅದನ್ನು ನೀಡಿದ ಭಕ್ತರಲ್ಲಿ; ಅಥವಾ ಮಾಡಿ ನೀಡುವ ನಮ್ಮ ಮನೋಧರ್ಮದಲ್ಲಿ ಏನೋ ದೋಷ ಇರಬೇಕು. ಅರಿಯದ ಮಕ್ಕಳು ಹಾಗಾಗಲು ಅವರು ಕಾರಣರಲ್ಲ. ನಾವು ಕಾರಣರು. ನಮ್ಮ ಮನಸ್ಸಿನ ಕಲುಷಿತ ಭಾವನೆ ಕಾರಣವಿರಬಹುದು. ಅದರ ಪ್ರಭಾವ ಮಕ್ಕಳ ಮೇಲಾಗಿದೆ ಎಂಬುದು ನನ್ನ ಅನಿಸಿಕೆ,

'ಹೀಗಿದ್ದರೂ ತಾವು ಪ್ರೀತಿಯಿಂದ ನೆರೆಹೊರೆಯುವರನ್ನೂ, ಉದ್ಧಟರನ್ನೂ ಒಲಿಸಿಕೊಂಡಿರಿ. ಎಲ್ಲರಿಗೂ ಅಚ್ಚುಮೆಚ್ಚಿನ 'ಅಜ್ಜಯ್ಯ' ಆದಿರಿ.'

'ಅದು ಅವರ ಹಿರಿಯಗುಣ. ಇರಲಿ, ಈಗ ಮೊದಲು ನಿಮ್ಮ ಧರ್ಮದ ಪ್ರತ್ಯಕ್ಷ ದರ್ಶನ ಮಾಡಿಸುತ್ತೇನೆ; ಬನ್ನಿ...ನೋಡಿ ಈ ಪ್ರಸಾದ ನಿಲಯದಲ್ಲಿ ಇನ್ನೂರಕ್ಕೂ ಮಿಕ್ಕು ವಿದ್ಯಾರ್ಥಿಗಳಿದ್ದಾರೆ. ಇವರು ನಾನಾ ಭಾಷೆಗಳನ್ನಾಡುವ ಜನ. ನಾನಾ ಧರ್ಮಗಳಿಂದ ಬಂದ ಜನ. ಎಲ್ಲರೂ ಇಲ್ಲಿಗೆ ಕಲಿಯಲಿಕ್ಕೆ ಬಂದಿದ್ದಾರೆ. ಇಂದು ಒಬ್ಬಳೇ ತಾಯಿಯ ಹೊಟ್ಟೆಯಲ್ಲಿ ಹುಟ್ಟಿದ ಸೋದರರಂತೆ ಬದುಕುತ್ತಿದ್ದಾರೆ. ಇವರ ಊಟ ವಸತಿ ಸುವ್ಯವಸ್ಥಿತವಾಗಿದೆ, ಮುಂದೆಯೂ ಇರಬೇಕು.'

'ಅಗತ್ಯವಾಗಿ ಆಗಲಿ.'

'ಇನ್ನು ಈ ಮಕ್ಕಳಿಗೆ ಎಲ್ಲ ರೀತಿಯ ಅನುಕೂಲಗಳಿರಬೇಕು ಎಂಬ ಭಾವನೆ ಯಿಂದ ಈ ನಮ್ಮ ಕಟ್ಟಡದಲ್ಲಿ ಬ್ಯಾಂಕು, ಪೋಸ್ಟ್ಆಫೀಸು, ಒಂದು ನರ್ಸಿಂಗ್

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಒಂದು ಕೇಂದ್ರ ಗ್ರಂಥಾಲಯ – ಇವುಗಳನ್ನು ತೆರೆಯಲು ಆಶ್ರಯವಿತ್ತೆ. ಗ್ರಂಥಾಲಯದ ಬಾಡಿಗೆ ತುಂಬಾ ಕಡಿಮೆ. ಅದು ಅಷ್ಟೇ ಇರಲಿ, ಏಕೆಂದರೆ ಅದು ಅಜ್ಞಾನವನ್ನು ನೀಗುವ ಭವರೋಗ ವೈದ್ಯನಂತೆ ನಮ್ಮ ಮಕ್ಕಳಿಗೆ ತುಂಬಾ ಉಪಯುಕ್ತವಾದುದು. ಸೂಟಿ ಇದ್ದ ದಿನಗಳಲ್ಲಿ ನಮ್ಮ ನಿಲಯದ ವಿದ್ಯಾರ್ಥಿಗಳು ಅಲ್ಲಿ ಅಭ್ಯಾಸಕ್ಕೆ ತೊಡಗುತ್ತಾರೆ. ವ್ಯರ್ಥ ಕಾಲಹರಣ ಮಾಡುವುದಿಲ್ಲ. ಆದ್ದರಿಂದ ಗ್ರಂಥಾಲಯ ಜ್ಞಾನದೇಗುಲವಾಗಿ ನಮ್ಮ ಈ ಕಟ್ಟಡದಲ್ಲೇ ಶಾಶ್ವತ ಇರಲಿ, ಹಣ ಮುಖ್ಯ ಅಲ್ಲ ; ಅದು ಯಾವಜ್ಜೀವವೂ ನಂದಾದೀವಿಗೆಯಾಗಿ ಇರುವುದು ಮುಖ್ಯ...,

'ಆಗಲಿ ಗುರುದೇವ'

'ಇನ್ನು ಮುಂದೆ ಹೋಗೋಣ ಬನ್ನಿ—'

ಗುರುದ್ವಯರು ಹೊರಟರು.

ಅಲ್ಲಿ—

'ನೋಡಿ, ಇದನ್ನು ರಾಮ್‌ದೇವ್‌ಗಲ್ಲಿ ಎಂದು ಕರೆಯುತ್ತಾರೆ. ಇಲ್ಲಿರುವುದೇ ನಮ್ಮ 'ಶ್ರೀ ಸಿದ್ಧರಾಮೇಶ್ವರ ಸಂಕೀರ್ಣ'. ಇದನ್ನು ನಮ್ಮ ರುದ್ರಾಕ್ಷಿಮಠದ ಸಂಸ್ಥಾಪಕರಲ್ಲಿ ಒಬ್ಬರಾದ ಶ್ರೀ ಸಿದ್ಧರಾಮ ಗುರುಗಳ ಸ್ಮರಣಾರ್ಥ ಕಟ್ಟಿಸಿದೆ. ಇದು ಪ್ರಸಾದ ನಿಲಯದ ನಿರ್ವಹಣೆಗಾಗಿ, ಬಾಡಿಗೆ ಪಡೆಯಲೆಂದೇ ಕಟ್ಟಿಸಿದ ಕಟ್ಟಡ.'

'ಇದರ ಉತ್ಪಾದನೆ....'

'ವಿದ್ಯಾರ್ಥಿಗಳಿಗಾಗಿ... ಮುಂದೆ ಹೋಗೋಣ ನಡೆಯಿರಿ...'

ಹೋದದ್ದಾಯಿತು.

ಹೋಗುವಾಗ ಹಾದಿಯಲ್ಲಿ ಶೆಟ್ಟಿಗಲ್ಲಿ ಸಿಕ್ಕಿತು. ಅಲ್ಲಿ ಹತ್ತಾರು ಜನ ಮಹಿಳೆಯರು ಆರತಿ ಹಿಡಿದುಕೊಂಡು ನಿಂತಿದ್ದರು. ಗುರುಗಳಿಬ್ಬರಿಗೂ ಇದು ಗೊತ್ತಿರಲಿಲ್ಲ. ಹೇಗೋ ಅವರು ಆ ಮಾರ್ಗವಾಗಿ ದಯಮಾಡಿಸುವರೆಂದು ಅಲ್ಲಿನ ಹೆಣ್ಣುಮಕ್ಕಳ ಮನಸ್ಸಿಗೆ ಹೊಳೆಯಿತಂತೆ! ಅಲ್ಲಿನ ಬೀದಿಯ ನೆಲಕ್ಕೆ ನೀರುಹಾಕಿ ಸಾರಣೆ, ಕಾರಣೆಮಾಡಿ, ಆರತಿ ಹಿಡಿದು ನಿಂತಿದ್ದರು. ಮನಸ್ಸಿಗೆ ಅನ್ನಿಸಿದಂತೆ ಗುರುಗಳು ಬಂದೇ ಬಂದರು. ಎಲ್ಲರೂ ಆರತಿ ಮಾಡಿ ದೀರ್ಘದಂಡ ಪ್ರಣಾಮ ಮಾಡಿದರು. ಅವರಲ್ಲಿ ಹಿರಿಯರಾದ ವೀರಮ್ಮ ಹುಡೇದ ಮತ್ತು ಸಾವಿತ್ರಮ್ಮ ಬೆಳವಡಿಯವರು—

'ಅಪ್ಪಗಳೇ, ಈ ಮನೆಯ ಒಳಗೆ ತಮ್ಮ ಪಾದಗಳನ್ನು ಊರಬೇಕು. ನಮ್ಮದೊಂದು ಅರಿಕೆ. ಈ ಮನೆ ಇಂದಿನಿಂದ ತಮ್ಮದು. ಇದರ ಒಡತಿ ಶ್ರೀಮತಿ ಮಲ್ಲವ್ವ ; ತನ್ನ ಭಕ್ತಿಯ ಕಾಣಿಕೆಯಾಗಿ ಈ ಮನೆಯನ್ನು ತಮ್ಮ ಪದತಲದಲ್ಲಿ ಅರ್ಪಿಸುತ್ತಿದ್ದಾಳೆ. ಇಲ್ಲಿ ಹೆಣ್ಣುಮಕ್ಕಳಿಗಾಗಿ ತಾವು ಪ್ರಸಾದ ನಿಲಯ ತೆಗೆಯಿರಿ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆದಕ್ಕಾಗಿ ಇದು ಮೀಸಲು. ಕೃಪೆ ಮಾಡಬೇಕು. ಭಕ್ತೆ ಮಲ್ಲವ್ವನ ಇಚ್ಛೆಯನ್ನು ಪೂರ್ಣಗೊಳಿಸಬೇಕು' ಎಂದರು.

ಚಿಕ್ಕ ಗುರುಗಳಿಗೆ ಆಶ್ಚರ್ಯ! ಒಂದು ತಾಸಿನ ಹಿಂದೆ ಪೂರ್ವಾಶ್ರಮದ ಅತ್ತಿಗೆಗೆ ಮಾತುಕೊಟ್ಟಿದ್ದರು ಹಿರಿಯ ಗುರುಗಳು—ಹೆಣ್ಣುಮಕ್ಕಳಿಗಾಗಿ ಒಂದು ಪ್ರಸಾದ ನಿಲಯ ತೆರೆಯಲು ಯೋಜಿಸಿದ್ದೇವೆ ಎಂದು. ಅದು ಇಷ್ಟು ಬೇಗ ಕಾರ್ಯರೂಪಕ್ಕೆ ಬಂದದ್ದು ಒಂದು ಪವಾಡವೇ ಅನ್ನಿಸಿತು ಚಿಕ್ಕಗುರುಗಳಿಗೆ!

ಇಬ್ಬರೂ ಅತ್ತ ದಯಮಾಡಿಸಿದರು. ಹೆಣ್ಣುಮಕ್ಕಳು ಗುರುಗಳ ಪಾದಗಳನ್ನು ತೊಳೆದು ತೀರ್ಥೋದಕವನ್ನು ತಮ್ಮ ತಮ್ಮ ತಲೆಗಳ ಮೇಲೆ ಪ್ರೋಕ್ಷಿಸಿಕೊಂಡರು. ದ್ವಾರದಿಂದ ನಡುಮನೆಯವರೆಗೆ ಸೇವಕಿ ಅನಸೂಯ ಗುರುಪಾದಪ್ಪ ಕೋಟೂರ, ಎಂಬಾಕೆ ನಡೆಮುಡಿ ಹಾಸಿದಳು. ಗುರುಗಳು ದಯಮಾಡಿಸಿ ಒಳಗೆ ಸಿದ್ಧಪಡಿಸಿದ್ದ ಧಾವಳಿ ಕಂಬಳಿಯ ಗದ್ದುಗೆಯ ಮೇಲೆ ಮಂಡಿಸಿದರು.

ಮಲ್ಲವ್ವ ತಾಯಿ ಕೈಮುಗಿದುಕೊಂಡು ನಿಂತು—'ಅಪ್ಪಗಳೆ, ಇದೋ ಈ ತಟ್ಟೆಯಲ್ಲಿ ಫಲಪುಷ್ಪಗಳ ಜೊತೆಯಲ್ಲಿ ದಾನಪತ್ರ ಕೂಡ ಇದೆ. ಇದನ್ನು ತಾವು ಒಪ್ಪಿಸಿಕೊಳ್ಳಬೇಕು. ಹೆಣ್ಣುಮಕ್ಕಳಿಗಾಗಿ ಒಂದು ಪ್ರಸಾದ ನಿಲಯ ತೆರೆಯಬೇಕು. ನಮ್ಮ ಜೀವವಿರುವವರೆಗೂ ಇಲ್ಲಿ ನಾವು ಸೇವೆ ಮಾಡಿಕೊಂಡಿರುತ್ತೇವೆ. ಆದಕ್ಕೆ ಅನುಮತಿ ದಯಪಾಲಿಸಬೇಕು. ಇದು ನಮ್ಮ ವಿನಮ್ರ ಪ್ರಾರ್ಥನೆ' ಎಂದರು,

ಚಿಕ್ಕ ಗುರುಗಳು ಕೇಳಿದರು—

'ತಾಯಿ, ನಮ್ಮ ಮಹಾಗುರುಗಳ ಸಂಕಲ್ಪ ಇಷ್ಟು ಬೇಗ ಕಾರ್ಯರೂಪಕ್ಕೆ ಬರುತ್ತೇ ಎಂದು ಭಾವಿಸಿರಲಿಲ್ಲ. ಅವರ ಮನಸ್ಸಿನ ಪ್ರತಿಜ್ಞೆ ನಿಮಗೆ ತಿಳಿದ ಬಗೆ ಹೇಗೆ ತಾಯಿ?'

'ನಮಗೇನೂ ತಿಳಿಯದು ಅಪ್ಪಗಳೆ, ಈ ಬೆಳಗ್ಗೆ ನಮಗೆ ಹಾಗನ್ನಿಸಿತು, ಆದರಂತೆ ಮಾಡಿದೆವು. ತಾವಿಬ್ಬರೂ ಇತ್ತ ದಯಮಾಡಿಸುವಿರಿ ಎಂದೂ ನಮಗೆ ಅನ್ನಿಸಿತು; ತಾವು ದಯಮಾಡಿಸಿದಿರಿ'.

'ಎಲ್ಲವೂ ಶಿವನ ಲೀಲೆ'

'ಎಲ್ಲವೂ ಶ್ರೀ ಗುರುವಿನ ಪವಾಡ'

'ಅಪ್ಪಗಳ ಪವಾಡ ಒಂದಲ್ಲ ಎರಡಲ್ಲ ಗುರುಗಳೇ'

ವೀರಮ್ಮ ಹುಡೇದ ಒಂದು ಕತೆ ಹೇಳಲು ತೊಡಗಿದರು.

ದೊಡ್ಡ ಗುರುಗಳು ಯಾರ ಮಾತುಗಳನ್ನೂ ಕೇಳಿಸಿಕೊಳ್ಳದಂತೆ ಗದ್ದುಗೆಯ ಮೇಲೆ ಕಣ್ಣುಮುಚ್ಚಿಕೊಂಡು ಸಮಾಧಿಸ್ಥರಾದರು. ವೀರಮ್ಮ ಪವಾಡದ ಕತೆ ಆರಂಭಿಸಿದರು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

'ಗುರುಗಳೇ, ಅಪ್ಪಗಳ ಸೇವಾದಲ್ಲಿ ಈರಣ್ಣ ಎಂಬ ಒಬ್ಬ ಸೇವಕ ಇದ್ದ.'

'ಅವನು ಈಗಲೂ ಇದ್ದಾನೆ ತಾಯಿ.... ಹೇಳಿ'

'ಹೂಂ, ಅವನು ಅಜ್ಜಾವರ ಜೊತೇನಲ್ಲಿ ಆಳಕೇರಿಗೆ ಹೋಗಿದ್ದನಂತೆ. ಆ ದಿನ ಸಂಜೆ ಅಜ್ಜಾವರು, ಊರ ಭಕ್ತರು ಆಡ್ಡಾಡಲು ಊರ ಆಚೆ ಹೋದರಂತೆ. ಊರಾಚೆ ಎಲ್ಲೂ ನೀರಿಲ್ಲ. ಮರಗಳೆಲ್ಲಾ ಬೋಳು ಬೋಳು. ದನಕರುಗಳಿಗೂ ಸಹ ಕುಡಿಯಲು ನೀರಿಲ್ಲ. ಅಂತಹ ಅಭಾವವನ್ನು ಕಂಡು ನಮ್ಮ ಅಜ್ಜಾವರಿಗೆ ಏನು ಅನ್ನಿಸಿತೋ ಏನೊ, ಅಲ್ಲಿದ್ದ ಜಂಬುನಾಥ ಎಂಬ ಯುವಕನನ್ನು ಕರೆದು, 'ಅಯ್ಯಾ ಇಲ್ಲಿ ಸ್ವಲ್ಪ ತಗ್ಗು ತೋಡು' ಅಂದರಂತೆ.

ಅವ ತಗ್ಗು ತೋಡಿದ, ಒಂದು ಮೊಳ, ಎರಡು ಮೊಳ.
ನೀರು ಚಿಲುಮೆಯಾಗಿ ಚಿಮ್ಮಿ ಬಂದಿತಂತೆ!
ಕೂಡಲೇ ಊರಿನ ಜನವೆಲ್ಲಾ ಜಾತ್ರೆ ನೆರೆದರು.
ಮುತ್ತೈದೆಯರು ಗಂಗಮ್ಮನ ಪೂಜೆ ಮಾಡಿದರು.

ಅಪ್ಪಗಳ ಕೃಪೆಯಿಂದ ಊರಿಗೆ ಬಂದಿದ್ದ ನೀರಿನ ಬರ ಇಂಗಿತು. ಇಂದಿಗೂ ಆ ತಗ್ಗು ಒಂದು ದೊಡ್ಡ ತಟಾಕ ಆಗಿದೆ. ಅದನ್ನು 'ನಾಗನೂರ ಸ್ವಾಮಿಗಳ ಒರತೆ' ಎಂಬ ಪುಣ್ಯನಾಮದಿಂದ ಕರೆಯುತ್ತಾರೆ. ಹಾಲಿನಂಥಾ ನೀರು ಅಪ್ಪಗಳ ಕರುಣೆಯಿಂದ ದೊರೆತಿದೆ. ಜನ ಬದುಕುತ್ತಿದ್ದಾರೆ ಇವರ ಹೆಸರು ಹೇಳಿಕೊಂಡು.

'ಮತ್ತೊಂದು ಪವಾಡ ಅಪ್ಪಗಳೇ...... ಗಂಗಪ್ಪ ವೀರಪ್ಪ ಕರವೀರಣ್ಣವರ'
'ಅವನು ಅಜ್ಜಾವರ ಖಾಸಾದವನು'

'ಹೌದು, ಅವನೇ, ನಾಗನೂರಲ್ಲಿ ಸಿದ್ಧರಾಮೇಶ್ವರ ಮಠದಲ್ಲಿ ಅಜ್ಜಾವರು ಪೂಜಾಕ್ಕೆ ಕುಳಿತಿದ್ದಾಗ, ಅಡಿಗೆಯ ಈ ಗಂಗಪ್ಪ ಹಾಲು ಕಾಯಿಸುತ್ತಿದ್ದನಂತೆ. ಬೇರೊಬ್ಬ ಸೇವಕ ಫಕೀರಪ್ಪ ಎಂಬುವನು ಗೋಂಜಾಳದ ತೆನಿ (ಮೆಕ್ಕೆಜೋಳದ ತೆನೆ) ಸುಡುತ್ತಿದ್ದನಂತೆ. ಗುರುಗಳ ಪೂಜಾ ಮುಗಿದಿರಬಹುದು ಅಂತಾ ತಿಳಿದು ಫಕೀರಪ್ಪ ಹಾಲು, ಜೋಳದಕಾಳು ತೆಗೆದುಕೊಂಡು ಹೋಗಿ ಪೂಜಾಗೃಹದ ಬಾಗಿಲು ತೆರೆದನಂತೆ. ಆದರೆ ಅಲ್ಲಿ ಅವನು ಕಂಡದ್ದೇನು!

ಒಂದು ದೊಡ್ಡ ಘಟ ಸರ್ಪ !!
ಅದರ ಮೈಮೇಲೆ ಕರೀ ಕೂದಲ!
ಫಕೀರ ಚೀರಿದ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಲ್ಲಿದ್ದ ಭದ್ರಣ್ಣ ಮಾಸ್ತರು, ಅಲ್ಲಪ್ಪ ಮಾಸ್ತರು, ಶಾಲಾ ಮಕ್ಕಳು ಎಲ್ಲರೂ ಓಡಿ ಬಂದರಂತೆ! ಸದ್ದು ಕೇಳಿದ ಗುರುಗಳು ಒಮ್ಮೆ ಕಣ್ಣು ತೆರೆದು ನೋಡಿ, ಮತ್ತೆ ಮುಸುಕು ಹಾಕಿಕೊಂಡು ಜಪ ಮಾಡತೊಡಗಿದರಂತೆ! ಆ ಸರ್ಪ ಹಾಗೇ ಹರಿದು ಗದ್ದುಗೆಯ ಬಳಿ ಇದ್ದ ಬಿಲದಲ್ಲಿ ಹೋಗಿ ಸೇರಿಕೊಂಡಿತಂತೆ!'

'ಹೌದು, ಇಂದಿಗೂ ನಾಗನೂರ ಮಠದಲ್ಲಿ ಯಾರೂ ಆ ಗದ್ದುಗೆಯನ್ನೇರು ವುದಿಲ್ಲ. ಆದರೆ ಪ್ರತಿ ವರ್ಷದ ಶ್ರಾವಣಮಾಸದಲ್ಲಿ ಅದರ ಮೇಲೆ ಓರ್ವ ಜಂಗಮ ಜ್ಯೋತಿಯನ್ನು ಕೂರಿಸಿ ಇಂದಿಗೂ ಪೂಜಾ ಮಾಡುತ್ತಾರೆ.' ಎಂದರು ಚಿಕ್ಕಗುರುಗಳು. ಅನಸೂಯಮ್ಮ ಎದ್ದು ನಿಂತು—

'ಅಪ್ಪಗಳೇ, ನಾನು ಕಣ್ಣಾರ ಕಂಡ ಪವಾಡ ಮತ್ತೊಂದಿದೆ. ಕೃಪೆಮಾಡಿ ಕೇಳೋಣವಾಗಲಿ:

ನಾಗನೂರಿನಲ್ಲಿ ಬಹುದೊಡ್ಡ ಸಮಾರಂಭ. ಕರಿಗಡಬಿನ ಬಣಬೆಯೇ ಬಿದ್ದಿತ್ತು. ಅಲ್ಲಿ ಸುಮಾರು ಐವತ್ತು ಚೀಲ ಅಕ್ಕಿ ಅನ್ನವಾಗಿ ರಾಶಿ ಬಿದ್ದಿತ್ತು. ಒಂದು ಕೊಪ್ಪರಿಗೆ ತುಪ್ಪ ಕರಗಿ ನಿಂತಿತ್ತು. ಕೊಳಗ ಕೊಳಗಗಳಲ್ಲಿ ಸಾರು, ಹುಳಿ! ಸುಮಾರು ಅರ್ಧ ಲಕ್ಷ ಜನಕ್ಕೆ ಸಾಕಾಗುವಷ್ಟು ಪ್ರಸಾದ!

ಆದರೆ ಆ ಬಯಲಿನಲ್ಲಿ ಎಲ್ಲರೂ ಸೇರುವ ಹೊತ್ತಿಗೆ ಸರಿಯಾಗಿ ಮಳೆ ಮೋಡ ಗಳೂ ಬಂದು ಸೇರಿದುವು. ಕಾರ್ಮೋಡಗಳು ಕವಿದು ನಡು ಹಗಲೇ ರಾತ್ರಿಯಾಯಿತು. ಸಂಪೂರ್ಣವಾಗಿ ಊರು ಕೇರಿಗಳನ್ನೇ ಕೊಚ್ಚಿಕೊಂಡು ಹೋಗುವಂತಹ ಮಳೆ ಬರುವ ಸಂಭವ ಇತ್ತು. ಭಕ್ತರು ಓಡೋಡಿ ಬಂದರು.

'ಗುರುಗಳೇ, ಭಾರೀ ಮಳೆ. ನಾವು ಮಾಡಿಟ್ಟ ಎಲ್ಲ ಪ್ರಸಾದವೂ ನೀರುಪಾಲು' ಅಂದರು. ಆ ಪ್ರಳಯ ಕಾಲದ ಮೋಡವನ್ನು ಗುರುಗಳು ವೀಕ್ಷಿಸಿದರು. 'ಶಿವಶಿವಾ, ಶಿವಶಿವಾ!' ಎಂದು ಆ ಹಂದರದಡಿ ದಯಮಾಡಿಸಿದರು. ಕೈಯಲ್ಲಿ ಅಭಯ ಹಸ್ತ ತೋರಿ ಅಲ್ಲಿಯೇ ಮುಹೂರ್ತ ಮಾಡಿದರು. ಮಳೆ ಧೋ ಧೋಯೆಂದು ಸುರಿಯಿತು ನಾಗನೂರಿನ ಸುತ್ತೆಲ್ಲ. ಆದರೆ ಸಭೆ ಸಮಾರಂಭದ ಬಳಿ ಒಂದು ಹನಿಯೂ ಹನಿಯಲಿಲ್ಲ! ಜನರೆಲ್ಲಾ ಅಬ್ಬಾ ಅಪ್ಪಗಳ ಪವಾಡ ಎಂಥದು ಎಂದು ಬೆಕ್ಕಸ ಬೆರಗಾದರು.'

'ಮಾನವನಿಗೆ ಶೀಲ ಶ್ರೇಷ್ಠವಾದದ್ದು; ಶೀಲ ಜಾರಿದರೆ ಆತ್ಮಶ್ರೀ ಹಾರಿ ಹೋಗುತ್ತಾಳೆ; ಶೀಲವಿಲ್ಲದ ಕ್ರಾಂತಿ ಬರಿಯ ಭ್ರಾಂತಿ. ನಮ್ಮ ನಾಗನೂರಜ್ಜಗಳಿಗೆ ಶೀಲದ ಬಗೆಗೆ ವಿಶೇಷ ಕಾಳಜಿ. ಅದನ್ನು ಜತನ ಮಾಡುವುದಕ್ಕಾಗಿಯೇ ಕೈಯಲ್ಲೊಂದು ದಂಡ ಹಿಡಿದಿರುತ್ತಾರೆ. ಅದರ ಅರ್ಥ ಯಾರಿಗಾದರೂ ಗೊತ್ತೇನು?' ಮಾತೆ ಸೊನ್ನಲಾಪುರದ ಸಂಗ್ಗಲಾದೇವಿಯವರು ಕೇಳಿದರು. ರವಿದೇವಿ ಮೊದಲಾದ ಉಳಿದ ತಾಯಂದಿರು 'ನಮಗೆ ತಿಳಿದಿಲ್ಲ ನೀವೇ ಹೇಳಿ 'ಎಂದು ಒತ್ತಾಯಿಸಿದರು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಗ್ಗಲಾದೇವಿ ದೊಡ್ಡ ಸ್ವಾಮಿಗಳು ಸದಾ ಹಿಡಿಯುತ್ತಿದ್ದ ಬಡಿಗೆಯ ಬಗ್ಗೆ ಒಂದು ವಿಶಿಷ್ಟಾರ್ಥ ಕಲ್ಪಿಸಿ ಹೇಳಿದರು :

'ನೋಡಿ, ನಾಗನೂರಪ್ಪಗಳು ಸದಾ ಒಂದು ಬಡಿಗೆ ಅಥವಾ ದೊಡ್ಡ ದಂಡವನ್ನು ಹಿಡಿದು ಕೊಂಡಿರುತ್ತಾರಷ್ಟೆ. ಅದು ಜನರನ್ನು ಅಥವಾ ಪ್ರಾಣಿಗಳನ್ನು ಬೆದರಿಸಲಿಕ್ಕಿಲ್ಲ, ತನ್ನನ್ನು ತಾನು ಎಚ್ಚರಿಸಿಕೊಳ್ಳಲು, ತನ್ನ ಶೀಲ ರಕ್ಷಿಸಿಕೊಳ್ಳಲು. ಅದು ಹೀಗಿದೆ : ಸ್ವಾಮಿಗಳು ಕುಳಿತಾಗ ಬೆತ್ತ ಹತ್ತಿರವಿದ್ದರೆ ತನ್ನ ಚಿತ್ತಚಾರದಂತೆ ಬೆತ್ತದ ಮೇಲೆ ದೃಷ್ಟಿ ಇಟ್ಟಿರುತ್ತಾರೆ. ಅವರು ನಿಂತಾಗ ದಂಡವನ್ನು ಕೈಯಲ್ಲಿ ನೆಟ್ಟಗೆ ಉದ್ದ ಹಿಡಿದಿರುತ್ತಾರೆ. ದೃಷ್ಟಿ ಅದರ ತುದಿಯಲ್ಲಿ ಕೇಂದ್ರೀಕೃತವಾಗಿರುತ್ತೆ ; ಚಿತ್ತ ಚಾಂಚಲ್ಯಕ್ಕೆ ಅದು ಅವಕಾಶವೀಯುವುದಿಲ್ಲ. ನಡೆಯುವಾಗ ದಂಡವನ್ನು ಅಡ್ಡ ಹಿಡಿಯುತ್ತಾರೆ. ದುಷ್ಟಶಕ್ತಿಗಳು ತಮ್ಮ ಬಳಿ ಸುಳಿಯದಂತೆ ಅಡ್ಡಗೋಡೆ ಎಂಬುದನ್ನು ಆ ಬಡಿಗೆ ಧ್ವನಿಸುತ್ತದೆ. ಹೀಗೆ ಶೀಲವನ್ನು ಸದಾ ಸಂರಕ್ಷಿಸಿಕೊಂಡು ಬಂದ ಮಹಾತ್ಮರಿದ್ದಾರೆ. ಶೀಲ ಸಂಪಾದನೆ ಶೂನ್ಯ ಸಂಪಾದನೆಯಷ್ಟೇ ಮಹತ್ವದ್ದು ; ಪ್ರತ್ಯಕ್ಷ ಪವಾಡ ಅಲ್ಲವೆ ?' ಎಂದರು.

ಹೆಣ್ಣು ಮಕ್ಕಳ ಪವಾಡದ ಕತೆಗಳಿಗೆ ಚಿಕ್ಕಗುರುಗಳು ತಲೆದೂಗುತ್ತಿದ್ದರು. ತಮ್ಮ ಸಂತಸವನ್ನು ವ್ಯಕ್ತಪಡಿಸುತ್ತಿದ್ದರು,

ಆದರೆ—

ದೊಡ್ಡ ಗುರುಗಳು ಇದಾವುದನ್ನೂ ಕೇಳಿಸಿಕೊಳ್ಳದೆ ಸಮಾಧಿಸ್ಥರಾಗಿದ್ದರು.

ಘಳಿಗೆಗಳು ಉರುಳಿದುವು.

ಗುರುಗಳು ಸಮಾಧಿಯಿಂದ ಎಚ್ಚೆತ್ತರು.

'ಶಿವನಿಚ್ಛೆ ! ಶಿವನಿಚ್ಛೆ !' ಎಂದರು.

ಎಲ್ಲರೂ ಅಚ್ಚರಿಗೊಂಡರು.

ದೊಡ್ಡ ಗುರುಗಳು ಮೇಲೆದ್ದರು.

ಎಲ್ಲರೂ ಎದ್ದುನಿಂತು ನಮಸ್ಕರಿಸಿದರು!

ವೀರಮ್ಮ ಮತ್ತು ಸಾವಿತ್ರಮ್ಮನವರನ್ನು ಕುರಿತು:

'ಅಮ್ಮಂದಿರಾ, ನಿಮ್ಮ ಸಂಕಲ್ಪ ತುಂಬಾ ಒಳ್ಳೆಯದು. ನಿಮಗೆ ಒಳ್ಳೆಯದಾಗಲಿ. ನಿಮ್ಮ ಇಚ್ಛೆ ಶಿವನಿಚ್ಛೆ! ಆದರಿಂದಲೇ ಈ ಸತ್ಕಾರ್ಯ ಆಗುತ್ತಿದೆ. ನಾಳೆಯಿಂದಲೇ ಮಹಿಳೆಯರಿಗಾಗಿ 'ಪ್ರಸಾದ ನಿಲಯ' ಆರಂಭವಾಗಲಿ.'

ಎಂದು ಹಾರೈಸಿ ನುಡಿದರು.

ಅವರು ಹೊರಟ ಕೂಡಲೆ ಎಲ್ಲರೂ ಎದ್ದು ನಮಸ್ಕರಿಸಿದರು.

ಚಿಕ್ಕಗುರುಗಳು ಅವರನ್ನು ಹಿಂಬಾಲಿಸಿದರು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಜೆ ಆಗುತ್ತ ಬಂದಿತ್ತು.
ಗುರುಗಳಂ ಇಬ್ಬರೇ ಸ್ಮಶಾನದತ್ತ ನಡೆಯುತ್ತಿದ್ದರು.
ನಿರ್ಜನ ಪ್ರದೇಶ
ಪ್ರಾಣಿಗಳ ಸಂಚಾರವೂ ಅಷ್ಟಾಗಿ ಇರಲಿಲ್ಲ.
ದೊಡ್ಡಗುರುಗಳಂ —

'ಪ್ರಭುಗಳೇ, ಶಿವನ ಸಂಕಲ್ಪ ಹೇಗಿರುತ್ತದೆ ಎಂಬುದನ್ನು ನೋಡಿದಿರಲ್ಲವೇ ? ನಾವು ಆಲೋಚಿಸಿದ್ದನ್ನು ಕೂಡಲೇ ಆ ತಾಯಂದಿರ ರೂಪದಲ್ಲಿ ಆಗುಮಾಡಿಕೊಟ್ಟಿದ್ದಾನೆ, ಎಲ್ಲಾ ಅವನ ಕಾರ್ಯ. ಅವನೇ ಅದನ್ನು ನೆರವೇರಿಸಿಕೊಳ್ಳುತ್ತಿದ್ದಾನೆ. ಹೌದು, ನಾವು ಅವನ ಕಾರ್ಯದಲ್ಲಿ ನೆರವಾದರೆ ಸಾಕು. ಅವನ ಕಾರ್ಯಕ್ಕೊಂದು ಕರಣವಾದರೆ ಸಾಕು. ನೋಡಿ, ನಾನು ಪ್ರಸಾದ ನಿಲಯ ತೆರೆಯಬೇಕೆಂದು ಮೊದಲು ಯೋಜಿಸಿಕೊಂಡೆ. ನೂರಾರು ಜನ ಮುಂದೆ ಬಂದರು. ನಾ ಮುಂದು ತಾ ಮುಂದು ಎಂದು ಕಾಣಿಕೆಯನ್ನಿತ್ತರು. ಮುಖ್ಯವಾಗಿ, ಹುಬ್ಬಳ್ಳಿಯ ಶ್ರೀಜಗದ್ಗುರು ಗುರುಸಿದ್ಧಸ್ವಾಮಿಗಳು, ಸೇಗುಣಸೆ ಶ್ರೀ ಮುರುಘೇಂದ್ರಸ್ವಾಮಿಗಳು, ದೇಶನೂರ ಶ್ರೀ ಸಿದ್ಧಲಿಂಗ ಸ್ವಾಮಿಗಳು, ಮುಧೋಳದ ಶ್ರೀ ಮೃತ್ಯುಂಜಯ ಮಹಾಸ್ವಾಮಿಗಳು, ನಿಡಸೋಸಿ ಜಗದ್ಗುರುಗಳವರು, ಅಂಕಲಗಿ ಮಠದ ಶ್ರೀ ಅಡವಿ ಸ್ವಾಮಿಗಳು, ಹೊಸಪೇಟೆ ಶ್ರೀ ಕೊಟ್ಟೂರ ಸ್ವಾಮಿ ಮಠದ ಜಗದ್ಗುರುಗಳು—ಇವರೇ ಮೊದಲಾದ ಶ್ರೀಪಾದಂಗಳವರು ಅನುಗ್ರಹಿಸಿ ಆಶೀರ್ವದಿಸಿ ಕೊಟ್ಟದ್ದೇ ಇಂದು ಗುಡ್ಡದಷ್ಟಾಗಿ ಬೆಳೆದಿದೆ. ಇವರಂತೆಯೇ ಭಕ್ತರ ಕಾಣಿಕೆಯೇನೂ ಕಿರಿದಲ್ಲ—ಕೇಳಿ— ಭೀಮನಗೌಡ ಬಸವನಗೌಡ ಪಾಟೀಲ ಸಂಕೇಶ್ವರ. ರಾಮಪ್ಪ ಜೋಡಟ್ಟಿ ಎಲೀಮುನೋಳಿ, ಬಸವನಗೌಡ ಅಪ್ಪಯ್ಯಗೌಡ ಪಾಟೀಲ ಅಮ್ಮಿನಭಾವಿ, ಕಲ್ಲಪ್ಪ ಹೊಗರ್ತಿ ಕಾಡಾಲ, ಶಿವಬಸವಯ್ಯ ಚಿಕ್ಕಮಠ ಬೈಲಹೊಂಗಲ, ಶಿವರುದ್ರಪ್ಪ ಸಂಪಗಾವ, ಗಂಗಪ್ಪ ಮುಂದಾಪೂರ ಸಂಪಗಾವ, ಚನ್ನಬಸಪ್ಪ ರುಂಟ್ಟಿ ಸಂಪಗಾವ, ಲಖಮನಗೌಡ ಬಸವಪ್ರಭು ಮಂಟಮುರಿ, ಚನ್ನಪ್ಪಣ್ಣ ಹಂಜಿ ಮತ್ತು ಬಸವಣ್ಯಪ್ಪ ಗುಂಟಿಪಿ, ಜಗಜನ್ನಿ ವಕೀಲರು, ಷಾಪೂರ ಮಲ್ಲಯ್ಯ ಕಲ್ಲಯ್ಯ ಕವಟಗಿಮಠ ಚಿಕ್ಕೋಡಿ, ರಾಮಪರ್ವತೆ, ಬಾಳೆಕುಂದ್ರಿ, ಆಳ್ನಾವರ್, ಸಮ್ಮತಶೆಟ್ಟಿ ಗುರುಲಿಂಗಪ್ಪ ಬೆಳಗಾವಿ, ದುಂಡಯ್ಯನವರು ಕೊಂಕಾಳಿಮಠ – ಇವರೇ ಮೊದಲಾದ ಲಿಂಗವಂತ ಭಕ್ತರು ಹಣ ಭೂಮಿ ದಾನಕೊಟ್ಟಿದ್ದಾರೆ. ಅಂತೆಯೇ ನೋಡಿ ಸಿರಗಾಂವಕರ್ ಓರ್ವ ಬ್ರಾಹ್ಮಣರು ಸುಮಾರು ಎಪ್ಪತ್ತು ಎಕರೆ ಭೂಮಿಕೊಟ್ಟಿದ್ದಾರೆ. ಚಂದೂರ ಇನಾಂದಾರ್ ಇವರೂ ಬ್ರಾಹ್ಮಣರೆ. ಇವರು ಇಪ್ಪತ್ತು ಎಕರೆ ಭೂಮಿ ಕೊಟ್ಟಿದ್ದಾರೆ. ಜಾಗೀರದಾರ್ ತೊರಗಲ್ ಇವರು ಮರಾಠಿಗರು; ಇವರು ಮೂವತ್ತೆಂಟು ಎಕರೆ ಜಮೀನು ಕೊಟ್ಟಿದ್ದಾರೆ; ಮತ್ತೊಬ್ಬರು ಇವರೂ ಮರಾಠಿಯವರೆ ಐದುಸಾವಿರ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ರೂಪಾಯಿ ಕಾಣಿಕೆ ಕೊಟ್ಟಿದ್ದಾರೆ. ಇವರು ಜಾತಿಯಲ್ಲಿ ಮುಸಲ್ಮಾನರು, ಇವರ ಹೆಸರು ಮರೆತೆ, ಇವರು ಹದಿನೈದು ಸಾವಿರ ರೂಪಾಯಿ ಕಾಣಿಕೆ ಕೊಟ್ಟಿದ್ದಾರೆ. ತವನಪ್ಪಣ್ಣ ಲೇಂಗಡೆಯವರು ಜಾತಿಯಲ್ಲಿ ಜೈನರು ; ಇವರೂ ಸಹ ಕೈತುಂಬಿದ ಕಾಣಿಕೆ ನೀಡಿದ್ದಾರೆ. ಇವರು ಆರ್. ಎಂ. ಶೆಟ್ಟಿಯವರು ಉತ್ತರಕನ್ನಡ ಜಿಲ್ಲೆಯವರು, ಬಂಟ ಕುಲದವರು. ಇವರಿಗೆ ನಮ್ಮ ಕಾರ್ಯದ ಬಗ್ಗೆ ತುಂಬಾ ವಿಶ್ವಾಸ, ಭಕ್ತಿ; ಮೂರು ಲಕ್ಷ ರೂಪಾಯಿಗಳನ್ನು ದಾನವಾಗಿ ಕೊಟ್ಟರು. ಅವರ ಹೆಸರಿನಲ್ಲಿ ಒಂದು ಪಾಲಿಟೆಕ್ನಿಕ್ ಕಾಲೇಜು ತೆರೆಯಬೇಕೆಂದಿದ್ದೇನೆ. ನಿಮ್ಮನ್ನು ನಾನು ಆ ಸ್ಥಳಕ್ಕೆ ಕರೆದುಕೊಂಡು ಹೋಗುತ್ತಿದ್ದೇನೆ.'

'ಮೊನ್ನೆ ಶ್ರೀಮತಿ ಶಾರದಾಬಾಯಿ ಬಸವನಗೌಡ ದೊಡ್ಡಗೌಡರು, ಸಾಕೀನ ಮದನ ಬಾವಿ – ಇವರು ಹತ್ತೊಂಬತ್ತು ಎಕರೆ ಭೂಮಿಯನ್ನು ದಾನವಾಗಿ ಕೊಟ್ಟಿದ್ದಾರೆ ಎಂದಿರಿ.'

'ಹೌದು, ಆ ತಾಯಿ ವಿಧವೆ. ತನ್ನ ಸರ್ವಸ್ವವನ್ನೂ ಸಮಾಜಸೇವೆಗಾಗಿ ಅರ್ಪಿಸಿದ್ದಾಳೆ. ಆ ಮಹಾತಾಯಿಯ ತ್ಯಾಗ ಅನನುಕರಣೀಯ! ಇದೆಲ್ಲವನ್ನೂ ನೀವು ಒಪ್ಪಿಸಿಕೊಳ್ಳಬೇಕು ಪ್ರಭುಗಳೆ!'

'ಇದೇನು ಗುರುದೇವ, ಹರಿಶ್ಚಂದ್ರ ವಿಶ್ವಾಮಿತ್ರನಿಗೆ, ಇದು ರತ್ನ ಭಂಡಾರ, ಇದು ಹೇಮ ಭಂಡಾರ, ಇದು ಸುನಾಣೆಯ ವರ್ಗ—ಎಂದು ಸಮಸ್ತ ಸಾಮ್ರಾಜ್ಯವನ್ನು ಒಪ್ಪಿಕೊಟ್ಟಂತೆ ನನಗೆ ಒಪ್ಪಿಸುತ್ತಿದ್ದೀರಿ.'

'ಹೌದು, ಅಂದು ವಿಶ್ವಾಮಿತ್ರ ಹರಿಶ್ಚಂದ್ರನ ಪರೀಕ್ಷಕನಾಗಿದ್ದ; ಆದರೆ ಇಂದು ನೀವು ನನ್ನ ಸಹಾಯಕರಾಗಿದ್ದೀರಿ.'

ಅಷ್ಟು ವೇಳೆಗೆ ಇಬ್ಬರೂ ಶ್ಮಶಾನ ದಾಟಿ ಬಂದಿದ್ದರು.

'ಪ್ರಭುಗಳೆ, ನೋಡಿ ಇದು ಶ್ಮಶಾನ. ಶಿವನ ಆವಾಸಸ್ಥಾನ ; ಈ ಶಿವಬಸವನ ನಿವಾಸ ಸ್ಥಳವೂ ಹೌದು.'

'ಅರ್ಥವಾಗಲಿಲ್ಲ ಗುರುದೇವ!'

'ಏನಿಲ್ಲ. ಕೇಳಿ, ನಾನಿಲ್ಲಿ ಒಂದು ಪರ್ಣಕುಟೀರ ಕಟ್ಟಿಕೊಂಡು ನಿರಾತಂಕವಾಗಿ ಇದ್ದು ಬಿಡುತ್ತೇನೆ. ಪುಟ್ಟ ಕುಟೀರವೂ ಇಷ್ಟರಲ್ಲೇ ಪೂರ್ಣಗೊಳ್ಳಲಿದೆ. ಇಲ್ಲಿನ ಈ ಹತ್ತಾರು ಎಕರೆ ಭೂಮಿ ವಿದ್ಯಾಕೇಂದ್ರವಾಗಬೇಕು; ಈ ಸ್ಥಳದಲ್ಲಿ ಉದ್ಯೋಗಸ್ಥ ಮಹಿಳೆಯರಿಗಾಗಿ ಒಂದು 'ಪ್ರಸಾದ ನಿಲಯ' ನಿರ್ಮಾಣವಾಗಲಿ; ಇಲ್ಲಿ ಶ್ರೀ ಸಿದ್ಧರಾಮೇಶ್ವರ ಶಾಲೆ, ಆರ್. ಎನ್. ಶೆಟ್ಟಿಯವರ ಹೆಸರಿನಲ್ಲಿ ಒಂದು ತಾಂತ್ರಿಕ ಶಿಕ್ಷಣ ವಿದ್ಯಾಲಯ, ಒಂದು ಅಂಗನವಾಡಿ, ಗೋಶಾಲೆ, ಎಲ್ಲ ವಿದ್ಯಾರ್ಥಿಗಳಿಗೂ ಊಟ ವಸತಿಗಾಗಿ ಪ್ರಸಾದ ನಿಲಯಗಳು ನಿರ್ಮಾಣವಾಗಬೇಕು; ಶ್ರೀಯುತ ಬಾಬೂರಾವ್

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಚನ್ನಬಸಪ್ಪ ಹಿಡದುಗ್ಗಿ, ಸಾಕೀನ ನೇಸರಿಗಿ ಇವರ ಹೆಸರಲ್ಲಿ ಒಂದು ಸಾರ್ವಜನಿಕ ಕಲ್ಯಾಣ ಮಂಟಪ ಸ್ಥಾಪಿತವಾಗಲಿ ; ಅವರು ತುಂಬಾ ಸೇವೆ ಸಲ್ಲಿಸಿದ್ದಾರೆ ನಮ್ಮ ಮಠಕ್ಕೆ. ಈ ರಾಷ್ಟ್ರೀಯ ಹೆದ್ದಾರಿಯ ಆ ಬದಿಯಲ್ಲಿ ಒಂದು ಮೆಡಿಕಲ್ ಕಾಲೇಜು ತೆರೆಯಲು ಸರ್ಕಾರ ಮತ್ತು ಲಿಂಗಾಯತ ಸಮಾಜ ಉದ್ದೇಶಿಸಿದೆ. ಅದರ ಎದುರಿನಲ್ಲಿ ನಾವು ಶಾಲೆ, ಕಾಲೇಜು, ಪ್ರಸಾದ ನಿಲಯಗಳನ್ನು ತೆರೆದು, ಆ ಮೆಡಿಕಲ್ ಕಾಲೇಜಿಗೆ ಪೋಷಕ ಸಂಸ್ಥೆಯಾಗಿ ನಿಲ್ಲಬೇಕು. ಇಷ್ಟು ರೀತಿಯಲ್ಲಿ ಸಂಕಲ್ಪಿಸಿಕೊಂಡಿದ್ದೆ. ಅದು ಈಗ ಆಗಿ ಮುಗಿಯಿತು. ಮುಂದಿನದು ನಿಮ್ಮ ಕೆಲಸ. ನನಗೆ ವಿಶ್ರಾಂತಿ ಬೇಕು, ಕೊಟ್ಟುಬಿಡಿ. ನನ್ನನ್ನು ಈ ಕುಟೀರದೊಳಗಿಂದ ಹೊರಗೆ ಕರೆಯಬೇಡಿ. ನನಗೆ ಯಾವ ಮೋಹವೂ ಇಲ್ಲ. ಯಾರ ಮೇಲೆ ದ್ವೇಷವೂ ಇಲ್ಲ. ಅಸೂಯೆ ಅಸಹನೆ ಹತ್ತಿರ ಸುಳಿಯಲಾರವು. ನನಗೆ ವಿಶ್ರಾಂತಿ ಬೇಕು. ದುಡಿದು ದಣಿದ ದೇಹ ನೆಲವನ್ನಾಶ್ರಯಿಸ ಬಯಸುತ್ತದೆ. ನೀವಿನ್ನು ಹೊರಡಿ.'

'ಗುರುದೇವ, ಏನಿದು ಅಪಚಾರ ? ನಡು ನೀರಿನಲ್ಲಿ ಕೈಬಿಡುವರೆ ? ನಮಗೆ ಮಾರ್ಗದರ್ಶಕರಾಗಿ ಇನ್ನೂ ಕೆಲವು ದಿನ ನಮ್ಮ ಮಧ್ಯದಲ್ಲಿರಬೇಕು ತಾವು.'

'ಇರುತ್ತೇನೆ, ಆದರೆ ದೈಹಿಕ, ಮಾನಸಿಕ ಒತ್ತಡಗಳು ಬೇಡ. ಇರುವವರೆಗೂ ನಿಮ್ಮ ಹಾಗೂ ಸಮಾಜದ ಸೇವೆ' ಮಾಡುತ್ತಿರುತ್ತೇನೆ. ಹೋಗಿಬನ್ನಿ.'

ಕೆಲವೇ ದಿವಸಗಳಲ್ಲಿ ಬೆಳಗಾವಿಯ ಶ್ಮಶಾನವೆಲ್ಲಾ ನಗರವಾಯಿತು. ಅದೊಂದು ಸಾರಸ್ವತಲೋಕವೇ ಆಯಿತು. ಶಾಲಾ ಕಾಲೇಜುಗಳು ಪ್ರಸಾದ ನಿಲಯಗಳು ತಲೆ ಎತ್ತಿದುವು. ಶ್ರೀ ಕುಮಾರೇಶ್ವರ ಪ್ರಸಾದ ನಿಲಯವೊಂದೇ ನಾಲ್ಕುನೂರು ಐದುನೂರು ವಿದ್ಯಾರ್ಥಿಗಳಿಗೆ ಆಶ್ರಯ ಕೊಟ್ಟಿತು.

ನಾಗನೂರ ಶ್ರೀ ಶಿವಬಸವ ಸ್ವಾಮಿಗಳ ತ್ಯಾಗ, ನಿಷ್ಠೆ, ಸಾಧನೆಗಳ ಫಲವಾಗಿ ಬೆಳಗಾವಿ ವಿದ್ಯಾಕೇಂದ್ರವಾಯಿತು. ಎಲ್ಲೂ ಅವಿದ್ಯಾವಂತರಿರಬಾರದು. ಅವಿದ್ಯೆ ಅಂಧತ್ವ ಇದ್ದಂತೆ. ಸಾಧ್ಯವಾದಷ್ಟು ಮಟ್ಟಿಗೆ ಆ ಅಂಧತ್ವವನ್ನು ದೂರಮಾಡಬೇಕು ಎಂಬ ಶ್ರೀ ಗುರುವಿನ ಆಕಾಂಕ್ಷೆ ಅಲ್ಲಿ ಹಣ್ಣಾಗಿತ್ತು. ಅವರು ಜಗತ್ತಿಗೆ ಕಣ್ಣಾಗಿ, ಕಣ್ಣುಗಳಿಗೆ ಬೆಳಕಾಗಿ ಬೆಳಗಾವಿಯನ್ನು ಬೆಳಗಿದ್ದಕ್ಕಾಗಿ ಬೆಳಗಾವಿಯ ಮಹಾನಗರ ಪಾಲಿಕೆ ಆ ಬಡಾವಣೆಯನ್ನು "ಶ್ರೀ ಶಿವಬಸವ ನಗರ" ಎಂಬ ಪುಣ್ಯಾಭಿಧಾನದಿಂದ ಕರೆಯಿತು. ಹಿರಿಯ ಗುರುಗಳು ಸದಾ ಮಾರ್ಗದರ್ಶನ ಮಾಡುತ್ತಿದ್ದಾರೆ. ಕಿರಿಯ ಗುರುಗಳು ಅದರಂತೆ ನಡೆದು ಕಾರ್ಯವನ್ನು ಪೂರ್ಣಗೊಳಿಸುತ್ತಿದ್ದಾರೆ.

ಅವರು ಅಭಿನವ ಶ್ರೀ ರಾಮಕೃಷ್ಣ ಪರಮಹಂಸರು ;

ಇವರು ಅಭಿನವ ಸ್ವಾಮಿ ವಿವೇಕಾನಂದರು ;

★

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಾಶಿಮ ಕೃತಿಗಳು

ಕವಿತೆ

೧ ಶಿವತಾಂಡವ
೨ ಕೆಂಗನ ಕಲ್ಲು
೩ ವಿಪರ್ಯಾಸ
೪ ಘೋಷವತಿ
೫ ಬಾರೊ ವೈಲಾರಕೆ
೬ ರೂಪಸಿ
೭ ಚೈತ್ರ–ಜ್ಯೋತಿ
೮ ನನ್ನ ಕವನಗಳು
೯ ಬೃಂದಾವನ ಲೀಲೆ
೧೦ ಸಾಶಿಮ ರವರ ಆಯ್ದ ಕವನಗಳು

ಕಾದಂಬರಿ

೧ ಹೇಮಕೂಟ
೨ ಪುರುಷ ಸಿಂಹ
೩ ಸಾಮರಸ್ಯದ ಶಿಲ್ಪಿ

ನಾಟಕ

೧ ಮರೀಬೇಡಿ
೨ ವಿಜಯವಾತಾಪಿ
೨ ಎರಡು ನಾಟಕಗಳು
೩ ಕೊಡಗೂಸು ಚೆನ್ನಲೆ

ನೃತ್ಯ ರೂಪಕ

೧ ರೇಣುಕ ಪರಂಜ್ಯೋತಿ
೨ ವೀರ ಭಾರತಿ
೩ ಸ್ನೋ ವೈಟ್
೪ ರಾಸಲೀಲೆ
೫ ನಾಟ್ಯ ಸರಸ್ವತಿ
೬ ಸ್ವಪ್ನಾ
೭ ಭಕ್ತಿ ಭಾವುಕಿ

ಭಾಷಾಂತರ

ಸ್ವಪ್ನವಾಸವದತ್ತಾ

ವಿಮರ್ಶೆ

ಭಾಸನ ಮಕ್ಕಳು

ಜೀವನ ಚರಿತ್ರೆ

೧ ಭಾರತ ರತ್ನ
೨ ಕನ್ನಡದ ಮೂವರು ಕಟ್ಟಾಳುಗಳು
೩ ವಿಭೂತಿ ಪುರುಷರು

ಮಹಾ ಪ್ರಬಂಧ

೧ ಕೆಳದಿಯ ಅರಸರು ಮತ್ತು
ಕನ್ನಡ ಸಾಹಿತ್ಯ

ಸಂಪಾದಿತ

೧ ಹರಿಹರನ ಹತ್ತು ರಗಳೆಗಳು
೨ ಶ್ರೀ ಮರುಳು ಸಿದ್ಧೇಶ್ವರ
ಮಹಾ ಪುರಾಣಂ
೩ ಅಗ್ರತಾಂಬೂಲ
೪ ಅರುವಿನಾಗರದಲ್ಲಿ
೫ ಕಾವ್ಯಾನಂದ
೬ ಜನಪದ ಕತೆಗಳು

ಸಣ್ಣ ಕತೆ

೧ ನೆಲದ ಸೊಗಡು

ಇತರೆ

ಮಳ್ಳಿಗೊಂದು ಒಳ್ಳೆಮಾತು
ಜ್ಞಾನಪೀಠ ಪ್ರಶಸ್ತಿ ವಿಜೇತರು.

—★—

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಾಗನೂರ ಶ್ರೀ ಶಿವಬಸವಸ್ವಾಮಿಗಳ ಕಲ್ಯಾಣ ಕೇಂದ್ರ,
ಬೆಂಗಳೂರು

ಆಡಳಿತ ಮಂಡಲಿ

ಅಧ್ಯಕ್ಷರು :	ಶ್ರೀ ನಿ. ಪ್ರ. ಶಿವಬಸವಸ್ವಾಮಿಗಳು, ನಾಗನೂರು
ಸದಸ್ಯರು :	ಶ್ರೀ ನಿ. ಪ್ರ. ಮೃತ್ಯುಂಜಯ ಸ್ವಾಮಿಗಳು, ಮುಧೋಳ
	ಶ್ರೀ ಎಲ್. ಕೆ. ಖೋತ, ಹೆಬ್ಬಾಳ
	ಸಿ. ಎ. ಜಮಖಂಡಿ ಮಠ, ಐ.ಎ. ಎಸ್. (ನಿವೃತ್ತ) ಬೆಂಗಳೂರು
	ಶ್ರೀ ಎಸ್. ಎಚ್. ಕೌಜಲಗಿ, ಎಂ. ಎಲ್. ಎ. ಬೈಲಹೊಂಗಲ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಾಗನೂರು ಶ್ರೀ ಶಿವಬಸವಸ್ವಾಮಿಗಳ ಕಲ್ಯಾಣ ಕೇಂದ್ರ,

ಬೆಂಗಳೂರು

ಕಾರ್ಯಕಾರಿ ಸಮಿತಿ

1. ಶ್ರೀ ಸಿ. ಎ. ಜಮುಖಂಡಿಮಠ,
   ಐ.ಎ.ಎಸ್. (ನಿವೃತ್ತ) ಅಧ್ಯಕ್ಷರು ಬೆಂಗಳೂರು
2. ಶ್ರೀ ಕೆ. ಎಂ. ನಂಜಪ್ಪ,
   ಮಾಜಿ ಮೇಯರ್, ಬೆಂಗಳೂರು, ಉಪಾಧ್ಯಕ್ಷರು ವೈಸ್ ಚೇರ್ಮನ್
3. ಶ್ರೀ ಎಲ್. ಕೆ. ಖೋತ್, ಹೆಬ್ಬಾಳ — ಸದಸ್ಯರು
4. ಶ್ರೀ ವಿ. ಕೆ. ದೇಯಣ್ಣವರ್, ಬೆಳಗಾಂವ — "
5. ಶ್ರೀ ಎಸ್. ಬಿ. ಶಿದ್ನಾಳ್, ಎಂ. ಪಿ. ಬೆಳಗಾಂವ — "
6. ಶ್ರೀ ಬಿ. ಎ. ಪಾಟೀಲ ಅಮೀನಭಾವಿ — "
7. ಶ್ರೀ ಜಿ. ಜಿ. ಕಾಡದೇವರು, ಮುರಡಿಮಠ — "
8. ಶ್ರೀ ಎಸ್. ಬಿ. ಖಡಬಡಿ, ಬೆಳಗಾಂವ — "
9. ಶ್ರೀ ಸಿ. ಎನ್. ಭದ್ರಣ್ಣವರ,
   ವಕೀಲರು ಬೈಲಹೊಂಗಲ — "
10. ಶ್ರೀಮತಿ ಬಿ. ಜಿ. ಸುಶೀಲಮ್ಮ, ಬೆಂಗಳೂರು — "
11. ಶ್ರೀ ಟಿ. ಹನುಮಂತಪ್ಪ,
    ನಿವೃತ್ತ ಲೆಜಿಸ್ಲೇಟಿವ್, ಸೆಕ್ರಟರಿ, ಬೆಂಗಳೂರು — "
12. ಶ್ರೀ ಎಂ. ಸಿ. ಅಂಟಿನ,
    ನಿವೃತ್ತ ಚೀಪ್ ಇಂಜಿನಿಯರ್ — "
13. ಶ್ರೀ ಆರ್. ವಿ. ಬೀಡಪ್, ಬೆಳಗಾಂವ,
    ಮಾಜಿ ಚೇರ್‌ಮನ್ ಕೆ.ಪಿ.ಎಸ್.ಸಿ. ಬೆಂಗಳೂರು — "
14. ಶ್ರೀ ಬಿ. ಜಿ. ನಾಯಕ್, ವಕೀಲರು, ಬೆಂಗಳೂರು — "
15. ಶ್ರೀ ಬಿ. ಎಸ್. ಮಹಂತಣ್ಣವರ,
    ನಿವೃತ್ತ ಸೂಪರಿಂಟೆಂಡಿಂಗ್ ಇಂಜಿನಿಯರ್, ಬೆಂಗಳೂರು — "
16. ಡಾ|| ಎನ್. ಪಿ. ಪಾಟೀಲ, ಬೆಂಗಳೂರು — "
17. ಶ್ರೀ ಶಿವಕುಮಾರ ಸಂಬರಗಿಮಠ, ಬೆಳಗಾಂವ — "
18. ಶ್ರೀ ಎನ್. ಆರ್. ಪಂಡಿತಾರಾಧ್ಯ, ಬೆಂಗಳೂರು — "
19. ಶ್ರೀ ಜಿ. ಎಂ. ಹಿರೇಮಠ, ಬೆಂಗಳೂರು
    ಸದಸ್ಯ–ಕಾರ್ಯದರ್ಶಿ, ಬೆಂಗಳೂರು
20. ಡಾ|| ಸಾ. ಶಿ. ಮರುಳಯ್ಯ
    ನಿರ್ದೇಶಕರು, ಸಾಂಸ್ಕೃತಿಕ ಕಾರ್ಯಕ್ರಮಗಳು

SRI JAGADGURU VISHWARADHYA
JNANA SIMHASAN JNANAMANDAL
LIBRARY
Jangamwadi Math, Varanasi
ACC No. 8786

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi